ಮಂಗಳವಾರ, ಜೂನ್ 7, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 157 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಬೆತ್ತ ಹಿಡಿಯದೆ ಮಕ್ಕಳನ್ನು ಬಗ್ಗಿಸಲು ಅಜ್ಜಿಗೆ ಗೊತ್ತಿತ್ತು. ಶಾಲೆಯ ಮುಖ ನೋಡದಿದ್ದ ಅಜ್ಜಿಯಂದಿರು ಕಲಿಸುತ್ತಿದ್ದ ಆಟೋಟ ಮತ್ತು ಜೀವನಪಾಠಗಳು ಯಾವ ಬೇಸಿಗೆ ಶಿಬಿರಕ್ಕೂ ಕಡಿಮೆಯಿರಲಿಲ್ಲ

ಆಳ-ಅಗಲ
ಜೀವ ಭಯದಲ್ಲಿ ಕಾಶ್ಮೀರಿ ಪಂಡಿತರು
‘ಟ್ವಿಟರ್ ಖರೀದಿ ಕೈಬಿಡುವೆ’ 9
‘ಬಿಜೆಪಿ ಸಂಸದ ಸೊಂಕರ್ ಪರ ಫೇಸ್‌ಬುಕ್ ಕೆಲಸ’ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,675	16,569	₹52,990 (ಬೆಂಗಳೂರು)	₹64,200 (ಬೆಂಗಳೂರು)	77.66

ಪ್ರವಾದಿಗೆ ಅವಮಾನ: ಸೌದಿ ಅರೇಬಿಯಾ, ಬಹರೈನ್, ಯುಎಇ, ಅಫ್ಗಾನಿಸ್ತಾನ ಖಂಡನೆ

ಗಲ್ಫ್ ದೇಶಗಳಲ್ಲಿ ಆಕ್ರೋಶ ತೀವ್ರ

ದುಬೈ (ಪಿಟಿಐ, ಎಎಫ್‌ಪಿ): ಬಿಜೆಪಿ ವಕ್ತಾರರಾಗಿದ್ದ ನೂಪುರ್ ಶರ್ಮಾ ಅವರು ಪ್ರವಾದಿ ಮಹಮ್ಮದ್ ಅವರಿಗೆ ಅಪಮಾನವಾಗುವಂತಹ ಹೇಳಿಕೆ ನೀಡಿದ್ದನ್ನು ಖಂಡಿಸಿದ ದೇಶಗಳ ಸಾಲಿಗೆ ಸೌದಿ ಅರೇಬಿಯಾ, ಬಹರೈನ್, ಅರಬ್ ಸಂಯುಕ್ತ ಸಂಸ್ಥಾನ (ಯುಎಇ), ಇಂಡೋನೇಷ್ಯಾ, ಓಮಾನ್, ಜೋರ್ಡನ್ ಮತ್ತು ಅಫ್ಗಾನಿಸ್ತಾನ ಕೂಡ ಸೋಮವಾರ ಸೇರಿವೆ.

‘ಇಸ್ಲಾಂ ಧರ್ಮದ ಸಂಕೇತದ ವಿರುದ್ಧದ ಪೂರ್ವಗ್ರಹವನ್ನು ಶಾಶ್ವತವಾಗಿ ತಿರಸ್ಕರಿಸಲಾಗುವುದು. ಯಾವುದೇ ಧರ್ಮದ ವ್ಯಕ್ತಿ ಮತ್ತು ಸಂಕೇತಗಳ ವಿರುದ್ಧ ಪೂರ್ವಗ್ರಹ ಮೂಡಿಸುವ ಯಾವುದೇ ಕೃತ್ಯವನ್ನು ಶಾಶ್ವತವಾಗಿ ತಿರಸ್ಕರಿಸಲಾಗುವುದು’ ಎಂದು ಸೌದಿ ಅರೇಬಿಯಾದ ವಿದೇಶಾಂಗ ಸಚಿವಾಲಯವು ಹೇಳಿದೆ.

ಬಿಜೆಪಿ ವಕ್ತಾರ ಹುದ್ದೆಯಿಂದ ನೂಪುರ್ ಅವರನ್ನು ವಜಾಗೊಳಿಸಿದ್ದನ್ನು ಸೌದಿ ಅರೇಬಿಯಾ ಸ್ವಾಗತಿಸಿದೆ. ಪ್ರವಾದಿಯ ಬಗ್ಗೆ ‘ಅವಹೇಳನಕಾರಿ’ ಹೇಳಿಕೆ ನೀಡಿದ್ದ ನೂಪುರ್ ಶರ್ಮಾ ಅವರನ್ನು ಅಮಾನತು ಮಾಡಲಾಗಿದೆ. ದೆಹಲಿ ಬಿಜೆಪಿಯ ಮಾಧ್ಯಮ ಘಟಕದ ಮುಖ್ಯಸ್ಥ ನವೀನ್ ಕುಮಾರ್ ಜಿಂದಾಲ್ ಅವರನ್ನು ಭಾನುವಾರ ಉಚ್ಚಾಟನೆ ಮಾಡಲಾಗಿದೆ.

ನೂಪುರ್ ಶರ್ಮಾ ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿ ಮುಸ್ಲಿಂ ಗುಂಪೊಂದು ಮುಂಬೈಯಲ್ಲಿ ಸೋಮವಾರ ಪ್ರತಿಭಟನೆ ನಡೆಸಿತು –ಪಿಟಿಐ ಚಿತ್ರ

ಈ ಇಬ್ಬರು ಮುಖಂಡರ ಹೇಳಿಕೆಗಳು ಬಹಿರಂಗವಾದ ಬಳಿಕ ಹಲವು ದೇಶಗಳು ಇದನ್ನು ಖಂಡಿಸಿದ್ದವು. ಹಾಗಾಗಿ, ಎಲ್ಲ ಧರ್ಮಗಳನ್ನೂ ಗೌರವಿಸುವುದಾಗಿಯೂ ಯಾವುದೇ ಧರ್ಮದ ವ್ಯಕ್ತಿಗೆ ಅವಮಾನ ಮಾಡುವುದನ್ನು ಬಲವಾಗಿ ಖಂಡಿಸುವುದಾಗಿಯೂ ಬಿಜೆಪಿ ಭಾನುವಾರ ಹೇಳಿತ್ತು.

‘ನೂಪುರ್ ಅವರ ಹೇಳಿಕೆ ಮತ್ತು ಜಿಂದಾಲ್ ಅವರ ಟ್ವೀಟ್‌ಗಳು ಯಾವುದೇ ರೀತಿಯಲ್ಲಿಯೂ ಸರ್ಕಾರದ ನಿಲುವುಗಳಲ್ಲ. ಇವು ಅಂಧಾಭಿಮಾನಿ ಗುಂಪುಗಳ ನಿಲುವುಗಳು’ ಎಂದು ಕತಾರ್ ಮತ್ತು ಕುವೈತ್‌ನಲ್ಲಿರುವ ಭಾರತದ ರಾಯಭಾರಿಗಳು ಹೇಳಿದ್ದರು. ಈ ಮೂಲಕ, ರಾಜತಾಂತ್ರಿಕ ವಿವಾದವನ್ನು ತಣ್ಣಗಾಗಿಸಲು ಯತ್ನಿಸಿದ್ದರು.

ಕುವೈತ್‌ನ ಸೂಪರ್ ಮಾರ್ಕೆಟ್ ಒಂದರಲ್ಲಿ ಭಾರತದ ಉತ್ಪನ್ನಗಳ ಮಾರಾಟವನ್ನು ಸ್ಥಗಿತಗೊಳಿಸಿ ಪ್ರತಿಭಟಿಸಲಾಗಿದೆ. ಕುವೈತ್ ನಗರದ ಹೊರವಲಯದಲ್ಲಿರುವ ಅಲ್ ಅರ್ದಿಯಾ ಸಹಕಾರ ಸಂಘದಲ್ಲಿ ಮಾರಾಟಕ್ಕೆ ಇಟ್ಟಿದ್ದ ಭಾರತದಿಂದ ರಫ್ತಾಗಿದ್ದ ಅಕ್ಕಿ, ಸಾಂಬಾರ ಪದಾರ್ಥಗಳನ್ನು ಪ್ಲಾಸ್ಟಿಕ್ ಹಾಕಿ ಮುಚ್ಚಲಾಗಿದೆ. ‘ಭಾರತದ ಉತ್ಪನ್ನಗಳನ್ನು ತೆಗೆದು ಹಾಕಲಾಗಿದೆ’ ಎಂಬ ಫಲಕವನ್ನು ಅಲ್ಲಿ ಹಾಕಲಾಗಿದೆ.

ಇನ್ನಷ್ಟು ಸುದ್ದಿಗಳು 8

ಪಾಕಿಸ್ತಾನಕ್ಕೆ ಭಾರತ ತಿರುಗೇಟು

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿಯ ಇಬ್ಬರು ಮುಖಂಡರ ಹೇಳಿಕೆಗಳಿಂದ ಆಗಿರುವ ಹಾನಿ ಸರಿಪಡಿಸುವುದರ ನಡುವೆಯೇ, ಈ ಸಂದರ್ಭವನ್ನು ಬಳಸಿಕೊಳ್ಳಲು ಯತ್ನಿಸಿದ ಪಾಕಿಸ್ತಾನಕ್ಕೆ ಭಾರತವು ತಿರುಗೇಟು ನೀಡಿದೆ.

‘ಬಿಜೆಪಿಯ ಇಬ್ಬರು ನಾಯಕರು ಪ್ರವಾದಿ ಮಹಮ್ಮದ್ ವಿರುದ್ಧ ನೀಡಿದ್ದ ಹೇಳಿಕೆಗಳಿಗೆ ತಡವಾಗಿ ಮತ್ತು ಕಾಟಾಚಾರದ ರೀತಿಯಲ್ಲಿ ಕೈಗೊಂಡ ಶಿಸ್ತು ಕ್ರಮಗಳು ಮುಸ್ಲಿಮರಿಗೆ ಆಗಿರುವ ನೋವಿಗೆ ಸಾಂತ್ವನ ಆಗದು’ ಎಂದು ಪಾಕಿಸ್ತಾವ ವಿದೇಶಾಂಗ ಸಚಿವಾಲಯದ ಅಧಿಕಾರಿಗಳು ಭಾರತದ ರಾಯಭಾರಿಯನ್ನು ಕರೆದು ಹೇಳಿದ್ದಾರೆ.

ಅಲ್ಪಸಂಖ್ಯಾತರ ಹಕ್ಕುಗಳನ್ನು ನಿರಂತರವಾಗಿ ಉಲ್ಲಂಘಿಸುತ್ತಿರುವ ದೇಶವು ಬೇರೊಂದು ದೇಶದಲ್ಲಿ ಅಲ್ಪಸಂಖ್ಯಾತರನ್ನು ಹೇಗೆ ನೋಡಿಕೊಳ್ಳಲಾಗುತ್ತಿದೆ ಎಂಬುದರ ಬಗ್ಗೆ ಪ್ರತಿಕ್ರಿಯೆ ನೀಡುವುದು ಅಸಂಗತ ಮತ್ತು ಅದರಿಂದ ಯಾವ ಪ್ರಯೋಜನವೂ ಆಗದು ಎಂದು ಭಾರತದ ವಿದೇಶಾಂಗ ಸಚಿವಾಲಯವ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

ಪಾಕಿಸ್ತಾನದಲ್ಲಿರುವ ಹಿಂದೂ, ಸಿಖ್, ಕ್ರೈಸ್ತ ಮತ್ತು ಅಹಮದೀಯ ಅಲ್ಪಸಂಖ್ಯಾತರಿಗೆ ವ್ಯವಸ್ಥಿತವಾಗಿ ಕಿರುಕುಳ ನೀಡಲಾಗುತ್ತಿರುವುದಕ್ಕೆ ಇಡೀ ಜಗತ್ತು ಸಾಕ್ಷಿಯಾಗಿದೆ ಎಂದೂ ಅವರು ಹೇಳಿದ್ದಾರೆ.

ಇಸ್ಲಾಮಿಕ್ ಸಹಕಾರ ಸಂಘಟನೆಯ (ಒಐಸಿ) ಪ್ರಧಾನ ಕಾರ್ಯದರ್ಶಿ ನೀಡಿದ ಹೇಳಿಕೆಗೂ ಭಾರತವು ಕಟುವಾದ ಪ್ರತಿಕ್ರಿಯೆ ನೀಡಿದೆ. ನೂಪುರ್ ಮತ್ತು ಜಿಂದಾಲ್ ಅವರ ಹೇಳಿಕೆಗಳು ‘ಇಸ್ಲಾಂ ಬಗ್ಗೆ ಭಾರತದಲ್ಲಿ ಹೆಚ್ಚುತ್ತಿರುವ ದ್ವೇಷ ಮನೋಭಾವಕ್ಕೆ ಉದಾಹರಣೆ’ ಎಂದು 57 ದೇಶಗಳು ಸದಸ್ಯರಾಗಿರುವ ಸಂಘಟನೆಯು ಹೇಳಿದೆ. ಇದು ‘ಅನಪೇಕ್ಷಿತವಾದ, ದುರುದ್ದೇಶದ ಮತ್ತು ಕುಚೋದ್ಯ’ದ ಹೇಳಿಕೆ ಎಂದು ವಿದೇಶಾಂಗ ಸಚಿವಾಲಯ ಪ್ರತಿಕ್ರಿಯೆ ಕೊಟ್ಟಿದೆ.

ಪಠ್ಯಪುಸ್ತಕದಲ್ಲಿ ಸುರಪುರ ನಾಯಕರ ಕೊಡುಗೆಗೂ ಕತ್ತರಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ 7ನೇ ತರಗತಿಯ ಸಮಾಜ ವಿಜ್ಞಾನ ಪಠ್ಯದಲ್ಲಿದ್ದ ಸುರಪುರ ನಾಯಕರ ಸಾಂಸ್ಕೃತಿಕ ಕೊಡುಗೆಯ ವಿವರಗಳಿಗೂ ಸಂಪೂರ್ಣ ಕತ್ತರಿ ಹಾಕಿದೆ!

ಬರಗೂರು ರಾಮಚಂದ್ರಪ್ಪ ನೇತೃತ್ವದ ಈ ಹಿಂದಿನ ಸಮಿತಿ ಪರಿಷ್ಕರಿಸಿದ್ದ ಪಠ್ಯ ಪುಸ್ತಕದಲ್ಲಿ ಸುರಪುರ ನಾಯಕರ ಹೋರಾಟ ಮತ್ತು ಕೊಡುಗೆಯ ಕುರಿತು ವಿವರವಾಗಿ ಬರೆಯಲಾಗಿತ್ತು.

‘ಸುರಪುರ ನಾಯಕರು ರಾಜಕೀಯ ಚರಿತ್ರೆಯಂತೆಯೇ ಅವರು ಸಾಂಸ್ಕೃತಿಕ ಕ್ಷೇತ್ರಕ್ಕೂ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಕೆರೆ, ಬಾವಿ, ದೇವಾಲಯ, ಅರಮನೆ, ಕೋಟೆ– ಕೊತ್ತಲುಗಳನ್ನು ಕಟ್ಟಿಸಿದ್ದಾರೆ. ಅನೇಕರಿಗೆ ಜಹಗೀರುಗಳನ್ನು ನೀಡಿದ್ದಾರೆ. ಅಲ್ಲದೆ, ಇವರ ಕುಲದೇವರಾದ ತಿರುಪತಿ ವೆಂಕಟರಮಣ ಮತ್ತು ಗೋಪಾಲಸ್ವಾಮಿಯ ನಿತ್ಯ ಪೂಜೆಗಾಗಿ ಹಾಗೂ ಉತ್ಸವಗಳಿಗಾಗಿ ಜಹಗೀರು, ಇನಾಮು ಭೂಮಿಯನ್ನು ನೀಡಿದ್ದಾರೆ. ಇವರ ಆಸ್ಥಾನದಲ್ಲಿ ಅನೇಕ ಕಲಾಕಾರರು, ಗಾಯಕರು, ಚಿತ್ರಕಾರರು, ಶಿಲ್ಪಿಗಳು, ಸಾಹಿತಿಗಳು, ಆಶ್ರಯಿತರಾಗಿದ್ದರು. ಅನೇಕ ಮೌಲ್ಯಯುತ ಸಾಹಿತ್ಯ ಕೃತಿಗಳು ಹೊರಬಂದಿವೆ. ಸರ್ವಧರ್ಮ ಸಹಿಷ್ಣುಗಳಾಗಿದ್ದರು’ ಎಂಬ ಭಾಗಕ್ಕೆ ಚಕ್ರತೀರ್ಥ ಸಮಿತಿ ಕತ್ತರಿ ಪ್ರಯೋಗಿಸಿದೆ.

4A ಪುಟ ನೋಡಿ

‘ತಪ್ಪು ಸರಿಪಡಿಸಿ ಮರುಮುದ್ರಣಕ್ಕೆ ಸಿದ್ಧ’

‘ಪಠ್ಯ ಪರಿಷ್ಕರಣೆ ಸಮಿತಿಯ ವಿಸರ್ಜನೆ ಮೊದಲ ಬಾರಿ ಆಗುತ್ತಿಲ್ಲ. ಸಿದ್ದರಾಮಯ್ಯ ಅವರು ಎಲ್ಲದರಲ್ಲೂ ರಾಜಕಾರಣ ಮಾಡುತ್ತಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ಟೀಕಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಪಠ್ಯ ಪುಸ್ತಕದಲ್ಲಿ ಹಲವು ಬಾರಿ ಬದಲಾವಣೆಗಳಾಗಿವೆ. ಸಿದ್ದರಾಮಯ್ಯ ಕಾಲದಲ್ಲಿಯೂ ಹೀಗೆ ಆಗಿದೆ. ಆಗ ಅವರು ಪಠ್ಯ ಪುಸ್ತಕ ಪರಿಷ್ಕರಣೆ ಹಿಂದೆಗೆದುಕೊಂಡಿದ್ದರೇ? ಸುಮ್ಮನೆ ಗೊಂದಲ ಸೃಷ್ಟಿ ಮಾಡಬಾರದು. ನಾವು ಈ ಬಗ್ಗೆ ಮುಕ್ತವಾಗಿದ್ದೇವೆ. ತಪ್ಪುಗಳನ್ನು ಸರಿಪಡಿಸಿ ಮರುಮುದ್ರಣ ಮಾಡಲು ಸಿದ್ಧರಿದ್ದೇವೆ’ ಎಂದರು.

‘ಪಠ್ಯ ಪುಸ್ತಕ ತಕ್ಷಣ ತಡೆಹಿಡಿಯಿರಿ’

‘ರೋಹಿತ್ ಚಕ್ರತೀರ್ಥ ನೇತೃತ್ವದ ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ರೂಪಿಸಿರುವ ಪಠ್ಯ ಪುಸ್ತಕಗಳನ್ನು ತಕ್ಷಣ ತಡೆಹಿಡಿಯಬೇಕು. ಪಠ್ಯ ಪುಸ್ತಕ ಎಡವಟ್ಟುಗಳಿಗೆ ಕಾರಣರಾದ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ರಾಜೀನಾಮೆ ಪಡೆಯಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ.

‘ಚಕ್ರತೀರ್ಥ ಸಮಿತಿ ಪರಿಷ್ಕರಿಸಿದ ಪಠ್ಯಪುಸ್ತಕದಲ್ಲಿ ತೂರಿಸಿರುವ ವಾಸ್ತವಕ್ಕೆ ದೂರವಾದ ಸಂಗತಿಗಳನ್ನು ಮತ್ತು ತಿರುಚಿರುವ ವಿಷಯಗಳ ಬಗ್ಗೆ ಉನ್ನತ ಮಟ್ಟದ ಸಮಿತಿಯಿಂದ ವರದಿ ಪಡೆಯಬೇಕು. ಹಿಂದಿನ ಬರಗೂರು ರಾಮಚಂದ್ರಪ್ಪ ನೇತೃತ್ವದ ಸಮಿತಿಯ ಪಠ್ಯಗಳನ್ನೇ ಪ್ರಸಕ್ತ ಶೈಕ್ಷಣಿಕ ಸಾಲಿಗೂ ವಿತರಿಸಬೇಕು. ಪರಿಷ್ಕರಣಾ ಸಮಿತಿ ಮಾಡಿರುವ ಅದ್ವಾನಗಳನ್ನು ಶಿಕ್ಷಣ ತಜ್ಞರ ಸಮಿತಿಯಿಂದ ಸರಿಪಡಿಸಬೇಕು’ ಎಂದೂ ಅವರು ಆಗ್ರಹಿಸಿದ್ದಾರೆ.

4A ಪುಟ ನೋಡಿ

ಎಲ್‌ಐಸಿ: ಕುಸಿದ ಮಾರುಕಟ್ಟೆ ಬಂಡವಾಳ ಮೌಲ್ಯ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರುಗಳ ಮೌಲ್ಯ ಸೋಮವಾರ ಶೇಕಡ 3ರವರೆಗೂ ಇಳಿಕೆ ಆಗಿದೆ. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ ₹ 5 ಲಕ್ಷ ಕೋಟಿಗಿಂತ ಕೆಳಕ್ಕೆ ಬಂದಿದೆ.

ಐದು ದಿನಗಳಿಂದಲೂ ಷೇರು ಮೌಲ್ಯ ಇಳಿಕೆ ಕಾಣುತ್ತಿದ್ದು, ಈ ಅವಧಿಯಲ್ಲಿ ಒಟ್ಟಾರೆ ಶೇ 7.12ರಷ್ಟು ಇಳಿಕೆ ಕಂಡಿದೆ. ಐಪಿಒ ವೇಳೆ ₹ 949ಕ್ಕೆ ಎಲ್‌ಐಸಿ ಷೇರು ಖರೀದಿ ಮಾಡಿದ್ದವರು ಈಗ ಶೇಕಡ 18ರಷ್ಟು ನಷ್ಟ ಕಂಡಿದ್ದಾರೆ.

ಬಿಎಸ್‌ಇನಲ್ಲಿ ಕಂಪನಿ ಷೇರು ಮೌಲ್ಯ ಸೋಮವಾರ ಶೇ 2.86ರಷ್ಟು ಇಳಿಕೆ ಆಗಿದ್ದು, ಪ್ರತಿ ಷೇರಿನ ಬೆಲೆ ₹ 777.40ಕ್ಕೆ ತಲುಪಿದೆ. ಎನ್‌ಎಸ್‌ಇನಲ್ಲಿ ಶೇ 2.96ರಷ್ಟು ಕಡಿಮೆ ಆಗಿ ಪ್ರತಿ ಷೇರಿನ ಬೆಲೆ ₹ 776.50ಕ್ಕೆ ಇಳಿಕೆ ಆಗಿದೆ.ದಿನದ ವಹಿವಾಟಿನ ಅಂತ್ಯದ ವೇಳೆಗೆ ಕಂಪನಿಯ ಮಾರುಕಟ್ಟೆ ಮೌಲ್ಯವು ₹ 4,91,705 ಕೋಟಿಗೆ ತಲುಪಿದೆ.

ಶಾಸಕ ಆಯನೂರು ಮಂಜುನಾಥ್ ಕಿಡಿ

‘ಸುಧಾಕರ್ ಅಸಮರ್ಥ ಮಂತ್ರಿ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡು, ಕೋವಿಡ್ ಮೊದಲ ಅಲೆಯ ವೇಳೆ ಕೆಲಸ ಮಾಡಿದ್ದ ಆರೋಗ್ಯ ಇಲಾಖೆ ಸಿಬ್ಬಂದಿಗೆ ಇಲ್ಲಿಯವರೆಗೆ ವೇತನ ಪರಿಷ್ಕರಣೆ, ಸೇವಾ ಭದ್ರತೆ ನೀಡಿಲ್ಲ. ದಪ್ಪ ಚರ್ಮದ ಆರೋಗ್ಯ ಸಚಿವರು ಇವರನ್ನು ನಿರ್ಲಕ್ಷಿಸುತ್ತಿದ್ದಾರೆ. ಅವರೊಬ್ಬ ಅಸಮರ್ಥ ಮಂತ್ರಿ’ ಎಂದು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಆಯನೂರು ಮಂಜುನಾಥ್ ಅವರು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.


ಆಯನೂರು ಮಂಜುನಾಥ್

‘ಹೊರಗುತ್ತಿಗೆ ನೌಕರರ ಸೇವಾಭದ್ರತೆ ಹಾಗೂ ವೇತನ ಪರಿಷ್ಕರಣೆಗಾಗಿ ಸರ್ಕಾರ ನಿವೃತ್ತ ಐಎಎಸ್ ಅಧಿಕಾರಿ ನರಸಿಂಹಾಚಾರ್ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಸಮಿತಿ ಸರ್ಕಾರಕ್ಕೆ ವರದಿ ನೀಡಿ ವರ್ಷವಾದರೂ ಆ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಗಮನ ಸೆಳೆದ ಕಾರಣ ಸಂಪುಟ ಸಭೆಯಲ್ಲಿ ಕಡತ ಮಂಡಿಸುವಂತೆ ಅವರಿಬ್ಬರೂ ಸಚಿವ ಸುಧಾಕರ್‌ಗೆ ಸೂಚಿಸಿದ್ದರು. ಆದರೆ, ಇಲ್ಲಿಯವರೆಗೂ ಅದು ಮಂಡನೆಯಾಗಿಲ್ಲ’ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

‘ನಮಗೆ ಮಹಾನ್ ಸಚಿವರು ಸಿಕ್ಕಿದ್ದಾರೆ. ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಏನಾದರೂ ಕೇಳಲು ಬೇರೆ ಸಚಿವರು ಕರೆ ಮಾಡಿದರೂ ಸುಧಾಕರ್ ಫೋನ್‌ಗೆ ಸಿಗುತ್ತಿಲ್ಲ. ಪಕ್ಷದ ಹಿರಿಯ ಶಾಸಕರ ಮನವಿಗೂ ಸ್ಪಂದಿಸುತ್ತಿಲ್ಲ. ಅವರದ್ದೇ ಇಲಾಖೆಯ ನೌಕರರ ಸಮಸ್ಯೆಗೂ ಸುಧಾಕರ್ ಸ್ಪಂದಿಸುತ್ತಿಲ್ಲ. ಇದೇ ಧೋರಣೆ ಮುಂದುವರಿದಲ್ಲಿ ಸರ್ಕಾರದ ವಿರುದ್ಧ ನೌಕರ ಸಮೂಹ ತಿರುಗಿ ಬೀಳಲಿದೆ. ಅದಕ್ಕೆ ಅವಕಾಶ ನೀಡದೇ ತಕ್ಷಣ ಸ್ಪಂದಿಸಲಿ’ ಎಂದು ಅವರು ಆಗ್ರಹಿಸಿದರು.

‘ಸರ್ಕಾರದ ಭಾಗವಾಗಿ ನಮ್ಮವರ ವಿರುದ್ಧವೇ ಮಾತನಾಡುವುದಕ್ಕೆ ಮುಜುಗರವಾಗುತ್ತಿದೆ. ಆದರೆ, ಹತ್ತಿಪ್ಪತ್ತು ಬಾರಿ ಭೇಟಿಯಾದರೂ ನಮ್ಮ ಮಾತಿಗೆ ಬೆಲೆ ಇಲ್ಲ. ನಿಜಕ್ಕೂ ಆರೋಗ್ಯ ಸಚಿವರ ಚರ್ಮ ದಪ್ಪವಾಗಿದೆ. ಅವರು ಕೂಡಲೇ ಅಗತ್ಯ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಅವರ ವಿರುದ್ಧವೇ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ’ ಎಂದು ಆಯನೂರು ಎಚ್ಚರಿಕೆ ನೀಡಿದರು.

ಐಎಎಸ್ ಅಧಿಕಾರಿ ಜೈಲಿಗೆ ಕಳಿಸುತ್ತೇವೆ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಒಬ್ಬ ಹಿರಿಯ ಐಎಎಸ್ ಅಧಿಕಾರಿಯನ್ನು ಜೈಲಿಗೆ ಕಳುಹಿಸದ ಹೊರತು ಈ ಸರ್ಕಾರ ಎಚ್ಚೆತ್ತುಕೊಳ್ಳುವುದಿಲ್ಲ. ಅಧಿಕಾರಿಗಳನ್ನು ಜೈಲಿಗೆ ಕಳುಹಿಸಲು ಇದು ಸಕಾಲ’ ಎಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಕಠಿಣ ಎಚ್ಚರಿಕೆ ನೀಡಿದೆ.

‘ಕರ್ನಾಟಕ ನಗರ ಪಾಲಿಕೆಗಳ ಉದ್ಯೋಗಿಗಳ ಸಂಘ’ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಖುದ್ದು ಹಾಜರಿದ್ದ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಮತ್ತು ಪೌರಾಡಳಿತ ನಿರ್ದೇಶನಾಲಯದ ನಿರ್ದೇಶಕಿ ಎಂ.ಎಸ್. ಅರ್ಚನಾ ಅವರನ್ನು ತರಾಟೆಗೆ ತೆಗೆದುಕೊಂಡ ಮುಖ್ಯ ನ್ಯಾಯಮೂರ್ತಿಗಳು, ‘ಕೋರ್ಟ್ ಆದೇಶ ಪಾಲಿಸದ ಸರ್ಕಾರ ಮತ್ತು ಅಧಿಕಾರಿಗಳ ನಡೆಯಿಂದ ರೋಸಿ ಹೋಗಿದ್ದೇವೆ. ಹಿರಿಯ ಐಎಎಸ್ ಅಧಿಕಾರಿ ಜೈಲಿಗೆ ಹೋಗುವ ದಿನ ಯಾವತ್ತು ಬರುತ್ತದೆ ಎಂಬುದು ನಮಗೆ ಗೊತ್ತಿಲ್ಲ’ ಎಂದು ಸರ್ಕಾರಕ್ಕೆ ಕಠಿಣ ಸಂದೇಶ ರವಾನಿಸಿದರು.

‘ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಒಂದು ತಿಂಗಳಲ್ಲಿ ಪಾಲಿಸಲಾಗುವುದು’ ಎಂಬ ಹೆಚ್ಚುವರಿ ಅಡ್ವೊಕೇಟ್ ಧ್ಯಾನ್ ಚಿನ್ನಪ್ಪ ಉತ್ತರಕ್ಕೆ ಸಮ್ಮತಿ ಸೂಚಿಸಿದ ನ್ಯಾಯಪೀಠ, ವಿಚಾರಣೆ ಮುಂದೂಡಿದೆ. ಮುಂದಿನ ವಿಚಾರಣೆಗೂ ರಾಕೇಶ್ ಸಿಂಗ್ ಮತ್ತು ಅರ್ಚನಾ ಹಾಜರಾಗಬೇಕು ಎಂದು ಸೂಚಿಸಿದೆ.

ಒಳ ಪುಟಗಳು

ಹೊಸ ಸರಣಿಯ ನಾಣ್ಯಗಳ ಬಿಡುಗಡೆ 9
‘ನೋಟಿನಲ್ಲಿ ಗಾಂಧೀಜಿ ಚಿತ್ರ ಬದಲಿಸುವ ಪ್ರಸ್ತಾವ ಇಲ್ಲ’ 9
ಅಶುದ್ಧ ನೀರಿನಿಂದ ಮತ್ತೊಂದು ಸಾವು 4B

ಚಿನಕುರಳಿ
ಪ್ರಕಾಶ್ ಶೆಟ್ಟಿ



‘ಉನ್ನತ ಭಾರತ ಅಭಿಯಾನ’ದಲ್ಲಿ ಐಎಸ್‌ಬಿಆರ್ ಕಾಲೇಜು

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯಿಂದ ಕೈಗೊಂಡಿರುವ ‘ಉನ್ನತ ಭಾರತ ಅಭಿಯಾನ’ದಲ್ಲಿ ಎಲೆಕ್ಟ್ರಾನಿಕ್ ಸಿಟಿಯಲ್ಲಿನ ಐಎಸ್‌ಬಿಆರ್ ಕಾಲೇಜು ಭಾಗಿಯಾಗಲಿದೆ.

ಆತ್ಮನಿರ್ಭರ್ ಭಾರತಕ್ಕಾಗಿ ಶಿಕ್ಷಣ ಸಂಸ್ಥೆಗಳನ್ನು ಬಳಸಿಕೊಂಡು ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗೆ ಕೈಜೋಡಿಸಲು ಐಎಸ್‌ಬಿಆರ್ ಕಾಲೇಜು ಸಿದ್ಧವಾಗಿದೆ.

ಕಾಲೇಜಿನ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳನ್ನೊಳಗೊಂಡ ಯೋಜನಾ ತಂಡವು ಗ್ರಾಮಗಳ ಸಮೀಕ್ಷೆ ನಡೆಸಿ ಪ್ರಾಥಮಿಕ ಮಾಹಿತಿ, ಅಂಕಿ–ಅಂಶಗಳನ್ನು ಸಂಗ್ರಹಿಸುತ್ತದೆ. ತರುವಾಯ ಅಧಿಕಾರಿಗಳೊಂದಿಗೆ ಸಂವಾದ ನಡೆಸಿ, ವಾಸ್ತವ ಮಾಹಿತಿಗೂ ಸರ್ಕಾರದ ಬಳಿ ಇರುವ ಅಂಕಿ–ಅಂಶಕ್ಕೂ ಇರುವ ವ್ಯತ್ಯಾಸಗಳನ್ನು ಗುರುತಿಸಲಿದೆ. ವಸ್ತುಸ್ಥಿತಿಗೆ ತಕ್ಕಂತೆ ಗ್ರಾಮದ ಅಭಿವೃದ್ಧಿಗೆ ನೀಲನಕ್ಷೆ ತಯಾರಿಸುವ ವಿಶಿಷ್ಟ ಯೋಜನೆ ಇದಾಗಿದೆ ಎಂದು ಕಾಲೇಜಿನ ಮೂಲಗಳು ತಿಳಿಸಿವೆ.

‘ಸರ್ಕಾರದ ಮಹತ್ವದ ಯೋಜನೆಯೊಂದರಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸುವುದರಿಂದ ಅವರು ಗ್ರಾಮೀಣ ಭಾರತವನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಗಲಿದೆ. ವಿದ್ಯಾರ್ಥಿಗಳಿಗೆ ವಿಶೇಷ ಅನುಭವವೂ ಸಿಗಲಿದ್ದು, ಭವಿಷ್ಯದಲ್ಲಿ ಗ್ರಾಮಾಭಿವೃದ್ಧಿ ಯೋಜನೆ ವಿಷಯದಲ್ಲಿ ಆಸಕ್ತಿ ಮೂಡಿಸಲು ಸಹಾಯಕವಾಗಲಿದೆ. ಇದರಿಂದ ದೇಶದ ತಳಮಟ್ಟದ ಅಭಿವೃದ್ಧಿಯನ್ನು ನಿರೀಕ್ಷಿಸಬಹುದು’ ಎಂದು ಐಎಸ್‌ಬಿಆರ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮನೀಷ್ ಕೊಠಾರಿ ಹೇಳಿದರು.

ಜುಲೈ 1ರಿಂದ ‘ವಡ್ಡಸೇನೆ’ಯಿಂದ ಯಾತ್ರೆ

ಬೆಂಗಳೂರು: ಕಲ್ಲು ಒಡೆಯುವ ಕೆಲಸದಲ್ಲಿ ನಿರತರಾಗಿರುವ ‘ವಡ್ಡ’ ಸಮುದಾಯದವರಿಗೆ ಜಾಗೃತಿ ಮೂಡಿಸಲು ಜುಲೈ 1ರಿಂದ ರಾಜ್ಯದಾದ್ಯಂತ ಯಾತ್ರೆ ಆಯೋಜಿಸಲಾಗಿದೆ ಎಂದು ‘ವಡ್ಡಸೇನೆ’ಯ ರಾಷ್ಟ್ರೀಯ ಸಮಿತಿ ಅಧ್ಯಕ್ಷ ಟಿ.ತಿಪ್ಪೇರುದ್ರಸ್ವಾಮಿ ತಿಳಿಸಿದರು.

‘ಸಮುದಾಯದ ಜನರ ಸ್ಥಿತಿ ಶೋಚನೀಯವಾಗಿದೆ. ನೆಲೆಯಿಲ್ಲದ ಜನರಿಗೆ ಸೂರು ಕಲ್ಪಿಸಬೇಕು’ ಎಂದು ಆಗ್ರಹಿಸಿದರು. ‘ಜುಲೈ 1ರಂದು ಧಾರವಾಡದಲ್ಲಿ ಯಾತ್ರೆಗೆ ಚಾಲನೆ ನೀಡಲಾಗುವುದು. ಅದಾದ ಬಳಿಕ ಯಾತ್ರೆ ಬೆಳಗಾವಿ, ಶಿವಮೊಗ್ಗ, ಮಂಡ್ಯ, ಮೈಸೂರು, ಕೋಲಾರ, ಚಿಕ್ಕಮಗಳೂರಿನಲ್ಲಿ ನಡೆಯಲಿದೆ. ಹೊರ ರಾಜ್ಯಗಳಲ್ಲೂ ಯಾತ್ರೆಯನ್ನು ಸಂಘಟಿಸಲಾಗುವುದು’ ಎಂದರು. ಮುಖಂಡರಾದ ಅವಿನಾಶ್ ಹಾಗೂ ನಾಗರಾಜ್ ಇದ್ದರು.

ಎಚ್‌.ನರಸಿಂಹಯ್ಯ ಅವರ 102ನೇ ಜನ್ಮದಿನಾಚರಣೆಯಲ್ಲಿ ಸಿ.ಎಂ ಬೊಮ್ಮಾಯಿ ಹೇಳಿಕೆ

‘ಸಂಶೋಧನೆ ಉತ್ತೇಜನಕ್ಕೆ ಪ್ರತ್ಯೇಕ ನೀತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆಗೆ ಉತ್ತೇಜನ ನೀಡಲು ಸಂಶೋಧನೆ ಮತ್ತು ಅಭಿವೃದ್ಧಿ ನೀತಿ ಒಂದು ತಿಂಗಳಲ್ಲಿ ಹೊರಬೀಳಲಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ ನಗರದಲ್ಲಿ ಸೋಮವಾರ ಹಮ್ಮಿಕೊಂಡ ಶಿಕ್ಷಣ ತಜ್ಞ ಎಚ್. ನರಸಿಂಹಯ್ಯ ಅವರ 102ನೇ ಜನ್ಮದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ, ರೋಬೋಟಿಕ್ಸ್ ಆ್ಯಂಡ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಪ್ರಯೋಗಾಲಯ ಉದ್ಘಾಟಿಸಿದರು. ಎಚ್. ನರಸಿಂಹಯ್ಯ ಅವರ ಆತ್ಮಕಥನ ‘ಹೋರಾಟದ ಹಾದಿ’ಯ ಅನುವಾದ ‘ಪಾಥ್ ಆಫ್ ಸ್ಟ್ರಗಲ್’ (ಅನು: ಪ್ರಾಧ್ಯಾಪಕ ಪ್ರಮೋದ್ ಮುತಾಲಿಕ್) ಅನ್ನು ಬಿಡುಗಡೆ ಮಾಡಿದರು.

‘ಶೈಕ್ಷಣಿಕ ಕ್ಷೇತ್ರದ ಬೆಳವಣಿಗೆಗೆ ಸಂಶೋಧನೆ ಮತ್ತು ಅಭಿವೃದ್ಧಿ ನೀತಿ ಸಹಕಾರಿಯಾಗಲಿದೆ. ಕಲಿಕೆ ಹಂತದಲ್ಲಿಯೆ ಮಕ್ಕಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಆಸಕ್ತಿ ಮೂಡಿಸಲು ಕೇಂದ್ರ ಸರ್ಕಾರವು ಅಟಲ್ ಪ್ರಯೋಗಾಲಯಗಳನ್ನು ಪರಿಚಯಿಸಿದೆ. ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿನ ಜ್ಞಾನವನ್ನು ಮಕ್ಕಳು ತಿಳಿಯಲಿ ಎಂಬುವುದು ನಮ್ಮ ಸರ್ಕಾರದ ಆಶಯ’ ಎಂದು ಹೇಳಿದರು.

‘ವಿಜ್ಞಾನದ ಬಗ್ಗೆ ಮಕ್ಕಳಲ್ಲಿ ಆಸಕ್ತಿ ಮತ್ತು ಕುತೂಹಲ ಮೂಡಬೇಕೆಂಬ ಉದ್ದೇಶದಿಂದ ನಮ್ಮ ಸರ್ಕಾರ ಸಂಶೋಧನೆ ಮತ್ತು ಅಭಿವೃದ್ಧಿ ನೀತಿಯನ್ನು ರೂಪಿಸಿದೆ. ದೇಶದಲ್ಲಿ ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ. ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಯೋಗಶೀಲತೆಯನ್ನು ತಂದಿರುವ ಈ ಶಿಕ್ಷಣ ನೀತಿ, ವಿಜ್ಞಾನಕ್ಕೆ ಮಹತ್ವ ನೀಡಿದೆ. ಸರ್ಕಾರದ ವತಿಯಿಂದ ಪ್ರತಿ ಶಾಲೆಗೆ ₹ 50 ಲಕ್ಷ ವೆಚ್ಚದಲ್ಲಿ ಅಟಲ್ ಪ್ರಯೋಗಾಲಯ ನಿರ್ಮಿಸಲಾಗುತ್ತಿದೆ. ಸಂಶೋಧನೆಗೆ ಇದರಿಂದ ಅವಕಾಶ ದೊರೆಯಲಿದೆ’ ಎಂದು ತಿಳಿಸಿದರು.

ಬಸವರಾಜ ಬೊಮ್ಮಾಯಿ ಅವರು ಸಂಸ್ಥೆಯ ರೋಬೋಟಿಕ್ಸ್ ಆ್ಯಂಡ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಪ್ರಯೋಗಾಲಯದಲ್ಲಿ ಮಾದರಿಗಳ ಬಗ್ಗೆ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದುಕೊಂಡರು. ಸಂಸ್ಥೆಯ ಕಾರ್ಯದರ್ಶಿ ಪ್ರೊ.ಎಸ್‌.ಎನ್‌. ನಾಗರಾಜ ರೆಡ್ಡಿ ಇದ್ದಾರೆ –ಪ್ರಜಾವಾಣಿ ಚಿತ್ರ

ಮೂಢನಂಬಿಕೆ ವಿರುದ್ಧ ಹೋರಾಟ: ‘ಈ ದೇಶದ ಸನಾತನ ಮೌಲ್ಯಗಳನ್ನು ಉಳಿಸಿಕೊಂಡು, ಆಧುನಿಕ ಭಾರತ ನಿರ್ಮಾಣ ಮಾಡುವ ಕೆಲಸವನ್ನು ನರಸಿಂಹಯ್ಯ ಮಾಡಿದರು. ವಿಚಾರವಾದಿಯಾಗಿದ್ದ ಅವರು, ಮೂಢನಂಬಿಕೆಗಳ ವಿರುದ್ಧ ಹೋರಾಡಿದರು. 1970ರ ದಶಕದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಪ್ರಚಲಿತವಾಗಿದ್ದ ಭಾನಾಮತಿ ವಿರುದ್ಧ ದೊಡ್ಡ ಧ್ವನಿಯಾಗಿ ಹೋರಾಟ ಮಾಡಿ, ಜನರಿಗೆ ಧೈರ್ಯ ತುಂಬಿದರು. ರೈತರ, ಬಡವರ ಬದುಕಿನಲ್ಲಿ ನೆಮ್ಮದಿಯನ್ನು ತಂದುಕೊಟ್ಟರು’ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಇದಕ್ಕೂ ಮೊದಲು ವಿದ್ಯಾರ್ಥಿಗಳು ಸಮೂಹಗಾಯನ ಪ್ರಸ್ತುತಪಡಿಸಿದರು. ಬಸವರಾಜ ಬೊಮ್ಮಾಯಿ ಅವರು ಮಕ್ಕಳ ಬಳಿ ತೆರಳಿ, ಅವರನ್ನು ಮಾತನಾಡಿಸಿದರು.

‘ಜೆಡಿಎಸ್ ಶಾಸಕರಿಗೂ ಆತ್ಮಸಾಕ್ಷಿ ಇದೆ’

ಬೆಂಗಳೂರು: ‘ಜೆಡಿಎಸ್ ಶಾಸಕರಿಗೂ ಆತ್ಮಸಾಕ್ಷಿ ಇದೆ. ರಾಜ್ಯಸಭೆ ಚುನಾವಣೆಯಲ್ಲಿ ನಮ್ಮ ಪಕ್ಷದ ಶಾಸಕರ ಮತಗಳನ್ನು ಕಸಿಯಲು ಯಾರಿಗೂ ಸಾಧ್ಯವಿಲ್ಲ’ ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಬಿಬಿಎಂಪಿ ಚುನಾವಣಾ ತಯಾರಿ ಕುರಿತು ಪಕ್ಷದ ಮುಖಂಡರ ಜತೆ ಸೋಮವಾರ ಜೆಡಿಎಸ್ ಕೇಂದ್ರ ಕಚೇರಿಯಲ್ಲಿ ಸಭೆ ನಡೆಸುವುದಕ್ಕೂ ಮೊದಲು ಸುದ್ದಿಗಾರರ ಜತೆ ಅವರು ಮಾತನಾಡಿದರು.

8ಕ್ಕೆ ಅಭಿನಂದನಾ ಗ್ರಂಥ ಬಿಡುಗಡೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಆರ್. ವೇಣುಗೋಪಾಲ್ ಅವರಿಗೆ ವಿಶ್ವವಿದ್ಯಾಲಯದ ಶಿಕ್ಷಕ, ಶಿಕ್ಷಕೇತರ, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಜೂನ್ 8ರಂದು ಅಭಿನಂದನಾ ಸಮಾರಂಭ ಹಮ್ಮಿಕೊಂಡಿದ್ದಾರೆ.

ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಬೆಳಿಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ‘ಸರಸ್ವತಿ ಪುತ್ರ’ ಅಭಿನಂದನಾ ಗ್ರಂಥ ಬಿಡುಗಡೆಯಾಗಲಿದೆ ಎಂದು ಪ್ರೊ.ಕೆ.ಆರ್. ವೇಣುಗೋಪಾಲ್ ಅಭಿನಂದನಾ ಸಮಿತಿಯ ಪ್ರೊ. ಸಿ.ಡಿ. ವೆಂಕಟೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ – ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164, 9845114560 / 9731810277/ 9886213331

PUBLIC NOTICE

District Consumer Disputes Redressal Commission, Mumbai Suburban Additional
Admin Bldg., 3rd Floor, Nr. Chetana College, Bandra-East, Mumbai-51.
Under the Consumer Protection Act, 2019 Consumer Case No. 131/2021
Vijay Ramchandra Rayamane
Versus
TRIEEBO HOTELS
To: Opposite Party/Respondent Name
1) TRIEEBO HOTELS through its Director 1031 Sobha Forest View Apartment, Lingadheernahalli, Bengaluru - 560 062
2) TRIEEBO HOTEL Through its Manager Office No. 201, 2nd Floor, Bridge MM Annexe No. 36-44, K.R. Road, Yediyur, Jayanagar 7th Block, Bangalore, Karnataka - 560 082.
Notice Under Order V.R. 20 CPC and Consumer Protection Act, 2019
Whereas the Complainant above mentioned has filed Complaint No. 131-2021 before the District Consumer Disputes Redressal Commission, Mumbai Suburban Additional.
Whereas, this commission has ordered a substituted service/notice V.R. 20 CPC & Consumer Protection Act, 2019. Hence, this notice.
You are hereby summoned to appear before this Commission in person or through Advocate on 10/06/2022 at 10.30 am to defend the above case and written defence with evidence in default of your appearance on 10/06/2022 the day specified, the said case will be heard and decided in your absence.
Given under my hand and the seal of the Commission.
By the order of the Commission
D.D. Gaikwad, Registrar
District Consumer Disputes Redressal Commission, Mumbai Suburban Additional Mumbai.

PUBLIC NOTICE

I Mr. Lakshman Rao MB, S/o. Mr. Babu Rao, Residing at No.1 Lakshmipuram, 1st Cross, 1st Main, Halasuru, Bangalore – 560008. Hereby giving the notice for purchasing the property from Mr. Sajeesh MB which is in Yelahanka New Town Apartment/Flat/Tenement Bearing No.66, BBMP Katha No.636/66/5, S-MIG-A, in Ground Floor, Block No.5, Layout formed by the Karnataka Housing Board, as per the Agreement of Sale dated 03-Jun-2022.
Therefore any person(s) having any claim in respect of the above referred property or part thereof by way of sale, exchange, mortgage, charge, gift, maintenance, inheritance, possession, lease, tenancy, sub tenancy, lien, license, hypothecation, transfer of title or beneficial interest under any trust right of prescription or pre-emptionor under any Agreement or other disposition or under any decree, order or Awardor otherwise claiming, howsoever, are hereby requested to make the same known in writing together with supporting documents to the undersigned to me within a period of 14 days (both days inclusive) of the publication hereof failing which the claim of such person(s) will deemed to have been waived and /or abandoned.

REAL ESTATE SELLING

Commerical — Mysore

PRIME COMMERCIAL PROPERTY 2.1 ACRES IS FOR SALE NEAR TO MYSORE ON EXPRESS HIGHWAY NEAR TO EXIT POINT AND UNDERPASS CONTACT OWNER 7676770503/9741019028

House — Banashankari

SALE BSK THIRD stage THIRD phase FIRST block Bangalore-560085 OPPOSITE WATER TANK East Facing With OLD house FIFTY feetRoad suitable FOR COMMERCIAL 40x60feet CONTACT KRISHNAMURTHY 8277305783 BROKERS PLEASE EXCUSE.

CONNECT – ಕ್ಲಾಸಿಫೈಡ್ಸ್

Grand Flea Market Presents — Entry Free!
10 Days Exhibition
ಇಂಡಿಯನ್ ಆರ್ಟಿಸನ್ ಬಜಾರ್
INDIAN ARTISAN BAZAAR
Art, Craft & Handlooms Exhibition
Date: 3rd June to 12th June 2022
Timings: 11:00 AM - 7:00 PM
Venue: Karnataka Chitrakala Parishath Kumara Krupa Road, Bengaluru
Covid19 Safety & Precautions are in place, as per Govt standards.
The Shadow Live — Date: 11th Jun 2022 — Timing: 5.30 PM - 6.30 PM
The Fire Show Live — Date: 12th Jun 2022 — Timing: 6 PM - 7.30 PM
Visit & Shop For 90+ Stalls | Live Performance | Much More..!
Home Decors | Handmade Paintings | Lampshades | Ceramic Pots | Handlooms & Handicrafts | Curtains | Carpets | Mats | Bags | Khadi Kurtas | Silks Saree | Sarees | Designer Kurtis | Bandhani Bedsheets | Designer Jewelry | Handmade Jewelry | Toys | Pots & Much more...
For Details Contact : 9611835597 / 6364685716 Entry Free..!
90+ Shopping Stalls | Live Performance | Much More!

RENTAL PROPERTIES

Accommodation Available — Commercial

OFFICE SPACES/ Industrial and Warehouse available and Wanted for immediate occupation/ Built-to suit. Lokapriya: 9845162933.

Security & Detectives

REPUTED SECURITY Agency Requires Security Guards, Security Supervisors, Field Officers, Area/ Training/ Operations Manager. Contact: 9886349781/ 8073668816

Wanted

JOB OPPORTUNITY for Retired, Men, House wife & Graduates in Reputed Company. Age 40 to 75, Bangalorians only. Earn up to 40,000/-Contact: 9741401834

PERSONAL

Change of Name

I JITENDRA B DESAI R/a. #14, Ground Floor, 2nd Cross, Kanakadasa Layout, St. Thomas Town, Bengaluru North Bengaluru- 560084, declare that JITENDRA BACHUBHAI and JITENDRA B DESAI Pertain to me only and henceforth I shall be known as JITENDRA B DESAI vide affidavit dated 02.06.2022, before notary S.R. Nanjunda Swamy, Bangalore.

I, MOHAMMED JAFFAR Residing at No. 24, 4th Cross, Escorts Layout, Attur, Yelahanka, Bangalore North 560064 have changed my name to MOHAMMED JAFFER. G vide affidavit dated 04.06.2022 before notary H. Sridhar Rao Banglaore.

GANGAVVA MALLAPPA W/o 14845454X- Sep/MT- MALLAPPA CK R/a Belagali, Nagarmunoli, Chikkodi, Belgaum, Karnataka changed name from GANGAVVA MALLAPPA to GANGAVVA MALLAPPA KOTABAGI notary K.V.Mani Bangalore.

EDUCATION — To Place your Classified Ads Contact: 9845114560

JOB OPPORTUNITIES

Part-Time Jobs

PLEASE_JOIN for Retired_officers Seminar.For_Active Life and Additional 12Lakhs income free Registration: 7411358386/ 8095760094

BUSINESS

Business Offers — Finance

NRI'S INVESTMENT And Finance Available On Low Interest Against Properties, Land &Building,Sites,Flats, Converted& Agriculture Lands Call:7411265189

ADMISSION CORNER

R.E.S. POLYTECHNIC
Recognised by Govt. of Karnataka & Approved by AICTE
Inst. Code: 450 Estd: 1986
ADMISSIONS STARTED FOR
10th PASS - 3 Yrs Diploma
PUC / ITI PASS - 2 Yrs Diploma
FREE In-plant training to all students
New NEP syllabus with industry interaction to all
CS | IS | EC | EE | Civil | Mech | Auto | CP | FT
5, Sunkadakatte, Magadi Main Road, Hegganahalli Cross, B'lore-91 Phone: 080-23484814, 99166 46466, 99166 39466
RES-22302

V.E.T. B.V.L. POLYTECHNIC
Estd : 1985 Inst.Code : 362
Recognised by Collegiate & Directorate of Technical Education,Govt. of Karnataka & AICTE, New Delhi
ADMISSION OPEN FOR DIPLOMA COURSES
New NEP Syllabus
Computer Science / Commercial Practice
Apparel Design & Fabrication Tehnology
14th Main, 2nd Phase, J.P.Nagar, Bengaluru - 560078.
Ph : 080-2658 6808 / 2658 4760

DH Deccan Herald — ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, • Education Success • Congratulation Ads
For More Details Contact:
Santhosh Kumar : 9880856233
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಆರೋಗ್ಯಾಧಿಕಾರಿಗಳ ಕಛೇರಿ,
ಯಲಹಂಕ ವಲಯ, ಬೆಂಗಳೂರು – 560092.

ಸಂಖ್ಯೆ: ಬೃಬೆಂಮಪಾ/ಯ/ಆಅ/ಟೆಂಡರ್/01/2022–23 ದಿನಾಂಕ: 06–06–2022

ತಿದ್ದುಪಡಿ–1

ವಿಷಯ: ಟೆಂಡರ್ ಪ್ರಕಟಣೆ ಸಂಖ್ಯೆ: ಬೃಬೆಂಮಪಾ/ಯ/ಆಅ/ಟೆಂಡರ್/01/2022–23 ದಿನಾಂಕ: 26–05–2022 ರ ಬಗ್ಗೆ.

ಸಂಬಂಧಪಟ್ಟವರೆಲ್ಲರಿಗೂ ಮತ್ತು ನಿರ್ದಿಷ್ಟವಾಗಿ ಆಸಕ್ತ ಬಿಡ್‌ದಾರರ ಗಮನಕ್ಕೆ ಈ ಮೂಲಕ ತಿಳಿಸುವುದೇನೆಂದರೆ 26–05–2022ರಂದು ಪ್ರಕಟಿಸಲಾದ ಮೇಲ್ಕಂಡ ಟೆಂಡರ್ ಅಧಿಸೂಚನೆಯನ್ನು ಕೆಲವು ತಾಂತ್ರಿಕ ಕಾರಣಗಳಿಂದಾಗಿ ಮಾರ್ಪಡಿಸಲಾಗಿದೆ.

ಕ್ರ ಸಂ.	ಯೋಜನೆಯ ಹೆಸರು / ಮೀಸಲಾತಿ	ಟೆಂಡರಿಗಿಟ್ಟಿರುವ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಗಳಲ್ಲಿ)
1	ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಸೊಳ್ಳೆ ನಿಯಂತ್ರಣ ಸೇವೆಗಳಿಗೆ ಆಟೊ ಮತ್ತು ಸಲಕರಣೆಗಳನ್ನು ಒದಗಿಸುವುದು. (ಇತರೆ)	24.40	61,000/-
2	ಯಲಹಂಕ ವಿಧಾನಸಭಾ ಕ್ಷೇತ್ರದಲ್ಲಿ ಸೊಳ್ಳೆ ನಿಯಂತ್ರಣ ಸೇವೆಗಳಿಗೆ ಆಟೊ ಮತ್ತು ಸಲಕರಣೆಗಳನ್ನು ಒದಗಿಸುವುದು. (ಇತರೆ)	16.30	40,750/-
3	ವಾರ್ಡ್ ಸಂಖ್ಯೆ. 01, ಕೆಂಪೇಗೌಡ ವಾರ್ಡ್ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಎಸ್.ಟಿ)	7.62	19,500/-
4	ವಾರ್ಡ್ ಸಂಖ್ಯೆ. 02, ಚೌಡೇಶ್ವರಿ ವಾರ್ಡ್ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಇತರೆ)	7.62	19,500/-
5	ವಾರ್ಡ್ ಸಂಖ್ಯೆ. 03, ಅಟ್ಟೂರು ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಇತರೆ)	7.62	19,500/-
6	ವಾರ್ಡ್ ಸಂಖ್ಯೆ. 04, ಯಲಹಂಕ ಉಪನಗರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಇತರೆ)	7.62	19,500/-
7	ವಾರ್ಡ್ ಸಂಖ್ಯೆ. 05, ಜಕ್ಕೂರು ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಇತರೆ)	7.62	19,500/-
8	ವಾರ್ಡ್ ಸಂಖ್ಯೆ. 06, ಥಣಿಸಂದ್ರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಎಸ್.ಸಿ)	7.62	19,500/-
9	ವಾರ್ಡ್ ಸಂಖ್ಯೆ. 07, ಬ್ಯಾಟರಾಯನಪುರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಇತರೆ)	7.62	19,500/-
10	ವಾರ್ಡ್ ಸಂಖ್ಯೆ. 08, ಕೊಡಿಗೇಹಳ್ಳಿ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಇತರೆ)	7.62	19,500/-
11	ವಾರ್ಡ್ ಸಂಖ್ಯೆ. 09, ವಿದ್ಯಾರಣ್ಯಪುರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಎಸ್.ಸಿ)	7.62	19,500/-
12	ವಾರ್ಡ್ ಸಂಖ್ಯೆ. 10, ದೊಡ್ಡಬೊಮ್ಮಸಂದ್ರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಇತರೆ)	7.62	19,500/-
13	ವಾರ್ಡ್ ಸಂಖ್ಯೆ. 11, ಕುವೆಂಪುನಗರ ಇಲ್ಲಿ ಸೊಳ್ಳೆ ನಿಯಂತ್ರಣ ಚಟುವಟಿಕೆಗಳಿಗೆ ಮಾನವಶಕ್ತಿ ಒದಗಿಸುವುದು. (ಎಸ್.ಸಿ)	7.62	19,500/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ (ಮೂಲ ದಿನಾಂಕ): 13–06–2022ರಂದು ಸಂಜೆ 4.00 ಗಂಟೆಯವರೆಗೆ – **ಮಾರ್ಪಾಡಿಸಿದ ದಿನಾಂಕ: 15–06–2022ರಂದು ಸಂಜೆ 4.00 ಗಂಟೆಯವರೆಗೆ** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ(ಮೂಲ ದಿನಾಂಕ): 14–06–2022ರಂದು ಸಂಜೆ 4.30 ಗಂಟೆಗೆ – **ಮಾರ್ಪಾಡಿಸಿದ ದಿನಾಂಕ: 16–06–2022ರಂದು ಸಂಜೆ 4.30 ಗಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ ದಿನಾಂಕ(ಮೂಲ ದಿನಾಂಕ): 17–06–2022ರಂದು ಸಂಜೆ 4.00 ಗಂಟೆಗೆ – **ಮಾರ್ಪಾಡಿಸಿದ ದಿನಾಂಕ: 18–06–2022 ರಂದು ಸಂಜೆ 4.00 ಗಂಟೆಗೆ.**

ಸಹಿ/– ಆರೋಗ್ಯಾಧಿಕಾರಿಗಳು, ಯಲಹಂಕ ವಲಯ, ಬಿಬಿಎಂಪಿ.

ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ.: 01/2022 ದಿನಾಂಕ: 01/06/2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಐಟಂ ಪೂರೈಕೆಗಾಗಿ ಮಾತ್ರ ಐಆರ್‌ಇಪಿಎಸ್ ಮೂಲಕ ಇ-ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.
ಸಂಕ್ಷಿಪ್ತ ವಿವರಣೆ: ಸಾಂಪ್ರದಾಯಿಕ ಮೆಮು ಮೋಟಾರು ಕೋಚ್‌ಗಳಿಗಾಗಿ ಬಿಹೆಚ್‌ಇಎಲ್ ಡ್ರಾಯಿಂಗ್ ನಂ 25731030003ಏ00 ಎಸಿಎಸ್1266 ಪ್ರಕಾರ ಪೂರ್ಣಗೊಂಡ ಟ್ಯಾಪ್ ಚೇಂಜರ್ ಸ್ವಿಚ್ ಗ್ರೂಪ್. ಇತ್ತೀಚಿನ ಯಾವುದೇ ತಿದ್ದುಪಡಿಗಳಿದ್ದರೆ ಪರಿಗಣಿಸಿ (ಪ್ರಮಾಣ: 02 ಸಂಖ್ಯೆಗಳು) ಟೆಂಡರ್ ಸಂಖ್ಯೆ ಎಲ್8216283ಎ
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 01.07.2022 ಸಮಯ: 14:00 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ
ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು ಬೆಂಗಳೂರು
ಪಿಯುಬಿ/125/ಎಎಎಲ್/ ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2022–23
S.W.Railways SWRRLY SWRRLY

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ.: 03 ಯುಬಿಎಲ್ 2022–23 ದಿನಾಂಕ: 31.05.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಕಾಮಗಾರಿಗಾಗಿ ಇ-ಟೆಂಡರ್‌ಗಳಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

	ಕಾಮಗಾರಿ ವಿವರ	ಅಂದಾಜು ವೆಚ್ಚ
1	ಹುಬ್ಬಳ್ಳಿ ವಿಭಾಗದ ನಿರ್ಣಾಯಕ ಸ್ಥಳಗಳಲ್ಲಿ ಒಎಫ್‌ಸಿ ಸಂಪರ್ಕವನ್ನು ಹೆಚ್ಚಿಸುವುದು	Rs. 84,53,639.00
2	ಹುಬ್ಬಳ್ಳಿ ವಿಭಾಗ: ಸಿಗ್ನಲಿಂಗ್ ಮತ್ತು ದೂರಸಂಪರ್ಕ ಸ್ಥಾಪನೆಗೆ ವಿಶ್ವಾಸಾರ್ಹ ಸುಧಾರಣೆ ಕೆಲಸ	Rs. 2,07,17,666.58

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.06.2022 ಸಮಯ: 11:00 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ
ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯೂನಿಕೇಷನ್ ಇಂಜಿನಿಯರ್ ಹುಬ್ಬಳ್ಳಿ
ಪಿಯುಬಿ/128/ಎಎಎಲ್/ ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2022–23
S.W.Railways SWRRLY SWRRLY

ನೈರುತ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ ಸಂ.: ಸಿಎಓ/ಸಿಎನ್/ಬಿಎನ್‌ಸಿ/30/2022 ದಿನಾಂಕ: 01.06.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಈ ಕೆಳಗಿನ ಕಾಮಗಾರಿಗಾಗಿ ಇ-ಟೆಂಡರ್‌ಗಳಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

	ಕಾಮಗಾರಿ ವಿವರ	ಅಂದಾಜು ವೆಚ್ಚ
1	ಗದಗ– ವಾಡಿ ಹೊಸ ಬಿಜಿ–ಲೈನ್ ಶಹಾಪುರದಿಂದ ವಾಡಿ ನಿಲ್ದಾಣದ ನಡುವೆ ಸಿಹೆಚ್:229005, 238993, 239326 & 243998 ರಲ್ಲಿ 4 ಸಂಖ್ಯೆಯ ಪ್ರಮುಖ ಪಿಎಸ್‌ಸಿ ಸೇತುವೆಗಳ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ: ಜಿಡಿಜಿ–ಡಬ್ಲ್ಯೂಡಿ/33)	Rs. 29,01,96,422/-
2	ಮೈಸೂರು–ಹಾಸನ ವಿಭಾಗದ ನಡುವೆ ಹೊಳೆನರಸೀಪುರದಲ್ಲಿ ರೈಲ್ವೆ ಕಿಮೀ 87/800–900 ರಲ್ಲಿ ಎಲ್‌ಸಿ ನಂ.78 ರ ಬದಲಿಗೆ ಆರ್‌ಒಬಿ ನಿರ್ಮಾಣ 1x30ಮೀ. ಬೋ ಸ್ಟ್ರಿಂಗ್ ಗಿರ್ಡರ್ +11x18.46ಮೀ. (eff. ಸ್ಪ್ಯಾನ್) ಪಿಎಸ್‌ಸಿ ಗಿರ್ಡರ್ ಮತ್ತು ಆರ್‌ಇ ಪ್ಯಾನೆಲ್‌ಗಳು. (ಟೆಂಡರ್ ಉಲ್ಲೇಖ ಸಂಖ್ಯೆ: ಎಂವೈಎಸ್–ಹೆಚ್‌ಎಎಸ್–ಆರ್‌ಒಬಿ–ಎಲ್‌ಸಿ78–ಆರ್)	Rs. 25,87,99,329/-
3	ಗದಗ–ವಾಡಿ ಹೊಸ ಬಿಜಿ ಲೈನ್– ಹೊದಿಕೆ ಹಾಕುವುದು ಮತ್ತು ಮೈನರ್ ಸೇತುವೆಗಳ ನಿರ್ಮಾಣ ಮತ್ತು ಕಿಮೀ: 51/100 ರಿಂದ ಕಿಮೀ ನಡುವೆ ಆರ್‌ಯುಬಿ ಗಳ ನಿರ್ಮಾಣ ಸೇರಿದಂತೆ ಭೂಮಿಯ ಕೆಲಸ; 56/500 ಲಿಂಗನಬಂಡಿ ಮತ್ತು ಕುಸ್ಗಿ ನಿಲ್ದಾಣಗಳ ನಡುವೆ ಮತ್ತು ಲಿಂಗನಬಂಡಿ ಯಾರ್ಡ್‌ನಲ್ಲಿ ಕಟಿಂಗ್. (ಎರಡು ಹಂತದ ಹಿಮ್ಮುಖ ಹರಾಜು ಬಿಡ್ಡಿಂಗ್) (ಟೆಂಡರ್ ಉಲ್ಲೇಖ ಸಂಖ್ಯೆ: ಜಿಡಿಜಿ–ಡಬ್ಲ್ಯೂಡಿ/32)	Rs. 74,42,75,685/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22.06.2022 ಸಮಯ: 15:00 ಗಂಟೆಯವರೆಗೆ.
ಹೆಚ್ಚಿನ ಮಾಹಿತಿಗಾಗಿ www.ireps.gov.in ಲಾಗ್‌ಆನ್ ಮಾಡಿ
ಉಪ ಮುಖ್ಯ ಇಂಜಿನಿಯರ್/ ಕಾಮಗಾರಿ/ನಿರ್ಮಾಣ ಬೆಂಗಳೂರು ಕಂಟೋನ್ಮೆಂಟ್
ಪಿಯುಬಿ/124/ಎಎಎಲ್/ ಪಿಆರ್‌ಬಿ/ಎಸ್‌ಡಬ್ಲ್ಯೂಆರ್/2022–23
S.W.Railways SWRRLY SWRRLY

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ಕೋಲಾರ ರವರ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ

ಸಂ: ಎ3/ಉಅಸಂ/ಹೊ.ಗು/ಸಿಆರ್–01/2022–23 ದಿನಾಂಕ: 25.05.2022

ತಿದ್ದುಪಡಿ “ಇ” ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕೋಲಾರ ಸಾಮಾಜಿಕ ಅರಣ್ಯ ವಿಭಾಗದಲ್ಲಿ 2022–23ನೇ ಸಾಲಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಮತ್ತು ವಲಯ ಕಛೇರಿಗಳಲ್ಲಿ ಕಂಪ್ಯೂಟರ್ ಕಾರ್ಯನಿರ್ವಹಿಸಲು ಡಾಟಾ ಎಂಟ್ರಿ ಆಪರೇಟರ್, ‘ಡಿ’ ಗ್ರೂಪ್ ಮತ್ತು ಕಛೇರಿ ಸ್ವಚ್ಛತಾ ಸಿಬ್ಬಂದಿ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಉಪಯೋಗಿಸುತ್ತಿರುವ ಇಲಾಖಾ ವಾಹನಕ್ಕೆ ವಾಹನ ಚಾಲಕನಾಗಿ ಕಾರ್ಯನಿರ್ವಹಿಸಲು ಅವಶ್ಯವಿರುವ ಮಾನವ ಸಂಪನ್ಮೂಲವನ್ನು ನಿಗಧಿತ ಏಜೆನ್ಸಿಗಳಿಂದ ಸರಬರಾಜು ಮಾಡಲು ದಿನಾಂಕ: **13.06.2022** ರವರೆಗೂ ‘ಇ’ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತರು ‘ಇ’ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in) ಮುಖಾಂತರ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ವಿಭಾಗ, ಕೋಲಾರ ಇವರ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಕೋಲಾರ

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ122/ಎಂಸಿಎ/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಬಾಶೆಟ್ಟಿಹಳ್ಳಿ
ಬಾಶೆಟ್ಟಿಹಳ್ಳಿ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಸಂ.: ಬಾ.ಪ.ಪಂ:ಕಂ.ಶಾ/03/2021–22 ದಿನಾಂಕ: 20.05.2022

ಬಹಿರಂಗ ಹರಾಜು

ಈ ಮೂಲಕ ಸಮಸ್ತ ನಾಗರೀಕರಿಗೆ ತಿಳಿಯಪಡಿಸುವುದೇನೆಂದರೆ, ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿಗೆ ಸೇರಿದ ಹಿಂದಿನ ಗ್ರಾಮ ಪಂಚಾಯಿತಿ ಅನುದಾನದಡಿ ಯಲಹಂಕ – ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಬಾಶೆಟ್ಟಿಹಳ್ಳಿ ಬಸ್ ನಿಲ್ದಾಣದ ಬಳಿ ನಿರ್ಮಿಸಿರುವ 4 ಮಳಿಗೆಗಳನ್ನು ಹಾಗೂ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿಗೆ ಸೇರಿದ ಹುಣಸೆ ಮರಗಳ ಫಸಲನ್ನು 2022 – 23ನೇ ಸಾಲಿಗೆ ಬಹಿರಂಗ ಹರಾಜನ್ನು **ದಿನಾಂಕ: 23.06.2022** ರಂದು **ಬೆಳಿಗ್ಗೆ 11.00 ಗಂಟೆಗೆ** ಬಹಿರಂಗ ಹರಾಜು ನಡೆಸಲಾಗುತ್ತಿದ್ದು, ಬಹಿರಂಗ ಹರಾಜು ನಡೆಸುವ ವಿವರಗಳು ಈ ಕೆಳಕಂಡಂತಿರುತ್ತವೆ.

ಯಲಹಂಕ – ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಬಾಶೆಟ್ಟಿಹಳ್ಳಿ ಬಸ್ ನಿಲ್ದಾಣದ ಬಳಿ ಇರುವ ಪಟ್ಟಣ ಪಂಚಾಯಿತಿ ಮಳಿಗೆಗಳು

ಕ್ರ. ಸಂ.	ಮಳಿಗೆಗಳ ವಿವರ	ಮಳಿಗೆ ಸಂಖ್ಯೆ	ಮಳಿಗೆ ಅಳತೆ ಅಡಿಗಳಲ್ಲಿ	ಒಟ್ಟು ವಿಸ್ತೀರ್ಣ ಚ. ಅಡಿಗಳಲ್ಲಿ	ಮೀಸಲಾತಿ ಅಂಗಡಿ ಮಳಿಗೆಗಳ ಸಂಖ್ಯೆ: ಇತರೆ	ಪ.ಜಾತಿ	ಪ.ಪಂಗಡ	19.07.2019 ರ ಸುತ್ತೋಲೆಯಂತೆ: ನಿಗದಿಪಡಿಸಿದ ಕನಿಷ್ಠ ಮಾಹೆಯಾನ ಬಾಡಿಗೆ (ರೂ.)	ಮರುಪಾವತಿ ಮಾಡಬಹುದಾದ ಠೇವಣಿ ಮೊತ್ತ
1	ಬಾಶೆಟ್ಟಿಹಳ್ಳಿ ಬಸ್ ನಿಲ್ದಾಣ ಬಳಿ ಇರುವ ಮಳಿಗೆಗಳು	1	10 X 18	180	1	7		2416	33750
2		2	10 X 18	180	2			2416	33750
3		3	9.25 X 13.25	122.56	3			1645	22980
4		4	9.25 X 13.25	122.56		4		1645	22980

ಯಲಹಂಕ – ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಬಾಶೆಟ್ಟಿಹಳ್ಳಿ ಬಸ್ ನಿಲ್ದಾಣದ ಬಳಿ ಇರುವ ಪಟ್ಟಣ ಪಂಚಾಯಿತಿ ಮಳಿಗೆಗಳು

ಕ್ರ.ಸಂ.	ಗ್ರಾಮ	ಹುಣಸೆ ಮರಗಳು ಇರುವ ಸ್ಥಳ	ಮರಗಳ ಸಂಖ್ಯೆ	ಹರಾಜು ಠೇವಣಿ ಮೊತ್ತ
1	ಕಸುವನಹಳ್ಳಿ	ಗ್ರಾಮ ಠಾಣಾ	02	1000/–
2	ಬಿಸುವನಹಳ್ಳಿ	ಸರ್ಕಾರಿ ಶಾಲೆಯ ಆವರಣ	01	1000/–
3	ಅರೇಹಳ್ಳಿ ಗುಡ್ಡದಹಳ್ಳಿ	ಗುಂಡು ತೋಪು	07	8000/–

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕಂದಾಯ ನಿರೀಕ್ಷಕರು ರವರನ್ನು ಸಂಪರ್ಕಿಸುವುದು.

ಸಹಿ/– ಆಡಳಿತಾಧಿಕಾರಿ, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ

ವಾಸಾಸಂಇ/ಉನಿಕ/ಬೆಂ.ಗ್ರಾಜಿ/794/2022–23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಬಾಶೆಟ್ಟಿಹಳ್ಳಿ

ಗಡುವಿನೊಳಗೆ ಕಾಮಗಾರಿ ಪೂರ್ಣಗೊಳಿಸುವ ವಿಶ್ವಾಸದಲ್ಲಿ ಬಿಎಂಆರ್‌ಸಿಎಲ್

ವೈಟ್‌ಫೀಲ್ಡ್ ಮೆಟ್ರೊ ರೈಲು ಸಂಚಾರ ವರ್ಷಾಂತ್ಯಕ್ಕೆ

ವೈಟ್‌ಫೀಲ್ಡ್ ಮಾರ್ಗದ ಕಾಮಗಾರಿ ವೇಗವಾಗಿ ನಡೆಯುತ್ತಿದ್ದು, 2022ರ ಡಿಸೆಂಬರ್ ವೇಳೆಗೆ ಕಾಮಗಾರಿ ಪೂರ್ಣಗೊಂಡು ರೈಲುಗಳ ಸಂಚಾರ ಆರಂಭವಾಗುವ ವಿಶ್ವಾಸ ಇದೆ.
ಬಿ.ಎಲ್. ಯಶವಂತ್ ಚವ್ಹಾಣ್
ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ

• ವಿಜಯಕುಮಾರ್ ಎಸ್.ಕೆ.

ಬೆನ್ನಿಗಾನಹಳ್ಳಿ ಬಳಿ ಮೆಟ್ರೊ ರೈಲು ನಿಲ್ದಾಣ ನಿರ್ಮಾಣವಾಗುತ್ತಿರುವುದು –ಪ್ರಜಾವಾಣಿ ಚಿತ್ರ/ರಂಜು ಪಿ.

ಬೆಂಗಳೂರು: ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ಸಂಪರ್ಕ ಕಲ್ಪಿಸುವ ಕಾಮಗಾರಿ ಬಹುತೇಕ ಅಂತಿಮ ಹಂತಕ್ಕೆ ಬಂದಿದ್ದು, ಅತಿ ಶೀಘ್ರದಲ್ಲೇ ಈ ಭಾಗದ ಸಂಚಾರ ದಟ್ಟಣೆ ಕಿರಿಕಿರಿಗೆ ಮುಕ್ತಿ ಸಿಗಲಿದೆ. ನಿಗದಿತ ಅವಧಿಯಲ್ಲೇ 2022ರ ಡಿಸೆಂಬರ್ ವೇಳೆಗೆ ಕಾಮಗಾರಿ ಪೂರ್ಣಗೊಳಿಸುವ ವಿಶ್ವಾಸವನ್ನು ಬಿಎಂಆರ್‌ಸಿಎಲ್ ಹೊಂದಿದೆ.

ಮೆಟ್ರೊ ರೈಲು ಮಾರ್ಗದ 2ನೇ ಹಂತದ ಕಾಮಗಾರಿಗಳಲ್ಲಿ ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್‌ಗೆ ಸಂಪರ್ಕ ಕಲ್ಪಿಸುವ ಯೋಜನೆ ಅತ್ಯಂತ ಮಹತ್ವದ್ದಾಗಿದೆ. ಐಟಿ ಕಂಪನಿಗಳು ಹೆಚ್ಚಿರುವ ಭಾಗಕ್ಕೆ ಬೆಂಗಳೂರಿನ ಬೇರೆ ಬೇರೆ ಭಾಗಗಳಿಂದ ಜನ ನಿತ್ಯ ಪ್ರಯಾಣ ಮಾಡುತ್ತಿದ್ದಾರೆ.

ಸದ್ಯ ಬೈಯಪ್ಪನಹಳ್ಳಿ ತನಕ ಇರುವ ಮೆಟ್ರೊ ರೈಲಿನಲ್ಲಿ ಹೋಗಿ ಅಲ್ಲಿಂದ ಮುಂದಕ್ಕೆ ಬಿಎಂಟಿಸಿ ಬಸ್, ಸ್ಥಳೀಯ ರೈಲು ಮತ್ತು ಕ್ಯಾಬ್‌ಗಳನ್ನು ಹತ್ತಿ ವೈಟ್‌ಫೀಲ್ಡ್ ಕಡೆಗೆ ಪ್ರಯಾಣ ಮಾಡುತ್ತಿದ್ದಾರೆ. ಇದರಿಂದಾಗಿ ಈ ಭಾಗದಲ್ಲಿ ಸಂಚಾರ ದಟ್ಟಣೆ ಬೇರೆಡೆಗಿಂತ ಹೆಚ್ಚಾಗಿದೆ.

ಈ ಸಂಚಾರ ದಟ್ಟಣೆಗೆ ಪರಿಹಾರ ಕಲ್ಪಿಸಲು ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್‌ಗೆ ಮೆಟ್ರೊ ರೈಲು ಸಂಪರ್ಕ ಕಲ್ಪಿಸಲು ಈ ಯೋಜನೆ ಅನುಕೂಲ ಆಗಲಿದೆ. ಬೈಯಪ್ಪನಹಳ್ಳಿಯಿಂದ ಸೀತಾರಾಮಪಾಳ್ಯದ ತನಕ ಒಂದು ಪ್ಯಾಕೇಜ್ ಮತ್ತು ಸೀತಾರಾಮಪಾಳ್ಯದಿಂದ ವೈಟ್‌ಫೀಲ್ಡ್ ತನಕ ಮತ್ತೊಂದು ಪ್ಯಾಕೇಜ್ ರೂಪಿಸಲಾಗಿದೆ. ಈ ಎರಡೂ ಪ್ಯಾಕೇಜ್‌ಗಳನ್ನು ಐ.ಟಿ.ಡಿ. ಸೆಮಿಂಡಿಯಾ ಜೆ.ವಿ. ಕಂಪನಿ ನಿರ್ವಹಿಸುತ್ತಿದೆ.

ಪೂರ್ವ ನಿಗದಿಯಂತೆ 2020ರ ವೇಳೆಗೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಭೂಸ್ವಾಧೀನ ಪ್ರಕ್ರಿಯೆ, ಮರಗಳ ಸ್ಥಳಾಂತರ ಮತ್ತು ಕೋವಿಡ್ ಕಾರಣದಿಂದ ಕಾಮಗಾರಿ ವಿಳಂಬವಾಗಿದೆ. ಕೋವಿಡ್ ಪ್ರಕರಣಗಳು ಕಡಿಮೆಯಾದ ಬಳಿಕ ಎಲ್ಲ ಅಡೆತಡೆಗಳೂ ನಿವಾರಣೆಯಾಗಿ ಕಾಮಗಾರಿ ಚುರುಕು ಪಡೆದುಕೊಂಡಿದೆ.

ಕಾಮಗಾರಿ ಪೂರ್ಣಗೊಂಡರೆ ಕೆಂಗೇರಿಯಿಂದ ವೈಟ್‌ಫೀಲ್ಡ್‌ಗೆ ನಿರಂತರ ಮೆಟ್ರೊ ಸಂಪರ್ಕ ದೊರೆತಂತಾಗಲಿದೆ. ನಗರದ ಅನೇಕ ರಸ್ತೆಗಳಲ್ಲಿ ವಾಹನ ದಟ್ಟಣೆ ಕಡಿಮೆಗೊಳಿಸುವಲ್ಲಿ ಈ ಮೆಟ್ರೊ ಮಾರ್ಗ ಮಹತ್ತರ ಪಾತ್ರವಹಿಸಲಿದೆ.

'ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ತನಕ 15.50 ಕಿ.ಮೀ. ಉದ್ದದ ರೈಲು ಮಾರ್ಗದಲ್ಲಿ 13 ನಿಲ್ದಾಣಗಳು ನಿರ್ಮಾಣವಾಗುತ್ತಿವೆ. ಎತ್ತರಿಸಿದ ರೈಲು ಮಾರ್ಗದ ಸಿವಿಲ್ ಕಾಮಗಾರಿ ಮುಕ್ತಾಯಗೊಂಡಿದೆ. ಹಳಿಗಳ ಜೋಡಣೆ ಮತ್ತು ನಿಲ್ದಾಣಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಕಾಮಗಾರಿ ಪೂರ್ಣಗೊಂಡು ವೈಟ್‌ಫೀಲ್ಡ್ ತನಕ ರೈಲುಗಳ ಸಂಚಾರ ಆರಂಭವಾದರೆ ಐ.ಟಿ ಕಾರಿಡಾರ್‌ಗೆ ನಗರದ ವಿವಿಧೆಡೆಯಿಂದ ಸಂಪರ್ಕ ಕಲ್ಪಿಸಿದಂತೆ ಆಗಲಿದೆ. ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆಯೂ ದುಪ್ಪಟ್ಟಾಗುವ ಸಾಧ್ಯತೆ ಇದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

13 ಮೆಟ್ರೊ ನಿಲ್ದಾಣ

- ಬೆನ್ನಿಗಾನಹಳ್ಳಿ
- ಕೆ.ಆರ್.ಪುರ
- ಮಹದೇವಪುರ
- ಗರುಡಾಚಾರ್‌ಪಾಳ್ಯ
- ಹೂಡಿ ಜಂಕ್ಷನ್
- ಸೀತಾರಾಮಪಾಳ್ಯ
- ಕುಂದಲಹಳ್ಳಿ
- ನಲ್ಲೂರುಹಳ್ಳಿ
- ಶ್ರೀಸತ್ಯಸಾಯಿ ಆಸ್ಪತ್ರೆ
- ಪಟ್ಟಂದೂರು ಅಗ್ರಹಾರ
- ಕಾಡುಗೋಡಿ
- ಚನ್ನಸಂದ್ರ
- ವೈಟ್‌ಫೀಲ್ಡ್

ಸಿಲ್ಕ್ ಬೋರ್ಡ್–ಕೆ.ಆರ್.ಪುರ ಕಾಮಗಾರಿ ಚುರುಕು

ಇನ್ನೊಂದೆಡೆ ಸಿಲ್ಕ್ ಬೋರ್ಡ್‌ನಿಂದ ಕೆ.ಆರ್.ಪುರಕ್ಕೆ ಸಂಪರ್ಕ ಕಲ್ಪಿಸುವ ಕಾಮಗಾರಿಯೂ ಚುರುಕಿನಿಂದ ನಡೆಯುತ್ತಿದೆ.

ಹೊರ ವರ್ತುಲ ರಸ್ತೆಯಲ್ಲಿ ಹಾದು ಹೋಗುವ ಮಾರ್ಗದಲ್ಲೂ ಐ.ಟಿ ಕಂಪನಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇವೆ. ಸಿಲ್ಕ್ ಬೋರ್ಡ್‌ನಿಂದ ಕಾಡುಬೀಸನಹಳ್ಳಿ ತನಕದ 10 ಕಿ.ಮೀ. ಉದ್ದದ ಮೊದಲ ಪ್ಯಾಕೇಜ್ ಗುತ್ತಿಗೆಯನ್ನು ಆಫ್ಕಾನ್ಸ್ ಸಂಸ್ಥೆ ಪಡೆದಿದ್ದರೆ, ಕಾಡುಬೀಸನಹಳ್ಳಿಯಿಂದ ಬೈಯಪ್ಪನಹಳ್ಳಿಯವರೆಗಿನ 9.75 ಕಿ.ಮೀ. ಎರಡನೇ ಪ್ಯಾಕೇಜ್‌ನ ಗುತ್ತಿಗೆಯನ್ನು ಶಂಕರನಾರಾಯಣ ಕನ್‌ಸ್ಟ್ರಕ್ಷನ್ ಪಡೆದಿದೆ.

'ಮುಂದಿನ ದಿನಗಳಲ್ಲಿ ಸರ್ಜಾಪುರ ತನಕವೂ ಮೆಟ್ರೊ ರೈಲು ವಿಸ್ತರಣೆಗೊಳ್ಳಲಿದೆ. ಇವೆಲ್ಲವೂ ಐ.ಟಿ ಕಂಪನಿ ಉದ್ಯೋಗಿಗಳು ಮತ್ತು ಆ ಭಾಗದ ಜನ ವಿಮಾನ ನಿಲ್ದಾಣಕ್ಕೆ ತಲುಪಲು ಅನುಕೂಲ ಆಗಲಿದೆ' ಎನ್ನುತ್ತಾರೆ ಬಿಎಂಆರ್‌ಸಿಎಲ್ ಅಧಿಕಾರಿಗಳು.

ವಿಮಾನ ನಿಲ್ದಾಣಕ್ಕೆ ನೇರ ಮಾರ್ಗ

ವೈಟ್‌ಫೀಲ್ಡ್‌ಗೆ ಮೆಟ್ರೊ ರೈಲು ಸಂಪರ್ಕ ದೊರೆತರೆ ಮುಂದಿನ ದಿನಗಳಲ್ಲಿ ವೈಟ್‌ಫೀಲ್ಡ್‌ನಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ನೇರ ಸಂಪರ್ಕ ದೊರಕಲಿದೆ.

ಕೆ.ಆರ್.ಪುರ–ಹೆಬ್ಬಾಳ ಮಾರ್ಗದಲ್ಲಿ ವಿಮಾನ ನಿಲ್ದಾಣಕ್ಕೆ ಮೆಟ್ರೊ ರೈಲು ಸಂಪರ್ಕ ಕಲ್ಪಿಸುವ ಕಾಮಗಾರಿ ಭರದಿಂದ ಸಾಗಿದೆ. ಈ ಕಾಮಗಾರಿಯನ್ನು 2025ರ ವೇಳೆಗೆ ಪೂರ್ಣಗೊಳಿಸಲು ಬಿಎಂಆರ್‌ಸಿಎಲ್ ಉದ್ದೇಶಿಸಿದೆ.

ಈ ಎರಡು ಯೋಜನೆಗಳು ಪೂರ್ಣಗೊಂಡರೆ ವೈಟ್‌ಫೀಲ್ಡ್ ಭಾಗದ ಜನ ನೇರವಾಗಿ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸಬಹುದು. ಅದರಲ್ಲೂ ಐ.ಟಿ ಕಂಪನಿ ಉದ್ಯೋಗಿಗಳಿಗೆ ಹೆಚ್ಚಿನ ಅನುಕೂಲ ಆಗಲಿದೆ.

ಕೆಇಆರ್‌ಸಿ ಅಧ್ಯಕ್ಷರಾಗಿ ರವಿಕುಮಾರ್

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ನೂತನ ಅಧ್ಯಕ್ಷರನ್ನಾಗಿ ರಾಜ್ಯ ಸರ್ಕಾರದ ನಿಕಟಪೂರ್ವ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಕೆಇಆರ್‌ಸಿ ಅಧ್ಯಕ್ಷರ ಆಯ್ಕೆಗೆ ಸಮಿತಿ ನೇಮಿಸಲಾಗಿತ್ತು. ರವಿಕುಮಾರ್ ಸೇರಿದಂತೆ ಹಲವರು ಅರ್ಜಿ ಸಲ್ಲಿಸಿದ್ದರು. ನೇಮಕಾತಿ ಸಮಿತಿ ಶಿಫಾರಸಿನಂತೆ ರವಿಕುಮಾರ್ ಅವರನ್ನು ಆಯ್ಕೆ ಮಾಡಿ ಇಂಧನ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ. ಮುಂದಿನ ಐದು ವರ್ಷಗಳ ಅವಧಿಗೆ ಅವರು ಆಯೋಗದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

ರವಿಕುಮಾರ್ 1984ರ ಬ್ಯಾಚ್‌ನ ಐಎಎಸ್ ಅಧಿಕಾರಿ. 2020ರ ಡಿಸೆಂಬರ್ ಅಂತ್ಯದಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಹುದ್ದೆಗೆ ನೇಮಕಗೊಂಡಿದ್ದ ಅವರು ಇದೇ ಮೇ 31ರಂದು ನಿವೃತ್ತರಾಗಿದ್ದರು.

ಬೈಯಪ್ಪನಹಳ್ಳಿ ಟರ್ಮಿನಲ್ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ವಿಶ್ವೇಶ್ವರಯ್ಯ ರೈಲ್ವೆ ಟರ್ಮಿನಲ್‌ನಿಂದ ಹೊರಟ ಮೊದಲ ರೈಲಿಗೆ ಚಾಲನೆ ನೀಡಿದ ಸಂದರ್ಭದಲ್ಲಿ ಪ್ರಯಾಣಿಕರು ಮತ್ತು ಕಾರ್ಮಿಕರು ಸಂಭ್ರಮಿಸಿದರು –ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ಮಾಣವಾದ ಒಂದು ವರ್ಷದ ನಂತರ ಬೈಯಪ್ಪನಹಳ್ಳಿ ಸರ್.ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಸೋಮವಾರದಿಂದ ಕಾರ್ಯಾರಂಭ ಮಾಡಿದೆ. ಎರ್ನಾಕುಲಂ ಎಕ್ಸ್‌ಪ್ರೆಸ್ ಈ ನಿಲ್ದಾಣದಿಂದ ಸಂಜೆ ಸಂಚಾರ ಆರಂಭಿಸುವ ಮೂಲಕ ಕಾರ್ಯಾರಂಭಿಸಿತು. ಹೊಸದಾಗಿ ಆರಂಭಗೊಂಡ ನಿಲ್ದಾಣದಲ್ಲಿ ಪ್ರಯಾಣಿಕರಿಗಿಂತ ರೈಲ್ವೆ ಹೋರಾಟಗಾರರು ಮತ್ತು ಮಾಧ್ಯಮ ಪ್ರತಿನಿಧಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದರು.

'ರೈಲು ನಿಲ್ದಾಣವೇ ವಿಮಾನ ನಿಲ್ದಾಣದಂತಿದೆ. ನಿಲ್ದಾಣದ ವಿನ್ಯಾಸ ಮತ್ತು ಸ್ವಚ್ಛತೆಗೆ ಕೈಗೊಂಡಿರುವ ಕ್ರಮಗಳು ಅಂತರರಾಷ್ಟ್ರೀಯ ಮಟ್ಟದಲ್ಲಿವೆ. ಈ ನಿಲ್ದಾಣ ನೋಡಿ ಸಂತಸವಾಯಿತು' ಎಂದು ರಮೇಶ್ ಬಾಬು ಮತ್ತು ಕಾರ್ತಿಕಾ ರಮೇಶ್ ದಂಪತಿ ಹರ್ಷ ವ್ಯಕ್ತಪಡಿಸಿದರು.

'ನಿಲ್ದಾಣ ಕಾರ್ಯಾರಂಭ ಆಗಿದ್ದರಿಂದ ಸದ್ಯಕ್ಕೆ ನಿರಾಳವಾಗಿದ್ದೇವೆ. ಗಣ್ಯರಿಗೆ ಕಾಯುವುದನ್ನು ರೈಲ್ವೆ ಇಲಾಖೆ ನಿಲ್ಲಿಸಬೇಕು. ಈ ಸಂದರ್ಭವನ್ನು ಬಳಸಿಕೊಂಡು ರೈಲುಗಳ ಕಾರ್ಯಾಚರಣೆಯನ್ನು ಹೆಚ್ಚಿಸಬೇಕು' ಎಂದು ರೈಲ್ವೆ ಹೋರಾಟಗಾರ ಕೃಷ್ಣ ಪ್ರಸಾದ್ ಹೇಳಿದರು. ಈ ರೈಲು ನಿಲ್ದಾಣಕ್ಕೆ ಸಂಪರ್ಕ ರಸ್ತೆ ಇಲ್ಲದಿದ್ದರಿಂದ ಕಾರ್ಯಾರಂಭ ವಿಳಂಬವಾಯಿತೇ ಹೊರತು ಪ್ರಧಾನ ಮಂತ್ರಿ ಅವರಿಂದ ಉದ್ಘಾಟನೆ ಮಾಡಿಸಲು ಕಾದಿರಲಿಲ್ಲ ಎಂದು ರೈಲ್ವೆ ಅಧಿಕಾರಿಗಳು ಸ್ಪಷ್ಟಪಡಿಸಿದರು.

ರೈಲು ವಿಳಂಬ: ಮೊದಲ ರೈಲಿನ ಕಾರ್ಯಾಚರಣೆ ಗೊಂದಲಗಳಿಂದ ಎರ್ನಾಕುಲಂ ರೈಲು 50 ನಿಮಿಷ ತಡವಾಗಿ ಹೊರಟಿತು. ಈ ರೈಲು ಬಾಣಸವಾಡಿ ನಿಲ್ದಾಣದಿಂದ ಹೊರಡಬೇಕಿತ್ತು. ದಿಢೀರ್ ಬದಲಾವಣೆ ಬಗ್ಗೆ ಜೂನ್ 3ರಂದು ರೈಲ್ವೆ ಇಲಾಖೆ ಪ್ರಕಟಣೆ ಹೊರಡಿಸಿತ್ತು. ಆದರೂ, ಪ್ರಯಾಣಿಕರು ಗೊಂದಲಕ್ಕೆ ಒಳಗಾಗಿದ್ದರು. ಪ್ರಯಾಣಿಕರನ್ನು ಬಾಣಸವಾಡಿಯಿಂದ ಹೊಸ ನಿಲ್ದಾಣಕ್ಕೆ ಕರೆ ತರಲು ಮೆಮು ರೈಲು ಮತ್ತು ಆರು ಬಿಎಂಟಿಸಿ ಬಸ್‌ಗಳನ್ನು ಅಧಿಕಾರಿಗಳು ವ್ಯವಸ್ಥೆ ಮಾಡಿದ್ದರು.

ಇನ್ನೂ ಮೂರು ರೈಲು ಸಂಚಾರ

ಮುಂದಿನ ದಿನಗಳಲ್ಲಿ ಈ ನಿಲ್ದಾಣದಿಂದ ಇನ್ನೂ ಮೂರು ರೈಲುಗಳು ಸಂಚರಿಸಲಿವೆ. ಕೊಚುವೇಲಿ- ಹಮ್‌ಸಫರ್ ಎಕ್ಸ್‌ಪ್ರೆಸ್(16320) ಜೂನ್ 10ರಿಂದ ಕಾರ್ಯಾಚರಣೆ ಆರಂಭಿಸಲಿದೆ. ಜೂನ್ 12ರಿಂದ ಪಟ್ನಾ -ಹಮ್‌ಸಫರ್ ಎಕ್ಸ್‌ಪ್ರೆಸ್(22354) ರೈಲು, ಬಂಗಾರಪೇಟೆಗೆ ಮೆಮು ರೈಲು ಜೂನ್ 20ರಿಂದ ಕಾರ್ಯಾಚರಣೆ ಮಾಡಲಿದೆ ಎಂದು ರೈಲ್ವೆ ಅಧಿಕಾರಿಗಳು ವಿವರಿಸಿದರು.



ಶ್ವಾನಗಳ ಜೊತೆಗೆ ರೂಪದರ್ಶಿ ಕಾಣಿಸಿಕೊಂಡಿದ್ದು ಹೀಗೆ – ಪ್ರಜಾವಾಣಿ ಚಿತ್ರ

ಸಾಕು ಪ್ರಾಣಿಗಳ ಪ್ರದರ್ಶನ 12ಕ್ಕೆ

ಬೆಂಗಳೂರು: ಫೆಲೈನ್ ಕ್ಲಬ್ ಆಫ್ ಇಂಡಿಯಾ ಹಾಗೂ 'ಮಾರ್ಸ್ ಪೆಟ್‌ಕೇರ್ ಸಂಸ್ಥೆ'ಯ ಆಶ್ರಯದಲ್ಲಿ ಇದೇ 12ರಂದು ಸಾಕುಪ್ರಾಣಿಗಳಾದ ಬೆಕ್ಕು ಹಾಗೂ ಶ್ವಾನ ಪ್ರದರ್ಶನವನ್ನು ಆಯೋಜಿಸಲಾಗಿದೆ ಎಂದು ಫೆಲೈನ್ ಕ್ಲಬ್ ಆಫ್ ಇಂಡಿಯಾದ ಅಧ್ಯಕ್ಷ ಸಾಕಿಬ್ ಪಠಾಣ್ ತಿಳಿಸಿದರು.

'ಅಂದು ಜಯಮಹಲ್ ಅರಮನೆಯಲ್ಲಿ ಬೆಳಿಗ್ಗೆ 10ರಿಂದ ಸಂಜೆ ತನಕ ಪ್ರದರ್ಶನ ನಡೆಯಲಿದೆ. ಆಸಕ್ತರು ಹೆಸರು ನೋಂದಾಯಿಸಿಕೊಂಡು ಸಾಕುಪ್ರಾಣಿಗಳನ್ನು ಪ್ರದರ್ಶನಕ್ಕೆ ತರಬಹುದಾಗಿದೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸ್ಪೇನ್, ಥಾಯ್ಲೆಂಡ್‌ನ ಇಬ್ಬರು ತೀರ್ಪುಗಾರರು ತೀರ್ಪು ನೀಡಲಿದ್ದಾರೆ. 200ಕ್ಕೂ ಹೆಚ್ಚು ಬೆಕ್ಕುಗಳು, 100ಕ್ಕೂ ಅಧಿಕ ಶ್ವಾನಗಳು ಪ್ರದರ್ಶನದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಈ ವೇಳೆ ಸಾಕುಪ್ರಾಣಿಗಳ ದತ್ತು ಸ್ವೀಕಾರ ಅಭಿಯಾನ ಸಹ ನಡೆಯಲಿದೆ' ಎಂದು ಮಾಹಿತಿ ನೀಡಿದರು.

ಸಾಕು ನಾಯಿಗಳ ಪೂಲ್ ಪಾರ್ಟಿ, ಫ್ಯಾಶನ್ ಶೋ, ಲೈವ್ ಸಂಗೀತ... ಹೀಗೆ 15 ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ವಿದ್ಯಾರ್ಥಿಗಳು ಹಾಗೂ ಪ್ರದರ್ಶನಕ್ಕೆ ಬರುವವರಿಗೆ ಉಚಿತ ಪ್ರವೇಶ. ಪ್ರೇಕ್ಷಕರಿಗೆ ₹ 299 ನಿಗದಿ ಪಡಿಸಲಾಗಿದೆ ಎಂದು ಹೇಳಿದರು. 'ಮನೆಗಳಲ್ಲಿ ಸಾಕುಪ್ರಾಣಿಗಳನ್ನು ಪ್ರೀತಿಯಿಂದ ಸಾಕುವ ಕುರಿತು ಅರಿವು ಮೂಡಿಸಲಾಗುವುದು. ದಕ್ಷಿಣ ಭಾರತದ ವಿವಿಧ ರಾಜ್ಯಗಳಿಂದ ಪ್ರದರ್ಶನಕ್ಕೆ ಸಾಕುಪ್ರಾಣಿಗಳು ಬರಲಿವೆ' ಎಂದು ಕಾರ್ಯಕ್ರಮದ ನಿರ್ದೇಶಕ ಎಸ್. ಕಿರಣ್ ಕುಮಾರ್ ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ಮೃದುಲ್, ಉತ್ಪಲ್ ಟಾಟು, ಸಲಿಲ್‌ಮೂರ್ತಿ ಹಾಜರಿದ್ದರು.

ಮನೆ ನಿರ್ಮಾಣ ವಿಳಂಬ: ಅಧಿಕಾರಿಗಳಿಗೆ ತರಾಟೆ

ಸಚಿವ ಸೋಮಶೇಖರ್ ಅಧ್ಯಕ್ಷತೆಯಲ್ಲಿ ಬೆಂಗಳೂರು ದಕ್ಷಿಣ ತಾ.ಪಂ ಕೆಡಿಪಿ ಸಭೆ

ಪ್ರಜಾವಾಣಿ ವಾರ್ತೆ

ಸಭೆಯಲ್ಲಿ ಸಹಕಾರ ಸಚಿವ ಎಸ್‌.ಟಿ. ಸೋಮಶೇಖರ್, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ನಾಗವೇಣಿ ಇದ್ದರು.

ಮುಖ್ಯಾಂಶಗಳು
- ರಸಗೊಬ್ಬರ ದಾಸ್ತಾನಿಗೆ ಸೂಚನೆ
- ಸಸಿಗಳ ನಿರ್ವಹಣೆ: ಸಾಮಾಜಿಕ ಅರಣ್ಯ ಇಲಾಖೆಯಿಂದ ಪ್ರೋತ್ಸಾಹ ಧನ

ಬೆಂಗಳೂರು: 'ಕೊಳಚೆ ನಿರ್ಮೂಲನಾ ಮಂಡಳಿಯಿಂದ ಬಡವರಿಗೆ ಹೊಸದಾಗಿ ಮನೆ ಕಟ್ಟಿಕೊಡುವುದಾಗಿ ಭರವಸೆ ನೀಡಿ ಮೂರು ವರ್ಷವಾದರೂ ಇನ್ನೂ ಪೂರ್ಣಗೊಂಡಿಲ್ಲ' ಎಂದು ಸಹಕಾರ ಸಚಿವರಾದ ಎಸ್.ಟಿ.ಸೋಮಶೇಖರ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು ಪಂಚಾಯಿತಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಕೆಡಿಪಿ ತ್ರೈಮಾಸಿಕ ಸಭೆಯಲ್ಲಿ ಮಾತನಾಡಿದ ಅವರು, 'ಮನೆಯಿಲ್ಲದೆ ಜನ ರಸ್ತೆಯಲ್ಲಿ ವಾಸ ಮಾಡುವಂತಾಗಿದೆ. ಈ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೀರಿ' ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು.

'ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ 357, ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ 503 ಮನೆಗಳ ನಿರ್ಮಾಣ ಮಾಡಲು ಮತ್ತೆ ಟೆಂಡರ್ ಕರೆಯಲಾಗಿದೆ' ಎಂಬ ಅಧಿಕಾರಿಗಳು ಉತ್ತರಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, 'ಇನ್ನೂ ಟೆಂಡರ್ ಕರೆಯುವುದರಲ್ಲೇ ಇದ್ದರೆ ಜನರಿಗೆ ಮನೆಗಳನ್ನು ನಿರ್ಮಿಸಿಕೊಡುವುದು ಯಾವಾಗ' ಎಂದು ತರಾಟೆಗೆ ತೆಗೆದುಕೊಂಡರು.

'ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಕೊರತೆಯಾಗದಂತೆ ಅಧಿಕಾರಿಗಳು ಕ್ರಮವಹಿಸಬೇಕು. ಅಗತ್ಯ ಪ್ರಮಾಣದ ಬಿತ್ತನೆ ಬೀಜ ಮತ್ತು ರಸಗೊಬ್ಬರವನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ದಾಸ್ತಾನು ಮಾಡಿಕೊಳ್ಳಬೇಕು' ಎಂದು ಸೂಚಿಸಿದರು.

'ಸಾಮಾಜಿಕ ಅರಣ್ಯ ಇಲಾಖೆ ವತಿಯಿಂದ ವಿವಿಧ ಜಾತಿಯ 1.35 ಲಕ್ಷ ಸಸಿಗಳನ್ನು ಬೆಳೆಸಲಾಗಿದೆ. ಮಳೆಗಾಲ ಈಗ ಆರಂಭವಾಗಿರುವುದರಿಂದ ರೈತರಿಗೆ ಸಸಿಗಳನ್ನು ವಿತರಣೆ ಮಾಡಲಾಗಿದೆ. ಸಸಿಗಳನ್ನು ನಿರ್ವಹಣೆ ಮಾಡುವ ರೈತರಿಗೆ ಸರ್ಕಾರ ನೀಡುವ ಪ್ರೋತ್ಸಾಹಧನವನ್ನು ಕೂಡ ನೀಡಲಾಗುತ್ತಿದೆ' ಎಂದು ಅಧಿಕಾರಿಗಳು ಹೇಳಿದರು.

ಉಪನಗರ ರೈಲು: ಜೂ.20ಕ್ಕೆ ಪ್ರಧಾನಿಯಿಂದ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪನಗರ ರೈಲು ಯೋಜನೆಗೆ ಅನುಮೋದನೆ ದೊರೆತು 607 ದಿನಗಳ ಬಳಿಕ ಕೊನೆಗೂ ಶಂಕುಸ್ಥಾಪನೆಗೆ ಕಾಲ ಕೂಡಿಬಂದಿದೆ. ಜೂನ್ 20ರಂದು ಪ್ರಧಾನಿ ನರೇಂದ್ರ ಮೋದಿ ಅವರು ಶಂಕುಸ್ಥಾಪನೆ ನೆರವೇರಿಸುವರು.

ಮುಂಬೈ ಮಾದರಿಯಲ್ಲಿ ನಗರಕ್ಕೆ ಪ್ರತ್ಯೇಕವಾಗಿ ರೈಲು ಸೇವೆ ಆರಂಭಿಸುವ ಬಗ್ಗೆ ರೈಲ್ವೆ ಇಲಾಖೆ 1983ರಲ್ಲೇ ಪ್ರಸ್ತಾಪ ಸಿದ್ಧಪಡಿಸಿತ್ತು. 2019ರ ಕೇಂದ್ರ ಬಜೆಟ್‌ನಲ್ಲಿ ಈ ಯೋಜನೆಯನ್ನು ಉಲ್ಲೇಖಿಸಲಾಯಿತು. 2020ರ ಅ. 21ರಂದು ರೈಲ್ವೆ ಮಂಡಳಿಯಿಂದ ಇದಕ್ಕೆ ಅನುಮೋದನೆಯೂ ದೊರೆಯಿತು. ಅನುಮೋದನೆ ದೊರೆತು ಎರಡು ವರ್ಷಗಳು ಸಮೀಪಿಸುತ್ತಿದ್ದರೂ ಕಾಮಗಾರಿ ಆರಂಭವೇ ಆಗಲಿಲ್ಲ.

ಯೋಜನೆ ಅನುಷ್ಠಾನದ ಹೊಣೆ ಹೊತ್ತಿರುವ ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ (ಕೆ–ರೈಡ್) ಈ ಯೋಜನೆಯನ್ನು ನಾಲ್ಕು ಕಾರಿಡಾರ್‌ಗಳನ್ನಾಗಿ ವಿಂಗಡಿಸಿದೆ. 2,190 ದಿನಗಳ (6 ವರ್ಷ) ಕಾಲಮಿತಿ ನಿಗದಿ ಮಾಡಿಕೊಂಡಿದೆ. ಅದರಲ್ಲಿ ಈಗ ಶೇ 25ರಷ್ಟು ದಿನಗಳು ಪೂರ್ಣಗೊಂಡಿವೆ.

ಪ್ರಧಾನಿ ನರೇಂದ್ರ ಮೋದಿ ಅವರಿಂದಲೇ ಕಾಮಗಾರಿಗೆ ಶಂಕುಸ್ಥಾಪನೆ ಮಾಡಿಸಲು ರಾಜ್ಯ ಸರ್ಕಾರ ಕಾಯುತ್ತಿತ್ತು. ಜೂನ್ 20ರಂದು ನಗರಕ್ಕೆ ಬರಲಿರುವ ನರೇಂದ್ರ ಮೋದಿ ಅವರಿಂದ ಕಾಮಗಾರಿಗೆ ಚಾಲನೆ ಕೊಡಿಸಲು ನಿರ್ಧರಿಸಿದೆ.

'₹15 ಸಾವಿರ ಕೋಟಿ ಮೊತ್ತದ ಉಪನಗರ ರೈಲು ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಲಿದ್ದಾರೆ. ಇದು ನಗರದ ಸಂಚಾರ ದಟ್ಟಣೆಯ ಸಮಸ್ಯೆ ನೀಗಿಸಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ತಿಳಿಸಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

THE NATIONAL CO-OPERATIVE BANK LTD.,
No.73/1, Gandhi Bazar Main Road, Bangalore- 560 004.
Phone No. 080-26618092 / 22421998 / 26619950.

Applications are invited for the post of

MANAGING DIRECTOR / CHIEF EXECUTIVE OFFICER

The National Co-Operative Bank Ltd.,a leading Urban Co-Operative Bank in Bangalore invites application for the post of Managing Director/CEO from the eligible candidates as per RBI circular DOR.GOV.REC.25/12.10.000/2021-22 dated June 25,2021 regarding appointment of managing Director/CEo in UCBs.

Eligibility: The person shall be a graduate from a Recognized University in India, must have knowledge of Kannada language (both reading and writing): preferably with:

1. CAIIB/ DBF/ Diploma in Co-Operative Business Management.
2. Post graduate in any discipline preferably Finance and Economics.
3. Must have knowledge of Computer and software Application.
4. Minimum 8 years of experience in Banking at the middle/senior level management in the Banking sector.
5. Preference will be given to candidates who have exposure in Credit, Investment/ Recovery/ ALM Risk Management/Internal control and Audit IS Audit.

The person must be above 35 years of age and below 70 years of age as on 31.05.2022.

Pay scale: Commensurate with qualification and experience.

Selection Process: By Interview and subject to meeting the "Fit and Proper" criteria prescribed by **Reserve Bank of India as detailed in Appendix II of the above mentioned circular.**

Eligible candidates may submit application along with testimonials, passport size photograph and aadhar copy **on or before 17.06.2022** to the undersigned by post/by hand/by courier/by e-mail (if sent by e-mail hard copy to be sent separately). to **Email Id: chairman.ao@ncbl.org.in**

Sd/- Chairman
The National Co-Operative Bank Ltd.,

ಸಂಕ್ಷಿಪ್ತ ಸುದ್ದಿ

13ರಂದು ರಾಷ್ಟ್ರಪತಿ ಬೆಂಗಳೂರಿಗೆ

ಬೆಂಗಳೂರು: ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ಎರಡು ದಿನಗಳ ಪ್ರವಾಸಕ್ಕಾಗಿ ಜೂನ್ 13 ರಂದು ಬೆಂಗಳೂರಿಗೆ ಆಗಮಿಸಲಿದ್ದಾರೆ.

ಜೂನ್ 13 ರಂದು ಬೆಳಿಗ್ಗೆ ಬೆಂಗಳೂರಿಗೆ ಆಗಮಿಸುವ ರಾಷ್ಟ್ರಪತಿ, ರಾಷ್ಟ್ರೀಯ ಮಿಲಿಟರಿ ಶಾಲೆಯ ಅಮೃತ ಮಹೋತ್ಸವ ಸಮಾರಂಭದಲ್ಲಿ ಭಾಗವಹಿಸುವರು. ಆ ದಿನ ರಾತ್ರಿ ರಾಜಭವನದಲ್ಲಿ ವಾಸ್ತವ್ಯ ಹೂಡುವರು.

ಇಸ್ಕಾನ್ ಸಂಸ್ಥೆಯು ಕನಕಪುರ ರಸ್ತೆ ಸಮೀಪದ ದೊಡ್ಡಕಲ್ಲಸಂದ್ರದ ವೈಕುಂಠ ಬೆಟ್ಟದಲ್ಲಿ ತಿರುಪತಿ ತಿರುಮಲ ಮಾದರಿಯಲ್ಲಿ ನಿರ್ಮಿಸಿರುವ ದೇಗುಲವನ್ನು ಜೂನ್ 14 ರಂದು ಬೆಳಿಗ್ಗೆ ಉದ್ಘಾಟಿಸುವರು. ಆ ದಿನ ಮಧ್ಯಾಹ್ನ ದೆಹಲಿಗೆ ವಾಪಸಾಗುವರು.

ಸರ್ಕಾರಿ ಐಟಿಐ ಕಾಲೇಜಿಗೆ ಪ್ರವೇಶಾತಿ

ಬೆಂಗಳೂರು: ನಗರದ ಹೊಸೂರು ರಸ್ತೆಯ ಡೇರಿ ವೃತ್ತದಲ್ಲಿರುವ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2022–23ನೇ ಸಾಲಿನ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಜೂನ್ 13ರವರೆಗೆ ಅವಕಾಶ ಕಲ್ಪಿಸಲಾಗಿದೆ. ಜೂನ್ 9ರಿಂದ 13ರ ವರೆಗೆ ಪ್ರವೇಶ ಪ್ರಕ್ರಿಯೆ ನಡೆಯಲಿದೆ.

ಆರು ಅಲ್ಪಾವಧಿ ಮತ್ತು 21 ದೀರ್ಘಾವಧಿ ಸೇರಿ ಒಟ್ಟು 27 ಕೋರ್ಸ್‌ಗಳಿಗೆ 952 ಸೀಟಗಳು ಲಭ್ಯ. ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಅಂಕಪಟ್ಟಿ, ಶಾಲಾ ವರ್ಗಾವಣೆ ಪ್ರಮಾಣಪತ್ರ ಸೇರಿ ವಿವಿಧ ದಾಖಲೆಗಳ ಮೂಲ ಪ್ರತಿ ಮತ್ತು ಝೆರಾಕ್ಸ್ ಪ್ರತಿಗಳನ್ನು ಸಿದ್ಧಪಡಿಸಿಕೊಂಡು ಬರಬೇಕು.

ಮಾಹಿತಿಗೆ: 080 – 26562307, ಕೌಶಲ್ಯ ಸಹಾಯವಾಣಿ: 155267

ಎಎಪಿ ರಾಜ್ಯ ವಕ್ತಾರ ಕೆ.ಮಥಾಯ್ ಆರೋಪ

'ಹೈಕೋರ್ಟ್ ಆದೇಶ ಉಲ್ಲಂಘಿಸಿ ಜಾಹೀರಾತು ಫಲಕಕ್ಕೆ ಅನುಮತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಜಾಹೀರಾತು ಫಲಕ ಅಳವಡಿಸಲು ಅವಿನಾಶಿ ಜಾಹೀರಾತು ಸಂಸ್ಥೆಗೆ ಕಾನೂನು ಉಲ್ಲಂಘಿಸಿ ಅನುಮತಿ ನೀಡಿದೆ ಎಂದು ಆಮ್ ಆದ್ಮಿ ಪಾರ್ಟಿ ರಾಜ್ಯ ವಕ್ತಾರ ಕೆ.ಮಥಾಯ್ ಆರೋಪಿಸಿದರು.

'ಹೋರ್ಡಿಂಗ್ ಅಳವಡಿಸಲು ನೀಡಿರುವ ಸ್ಥಳವು ಬಿಬಿಎಂಪಿಗೆ ಸೇರಿದೆ. ಅನುಮತಿ ನೀಡುವ ಹಕ್ಕು ಬಿಡಿಎಗೆ ಇರುವುದಿಲ್ಲ' ಎಂದು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

'ಬಿಡಿಎ, ಹೈಕೋರ್ಟ್ ಆದೇಶವನ್ನು ಉಲ್ಲಂಘಿಸಿದೆ. ಬಿಡಿಎ ಹಾಗೂ ಬಿಬಿಎಂಪಿಯ ಕೆಲವು ಭ್ರಷ್ಟ ಅಧಿಕಾರಿಗಳ ನೆರವಿನಿಂದ ಅವಿನಾಶಿ ಜಾಹೀರಾತು ಸಂಸ್ಥೆ ಅಕ್ರಮವಾಗಿ ಅನುಮತಿ ಪಡೆದುಕೊಂಡಿದೆ' ಎಂದು ಕೆ.ಮಥಾಯ್ ದೂರಿದರು.

'ಬಿಬಿಎಂಪಿಗೆ ಸೇರಿದ ಜಾಗದಲ್ಲಿ ಜಾಹೀರಾತು ಫಲಕ ಅಳವಡಿಸುವ ಹಕ್ಕನ್ನು ಬಿಡಿಎ ಹೇಗೆ ನೀಡಿತು? ಇದು ಹಲವು ಸಂಶಯ ಮೂಡಿಸಿದೆ' ಎಂದು ಹೇಳಿದರು.

'ಬಿಬಿಎಂಪಿಯ ಜಾಹೀರಾತು ಫಲಕಗಳ ಗಾತ್ರದ ಗರಿಷ್ಠ ಮಿತಿ 40X20 ಅಡಿ ಆಗಿರುವಾಗ, 80X80 ಅಡಿ ಫಲಕಕ್ಕೆ ಅವಕಾಶ ನೀಡಲಾಗಿದೆ. ಹೆಬ್ಬಾಳ ಮೇಲ್ಸೇತುವೆ ಎನ್‌ಎಚ್‌ಎಐ ಅಡಿಯಲ್ಲಿ ಬರುವುದರಿಂದ ರಾಷ್ಟ್ರೀಯ ಹೆದ್ದಾರಿ ಸಮೀಪ ಹೋರ್ಡಿಂಗ್‌ಗೆ ಅವಕಾಶ ನೀಡಲು ಹೇಗೆ ಸಾಧ್ಯವಾಯಿತು?' ಎಂದು ಆಕ್ರೋಶ ಹೊರಹಾಕಿದರು.

'ಬಿಡಿಎ, ಬಿಬಿಎಂಪಿ ಆಯುಕ್ತರ ಕಾನೂನುಬಾಹಿರ ಆದೇಶದ ವಿರುದ್ಧ ಪ್ರಕರಣ ದಾಖಲಿಸಿದ್ದೇವೆ. ಇದುವರೆಗೆ ಕ್ರಮ ಕೈಗೊಂಡಿಲ್ಲ. ಭ್ರಷ್ಟಾಚಾರದ ಶಂಕೆ ವ್ಯಕ್ತವಾಗಿದೆ. ಅಧಿಕಾರಿಗಳ ವಿರುದ್ಧ ತನಿಖೆಗೆ ಆದೇಶಿಸಬೇಕು ಹಾಗೂ ಜಾಹೀರಾತು ಫಲಕ ತೆರವುಗೊಳಿಸಬೇಕು' ಎಂದು ಪಕ್ಷದ ಬೆಂಗಳೂರು ವಕ್ತಾರೆ ಉಷಾ ಮೋಹನ್ ಆಗ್ರಹಿಸಿದರು.

ಪಕ್ಷದ ಮಹದೇವಪುರ ವಿಧಾನಸಭಾ ಕ್ಷೇತ್ರ ಘಟಕದ ಅಧ್ಯಕ್ಷ ಅಶೋಕ್ ಮೃತ್ಯುಂಜಯ ಇದ್ದರು.

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599 ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ.... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ಅಜ್ಜಿಮನೆಯಲ್ಲಿ ಆರೋಗ್ಯದ ಅಡಿಪಾಯ

ಡಾ. ಕುಶ್ವಂತ್ ಕೋಳಿಬೈಲು

ಕೆಲವು ದಶಕಗಳ ಹಿಂದೆ, ಬೇಸಿಗೆ ಬಂತೆಂದರೆ ಸಾಕು ಪ್ರತಿಯೊಂದು ಹಳ್ಳಿಯ ಮನೆಯಲ್ಲಿಯೂ 'ಮಕ್ಕಳ ಶಿಬಿರ'ವಿರುತ್ತಿತ್ತು. ದೂರದ ಊರಿಂದ ಬರುವ ಪುಟಾಣಿಗಳು ಎರಡು ತಿಂಗಳ ಮಟ್ಟಿಗೆ ಅಜ್ಜಿ ಮನೆಯಲ್ಲಿ ಠಿಕಾಣಿ ಹೂಡುತ್ತಿದ್ದರು. ಸಾಲು ಸಾಲು ಮೊಮ್ಮಕ್ಕಳು ಮನೆಯ ತುಂಬೆಲ್ಲಾ ಓಡಾಡುತ್ತಾ, ತೋಟ ಗದ್ದೆಗಳಲ್ಲಿಯೂ ತಮ್ಮ ಪರಾಕ್ರಮ ಮೆರೆಯುತ್ತಾ ಜೀವನದ ಪಾಠಗಳನ್ನು ಅಜ್ಜಿಮನೆಯಲ್ಲಿ ಕಲಿಯುತ್ತಿದ್ದರು. ಫಲಿತಾಂಶದ ಒತ್ತಡಗಳಿಲ್ಲದೆ ನಿತ್ಯ ಹತ್ತಾರು ಸ್ಪರ್ಧೆಗಳು ಅಜ್ಜಿಮನೆಯ ಅಂಗಳದಲ್ಲಿ ನಡೆಯುತ್ತಿದ್ದವು. ಸಂಜೆ ಕಾಫಿಯ ಜೊತೆಗೆ ಅಜ್ಜಿ ಮಾಡಿದ ಆರೋಗ್ಯಕರ ತಿನಿಸುಗಳನ್ನು ಮೆಲ್ಲುವಾಗ ಗೆದ್ದವರ ಮುಖ ಮತ್ತು ಸೋತವರ ಮುಖ ಒಂದೇ ರೀತಿ ಅರಳಿರುತ್ತಿತ್ತು. ಹೈಸ್ಕೂಲು ಮಕ್ಕಳಿಂದ ಹಿಡಿದು ಇನ್ನೂ ಶಾಲೆಗೆ ಸೇರದಿದ್ದ ಪುಟಾಣಿಗಳೂ ಅಜ್ಜಿಮನೆಯ ಪಾಠಗಳನ್ನು ಶಿಸ್ತಿನಿಂದ ಕೇಳುತ್ತಿದ್ದರು. ಅಲ್ಲಿಯ ಸಿಲೆಬಸ್ಸು ಅಜ್ಜಿಯದಿದ್ದರೂ ಮಕ್ಕಳಿಗೆ ತಮಗಿಷ್ಟಬಂದ ಸರ್ಕಸ್ ಮಾಡಲು ಪೂರ್ಣ ಸ್ವಾತಂತ್ರ್ಯವಿರುತ್ತಿತ್ತು. ಬೆನ್ನು ಬಾಗಿರುತ್ತಿದ್ದ ಅಜ್ಜಿಗೂ ಬೆತ್ತ ಹಿಡಿಯದೆ ಮಕ್ಕಳನ್ನು ಬಗ್ಗಿಸಲು ಗೊತ್ತಿತ್ತು.

ಮುಂಜಾನೆದ್ದು ಅಡುಗೆಮನೆಯತ್ತ ಹೆಜ್ಜೆ ಹಾಕುವ ಮಕ್ಕಳನ್ನು ಸಾಲಾಗಿ ಶಿಸ್ತಿನಿಂದ ಕೂರಿಸಿ ಉಪಾಹಾರ ಬಡಿಸಿದ ನಂತರ ಆ ದಿನದ ಶಿಬಿರದ ಶುಭಾರಂಭವಾಗುತ್ತಿತ್ತು. ಯಾವುದೇ ಕಲಿಕೆಯ ಒತ್ತಡವಿಲ್ಲದಾಗ ಮತ್ತು ಮಕ್ಕಳನ್ನು ಜೀನಿಯಸ್‌ಗಳನ್ನಾಗಿ ಮಾಡಲೇಬೇಕೆನ್ನುವ ಹಪಾಹಪಿಯಿಲ್ಲದಾಗ ಮಕ್ಕಳ ಸ್ವಾಭಾವಿಕ ಪ್ರತಿಭೆಗಳು ಅನಾವರಣಗೊಳ್ಳುತ್ತಿದ್ದವು. ಹೆಚ್ಚಿನ ಮಕ್ಕಳು ಮೊದಲ ಬಾರಿಗೆ ವೇದಿಕೆಯೇರಿದ್ದು, ಹಾಡಿದ್ದು, ಕುಣಿದದ್ದು ಮತ್ತು ಚಪ್ಪಾಳೆ ಗಳಿಸಿದ್ದು ಅಜ್ಜಿಯ ಮನೆಯ ಅಂಗಳದಲ್ಲಿಯೇ! ಅಜ್ಜಿಯ ಮನೆಯ ಸಾಮೂಹಿಕ ಮಜ್ಜನವಂತೂ ಸಾಲಾಗಿ ಗಾಡಿಗಳನ್ನು ತೊಳೆಯುವ ಸರ್ವಿಸ್ ಸ್ಟೇಷನ್ ರೀತಿಯಲ್ಲಿರುತ್ತಿತ್ತು. ನಿತ್ಯ ಸಂಜೆ ಭಜನೆ ಮಾಡುವಾಗ, ತೊದಲು ನುಡಿಯುತ್ತಿದ್ದ ಪುಟಾಣಿಗಳು ಕಾಲಕ್ರಮೇಣ ಯಾವ ಒತ್ತಡಗಳಿಲ್ಲದೆ ಭಕ್ತಿಗೀತೆಗಳನ್ನು ಕಂಠಪಾಠ ಮಾಡಿಬಿಡುತ್ತಿದ್ದರು.

> ಬೆನ್ನು ಬಾಗಿರುತ್ತಿದ್ದ ಅಜ್ಜಿಗೆ ಬೆತ್ತ ಹಿಡಿಯದೆ ಮಕ್ಕಳನ್ನು ಬಗ್ಗಿಸಲು ಗೊತ್ತಿತ್ತು. ಶಾಲೆಯ ಮುಖ ನೋಡದಿದ್ದ ಅಜ್ಜಿಯಂದಿರು ಕಲಿಸುತ್ತಿದ್ದ ಆಟೋಟ ಮತ್ತು ಜೀವನಪಾಠಗಳು ಯಾವ ಬೇಸಿಗೆ ಶಿಬಿರಕ್ಕೂ ಕಡಿಮೆಯಿರಲಿಲ್ಲ.

ತೋಟ-ಗದ್ದೆಗಳನ್ನು ನೋಡಲು ಮತ್ತು ಪರಿಸರದ ಜೊತೆಗೆ ಬೆರೆಯಲು ಮಲೆನಾಡಿನ ಅಜ್ಜಿಮನೆಯನ್ನೆ ಮಕ್ಕಳು ತಿಂಗಳುಗಳ ಕಾಲ ಹೋಮ್ ಸ್ಟೇ ಮಾಡಿಕೊಂಡು ಬಿಡುತ್ತಿದ್ದರು. ಗಾಳಕ್ಕೆ ಹಾಕಲು ಎರೆಹುಳಗಳನ್ನು ಹುಡುಕುವುದರಿಂದ ಹಿಡಿದು ತರಕಾರಿತೋಟಕ್ಕೆ ಬರುವ ಹಕ್ಕಿಗಳನ್ನು ಓಡಿಸುವಂತಹ ತಳಮಟ್ಟದ ಜವಾಬ್ದಾರಿಗಳು ಅಜ್ಜಿಮನೆಯಲ್ಲಿ ಪ್ರಾಥಮಿಕ ಶಾಲೆಯ ಪುಟಾಣಿಗಳಿಗಿದ್ದರೆ, ಮಂಗಗಳಿಗೆ ಮಾತ್ರ ತಲುಪಬಹುದಾದ ಪೇರಳೆಮರದ ಗೆಲ್ಲಿನ ತುದಿಗೆ ತಲುಪುವ ಕೆಲಸದಲ್ಲಿ ದೊಡ್ಡ ಮಕ್ಕಳಿಗೆ ಮೀಸಲಾಗಿರುತ್ತಿತ್ತು. ಪರಿಸರಸ್ನೇಹಿ ವಾತಾವರಣದಲ್ಲಿ ನಡೆಯುತ್ತಿದ್ದ ದೈಹಿಕ ಕಸರತ್ತುಗಳು ಮಕ್ಕಳ ಆರೋಗ್ಯಕ್ಕೆ ಉತ್ತಮ ಅಡಿಪಾಯವನ್ನು ಹಾಕಿಕೊಡುತ್ತಿದ್ದವು.

ಚಾರಣಕ್ಕೆಂದು ಅಜ್ಜಿಮನೆಯಲ್ಲಿ ಎಂದೂ ವಿಶೇಷವಾಗಿ ತಯಾರಾಗಬೇಕಿರಲಿಲ್ಲ. ಮನೆಯ ಹಿತ್ತಲಿನ ತನಕ ಚಾಚಿಕೊಂಡಿರುವ ಗುಡ್ಡದ ಕಾಲುದಾರಿಯೊಂದನ್ನು ಹಿಡಿದು ಮಕ್ಕಳು ಹೆಜ್ಜೆ ಹಾಕಿದರೆಂದರೆ ಅದು ಅವರನ್ನು ನಯನಮನೋಹರವಾಗಿರುವ ಗಿರಿಶಿಖರದ ತುದಿ ತಲುಪಿಸುತ್ತಿತ್ತು ಮತ್ತು ಚಾರಣದ ಸಂಭ್ರಮ ಸಡಗರದ ಜೊತೆ ಜೊತೆಗೆ ಆ ದಿನದ ವ್ಯಾಯಾಮವೂ ಮುಗಿದಿರುತ್ತಿತ್ತು.

ಅಜ್ಜಿಮನೆಯ ಅಂಗಳದಲ್ಲಿ ನಿತ್ಯ ನಡೆಯುವ ಆಟೋಟಗಳು ಮುಂದೆ ಶಾಲಾ-ಕಾಲೇಜಿನ ಮೈದಾನಕ್ಕೆ ಧುಮುಕಲು ಧೈರ್ಯ ತುಂಬುತ್ತಿತ್ತು. ಕುಂಟೆಬಿಲ್ಲೆಯಿಂದ ಹಿಡಿದು ಕಬಡ್ಡಿ ಮತ್ತು ಕ್ರಿಕೆಟಿನ ತನಕದ ಆಟಗಳನ್ನು ಅಜ್ಜಿಮನೆಯಲ್ಲಿ ಹಾಜರಿರುತ್ತಿದ್ದ ಮಕ್ಕಳ ಸಂಖ್ಯೆಯ ಆಧಾರದಲ್ಲಿ ನಡೆಯುತ್ತಿತ್ತು. ಗ್ರಾಮೀಣ ಪ್ರದೇಶಗಳ ಆಟಗಳು ನಿರಸವಾಗಿರದೆ ಮಕ್ಕಳ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿತ್ತು. ಇಂದಿಗೂ ನಮ್ಮ ದೇಶಕ್ಕೆ ಪದಕಗಳನ್ನು ತರುವ ಹೆಚ್ಚಿನ ಕ್ರೀಡಾಪಟುಗಳು ಗ್ರಾಮೀಣ ಪ್ರತಿಭೆಗಳು. ಮಕ್ಕಳ ಆರೋಗ್ಯ ರಕ್ಷಣೆಯಲ್ಲಿ ಅಡುಗೆಮನೆಯ ಪಾತ್ರಕ್ಕೂ ದೈಹಿಕ ಕಸರತ್ತಿನಷ್ಟೇ ಪ್ರಾಮುಖ್ಯವಿತ್ತು. ಪ್ರತಿಯೊಂದು ಭೌಗೋಳಿಕ ಪ್ರದೇಶ ಜನರಿಗೆ ಅವರದೇ ಆದ ಆಹಾರ ಪದಾರ್ಥಗಳಿದ್ದವು. ತಾವೇ ಬೆಳೆದ ಅಕ್ಕಿ, ರಾಗಿ, ಜೋಳ, ಗೋಧಿ – ಹೀಗೆ ಆಯಾ ಜನರು ಅವರದೇ ಆಹಾರಪದ್ಧತಿಗೆ ಒಗ್ಗಿಕೊಂಡಿದ್ದ ಕಾರಣ ಗದ್ದೆ-ತೋಟಗಳಿಂದ ಬಂದ ತಾಜಾತನದ ಆಹಾರಗಳು ಮಕ್ಕಳ ಹೊಟ್ಟೆಗೆ ಹೋಗುತ್ತಿತ್ತೇ ವಿನಾ, ಪ್ಲಾಸ್ಟಿಕಿನ ಪೊಟ್ಟಣದೊಳಗಿನಿಂದ ಬಂದ ವಾಣಿಜ್ಯ ಉತ್ಪನ್ನಗಳಿಗೆ ಅಜ್ಜಿಮನೆಯ ಅಡುಗೆಮನೆಯಲ್ಲಿ ಬಹಿಷ್ಕಾರವಿತ್ತು. ಅಜ್ಜಿಮನೆಯ ಗದ್ದೆಬಯಲಿನಲ್ಲಿ ನಾಟಿ ಕೋಳಿಗಳಂತೆ ಓಡುತ್ತಿದ್ದ ಆ ಮಕ್ಕಳು ಪಿಜ್ಜಾ, ಬರ್ಗರ್ ಮುಖ ನೋಡಿದವರಲ್ಲ ಮತ್ತು ಆ ಮಕ್ಕಳ ಹೊಟ್ಟೆಗಳು ಅವರನ್ನು ಹಿಂದಿಕ್ಕಿ ಮುಂದೆ ಹೋಗಿದ್ದಿಲ್ಲ!

ತಂತ್ರಜ್ಞಾನ ಮತ್ತು ವಿಜ್ಞಾನ ಅಭಿವೃದ್ಧಿಯಾದಂತೆಲ್ಲ ಊರುಗಳ ನಡುವಿನ ಪ್ರಯಾಣದ ಸಮಯವು ಕಡಿಮೆಯಾಗಿದೆ; ಆದರೆ ಮನುಷ್ಯರ ನಡುವಿನ ಅಂತರ ಜಾಸ್ತಿಯಾಗಿದೆ. ಆರು ತಿಂಗಳ ಮೆಟರ್ನಿಟಿ ರಜೆಯ ಜೊತೆಗೆ ಚೈಲ್ಡ್ ಕೇರ್ ರಜೆಗಳಿದ್ದರೂ ಹಿಂದಿನಂತೆ ಹೆಣ್ಣುಮಕ್ಕಳು ಈಗ ಒಂದರ ಹಿಂದೆ ಒಂದರಂತೆ ಸಾಲು ಮಕ್ಕಳನ್ನು ಹೆರುವುದಿಲ್ಲ. ಪ್ರತಿಯೊಬ್ಬರಿಗೂ ಒಂದೋ ಎರಡೋ ಮಕ್ಕಳಿರುವ ಈ ದಿನಗಳಲ್ಲಿ ತಮ್ಮ ಮಕ್ಕಳನ್ನು ತಿಂಗಳುಗಳ ಕಾಲ ಅಜ್ಜಿಮನೆಯಲ್ಲಿ ಬಿಡುವವರು ನಮಗೀಗ ಕಾಣಸಿಗುವುದಿಲ್ಲ. ತಮ್ಮ ಮಗುವಿನ ಭವಿಷ್ಯಕ್ಕಾಗಿಯೆ ಹಗಲು ರಾತ್ರಿ ದುಡಿಯುತ್ತಿದ್ದೇವೆಂಬ ಭ್ರಮೆಯಲ್ಲಿರುವ ತಂದೆತಾಯಿಗಳ ಬಳಿಯೀಗ ಮಕ್ಕಳಿಗೆ ಕೊಡಲು ಸಮಯವೊಂದನ್ನು ಬಿಟ್ಟು ಬೇರೆಲ್ಲಾ ಇದೆ!

ಮಗುವಿನ ಭಾಷಾಕೌಶಲ ಬೆಳೆಯಲು ಮತ್ತು ಶಬ್ದಭಂಡಾರ ವಿಸ್ತಾರವಾಗಲು ಮಗುವಿನ ಬೆಳವಣಿಗೆಯ ಹಂತದಲ್ಲಿ ಮನೆಯ ವಾತಾವರಣ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಾತನಾಡುವವರ ಸಂಖ್ಯೆ ಜಾಸ್ತಿಯಿದ್ದಲ್ಲಿ ಮಗು ಬಹಳ ಬೇಗ ಮಾತನಾಡಲು ಕಲಿಯುತ್ತದೆ. ಈಗ ನಗರದ ಫ್ಲ್ಯಾಟುಗಳಲ್ಲಿ ಅಪ್ಪ-ಅಮ್ಮನ ಜೊತೆಗಿರುವ ಒಂಟಿ ಮಕ್ಕಳ ಭಾಷಾ ಸಾಮರ್ಥ್ಯ ಕುಂದುತ್ತಿದೆ. ಮನೆಯಲ್ಲಿ ಬೇರೆ ಮಕ್ಕಳ ಮಾತಿನ ಕಲರವದ ಜೊತೆ ಚುರುಕಾಗಿ ಹೊಸ ಶಬ್ದಗಳನ್ನು ನಿತ್ಯ ಕಲಿಯುವ ಭಾಗ್ಯ ನಗರದ ಮಕ್ಕಳಿಗಿಲ್ಲ. ಪ್ರಕೃತಿ ಮತ್ತು ಪರಿಸರವನ್ನು ಹತ್ತಿರದಿಂದ ನೋಡದ ಮಕ್ಕಳು ಈಗ ಕಾಂಕ್ರೀಟ್ ಕಾಡುಗಳ ಬಡಾವಣೆಯ ಓಣಿಗಳಲ್ಲಿ ದಾರಿ ತಪ್ಪಿದ್ದಾರೆ. ಮನೆಯಿಂದ ಹೊರಬಂದು ಸೂರ್ಯನಿಗೆ ಮೈಯೊಡ್ಡದ ಮಕ್ಕಳಲ್ಲಿ ವಿಟಾಮಿನ್ ಡಿ ಕೊರತೆ ಈಗ ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಸುತ್ತಮುತ್ತಲಿನ ಪರಿಸರ ಮತ್ತು ಮನುಷ್ಯರ ಜೊತೆಗಿನ ಸಂವಹನ ಮತ್ತು ಸಂವಾದವು ಮಕ್ಕಳಿಗೆ ಕಡಿಮೆಯಾಗುತ್ತಿರುವ ಈಗಿನ ದಿನಗಳಲ್ಲಿ ಆಟಿಸಂ ಸಮಸ್ಯೆಗಳು ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದೆ. ಅಜ್ಜಿಮನೆಯ ಅಡುಗೆಮನೆಯಲ್ಲಿ ತಯಾರಗುತ್ತಿದ್ದ ಆರೋಗ್ಯವಂತ ಮಕ್ಕಳ ಜಾಗದಲ್ಲೀಗ ಚಿಕ್ಕವಯಸ್ಸಿನಲ್ಲಿ ಬೊಜ್ಜಿನ ಸಮಸ್ಯೆಯಿಂದ ನರಳುತ್ತಿರುವ ಮಕ್ಕಳು ಕಾಣಸಿಗುತ್ತಿದ್ದಾರೆ. ಮರದ ತುದಿಯಲ್ಲಿ ನೇಲುತ್ತಿದ್ದ ಆಟಗಾರರು ಎರಡೂ ಕೈಗಳಿಗೆ ಮೊಬೈಲ್ ಉಜ್ಜುವುದರಿಂದ ಬಿಡುವಾಗುತ್ತಿಲ್ಲ. ಗಿಡ್ಡವಿರುವವರನ್ನು ಉದ್ದ ಮಾಡುವ, ಚರ್ಮದ ಬಣ್ಣ ಕಪ್ಪಿರುವವರನ್ನು ಬಿಳಿ ಮಾಡುವ, ಸಾಮಾನ್ಯರನ್ನು 'ಜೀನಿಯಸ್' ಮಾಡುವ ಘೋಷಣೆಗಳನ್ನು ಅಚ್ಚೆ ಹಾಕಿಸಿಕೊಂಡಿರುವ ಉತ್ಪನ್ನಗಳು ಮಾರುಕಟ್ಟೆ ಪ್ರವೇಶಿಸಿ ಹೆತ್ತವರನ್ನು ಮರಳು ಮಾಡುತ್ತಿವೆ. ಮಕ್ಕಳ ಸ್ವಾಭಾವಿಕವಾಗಿ ಕಲಿಯುವ ಹಾಡು ಕುಣಿತಗಳು ಈಗ ಟಿವಿ ಪರದೆಯ ಮೇಲೆ ರಿಯಾಲಿಟಿ ಶೋ ಎಂಬ ಉದ್ಯಮಕ್ಕೆ ಬಂಡವಾಳವಾಗುತ್ತಿದೆ.

ಥಳುಕು ಬಳುಕಿನ ಆಧುನಿಕ ಲೋಕದಲ್ಲಿ ಗೆಲ್ಲಲೇಬೇಕಾದ ಒತ್ತಡಗಳು ಸ್ಪರ್ಧೆಯ ರೋಚಕತೆಗಿಂತ ಹೆಚ್ಚಾಗಿ, ಬೆಳೆಯುವ ಸಿರಿಗಳು ಮೊಳಕೆಯಲ್ಲೆ ಮುದುಡುತ್ತಿವೆ. ಮಕ್ಕಳಿಗೆ ಸಮಯ ಕೊಡದಿರುವ ಕಾರಣಕ್ಕೆ ಅಪರಾಧಿ ಪ್ರಜ್ಞೆಯಿಂದ ನರಳುವ ಪೋಷಕರು ಒಂದು ವಾರದಲ್ಲಿ 'ಎಲ್ಲವನ್ನೂ ಕಲಿಸುವ' ಬೇಸಿಗೆ ಶಿಬಿರಕ್ಕೆ ತಮ್ಮ ಮಕ್ಕಳನ್ನು ಸೇರಿಸಿ ತಮ್ಮನ್ನು ತಾವೇ ಸಮಾಧಾನ ಪಡಿಸಿಕೊಳ್ಳುತ್ತಿದ್ದಾರೆ. ನಲಿಯುವ ವಯಸ್ಸಿನಲ್ಲಿ ನಲಿಯದಿದ್ದರೆ ಕಲಿಯುವ ರೀತಿಯಲ್ಲಿ ಕಲಿಯದಿದ್ದರೆ ಮಕ್ಕಳ ಮನೋವಿಕಾಸದಲ್ಲಿ ಆಗಬಹುದಾದ ಏರುಪೇರುಗಳು ಬಗ್ಗೆ ಅರಿವಿಲ್ಲದ ಹೆತ್ತವರು ಮಕ್ಕಳ ಆರೋಗ್ಯವನ್ನು ಸಿರಪ್ಪು ಟಾನಿಕ್ಕುಗಳಲ್ಲಿ ಹುಡುಕುತ್ತಿದ್ದಾರೆ. ಮಕ್ಕಳ ಮನೋವಿಕಾಸದಲ್ಲಿದ್ದ ಅಜ್ಜಿಮನೆಯ ಪಾತ್ರವನ್ನು ಮರೆತಿರುವವರು ಅಜ್ಜಿಯನ್ನು ಮಕ್ಕಳಿಗೆ ಟಿವಿ ಧಾರಾವಾಹಿಗಳಲ್ಲಿ ತೋರಿಸಿ ಸಂತೈಸುತ್ತಿದ್ದಾರೆ.

ಎಂಬತ್ತು-ತೊಂಬತ್ತರ ದಶಕದ ಸಮಯದಲ್ಲಿ ತಮ್ಮ ಅಜ್ಜಿಮನೆಯಲ್ಲಿ ಬಾಲ್ಯವನ್ನು ಕಳೆದ ಪುಟಾಣಿಗಳು ನಿಜಕ್ಕೂ ಭಾಗ್ಯವಂತರು. ಅಜ್ಜಿಯ ನೆರಳಿನಡಿಯಲ್ಲಿ ಅರಳಿದ ಮಕ್ಕಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರಾಗಿರುತ್ತಿದ್ದರು. ಶಾಲೆಯ ಮುಖ ನೋಡದಿದ್ದ ಅಜ್ಜಿಯಂದಿರು ಕಲಿಸುತ್ತಿದ್ದ ಆಟೋಟ ಮತ್ತು ಜೀವನಪಾಠಗಳು ಯಾವ ಬೇಸಿಗೆ ಶಿಬಿರಕ್ಕೂ ಕಡಿಮೆಯಿರಲಿಲ್ಲ.



ಮಂಕಿಪಾಕ್ಸ್ ಎಚ್ಚರವಿರಲಿ; ಆತಂಕ ಬೇಡ

ಡಾ. ಕಿರಣ್ ವಿ. ಎಸ್.

ಕೋವಿಡ್-19ರ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವಷ್ಟರಲ್ಲಿ ಮಂಕಿಪಾಕ್ಸ್ ಆತಂಕ ಎದುರಾಗಿದೆ. ಮೂಲತಃ ಆಫ್ರಿಕಾಖಂಡದ ಮಳೆಗಾಡುಗಳ ದೇಶಗಳಿಗೆ ಸೀಮಿತವಾಗಿದ್ದ ಮಂಕಿಪಾಕ್ಸ್ ಈಗ ಜಾಗತಿಕವಾಗಿ ಹಬ್ಬುತ್ತಿದೆ. ಈ ಕಾಯಿಲೆಗೆ ಕಾರಣ ಮಂಕಿಪಾಕ್ಸ್ ಎನ್ನುವ ವೈರಸ್. 1958ರಲ್ಲಿ ಪ್ರಯೋಗಾಲದಲ್ಲಿ ಸಂಶೋಧನೆಗೆಂದು ಇಟ್ಟುಕೊಂಡಿದ್ದ ಕೆಲವು ಮಂಗಗಳಲ್ಲಿ ಇದು ಮೊದಲ ಬಾರಿಗೆ ಕಂಡಿದ್ದರಿಂದ ಇದನ್ನು 'ಮಂಗನ ಸಿಡುಬು' ಅಥವಾ 'ಮಂಕಿಪಾಕ್ಸ್' ಎಂದು ಕರೆಯಲಾಗಿತ್ತು. ಇದು ಮನುಷ್ಯರಲ್ಲೂ ಕಾಣುತ್ತದೆ ಎಂದು 1970ರಲ್ಲಿ ತಿಳಿದುಬಂದಿತು. ಪ್ರಾಣಿಗಳಿಂದ ಮನುಷ್ಯರಿಗೆ ಹಬ್ಬುವ ಈ ವೈರಸ್, ಓರ್ವ ಕಾಯಿಲೆಪೀಡಿತನಿಂದ ಮತ್ತೊಬ್ಬನಿಗೆ ಹರಡಬಹುದು.

ಮಂಕಿಪಾಕ್ಸ್ ಕೂಡ ಸಿಡುಬಿನ ಒಂದು ಪ್ರಭೇದ. ಇತರ ಸಿಡುಬುಗಳಲ್ಲಿ ಬರುವಂತೆ ಇದರಲ್ಲೂ ಜ್ವರ, ತಲೆನೋವು, ಬೆನ್ನುನೋವು, ಮೈ-ಕೈ ನೋವು, ಸುಸ್ತು ಕಾಡುತ್ತವೆ. ಗದ್ದದ ಬಳಿ, ಕಂಕುಳಿನಲ್ಲಿ ಸಣ್ಣ ಉಂಡೆಗಳಂತಹ ದುಗ್ಧಗ್ರಂಥಿಗಳು ಕಾಣುತ್ತವೆ. ದುಗ್ಧಗ್ರಂಥಿಗಳು ನಮ್ಮ ಶರೀರದ ರಕ್ಷಕ ವ್ಯವಸ್ಥೆಯ ಭಾಗಗಳು. ಸಾಮಾನ್ಯವಾಗಿ ಸಣ್ಣ ಗಾತ್ರದಲ್ಲಿ ಇರುವ ಇವು, ಶರೀರಕ್ಕೆ ರೋಗ ಬಂದಾಗ ಹಿರಿದಾಗುತ್ತವೆ. ಜ್ವರ ಆರಂಭವಾದ ಮೂರು ದಿನಗಳ ಒಳಗೆ ಚರ್ಮ ಕೆಂಪಾಗಿ, ಸಬ್ಬಕ್ಕಿ ಕಾಳಿನ ಗಾತ್ರದ ಬೊಕ್ಕೆಗಳು ಏಳುತ್ತವೆ. ಈ ಬೊಕ್ಕೆಗಳ ಒಳಗೆ ನೀರಿನಂತಹ ದ್ರಾವಣ ಇರುತ್ತದೆ. ಕೆಲವೊಮ್ಮೆ ಈ ದ್ರಾವಣದ ಬಣ್ಣ ತುಸು ಹಳದಿ ಇರಬಹುದು. ಒಬ್ಬ ವ್ಯಕ್ತಿಯ ಮೈ ಮೇಲೆ ಬೆರಳೆಣಿಕೆಯಷ್ಟು ಸಂಖ್ಯೆಯಿಂದ ಹಿಡಿದು ಸಾವಿರಾರು ಬೊಕ್ಕೆಗಳು ಕಾಣಬಹುದು. ಇವು ಮುಖ್ಯವಾಗಿ ಮುಖ, ಅಂಗೈ ಮತ್ತು ಅಂಗಾಲುಗಳ ಮೇಲೆ ಇರುತ್ತದಾದರೂ, ತೀವ್ರವಾದ ಸೋಂಕಿನಲ್ಲಿ ಬಾಯಿ, ಕಣ್ಣು ಸೇರಿ ಶರೀರದ ಎಲ್ಲೆಡೆ ಬರಬಹುದು.

ಈ ಲಕ್ಷಣಗಳು ಸುಮಾರು 2ರಿಂದ 4 ವಾರಗಳ ಕಾಲ ಇರುತ್ತವೆ. ಆನಂತರ ಯಾವುದೇ ಚಿಕಿತ್ಸೆ ಇಲ್ಲದೆಯೂ ತಂತಾನೇ ಸರಿಹೋಗುತ್ತವೆ. ಆದರೆ, ನವಜಾತ ಶಿಶುಗಳಲ್ಲಿ, ಕ್ಯಾನ್ಸರ್ ರೋಗಿಗಳಲ್ಲಿ, ಸ್ಟೀರಾಯ್ಡ್ ಔಷಧದ ಚಿಕಿತ್ಸೆ ಪಡೆಯುವವರಲ್ಲಿ, ಅನಿಯಂತ್ರಿತ ಮಧುಮೇಹಿಗಳಲ್ಲಿ, ಶರೀರದ ರಕ್ಷಕ ವ್ಯವಸ್ಥೆ ದುರ್ಬಲವಾಗಿರುವವರಲ್ಲಿ ಮಂಕಿಪಾಕ್ಸ್ ಪ್ರಾಣಾಂತಕವಾಗಬಹುದು. ಇಂತಹವರಲ್ಲಿ ಬೊಕ್ಕೆಗಳು ಒಡೆದು, ಆ ಜಾಗಗಳಲ್ಲಿ ವ್ರಣವಾಗಬಹುದು; ಶ್ವಾಸಕೋಶವನ್ನು ಸೇರಿದ ವೈರಸ್ ತೀವ್ರ ನ್ಯುಮೋನಿಯಾವನ್ನು ಉಂಟುಮಾಡಬಹುದು; ಕಣ್ಣಿನಲ್ಲಿ ಕಾಣುವ ಬೊಕ್ಕೆಗಳು ಕಣ್ಣಿನ ಸೋಂಕು ಉಂಟುಮಾಡಿ, ಅಂಧತ್ವಕ್ಕೆ ಕಾರಣವಾಗಬಹುದು. ನೂರು ಮಂದಿ ಮಂಕಿಪಾಕ್ಸ್ ರೋಗಿಗಳಲ್ಲಿ ಸುಮಾರು ಐದು ಜನರಿಗೆ ಈ ರೀತಿಯ ಸಮಸ್ಯೆಗಳು ಕಾಣಬಹುದು ಎಂದು ಅಂದಾಜು.





ಮಂಕಿಪಾಕ್ಸ್ ವೈರಸ್ ಶರೀರದ ಪರಸ್ಪರ ಸಂಪರ್ಕದಿಂದ ಹರಡುತ್ತದೆ. ಇಲಿ, ಹೆಗ್ಗಣ, ಮಂಗ ಮೊದಲಾದ ಪ್ರಾಣಿಗಳು ಈ ವೈರಸ್ ವಾಹಕಗಳು. ಮಂಕಿಪಾಕ್ಸ್ ಕಾಯಿಲೆಯಿಂದ ಬಳಲುವ ಪ್ರಾಣಿಗಳ ಮೃತದೇಹದಿಂದಲೂ ವೈರಸ್ ಹರಡಬಲ್ಲವು ಎಂದು ಸಾಬೀತಾಗಿದೆ. ಇಂತಹ ಪ್ರಾಣಿಗಳ ಜೊತೆಗೆ ಸಂಪರ್ಕಕ್ಕೆ ಬರುವ ವ್ಯಕ್ತಿಗಳು ಮಂಕಿಪಾಕ್ಸ್ ವೈರಸ್ ಅನ್ನು ತಮ್ಮ ಸಂಪರ್ಕಕ್ಕೆ ಬರುವ ಇತರರಿಗೆ ಹರಡಿಸುತ್ತಾರೆ. ಈ ರೀತಿ ಮನುಷ್ಯರಲ್ಲಿ ಮಂಕಿಪಾಕ್ಸ್ ಸೋಂಕು ಹಬ್ಬುತ್ತದೆ. ರೋಗದಿಂದ ಬಳಲುವ ಯಾವುದೇ ವ್ಯಕ್ತಿ ಸುಮಾರು ಎರಡರಿಂದ ನಾಲ್ಕು ವಾರಗಳ ಕಾಲ ಮಂಕಿಪಾಕ್ಸ್ ವೈರಸ್ ಅನ್ನು ಹರಡಬಲ್ಲರು. ಬೊಕ್ಕೆಗಳು, ಅದರ ಒಳಗಿನ ದ್ರವ, ಬೊಕ್ಕೆಗಳು ಒಡೆದಾಗ ಬರಬಹುದಾದ ರಕ್ತ, ಮೊದಲಾದುವು ವೈರಸ್ ಹರಡುವಿಕೆಗೆ ದಾರಿಯಾಗುತ್ತವೆ. ರೋಗಿಯ ಬಟ್ಟೆ, ಹಾಸಿಗೆ, ಟವೆಲ್, ಅವರು ಊಟ ಮಾಡಿದ ತಟ್ಟೆ, ಬಟ್ಟಲುಗಳ ಮೇಲೆಯೂ ಮಂಕಿಪಾಕ್ಸ್ ವೈರಸ್ ಕೆಲಕಾಲ ಜೀವಂತ ಇರುತ್ತದೆ. ಈ ಸಂದರ್ಭದಲ್ಲಿ ಇವುಗಳ ಜೊತೆಗೆ ಸಂಪರ್ಕಕ್ಕೆ ಬರುವ ವ್ಯಕ್ತಿಗಳಿಗೆ ವೈರಸ್ ಸೋಂಕು ಹತ್ತಬಹುದು. ಬಾಯಿಯ ಒಳಗೆ ಬೊಕ್ಕೆಗಳು ಎದ್ದಿರುವ ರೋಗಿಗಳಲ್ಲಿ ಎಂಜಲಿನ ಮೂಲಕವೂ ವೈರಸ್ ಹರಡುತ್ತದೆ. ಗರ್ಭಿಣಿಯರಲ್ಲಿ ಮಂಕಿಪಾಕ್ಸ್ ಉಂಟಾದರೆ ಗರ್ಭಸ್ಥ ಶಿಶುವಿಗೂ ಕಾಯಿಲೆ ಆಗುತ್ತದೆ ಎಂದು ಪತ್ತೆಯಾಗಿದೆ. ಹೀಗಾಗಿ, ಗರ್ಭಿಣಿಯರು ಅಧಿಕ ಎಚ್ಚರದಲ್ಲಿರಬೇಕು.

ಪ್ರಪಂಚವನ್ನು ಸಾವಿರಾರು ವರ್ಷಗಳ ಕಾಲ ಇನ್ನಿಲ್ಲದಂತೆ ಕಾಡಿದ್ದ ಸಿಡುಬು ಕಾಯಿಲೆ (smallpox) ಜಾಗತಿಕವಾಗಿ ನಿರ್ಮೂಲನವಾದದ್ದು 1980ನೆಯ ಇಸವಿಯಲ್ಲಿ. ಆನಂತರ ಜನಿಸಿದವರಿಗೆ ಸಿಡುಬಿನ ಲಸಿಕೆ ಹಾಕಲಾಗಿಲ್ಲ. ಭಾರತದಲ್ಲಿ ಸಿಡುಬಿನ ಲಸಿಕೆ ಕೊನೆಯಾದದ್ದು 1979ರಲ್ಲಿ. ಅದಕ್ಕೆ ಮುನ್ನ ಜನಿಸಿದವರ ಎಡತೋಳಿನ ಮೇಲೆ ಕಾಣುವ ನಾಲ್ಕಾಣೆ ಗಾತ್ರದ ಗುರುತು ಸಿಡುಬಿನ ಮೈಲಿಯದ್ದು. ಸಿಡುಬಿನ ವಿರುದ್ಧದ ಲಸಿಕೆ ಮಂಕಿಪಾಕ್ಸ್ ಅನ್ನು ಕೂಡ ಸ್ವಲ್ಪಮಟ್ಟಿಗೆ ನಿಯಂತ್ರಿಸುತ್ತದೆ ಎಂದು ತಜ್ಞರ ಅಭಿಪ್ರಾಯ. ಆದರೆ, ಇದನ್ನು ಅವಲಂಬಿಸಿ ಎಚ್ಚರ ತಪ್ಪುವುದು ಶಕ್ಯವಲ್ಲ. ಒಂದು ವೇಳೆ ಸಿಡುಬಿನ ಲಸಿಕೆ ಹಾಕಿಸಿಕೊಂಡವರಿಗೆ ಮಂಕಿಪಾಕ್ಸ್ ಆದರೆ, ಅದರ ತೀವ್ರತೆ ಕಡಿಮೆಯಾಗಿರುತ್ತದೆ ಎಂದಷ್ಟೇ ನಂಬಬಹುದು.

ಮಂಕಿಪಾಕ್ಸ್ ಸೋಂಕಿನ ಸಮಯದಲ್ಲಿ ಕೆಲವು ಜಾಗ್ರತೆ ವಹಿಸಬೇಕು. ಅನಗತ್ಯವಾಗಿ ಯಾರ ಸಂಪರ್ಕಕ್ಕೂ ಬರಬಾರದು. ರೋಗದಿಂದ ಬಳಲುವವರನ್ನು ಪ್ರತ್ಯೇಕವಾಗಿ ಚೇತರಿಸಿಕೊಳ್ಳಲು ಬಿಡಬೇಕೇ ಹೊರತು, ಅವರ ಸಾಮಾಜಿಕ ಭೇಟಿಗೆ ಹೋಗಬಾರದು. ರೋಗಿಗಳು ತಮ್ಮನ್ನು ತಾವು ಇತರರಿಂದ ದೂರವಿರಿಸಬೇಕು. ಇತರರಿಂದ ಪ್ರತ್ಯೇಕಗೊಳ್ಳುವ ತರಬೇತಿಯನ್ನು ಕೋವಿಡ್-19 ಕಾಯಿಲೆ ಈಗಾಗಲೇ ಎಲ್ಲರಿಗೂ ನೀಡಿದೆ. ಅದೇ ಮಾಪನಗಳನ್ನು ಇಲ್ಲಿಯೂ ಅನುಸರಿಸಬೇಕು. ಚರ್ಮದ ಮೇಲಿನ ಬೊಕ್ಕೆಗಳನ್ನು ವಾತಾವರಣಕ್ಕೆ ತೆರೆದಿಡಬಾರದು; ಅವು ಮುಚ್ಚುವಂತೆ ಬಟ್ಟೆ ಧರಿಸಬೇಕು. ಬಾಯಿಯ ಒಳಗೆ ಬೊಕ್ಕೆ, ವ್ರಣ ಆದವರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಯಾವುದೇ ರೋಗಿಯ ಚರ್ಮದ ಜೊತೆಗೂ ನೇರ ಸಂಪರ್ಕಕ್ಕೆ ಬರಬಾರದು. ಕೋವಿಡ್-19 ಸೋಂಕಿನ ಕಾಲದಲ್ಲಿ ಅನುಸರಿಸಿದಂತೆ ನಿಯಮಿತವಾಗಿ ಸಾಬೂನು ಬಳಸಿ ಕೈ ತೊಳೆಯಬೇಕು. ಸಾಬೂನು ಇಲ್ಲದಿದ್ದಲ್ಲಿ ಸ್ಯಾನಿಟೈಸರ್ ಬಳಸಬಹುದು. ಮಂಕಿಪಾಕ್ಸ್ ರೋಗಿಗಳ ಆರೈಕೆ ಮಾಡುವವರು ಈ ವಿಷಯದಲ್ಲಿ ಕಟ್ಟೆಚ್ಚರ ವಹಿಸಬೇಕು.

ರೋಗಿ ಬಳಸಿರುವ ಬಟ್ಟೆಗಳನ್ನು ಪ್ರತ್ಯೇಕವಾಗಿ ಬಿಸಿನೀರಿನಲ್ಲಿ ನೆನೆಸಿ, ಸಾಬೂನು ಬಳಸಿ ಒಗೆಯಬೇಕು. ಅವನ್ನು ಇತರರ ಬಟ್ಟೆಗಳ ಜೊತೆಗೆ ಸೇರಿಸಬಾರದು. ಅಂತೆಯೇ, ರೋಗಿಯು ಆಹಾರ ಸೇವಿಸುವ ತಟ್ಟೆ, ಬಟ್ಟಲುಗಳನ್ನೂ ಪ್ರತ್ಯೇಕವಾಗಿಯೇ ತೊಳೆಯಬೇಕು. ಅವರ ಬೊಕ್ಕೆಗಳ ಚಿಕಿತ್ಸೆಯಲ್ಲಿ ಬರುವ ವೈದ್ಯಕೀಯ ತ್ಯಾಜ್ಯವನ್ನು ತಜ್ಞರ ಸಲಹೆಯಂತೆ ನಿರ್ವಹಿಸಬೇಕು. ಮಂಕಿಪಾಕ್ಸ್ ಸೋಂಕು ತಗುಲಿದ ಅನುಮಾನವಿದ್ದರೆ ಕೂಡಲೇ ಕುಟುಂಬದ ಇತರ ಸದಸ್ಯರಿಂದ ಪ್ರತ್ಯೇಕಗೊಳ್ಳಬೇಕು ಹಾಗೂ ವೈದ್ಯರನ್ನು ಸಂಪರ್ಕಿಸಬೇಕು. ಮಂಕಿಪಾಕ್ಸ್ ಅನ್ನು ನಿರ್ವಹಿಸುವ ನಿರ್ದಿಷ್ಟ ಕಾರ್ಯಸೂಚಿ ಲಭ್ಯವಿದೆ. ಆಯಾ ವ್ಯಕ್ತಿಯ ವೈಯಕ್ತಿಕ ಅಪಾಯದ ಅಂಶಗಳನ್ನು ಗಮನಿಸಿ ವೈದ್ಯರು ಸೂಕ್ತ ಮಾರ್ಗದರ್ಶನ ನೀಡುತ್ತಾರೆ. ತೀವ್ರವಾದ ಕಾಯಿಲೆಗೆ ಔಷಧಗಳೂ ಲಭ್ಯವಿವೆ. ಇಂತಹ ವೈಜ್ಞಾನಿಕ ಚಿಕಿತ್ಸೆ ಬಹಳ ಪರಿಣಾಮಕಾರಿಯಾಗಿದೆ; ಯಾವುದೇ ಆತಂಕಕ್ಕೆ ಕಾರಣವಿಲ್ಲ. ಸದ್ಯಕ್ಕೆ ಮಂಕಿಪಾಕ್ಸ್ ವಿರುದ್ಧ ಪರಿಣಾಮಕಾರಿಯದ ಲಸಿಕೆ ವ್ಯಾಪಕವಾಗಿ ಲಭ್ಯವಿಲ್ಲ; ಎಚ್ಚರವಾಗಿರುವುದೊಂದೇ ದಾರಿ.

ಮಂಕಿಪಾಕ್ಸ್ ಹೊಸ ಕಾಯಿಲೆಯೇನಲ್ಲ. ಆಫ್ರಿಕದ ಹಲವಾರು ದೇಶಗಳಲ್ಲಿ ಇದು ಸಾಮಾನ್ಯ ಸಮಸ್ಯೆ. 1970ರಲ್ಲೂ ಮಂಕಿಪಾಕ್ಸ್ ಇದೇ ರೀತಿಯಲ್ಲಿ ಹಲವಾರು ದೇಶಗಳಲ್ಲಿ ತನ್ನ ಆರ್ಭಟ ತೋರಿತ್ತು. ಅದೇ ಮಾದರಿ 2022ರಲ್ಲೂ ಕಂಡುಬರುತ್ತಿದೆ. ಆಫ್ರಿಕಾ ಹೊರತುಪಡಿಸಿ, ಸುಮಾರು 22 ದೇಶಗಳಲ್ಲಿ ಈವರೆಗೆ ಸುಮಾರು 260 ಮಂದಿ ಸೋಂಕಿತರಿದ್ದಾರೆ. ಇದರ ಬಗ್ಗೆ ವೈದ್ಯವಿಜ್ಞಾನಿಗಳಿಗೆ ಸ್ಪಷ್ಟವಾದ ತಿಳಿವಳಿಕೆಯಿದೆ. ಹೀಗಾಗಿ ಇದು ತೀರಾ ಸಮಸ್ಯಾತ್ಮಕ ಹಂತಕ್ಕೆ ಹೋಗುವ ಸಾಧ್ಯತೆಗಳು ಬಹಳ ಕಡಿಮೆ. ಈ ಕುರಿತಾಗಿ ಸರಿಯಾದ ಮಾಹಿತಿಯನ್ನು ತಿಳಿದಿರುವುದು ಅತ್ಯಗತ್ಯ.

ಅಭಿವ್ಯಕ್ತಿಯ ಶಕ್ತಿ

ಲಾವಣ್ಯಗೌರಿ ವೆಂಕಟೇಶ್

ಮೊನ್ನೆ ಸ್ನೇಹಿತೆಯ ಮನೆಗೆ ಹೋಗಿದ್ದೆ. ಆಕೆಯ ಹತ್ತು ವರ್ಷದ ಮಗ ಶಾಲೆಯಿಂದ ಬಂದವನೇ, 'ಅಮ್ಮಾ ನೋಡಮ್ಮಾ, ಚರ್ಚಾ ಸ್ಪರ್ಧೆಯಲ್ಲಿ ನನಗೆ ಮೂರನೇ ಬಹುಮಾನ ಬಂದಿದೆ' ಎಂದು ಹೆಮ್ಮೆಯಿಂದ ತನ್ನ ತಾಯಿಗೆ ತೋರಿಸಿದ. ಈಕೆ ಅಸಡ್ಡೆಯಿಂದ, 'ಓ ಮೂರನೇ ಬಹುಮಾನಾನ? ಮೊದಲು ಯಾರಿಗೆ ಬಂತು? ನಿನಗೇಕೆ ಮೊದಲ ಬಹುಮಾನ ಬರಲಿಲ್ಲ' ಎಂದು ಮುಂತಾಗಿ ಕೇಳತೊಡಗಿದಳು. ಖುಷಿಯಿಂದ ಬಂದ ಹುಡುಗ ಸಪ್ಪೆಮುಖ ಹಾಕಿಕೊಂಡು ಒಳಗೆ ಹೋದ.

ಆ ತಾಯಿ ತನ್ನ ಭಾವನೆಗಳನ್ನು ಆ ರೀತಿ ವ್ಯಕ್ತಪಡಿಸುವುದರ ಬದಲು, ಬಹುಮಾನ ಬಂದಿದ್ದಕ್ಕಾಗಿ ಮೊದಲು ಮಗನನ್ನು ಅಭಿನಂದಿಸಿ, ಮುಂದಿನ ಬಾರಿ ಮೊದಲ ಬಹುಮಾನ ಪಡೆಯುವಂತೆ ಪ್ರೋತ್ಸಾಹಿಸಿದ್ದರೆ, ಆ ಪುಟ್ಟ ಮನಸ್ಸು ಎಷ್ಟು ಸಂತೋಷಪಡುತ್ತಿತ್ತಲ್ಲವೇ? ತಾಯಿಯನ್ನು ಮೆಚ್ಚಿಸಲಾದರೂ ಆತ ಮುಂದಿನ ಬಾರಿ ಹೆಚ್ಚಿನ ಶ್ರಮವಹಿಸುತ್ತಿದ್ದ. ಹಾಗೂ ಇನ್ನೂ ಹೆಚ್ಚಿನದನ್ನು ಸಾಧಿಸಬೇಕೆನ್ನುವ ಆಸೆ ಆತನಲ್ಲಿರುತ್ತಿತ್ತು.

ನನ್ನ ಸ್ನೇಹಿತೆಯಂತೆಯೇ ಬಹಳಷ್ಟು ಜನರು ಭಾವನೆಗಳನ್ನು ವ್ಯಕ್ತಪಡಿಸುವುದರಲ್ಲಿ ಸೋಲುತ್ತಾರೆ. ಒಬ್ಬ ವ್ಯಕ್ತಿಯ ಬಗ್ಗೆ, ವಸ್ತುವಿನ ಬಗ್ಗೆ, ಅಥವಾ ಸಂದರ್ಭದ ಬಗ್ಗೆ ನಾವು ವ್ಯಕ್ತಪಡಿಸುವ ಅಭಿವ್ಯಕ್ತಿಗೆ ಬಹಳ ಶಕ್ತಿಯಿರುತ್ತದೆ. ಇದು ಮತ್ತೊಬ್ಬರ ಜೀವನದ ದಿಕ್ಕನ್ನೇ ಬದಲಿಸುವ ಮಟ್ಟದ ಸಾಮರ್ಥ್ಯವನ್ನು ಹೊಂದಿರುತ್ತದೆ.

ಭಾವನೆಗಳ ವ್ಯಕ್ತಪಡಿಸುವಿಕೆ ಹೀಗೇ ಆಗಬೇಕೆಂದಿಲ್ಲ. ಮಾತಿನ ಮೂಲಕ, ಕೃತಿಯ ಮೂಲಕ, ಗೌರವದ ಮೂಲಕ, ನೋಟದ ಮೂಲಕ ಬೇಕಾದರೂ ವ್ಯಕ್ತಪಡಿಸಬಹುದು. ಯಾವುದೇ ರೀತಿಯ ಸಂಬಂಧವಾದರೂ ಗಟ್ಟಿಯಾಗಿ ಉಳಿಯಬೇಕಾದರೆ, ಪರಸ್ಪರ ಒಳ್ಳೆಯ ಭಾವನೆಗಳ ವಿನಿಮಯ ಅತ್ಯಗತ್ಯ. ನಮ್ಮ ಜೀವನದಲ್ಲಿ ಒದಗುವ ಪ್ರತಿ ಬಾಂಧವ್ಯದ ಬಗ್ಗೆಯೂ ಪ್ರತಿಯೊಬ್ಬರಿಗೂ ಒಂದೊಂದು ರೀತಿಯಾದ ಭಾವನೆಗಳಿರುತ್ತವೆ. ಕೆಲವು ಬಾರಿ ಆ ಭಾವನೆಗಳನ್ನು ಅಭಿವ್ಯಕ್ತಗೊಳಿಸದಿದ್ದಾಗ ಬಾಂಧವ್ಯಗಳು ಅರ್ಥರಹಿತವಾಗುತ್ತವೆ. ಕೆಲವೊಮ್ಮೆ ಯಾರೋ ಮಾಡಿದ ಸಹಾಯಕ್ಕೆ ಧನ್ಯವಾದಗಳನ್ನು ತಿಳಿಸಬೇಕೆನ್ನುವ ಮನಸ್ಸಾಗುತ್ತದೆ. ಆದರೆ ಮನಸ್ಸಿನಲ್ಲೇ ಅಂದುಕೊಂಡು, ಅದನ್ನು ವ್ಯಕ್ತಪಡಿಸದಿದ್ದರೆ ಹೇಗೆ? ಅದು ಉಡುಗೊರೆಯನ್ನು ತಂದು ಚೆಂದದ ಹೊದಿಕೆಯನ್ನು ಹಾಕಿ ಕೊಡದೆ ನಾವೇ ಇಟ್ಟುಕೊಂಡಂತಿರುತ್ತದೆ. ಭಾವನೆಗಳ ಅಭಿವ್ಯಕ್ತಿಗೆ ಸುಲಭವಾದ ಕೊಂಡಿ ಎಂದರೆ, ಮಾತು. ಮಾತಿನ ಮೂಲಕ ಅಭಿವ್ಯಕ್ತಿ ಎಷ್ಟು ಸುಲಭವೋ ಒಮ್ಮೊಮ್ಮೆ ಅಷ್ಟೇ ಕಷ್ಟ. ಆದರೆ ಕೃತಿಯ ಮೂಲಕ ಮಾಡುವ ಅಭಿವ್ಯಕ್ತಿ ಜನರ ಮನದಲ್ಲಿ ನಿಲ್ಲುತ್ತದೆ.

ಈ ಸಂದರ್ಭದಲ್ಲಿ ನನ್ನ ತಾಯಿ ಹಾಗೂ ನನ್ನ ಅಜ್ಜಿಯ ನಡುವಿದ್ದ ಸಂಬಂಧ ನೆನಪಾಗುತ್ತಿದೆ. ಗೌರವ ಸೂಚಿಸುವ ಅಭಿವ್ಯಕ್ತಿಯೂ ಎಷ್ಟೊಂದು ಬಗೆಯಲ್ಲಿರುತ್ತದೆ ಎಂದು ತಿಳಿದದ್ದು ನನ್ನ ತಾಯಿಯಿಂದ. ನನ್ನ ತಾಯಿ ಏನೇ ಕೆಲಸ ಮಾಡಬೇಕಾದರೂ ನನ್ನ ಅಜ್ಜಿಯನ್ನು ಕೇಳುತ್ತಿದ್ದರು. ನನ್ನ ಅಜ್ಜಿಯೂ ತಾಯಿ ಕೇಳಿದ ಎಲ್ಲಕ್ಕೂ ಅಸ್ತು ಎನ್ನುತ್ತಿದ್ದರು. ಅಜ್ಜಿ ಹೀಗೆ ಹೇಳುತ್ತಾರೆಂದೂ ಗೊತ್ತಿದ್ದೂ ನನ್ನ ತಾಯಿ ಆಕೆಯನ್ನು ಪದೇ ಪದೇ ಎಲ್ಲಕ್ಕೂ ಅನುಮತಿ ಕೇಳುತ್ತಿದ್ದದ್ದು ನನ್ನಲ್ಲಿ ಆಶ್ಚರ್ಯವನ್ನುಂಟುಮಾಡಿತ್ತು. ಈ ಬಗ್ಗೆ ನನ್ನ ತಾಯಿಯನ್ನು ವಿಚಾರಿಸಿದೆ. ನನ್ನ ತಾಯಿಯ ಜವಾಬು ಈ ರೀತಿ ಇತ್ತು. 'ನಿನ್ನ ಅಜ್ಜಿಯನ್ನು ಏನು ಕೇಳಿದರೂ, ಆಕೆ ಬೇಡವೆನ್ನುವುದಿಲ್ಲ, ಆದರೂ ಕೇಳುತ್ತೇನೆ. ಇದು ಮನೆಗೆ ಹಿರಿಯಳಾದ ಆಕೆಗೆ ನಾನು ಕೊಡುವ ಗೌರವ! ಕೇಳುವುದರಿಂದ ನಾನೇನನ್ನೂ ಕಳೆದುಕೊಳ್ಳುವುದಿಲ್ಲ. ಆದರೆ ಕೇಳದಿದ್ದರೆ, ಖಂಡಿತ ಆಕೆಯ ಮನಸ್ಸಿಗೆ ಬೇಸರವಾಗುತ್ತದೆ. ಹಿರಿಯಳಾದ ನನ್ನನ್ನು ಮೂಲೆಗುಂಪು ಮಾಡಿದರೆನ್ನುವ ಭಾವನೆ ಆಕೆಗೆ ಬರುತ್ತದೆ'. ಇದು ನನ್ನ ತಾಯಿಯ ಅಭಿವ್ಯಕ್ತಿಯ ರೀತಿ!

ಕೆಲವೊಮ್ಮೆ ಅಭಿವ್ಯಕ್ತಿಯ ಕೊರತೆ ಎಷ್ಟೋ ಸಂಬಂಧಗಳನ್ನು ದೂರ ಮಾಡುತ್ತದೆ. ಹೇಳಬೇಕಾದ ಹಾಗೂ ಕೃತಿಯಲ್ಲಿ ತೋರಿಸಬೇಕಾದ ಬಹಳಷ್ಟು ವಿಷಯಗಳು ತಡ ಮಾಡಿದಷ್ಟೂ ಸಂದರ್ಭಗಳು ಹಾಗೂ ಸಂಬಂಧಗಳು ಬೇರೆಯೇ ಆಗಿಹೋಗಿರುತ್ತವೆ. ವ್ಯಕ್ತಿ ವ್ಯಕ್ತಿಯ ನಡುವಿನ ಬಾಂಧವ್ಯದ ಮಾಧ್ಯಮವೇ ಈ ಅಭಿವ್ಯಕ್ತಿ. ಬದುಕಿನಲ್ಲಿ ನಾವು ಅಭಿವ್ಯಕ್ತಿಸುವ ಸದ್ಭಾವನೆಗಳು ಮಹತ್ತರ ಬದಲಾವಣೆಗಳನ್ನು ತರುತ್ತವೆ. ಮಾನವೀಯ ಸಂಬಂಧಗಳು ಸುಧಾರಿಸುತ್ತವೆ. ನಾವು ಎಷ್ಟೇ ವಿದ್ಯಾವಂತರಾದರೂ ಬುದ್ಧಿವಂತರಾದರೂ ಶ್ರೀಮಂತರಾದರೂ, ಜನರ ಬಗೆಗಿರುವ ನಮ್ಮ ವರ್ತನೆ ಹಾಗೂ ಅಭಿವ್ಯಕ್ತಿ, ನಾವೇನು ಎನ್ನುವುದನ್ನು ತೋರಿಸುತ್ತದೆ.

ಪಠ್ಯ ಪುಸ್ತಕ ಪರಿಷ್ಕರಣೆ ವಿವಾದ; ಡಾ.ಬಿ.ವಿ.ವಸಂತಕುಮಾರ್ ಟೀಕೆ

ಬರಗೂರು ಹೇಳಿಕೆಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: '6ನೇ ತರಗತಿಯ ಸಮಾಜ ವಿಜ್ಞಾನ ಭಾಗ-2 ರಲ್ಲಿನ ಬಸವಣ್ಣನವರ ವಿಷಯಕ್ಕೆ ಸಂಬಂಧಿಸಿದಂತೆ ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಮೂಲಗಳನ್ನು ಪರಿಶೀಲಿಸದೆಯೇ ಹೇಳಿಕೆ ನೀಡಿದ್ದಾರೆ' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತಕುಮಾರ್ ತಿಳಿಸಿದ್ದಾರೆ.

'ಈ ಪಠ್ಯದಲ್ಲಿ ಬಸವಣ್ಣನವರ ಬಗ್ಗೆ ಏನು ಬರೆಯಲಾಗಿದೆಯೋ ಅದು ಬಿಜೆಪಿ ಸರ್ಕಾರ ರಚಿಸಿದ್ದ ಡಾ.ಜಿ.ಎಸ್. ಮುಡಂಬಡಿತ್ತಾಯ ಅವರ ಸಮಿತಿಯ ಪಠ್ಯದಲ್ಲೇ ಇದೆ. ಅದನ್ನು ಬರಗೂರು ರಾಮಚಂದ್ರಪ್ಪ ಅವರ ನೇತೃತ್ವದ ಸಮಿತಿಯಾಗಲಿ ಅಥವಾ ರೋಹಿತ್ ಚಕ್ರತೀರ್ಥ ಸಮಿತಿಯಾಗಲಿ ಪರಿಷ್ಕರಿಸಿಲ್ಲ. ಅದು ಯಥಾವತ್ತಾಗಿದೆ. ಹೀಗಿರುವಾಗ, ಅಲ್ಪಸ್ವಲ್ಪ ಬದಲಿಸಿ ಮರುಪರಿಷ್ಕರಣೆಯಲ್ಲಿ ಉಳಿಸಿಕೊಂಡಿದ್ದಾರೆ ಎಂಬುದು ಎಷ್ಟು ಸತ್ಯ' ಎಂದು ಪ್ರಶ್ನಿಸಿದ್ದಾರೆ.

'ಬರಗೂರು ರಾಮಚಂದ್ರಪ್ಪ ಅವರ ಅಭಿಪ್ರಾಯ ಸತ್ಯವೇ ಆಗಿದ್ದಲ್ಲಿ ಡಾ.ಮುಡಂಬಡಿತ್ತಾಯ ಪಠ್ಯದಲ್ಲಿ ಪರಿಷ್ಕರಿಸಿರುವುದನ್ನು ವಿವರಿಸಬೇಕು ಮತ್ತು ಅದರಲ್ಲಿ ರೋಹಿತ್ ಸಮಿತಿ ಯಾವುದನ್ನು ಕೈಬಿಟ್ಟಿದ್ದಾರೆ ಎಂಬುದನ್ನು ಸವಿವರವಾಗಿ ತಿಳಿಸಬೇಕು' ಎಂದು ಹೇಳಿದ್ದಾರೆ.

'ಬರಗೂರು ಅವರಂತವರು ಮೂಲಗಳನ್ನು ಪರಿಶೀಲಿಸಿದ ಬಳಿಕ ಮಾತನಾಡಿದರೆ ತಪ್ಪು ಅಭಿಪ್ರಾಯಗಳು ಮೂಡುವುದಿಲ್ಲ ಏಕೆಂದರೆ, ಅವರು ಏನೇ ಹೇಳಿದರು ಸಮಾಜ ಸತ್ಯವೆಂದು ನಂಬುತ್ತದೆ. ಇವರಿಂದ ಸುಳ್ಳುಗಳನ್ನು ನಿರೀಕ್ಷಿಸುವುದಿಲ್ಲ. ಅಧ್ಯಕ್ಷರಾದವರು ಎಲ್ಲಾ ಪಠ್ಯಗಳನ್ನು ಸಾಲುಗಳನ್ನು ನೋಡಲು ಸಾಧ್ಯವಿಲ್ಲ ಎಂಬುದನ್ನು ಸಹ ತಿಳಿದಿದ್ದೇನೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ವಿರೋಧಿಸುವ ರಾಜಕೀಯ ಸಲ್ಲ'

(ಶಿವಮೊಗ್ಗ ವರದಿ): 'ನೂತನ ಪಠ್ಯಕ್ರಮದಲ್ಲಿ ಲೋಪಗಳಿದ್ದರೆ ಅದರ ಪುನರ್ ಪರಿಶೀಲನೆಗೆ ಅವಕಾಶ ಮಾಡಿಕೊಡಲಿ. ಅದನ್ನು ಬಿಟ್ಟು, ಕೆಲವು ಸಾಹಿತಿಗಳೂ ರಾಜಕಾರಣಿಗಳಂತೆ ವಿರೋಧ ವ್ಯಕ್ತಪಡಿಸುವುದು ಸರಿಯಲ್ಲ' ಎಂದು ಶಾಸಕ ಕೆ.ಎಸ್. ಈಶ್ವರಪ್ಪ ಅಭಿಪ್ರಾಯಪಟ್ಟರು.

ಸೋಮವಾರ ಮಾತನಾಡಿದ ಅವರು, 'ಈ ಹಿಂದೆ ಬರಗೂರು ರಾಮಚಂದ್ರಪ್ಪ ಸಮಿತಿ ಅಸ್ತಿತ್ವದಲ್ಲಿದ್ದಾಗ ಅವರ ವಿಚಾರಕ್ಕೆ ತಕ್ಕಂತೆ ಪಠ್ಯಪುಸ್ತಕಗಳನ್ನು ತಂದಿದ್ದರು. ಈಗ ಪರಿಷ್ಕರಣೆ ಮೂಲಕ ಭಾರತೀಯ ಸಂಸ್ಕೃತಿಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಪ್ರಯತ್ನ ನಡೆಯುತ್ತಿದೆ' ಎಂದರು.

'ಪರಿಷ್ಕೃತ ಪಠ್ಯದಲ್ಲಿ ಯಾವುದಾದರೂ ಭಾಗ ಸರಿ ಇಲ್ಲ ಅನ್ನೋ ಅಂಶಗಳಿದ್ದರೆ ಪ್ರಾಮಾಣಿಕವಾಗಿ ಕುಳಿತು ಚರ್ಚಿಸಿ ತಿದ್ದಿಸುವ ಕೆಲಸ ಮಾಡಬೇಕು. ಆದರೆ ಇದರಲ್ಲಿ ರಾಜಕೀಯ ತಂದು ಇಡೀ ರಾಜ್ಯದಲ್ಲಿ ಗೊಂದಲ ಸೃಷ್ಟಿ ಮಾಡುವ ಕೆಲಸವನ್ನು ಕೆಲವು ಸಾಹಿತಿಗಳು ಮಾಡುತ್ತಿದ್ದಾರೆ' ಎಂದು ದೂರಿದರು.



'ಜಾತಿಗ್ರಸ್ಥ ಮನಸ್ಥಿತಿ ಪ್ರದರ್ಶಿಸಿದ ಭೈರಪ್ಪ'

'ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಅವಮಾನಿಸಿರುವ ಕುರಿತು ಚಕಾರ ಎತ್ತದಿರುವ ಸಾಹಿತಿ ಡಾ.ಎಸ್.ಎಲ್. ಭೈರಪ್ಪ ಅವರು ತಮ್ಮ ಜಾತಿಗ್ರಸ್ಥ ಮನಸ್ಥಿತಿಯನ್ನು ಪ್ರದರ್ಶಿಸಿದ್ದಾರೆ' ಎಂದು ಕಾಂಗ್ರೆಸ್ ಮುಖಂಡ ಡಾ.ಎಚ್.ಸಿ. ಮಹದೇವಪ್ಪ ಟೀಕಿಸಿದ್ದಾರೆ.

ಈ ಕುರಿತು ಸೋಮವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಅಂಬೇಡ್ಕರ್ ಅವರನ್ನು 'ಸಂವಿಧಾನ ಶಿಲ್ಪಿ' ಕರೆದಿದ್ದ ಭಾಗವನ್ನೇ ಪಠ್ಯಪುಸ್ತಕದಿಂದ ಕಿತ್ತುಹಾಕಲಾಗಿದೆ. ಅಂಬೇಡ್ಕರ್ ಮತ್ತು ಇತರ ಗಣ್ಯ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಅವಾಸ್ತವಿಕ ವಿಷಯ ಪ್ರಕಟಿಸುವ ಮೂಲಕ ಸತ್ಯವನ್ನು ಮರೆಮಾಚಿರುವುದನ್ನು ಕಂಡರೂ ಈ ಬಗ್ಗೆ ಪ್ರತಿಕ್ರಿಯಿಸದೇ ಭೈರಪ್ಪ ಜಾಣ ಮೌನ ವಹಿಸಿದ್ದಾರೆ' ಎಂದು ದೂರಿದ್ದಾರೆ.

'ಇಂದಿರಾ ಗಾಂಧಿಯವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ತಮ್ಮನ್ನು ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯಿಂದ ಕೈಬಿಡಲಾಗಿತ್ತು ಎಂದು ಅವರು ಹೇಳಿದ್ದಾರೆ. ಭೈರಪ್ಪ ಆ ಕಾಲದ ಅಜ್ಞಾನಿ ಚಕ್ರತೀರ್ಥನಂತೆ ಇದ್ದರು. ಅವರನ್ನು ಸಮಿತಿಯಿಂದ ಹೊರಗಿಟ್ಟಿದ್ದು ಸರಿಯಾದ ನಡೆಯೇ ಆಗಿತ್ತು. ಜಾತಿವಾದಿ ಪೂರ್ವಗ್ರಹ ಮನಸ್ಥಿತಿಯ ಈ ವ್ಯಕ್ತಿ, ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ನಡೆದಿರುವ ತಪ್ಪುಗಳನ್ನು ಕಂಡರೂ ಅದನ್ನು ಸರಿಪಡಿಸುವ ಕುರಿತು ಮಾತನಾಡಿಲ್ಲ. ಅವರೊಬ್ಬ ಸಾಮಾಜಿಕ ವಂಚಕ' ಎಂದು ವಾಗ್ದಾಳಿ ನಡೆಸಿದ್ದಾರೆ.

'ಸಂವಿಧಾನ ಶಿಲ್ಪಿ' ಪದ ಬಿಟ್ಟಿರುವುದು ತಪ್ಪು: ಹೊರಟ್ಟಿ

'ಪಠ್ಯಪುಸ್ತಕ ಪರಿಷ್ಕರಣೆ ಗಲಾಟೆ ರಾಜಕೀಯ'

ಪ್ರಜಾವಾಣಿ ವಾರ್ತೆ

ಕಾರವಾರ: 'ಪಠ್ಯಪುಸ್ತಕ ಪರಿಷ್ಕರಣೆಯ ಗಲಾಟೆ ನಡೆದಿದ್ದು ಕೇವಲ ರಾಜಕೀಯಕ್ಕಾಗಿ. ಎಲ್ಲರೂ ರಾಜಕೀಯ ಮಾಡುತ್ತಿದ್ದಾರೆ. ಶಿಕ್ಷಣದ ವಿಷಯದಲ್ಲಿ ವಿವಾದ ಮಾಡಬಾರದು' ಎಂದು ವಿಧಾನಪರಿಷತ್ತಿನ ಪಶ್ಚಿಮ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರ್‌ಎಸ್‌ಎಸ್ ಸಂಸ್ಥಾಪಕ ಹೆಡಗೇವಾರ್ ಅವರ ಬಗ್ಗೆ ಪಾಠ ಸೇರಿಸಿದ್ದರಿಂದ ಮಕ್ಕಳಲ್ಲಿ ಕೋಮು ಭಾವನೆ ಬೆಳೆಯುತ್ತದೆ ಎಂಬುದು ಸುಳ್ಳು. ನಾನದನ್ನು ಒಪ್ಪುವುದಿಲ್ಲ' ಎಂದರು.

'ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಪಠ್ಯಪುಸ್ತಕದಿಂದ ಅಂಬೇಡ್ಕರ್ ಅವರ ಹೆಸರಿನ ಮುಂದೆ ಇದ್ದ ಸಂವಿಧಾನ ಶಿಲ್ಪಿ ಪದ ತೆಗೆದಿರುವುದು ತಪ್ಪು. ಅಂತೆಯೇ ಸಾವಿತ್ರಿಬಾಯಿ ಫುಲೆ ಕುರಿತಾದ ಪಾಠವನ್ನು ತೆಗೆದಿರುವುದೂ ಸರಿಯಲ್ಲ. ಇದು ಯಾರೇ ಮಾಡಿದ್ದರೂ ಸಮರ್ಥನೀಯವಲ್ಲ' ಎಂದರು.

ಮಠಾಧೀಶರಿಂದ ಪ್ರತಿಭಟನೆ

ಹುಕ್ಕೇರಿ/ರಾಮದುರ್ಗ (ಬೆಳಗಾವಿ ಜಿಲ್ಲೆ): ವಿಶ್ವಗುರು ಬಸವಣ್ಣನವರ ಚರಿತ್ರೆ ಮತ್ತು ಚಾರಿತ್ರ್ಯಕ್ಕೆ ಧಕ್ಕೆ ತರುವ ಲೋಪದೋಷಗಳನ್ನು ತಕ್ಷಣ ಸರಿಪಡಿಸಿ ಮಕ್ಕಳಿಗೆ ಪಠ್ಯ ವಿತರಿಸುವಂತೆ ಒತ್ತಾಯಿಸಿ ಲಿಂಗಾಯತ ಸಮುದಾಯದ ವಿವಿಧ ಸ್ವಾಮೀಜಿಗಳು ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಜಾಗತಿಕ ಲಿಂಗಾಯತ ಮಹಾಸಭಾ, ರಾಷ್ಟ್ರೀಯ ಬಸವ ದಳ, ರಾಷ್ಟ್ರೀಯ ಬಸವ ಸೇನೆಯ ಸ್ವಾಮೀಜಿಗಳು ಮತ್ತು ವಿವಿಧ ಗ್ರಾಮಗಳ ಜನರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಶಿಕ್ಷಣ ಸಚಿವರ ಮೈಯಲ್ಲಿ ಹೆಡಗೇವಾರ್ ದೆವ್ವ ಹೊಕ್ಕಿದೆ'

ತಿಪಟೂರು (ತುಮಕೂರು): 'ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರ ಮೈಯಲ್ಲಿ ಹೆಡಗೇವಾರ್ ದೆವ್ವ ಹೊಕ್ಕಿದೆ. ಹಾಗಾಗಿಯೇ, ಶಾಲಾ ಪಠ್ಯದಲ್ಲಿ ಪುರೋಹಿತಶಾಹಿ ವಿಚಾರಗಳನ್ನು ಅಳವಡಿಸಲು ಪ್ರಯತ್ನಿಸುತ್ತಿದ್ದು, ಅಲ್ಪಸಂಖ್ಯಾತರನ್ನು ಮೂಲೆಗುಂಪು ಮಾಡಲಾಗುತ್ತಿದೆ' ಎಂದು ಸಾಹಿತಿ ಕುಂ.ವೀರಭದ್ರಪ್ಪ ಟೀಕಿಸಿದರು.

ನಗರದಲ್ಲಿ ಸೋಮವಾರ ಬಸವ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ 'ಸಮಾನತೆಯ ಬಸವಣ್ಣ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗೋಪಾಲಕೃಷ್ಣ ಹೆಗಡೆಗೆ ಖಾದ್ರಿ ಶಾಮಣ್ಣ ಪ್ರಶಸ್ತಿ

ಬೆಂಗಳೂರು: ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಪ್ರಶಸ್ತಿ ಈ ಬಾರಿ ಪತ್ರಕರ್ತ ಗೋಪಾಲ ಕೃಷ್ಣ ಹೆಗಡೆ ಅವರಿಗೆ ಲಭಿಸಿದೆ. ಪ್ರಶಸ್ತಿಯು ₹15 ಸಾವಿರ ನಗದು ಮತ್ತು ಫಲಕ ಒಳಗೊಂಡಿದೆ. ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ನೀಡುವ ಈ ಪ್ರಶಸ್ತಿಯನ್ನು ಇದುವರೆಗೆ 28 ಪತ್ರಕರ್ತರಿಗೆ ಪ್ರದಾನ ಮಾಡಲಾಗಿದೆ.

ಗೋಪಾಲ ಹೆಗಡೆ ಅವರು ಮೂಲತಃ ಹುಬ್ಬಳ್ಳಿಯವರು. ಕಿರಿಯ ವಯಸ್ಸಿನಲ್ಲೇ ಪತ್ರಿಕೋದ್ಯಮ ಪ್ರವೇಶಿಸಿ, ವಿವಿಧ ಪತ್ರಿಕೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಕ್ರೀಡಾ ವರದಿಗಾರಿಕೆಯಲ್ಲಿ ಹೆಚ್ಚಿನ ಒಲವು ಹೊಂದಿರುವ ಅವರು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳ ವರದಿ ಮಾಡಿದ್ದಾರೆ.

'ಪ್ರಜಾವಾಣಿ'ಯಲ್ಲಿ ಸಹ ಸಂಪಾದಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ. ಸದ್ಯ ಹುಬ್ಬಳ್ಳಿಯ ಕೆಎಲ್‌ಇ ಸಂಸ್ಥೆಯ ಸಮುದಾಯ ರೇಡಿಯೊದಲ್ಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸುರಪುರ ನಾಯಕರ ಕೊಡುಗೆಗೂ ಕತ್ತರಿ!

ಒಂದನೇ ಪುಟದಿಂದ

ಅಲ್ಲದೆ, 'ಚಿತ್ರಕಲೆಯಲ್ಲಿ ಸುರಪುರ ನಾಯಕ ಅರಸು ಮನೆತನಕ್ಕೆ ಅಗ್ರಸ್ಥಾನವಿತ್ತು. ಅಲ್ಲಿಯ ಚಿತ್ರಗಳ ತಂತ್ರ ಮತ್ತು ವಿನ್ಯಾಸ ಉನ್ನತ ಸ್ಥಾನ ಪಡೆದಿದೆ. ಮೈಸೂರಿನ ಸಾಂಪ್ರದಾಯಿಕ ಕಲಾಕೃತಿಗಳು, ವಿಜಯನಗರದ ಶೈಲಿಯ ಚಿತ್ರಗಳು, ಬಿಜಾಪುರದ ಆದಿಲ್‌ಶಾಹಿ ಮನೆತನದವರಿಂದ ಮೂಡಿ ಬಂದ ಕಲಾಕೃತಿಗಳಿಗಿಂತ ಸುರಪುರ ನಾಯಕ ಅರಸರ ಕಲಾಕೃತಿಗಳು ತಮ್ಮದೇ ಆದ ವಿಶಿಷ್ಟತೆಯನ್ನು ಪಡೆದಿವೆ. ಲಂಡನ್ನಿನ ಕಲಾ ಸಂಗ್ರಹಾಲಯ, ಇಂಗ್ಲೆಂಡಿನ ವಿವಿಧ ನಗರಗಳಲ್ಲಿ, ದೆಹಲಿ, ಮುಂಬೈ ಹೈದರಾಬಾದ್‌ನ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಸಾಲಾರಜಂಗ್ ವಸ್ತು ಸಂಗ್ರಹಾಲಯದಲ್ಲಿ ಇಂತಹ ಕಲಾಕೃತಿ ನೋಡಬಹುದು' ಎಂಬ ಭಾಗವನ್ನೂ ಸಮಿತಿ ಕೈಬಿಟ್ಟಿದೆ.

'ಪಠ್ಯ ಪುಸ್ತಕ ತಕ್ಷಣ ತಡೆಹಿಡಿಯಿರಿ'

ಒಂದನೇ ಪುಟದಿಂದ

'ಪಠ್ಯ ಪುಸ್ತಕ ಪರಿಷ್ಕರಣಾ ಸಮಿತಿ ವಿಸರ್ಜಿಸಿದ್ದೀರಿ. ಆದರೆ, ಈ ಸಮಿತಿ ಪಠ್ಯದೊಳಗೆ ತುರುಕಿರುವ ಸಂವಿಧಾನ ವಿರೋಧಿ ಮತ್ತು ಸಂಗತಿಗಳನ್ನು ಹಾಗೇ ಉಳಿಸಿಕೊಂಡಿದ್ದೀರಿ. ಜನರ ವಿವೇಕವನ್ನು ಶತಮಾನಗಳಿಂದ ತಿದ್ದುತ್ತಾ ಬಂದಿರುವ ಚಿಂತಕರ ಜೀವಪರ ವಿಚಾರಗಳನ್ನು ತೆಗೆದುಹಾಕಿ, ಉಳಿದವುಗಳಿಗೆ ಕತ್ತರಿ ಹಾಕಿ ಮಕ್ಕಳ ಭವಿಷ್ಯಕ್ಕೆ ಮಾರಕವಾಗಿರುವ ಪ್ರತಿಗಾಮಿ ಹಾಗೂ ಜಾತಿ ಶ್ರೇಷ್ಠತೆಯ ವ್ಯಸನದ ಸಂಗತಿಗಳನ್ನು ಪಠ್ಯದೊಳಗೆ ಉಳಿಸಿಕೊಳ್ಳುವ ಸರ್ಕಾರದ ಹುನ್ನಾರ ಹಾಗೂ ಪ್ರಧಾನವಾಗಿ ಒಂದು ಜಾತಿಯವರ ಬರಹಗಳನ್ನು, ವಿಚಾರಗಳನ್ನು ಹೇರಲು ಹೊರಟಿರುವುದು ಅಪಾಯಕಾರಿ ನಡೆ' ಎಂದು ಪತ್ರದಲ್ಲಿ ಸಿದ್ದರಾಮಯ್ಯ ಉಲ್ಲೇಖಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಪ್ರಜಾವಾಣಿ ಕನ್ನಡ ಧ್ವನಿ
ನಾಳೆ
ವಿದ್ಯಾರ್ಥಿಗಳಿಗೆ ಮಾರ್ಗದರ್ಶನ
ITIಯಲ್ಲಿ ಹೊಸದೇನಿದೆ ಗೊತ್ತೇ?
ಮಾಹಿತಿ ನೀಡುವವರು:
ಯೋಗೇಶ್ವರ ಎಸ್. (ಕೆಎಎಸ್)
ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಕರ್ನಾಟಕ
facebook LIVE
ಬೆಳಿಗ್ಗೆ 11ರಿಂದ 12

ಹೆಡ್ ಕಾನ್‌ಸ್ಟೆಬಲ್ ಸೇರಿ ನಾಲ್ವರ ಬಂಧನ

ಬೆಂಗಳೂರು: 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಅಕ್ರಮ ಸಂಬಂಧ ಮತ್ತೆ ಮೂರು ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿದ್ದು, ಹೆಡ್ ಕಾನ್‌ಸ್ಟೆಬಲ್ ಸೇರಿ ನಾಲ್ವರನ್ನು ಸಿಐಡಿ ಅಧಿಕಾರಿಗಳು ಸೋಮವಾರ ಬಂಧಿಸಿದ್ದಾರೆ.

'ಕಲಾಸಿಪಾಳ್ಯ ಠಾಣೆ ಹೆಡ್ ಕಾನ್‌ಸ್ಟೆಬಲ್ ಎಚ್.ಬಿ. ಹರೀಶ್, ನೆಲಮಂಗಲ ಠಾಣೆ ಕಾನ್‌ಸ್ಟೆಬಲ್ಎ ಚ್.ಜಿ. ಮೋಹನ್‌ಕುಮಾರ್, ಅಭ್ಯರ್ಥಿಗಳಾದ ವಿ. ದರ್ಶನ್ ಗೌಡ ಹಾಗೂ ದಿಲೀಪ್‌ಕುಮಾರ್ ಬಂಧಿತರು. ಮಂಗಳವಾರ ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗುವುದು' ಎಂದು ಸಿಐಡಿ ಮೂಲಗಳು ಹೇಳಿವೆ.

'ಪಿಎಸ್‌ಐ ಹುದ್ದೆಗೆ ಅಕ್ರಮವಾಗಿ ಆಯ್ಕೆಯಾಗಲು ಬಯಸಿದ್ದ ನಾಲ್ವರು ಆರೋಪಿಗಳು, ಮಧ್ಯವರ್ತಿಗಳ ಮೂಲಕ ಲಕ್ಷಾಂತರ ರೂಪಾಯಿ ನೀಡಿ ತಮ್ಮ ಒಎಂಆರ್ ಪ್ರತಿ ತಿದ್ದಿಸಿದ್ದರು. ನಾಲ್ವರ ಹೆಸರು ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿತ್ತು. ಇವರ ಒಎಂಆರ್ ಅಸಲಿ ಪ್ರತಿ ಹಾಗೂ ಕಾರ್ಬನ್ ಪ್ರತಿ ಪರಿಶೀಲಿಸಿದಾಗ, ಅಕ್ರಮ ಎಸಗಿದ್ದು ಪತ್ತೆಯಾಗಿದೆ' ಎಂದೂ ತಿಳಿಸಿವೆ.

'ಅಕ್ರಮ ಎಸಗಿದ್ದ 22 ಅಭ್ಯರ್ಥಿಗಳ ವಿರುದ್ಧ ಈ ಹಿಂದೆ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಪೊಲೀಸ್ ನೇಮಕಾತಿ ವಿಭಾಗದ ಡಿವೈಎಸ್ಪಿ ಶಾಂತಕುಮಾರ್ ಹಾಗೂ ನೌಕರರು ಸೇರಿ 35ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಗಿತ್ತು. ಇದೀಗ ಬಂಧಿಸಲಾಗಿರುವ ನಾಲ್ವರು ಆರೋಪಿಗಳ ವಿರುದ್ಧ ರಾಮಮೂರ್ತಿನಗರ, ಕೋರಮಂಗಲ ಹಾಗೂ ಯಲಹಂಕ ನ್ಯೂ ಟೌನ್ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಲಾಗಿದೆ' ಎಂದೂ ಹೇಳಿವೆ.

ಮೊದಲ ವಿಚಾರಣೆಗೆ ಹಾಜರು: 'ಆರೋಪಿಗಳಾದ ಹರೀಶ್, ದಿಲೀಪ್ ಕುಮಾರ್, ಮೋಹನ್‌ಕುಮಾರ್ ಹಾಗೂ ದರ್ಶನ್ ಗೌಡ ಈ ಹಿಂದೆ ವಿಚಾರಣೆಗಾಗಿ ಹಾಜರಾಗಿದ್ದರು. ಅವರ ಒಎಂಆರ್ ಕಾರ್ಬನ್ ಪ್ರತಿ ಹಾಗೂ ಇತರೆ ದಾಖಲೆಗಳನ್ನು ಸಂಗ್ರಹಿಸಿ ವಾಪಸು ಕಳುಹಿಸಲಾಗಿತ್ತು' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಒಎಂಆರ್ ಕಾರ್ಬನ್ ಪ್ರತಿಗಳನ್ನು ಪರೀಕ್ಷೆಗೆಂದು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಅದರ ವರದಿ ಇತ್ತೀಚೆಗೆ ಬಂದಿದ್ದು, ಆರೋಪಿಗಳ ಅಕ್ರಮಕ್ಕೆ ಪುರಾವೆ ಸಿಕ್ಕಿತು. ಹೀಗಾಗಿಯೇ ಪ್ರತ್ಯೇಕ ಪ್ರಕರಣ ದಾಖಲಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ಹೇಳಿವೆ.

'5ನೇ ರ‍್ಯಾಂಕ್ ಪಡೆದಿದ್ದ ದರ್ಶನ್': 'ಆರೋಪಿ ವಿ. ದರ್ಶನ್ ಗೌಡ, ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ 5ನೇ ರ‍್ಯಾಂಕ್ ಪಡೆದಿದ್ದ. ಈತ ಸಹ ಲಕ್ಷಾಂತರ ರೂಪಾಯಿ ನೀಡಿ ಅಕ್ರಮ ಎಸಗಿದ್ದಾರೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಮಾಗಡಿ ತಾಲ್ಲೂಕಿನ ದರ್ಶನ್ ಗೌಡ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರ ಸಂಬಂಧಿ. ಸಿಐಡಿ ಮೇಲೆ ಪ್ರಭಾವ ಬೀರಿದ್ದ ಸಚಿವ, ಸಂಬಂಧಿ ದರ್ಶನ್‌ನನ್ನು ಪ್ರಕರಣದಿಂದ ಬಚಾವ್ ಮಾಡುತ್ತಿದ್ದಾರೆ' ಎಂದು ಕಾಂಗ್ರೆಸ್ ಆರೋಪಿಸಿತ್ತು.

'2ನೇ ರ‍್ಯಾಂಕ್': 'ಕುಣಿಗಲ್ ನಿವಾಸಿ ಹರೀಶ್, ಕಾನ್‌ಸ್ಟೆಬಲ್ ಆಗಿ ಪೊಲೀಸ್ ಇಲಾಖೆಗೆ ಸೇರಿ, ಹೆಡ್ ಕಾನ್‌ಸ್ಟೆಬಲ್ ಆಗಿದ್ದ. ಪಿಎಸ್‌ಐ ಆಗಲು ಲಕ್ಷಾಂತರ ಹಣ ಕೊಟ್ಟು, ಸೇವಾನಿರತರ ಮೀಸಲಾತಿಯಡಿ 2ನೇ ರ‍್ಯಾಂಕ್ ಗಳಿಸಿದ್ದ' ಎಂದು ಮೂಲಗಳು ಹೇಳಿವೆ.

ರಾಯಚೂರಿನ ಮಸ್ಕಿ, ಕಲಬುರಗಿಯ ಜೇವರ್ಗಿಯಲ್ಲಿ ಧಾರಾಕಾರ ಮಳೆ

ಬಿರುಸಿನ ಮಳೆ; ಮುಳುಗಿದ ಸೇತುವೆ

ಪ್ರಜಾವಾಣಿ ವಾರ್ತೆ

ಹಿರಿಯೂರು ತಾಲ್ಲೂಕಿನ ಕಾತ್ರಿಕೇನಹಳ್ಳಿ ಬ್ಯಾರೇಜ್ ತುಂಬಿ ಹರಿಯುತ್ತಿರುವುದು.

ಬೆಂಗಳೂರು: ರಾಜ್ಯದ ಉತ್ತರ ಮತ್ತು ದಕ್ಷಿಣ ಒಳನಾಡಿನ ವಿವಿಧೆಡೆ ಭಾನುವಾರ ರಾತ್ರಿ ಮತ್ತು ಸೋಮವಾರ ಬಿರುಸಿನ ಮಳೆಯಾಗಿದ್ದು, ಕೆಲವೆಡೆ ಸೇತುವೆಗಳು ಮುಳುಗಿವೆ.

ಚಿಕ್ಕಮಗಳೂರು ಜಿಲ್ಲೆಯ ವಿವಿಧೆಡೆ ಗುಡುಗು ಸಹಿತ ಮಳೆಯಾಗಿದೆ. ಅಜ್ಜಂಪುರ ತಾಲ್ಲೂಕಿನ ಬುಕ್ಕಾಂಬುಧಿ, ಬಂಕನಕಟ್ಟೆ ಭಾಗದಲ್ಲಿ ತೋಟ, ಹೊಲಗಳಿಗೆ ನೀರು ನುಗ್ಗಿದೆ. ಅನುವನಹಳ್ಳಿ- ಬಂಕನಕಟ್ಟೆ ಮಾರ್ಗದ ಸೇತುವೆ, ಬುಕ್ಕಾಂಬುಧಿ- ಕಣಬಗಟ್ಟೆ ಮಾರ್ಗದ ಸೇತುವೆಗಳ ಮೇಲೆ ನೀರು ಹರಿದಿದ್ದು, ಸಂಚಾರಕ್ಕೆ ಅಡಚಣೆಯಾಗಿತ್ತು.

ಬುಕ್ಕಾಂಬುಧಿ- 12.3, ಲಿಂಗದಹಳ್ಳಿ- 10, ಶಿವನಿ-9.3, ರಂಗೇನಹಳ್ಳಿ- 7.8, ಜೋಳದಾಳ್- 7 ಸೆಂ.ಮೀ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ 8.3 ಸೆಂ.ಮೀ, ಬಬ್ಬೂರು 8.5 ಸೆಂ.ಮೀ ಮಳೆಯಾಗಿದೆ. ವಾಣಿವಿಲಾಸ ಜಲಾಶಯದ ಒಳಹರಿವು ಸೋಮವಾರ ಬೆಳಿಗ್ಗೆ 5,300 ಕ್ಯುಸೆಕ್ ಇದ್ದು, ಅರ್ಧ ಅಡಿಯಷ್ಟು ನೀರು ಬಂದಿದೆ. ಕಾತ್ರಿಕೇನಹಳ್ಳಿ ಬ್ಯಾರೇಜ್ ತುಂಬಿ ಹರಿಯುತ್ತಿದೆ. ಉಡುವಳ್ಳಿ, ಗಾಂಧಿನಗರ, ಜವನಗೊಂಡನಹಳ್ಳಿ, ಹೊಸದುರ್ಗದ ಚಿಕ್ಕೆರೆ, ಬಾಗೂರಿನ ದೊಡ್ಡಹಳ್ಳ, ಸೊಡರನಾಳ್ ಕೆರೆಗಳು ಕೋಡಿ ಬಿದ್ದಿವೆ. ಅತ್ತಿಮಗ್ಗೆಯ ಖಾನಿಹಳ್ಳದ ರಭಸಕ್ಕೆ ಅತ್ತಿಮಗ್ಗೆ- ಹೊಸದುರ್ಗ ರಸ್ತೆ ಸಂಪೂರ್ಣ ಜಲಾವೃತವಾಗಿದೆ. ಹೊಸದುರ್ಗದಲ್ಲಿ 8.26 ಸೆಂ.ಮೀ, ಮಾಡದಕೆರೆಯಲ್ಲಿ 9.2 ಸೆಂ.ಮೀ ಮಳೆ ಸುರಿದಿದೆ.

ಚಳ್ಳಕೆರೆಯ ಶಾಂತಿನಗರ, ರಹೀಮ್ ನಗರಕ್ಕೆ ನೀರು ನುಗ್ಗಿದೆ. ದುರ್ಗಾವರದಲ್ಲಿ ಮೊಬೈಲ್ ಟವರ್ ಉರುಳಿ ಬಿದ್ದಿದೆ. ಬುಡ್ನಹಟ್ಟಿ ಗ್ರಾಮದಲ್ಲಿ ಮನೆಯ ಹಳೆಗೋಡೆ ಕುಸಿದು ಬಿದ್ದ ಪರಿಣಾಮವಾಗಿ ಒಂದು ಮೇಕೆ ಮರಿ ಮೃತಪಟ್ಟಿವೆ. ಹೊಳಲ್ಕೆರೆ ತಾಲ್ಲೂಕಿನ ಘಟ್ಟಿಹೊಸಹಳ್ಳಿಯಲ್ಲಿ ಒಂದು ತೆಂಗಿನ ಮರ ಹಾಗೂ 21 ಅಡಿಕೆ ಮರಗಳಿಗೆ ಸಿಡಿಲು ಬಡಿದು ಹಾನಿಯಾಗಿದೆ.

ಧರೆಗುರುಳಿದ ಕಂಬ, ಮರ: ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಕಲಬುರಗಿ ಜಿಲ್ಲೆಯ ಜೇವರ್ಗಿಯಲ್ಲಿ ಭಾನುವಾರ ರಾತ್ರಿ ಧಾರಾಕಾರ ಮಳೆಯಾಗಿದೆ. ಎರಡೂ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಮರಗಳು ಮತ್ತು ವಿದ್ಯುತ್ ಕಂಬಗಳು ಉರುಳಿವೆ.

ಕೋಡಿ ಬಿದ್ದ ಕೆರೆ: ಮಂಡ್ಯದ ಕಲ್ಲಹಳ್ಳಿ ಕೆರೆ, ರಾಜಾ ಕಾಲುವೆ ಕೋಡಿ ಬಿದ್ದು ಕಿರುಗಾಲುವೆಯತ್ತ ನೀರು ಹರಿದು ಬಂದು ಬೆಳೆಗೆ ಹಾನಿಯಾಗಿರುವುದರಿಂದ ಪರಿಹಾರ ನೀಡಬೇಕು ಎಂದು ರೈತರು ಒತ್ತಾಯಿಸಿದ್ದಾರೆ. ಜಿಲ್ಲೆಯ ಕೆಲವೆಡೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತ್ತು. ನಾಗಮಂಗಲ, ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಭಾರಿ ಮಳೆಯಾಗಿದ್ದು ವಿದ್ಯುತ್ ಪೂರೈಕೆ ಇಲ್ಲದೆ ಜನ ಪರದಾಡಿದರು.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಹೋಬಳಿಯ ಗೊರಹಳ್ಳಿಯ ನಾಗರಾಜು ಎಂಬುವರ ಮನೆ ಮೇಲೆ ತೆಂಗಿನ ಮರ ಬಿದ್ದಿದೆ. ಯಾರಿಗೂ ಪ್ರಾಣಾಪಾಯವಾಗಿಲ್ಲ. ಮೈಸೂರು ನಗರ, ಬನ್ನೂರು ಹೋಬಳಿಯಲ್ಲೂ ಧಾರಾಕಾರ ಮಳೆಯಾಯಿತು. ಮಡಿಕೇರಿ ನಗರ ಮತ್ತು ನಾಪೋಕ್ಲು ವ್ಯಾಪ್ತಿಯಲ್ಲಿ ಸೋಮವಾರ ಸಂಜೆ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆ ಸುರಿಯಿತು.

‘ಕಾಂಗ್ರೆಸ್‌ಗೆ ಆತ್ಮಸಾಕ್ಷಿ ಮತಗಳು ಸಿಗುವ ವಿಶ್ವಾಸ’

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನ 2ನೇ ಅಭ್ಯರ್ಥಿ ಮನ್ಸೂರ್ ಅಲಿಖಾನ್ ಅವರಿಗೆ ಬಿಜೆಪಿ, ಜೆಡಿಎಸ್‌ನಿಂದ ಆತ್ಮಸಾಕ್ಷಿ ಮತಗಳು ದೊರೆಯಲಿವೆ’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿಶ್ವಾಸ ವ್ಯಕ್ತಪಡಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, ‘ನಾವು ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದು ಜೆಡಿಎಸ್‌ನಲ್ಲಿರುವ ಅಲ್ಪಸಂಖ್ಯಾತ ಶಾಸಕರು ಬೆಂಬಲಿಸುವ ವಿಶ್ವಾಸವಿದೆ. ಗೆಲುವಿಗೆ ಬೇಕಾದಷ್ಟು ಮತಗಳು ಬರಲಿವೆ’ ಎಂದರು.

‘ಪ್ರತಿ ಬಾರಿ ಜೆಡಿಎಸ್‌ನವರೇ ಗೆಲ್ಲಬೇಕೇಕೆ? ಕೋಮುವಾದಿ ಬಿಜೆಪಿಯನ್ನು ದೂರವಿಡಲು ತನ್ನ ಅಭ್ಯರ್ಥಿಯನ್ನು ಕಣದಿಂದ ನಿವೃತ್ತಿಗೊಳಿಸಿ ಕಾಂಗ್ರೆಸ್ ಬೆಂಬಲಿಸಲಿ. ಎಚ್.ಡಿ.ದೇವೇಗೌಡರು ರಾಜ್ಯಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗ ನಾವು ಅಭ್ಯರ್ಥಿ ಹಾಕದೇ ಬೆಂಬಲಿಸಿದ್ದೆವು. 37 ಸ್ಥಾನ ಗೆದ್ದಿದ್ದ ಜೆಡಿಎಸ್‌ಗೆ ಮುಖ್ಯಮಂತ್ರಿ ಸ್ಥಾನ ನೀಡಿದ್ದೆವು. ಬಿಜೆಪಿಯನ್ನು ಅಧಿಕಾರದಿಂದ ದೂರವಿಡಬೇಕೆನ್ನುವುದೇ ಉದ್ದೇಶವಾಗಿತ್ತು’ ಎಂದು ಹೇಳಿದರು.

‘ಮಾನ- ಮರ್ಯಾದೆ ಇಲ್ಲದ ಸಿ.ಎಂ. ಇಬ್ರಾಹಿಂ ಹೇಳಿದಂತೆ ಕೇಳುವ ಅಧ್ಯಕ್ಷರು. ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿದ್ದಕ್ಕೆ ಅವರನ್ನು ಮೇಲ್ಮನೆ ಸದಸ್ಯರನ್ನಾಗಿ ಮಾಡಿದರಾ?’ ಎಂದು ವ್ಯಂಗ್ಯವಾಡಿದರು.

‘ಕಾಂಗ್ರೆಸ್‌ನವರ ಟಾರ್ಚರ್ ತಡೆಯಲಾಗದೆ, ಸರ್ಕಾರ ಬಿದ್ದು ಹೋಗಲೆಂದೇ ವಿದೇಶಕ್ಕೆ ಹೋಗಿದ್ದೆ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ. ಆಗ ಸಿದ್ದರಾಮಯ್ಯ ಅವರೇ ಸರ್ಕಾರ ಬೀಳಿಸಿದರು ಎಂದಿದ್ದರು. ಸರ್ಕಾರ ಬಿದ್ದಾಗಲೇ ಹೇಳಲಿಲ್ಲವೇಕೆ? ಆಗ ಹೇಳಿದ್ದು ಸತ್ಯವೋ, ಈಗ ಹೇಳಿದ್ದೋ? ವಿಧಾನ ಮಂಡಲ ಅಧಿವೇಶನದಲ್ಲಿ ಉತ್ತರ ಕೊಟ್ಟಾಗ ಹೇಳಿದ್ದೇ ಬೇರೆ. ಎಲ್ಲವೂ ದಾಖಲಾಗಿವೆ’ ಎಂದರು.

ನಮಗೆ ಸಿಗುವುದಿಲ್ಲವೇ: ಎಚ್‌ಡಿಕೆ ಪ್ರಶ್ನೆ

ಮೈಸೂರು: ‘ರಾಜ್ಯಸಭೆ ಚುನಾವಣೆಯಲ್ಲಿ ಆತ್ಮಸಾಕ್ಷಿಯ ಮತಗಳು ಕಾಂಗ್ರೆಸ್‌ಗೆ ದೊರೆಯುತ್ತವೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಅಂತಹ ಮತಗಳು ನಮಗೆ ಸಿಗೋಲ್ಲವೇ?’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಕೇಳಿದರು.

ಇಲ್ಲಿನ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, ‘ಅವರಿಗೊಬ್ಬರಿಗೆ ಮಾತ್ರವೇ ಆತ್ಮಸಾಕ್ಷಿ ಇದೆಯೇ? ಉಳಿದವರಿಗೆ ಇಲ್ಲವೇ? ಅವರೊಬ್ಬರಿಗೇ ಗುತ್ತಿಗೆ ಕೊಟ್ಟಿದ್ದೇವೆಯೇ’ ಎಂದರು.

‘ರಾಜ್ಯಸಭೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗೆ ಮತ ಹಾಕುತ್ತೇನೆ ಎಂದು ಶಾಸಕ ಜಿ.ಟಿ. ದೇವೇಗೌಡ ಈಗಾಗಲೇ ತಿಳಿಸಿದ್ದಾರೆ. ಕಾಂಗ್ರೆಸ್ ನಾಯಕರ ಹೇಳಿಕೆಗಳಿಗೆ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ವಿವರವಾದ ಉತ್ತರ ಕೊಡುತ್ತೇನೆ’ ಎಂದರು. ‘ಕಳೆದ ಚುನಾವಣೆಯಲ್ಲಿ ಎಚ್.ಡಿ. ದೇವೇಗೌಡರನ್ನು ಬೆಂಬಲಿಸಿದ್ದೇವೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಬಿಜೆಪಿಯವರೂ ದೇವೇಗೌಡರ ವಿರುದ್ಧ ಅಭ್ಯರ್ಥಿ ಹಾಕದಿರಲು ನಿರ್ಧರಿಸಿದ್ದರು. ನಂತರವಷ್ಟೇ ಕಾಂಗ್ರೆಸ್‌ನವರು ಅಭ್ಯರ್ಥಿ ಹಾಕದಿರಲು ನಿರ್ಧರಿಸಿದ್ದರು’ ಎಂದರು.

‘ಕೊರತೆ ಮತಗಳನ್ನು ತುಂಬಿಕೊಳ್ಳಲು ಯಾವ ಆಪರೇಷನ್ ಅನ್ನೂ ಮಾಡುವುದಿಲ್ಲ. ನಾವೂ ಆತ್ಮಸಾಕ್ಷಿ ಮತಗಳನ್ನು ನಂಬಿದ್ದೇವೆ’ ಎಂದರು.

ಲಹರ್ ಸಿಂಗ್ ಗೆದ್ದೇ ಗೆಲ್ಲುತ್ತಾರೆ: ಸಿ.ಎಂ

ಬೆಂಗಳೂರು: ‘ರಾಜ್ಯಸಭೆ ಚುನಾವಣೆಯಲ್ಲಿ ನಮ್ಮ ಪಕ್ಷದ ಮೂರನೇ ಅಭ್ಯರ್ಥಿ ಲಹರ್ ಸಿಂಗ್ ಗೆದ್ದೇ ಗೆಲ್ಲುತ್ತಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

‘ರಾಜ್ಯಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಆತ್ಮಸಾಕ್ಷಿಯ ಮತಗಳ ಬೀಳಲಿವೆ’ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಈ ಬಾರಿ ರಾಜ್ಯಸಭೆ ಚುನಾವಣೆ ಬೇರೆ ರೀತಿಯಲ್ಲಿ ನಡೆಯುತ್ತದೆ’ ಎಂದರು. ಆದರೆ, ಯಾವ ರೀತಿ ಎಂದು ವಿವರಿಸಲು ನಿರಾಕರಿಸಿದರು.

‘ಕಳೆದ ಬಾರಿ ಏಳೆಂಟು ಮತಗಳು ಬಹಿರಂಗವಾಗಿ ಅಡ್ಡ ಮತದಾನ ಆಗಿತ್ತು. ಈ ಹಿಂದೆ ಗೋಪ್ಯ ಮತದಾನ ವೇಳೆ ಬೇರೆಯೇ ರೀತಿ ಆಗಿತ್ತು. ಈಗ ಬೇರೆ ರೀತಿಯ ಚುನಾವಣೆ ಆಗಲಿದೆ’ ಎಂದು ಅವರು ಸೂಚ್ಯವಾಗಿ ತಿಳಿಸಿದರು.

ಪತ್ರಕರ್ತರಿಗೆ ಹಣ ಹಂಚುವಂತೆ ಹೇಳಿಲ್ಲ: ಹೊರಟ್ಟಿ

ಗದಗ: ಪಶ್ಚಿಮ ಶಿಕ್ಷಕರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಹೊರಟ್ಟಿ ಹೆಸರಿನಲ್ಲಿ ಅವರ ಬೆಂಬಲಿಗರೊಬ್ಬರು ‘ಪ್ರಜಾವಾಣಿ’ ವರದಿಗಾರರಿಗೆ ಹಣ ನೀಡಲು ಬಂದಿದ್ದು, ಅದನ್ನು ಹಿಂತಿರುಗಿಸಲಾಗಿದೆ.

ಪತ್ರಿಕೆಯ ವರದಿಗಾರನಿಗೆ ಭಾನುವಾರ ಕರೆ ಮಾಡಿದ ವ್ಯಕ್ತಿಯು ಭೇಟಿ ಆಗಬೇಕಿದೆ ಎಂದು ಹೇಳಿದರು. ಚುನಾವಣೆ ಸಂದರ್ಭದಲ್ಲಿ ಹೆಚ್ಚಿನ ಪ್ರಚಾರ ನೀಡುವಂತೆ ಕೋರಿ ಹಣ ನೀಡಲು ಮುಂದಾದರು. ಸುದ್ದಿ ಪ್ರಕಟಿಸಲು ‘ಪ್ರಜಾವಾಣಿ’ ಹಣ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿ ಅವರ ಬೇಡಿಕೆಯನ್ನು ನಿರಾಕರಿಸಲಾಯಿತು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ‘ಪ್ರಜಾವಾಣಿ’ ಬಸವರಾಜ ಹೊರಟ್ಟಿ ಅವರನ್ನು ಸಂಪರ್ಕಿಸಲಾಗಿ, ‘ನಾನು ಯಾವ ಪತ್ರಕರ್ತರಿಗೂ ಹಣ ಕೊಡುವಂತೆ ತಿಳಿಸಿಲ್ಲ. ಹಣ ಕೊಡಲು ಬಂದ ವ್ಯಕ್ತಿಯ ಜತೆಗೆ ಮಾತನಾಡಿ ಬುದ್ಧಿಹೇಳುವೆ’ ಎಂದು ತಿಳಿಸಿದರು.

‘ಕೆಲವು ವಾಹಿನಿಗಳು ಹಾಗೂ ಪತ್ರಿಕೆಗಳ ಪ್ರತಿನಿಧಿಗಳು ಹಣಕ್ಕಾಗಿ ಗಂಟು ಬೀಳುವುದನ್ನು ನೋಡಿದ್ದೇನೆ. ಆದರೆ, ಇಷ್ಟು ವರ್ಷಗಳ ರಾಜಕೀಯ ಜೀವನದಲ್ಲಿ ನಾನು ಯಾರೊಬ್ಬರಿಗೂ ಹಣ ಕೊಟ್ಟಿಲ್ಲ. ಚುನಾವಣೆ ಸಂದರ್ಭದಲ್ಲಿ ನಾನು ಜಾಹೀರಾತನ್ನಷ್ಟೇ ಕೊಡುತ್ತೇನೆ’ ಎಂದು ಸ್ಪಷ್ಟಪಡಿಸಿದರು.

‘ಪತ್ರಿಕೋದ್ಯಮದಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವ ವ್ಯಕ್ತಿಗಳನ್ನು ಕಂಡು ಸಂತೋಷವಾಯಿತು. ಹತ್ತು ಮಂದಿಯಲ್ಲಿ ಒಬ್ಬರು ಪ್ರಾಮಾಣಿಕರು ಸಿಕ್ಕರೂ ನನಗೆ ಹೆಚ್ಚಿನ ಖುಷಿ ಆಗುತ್ತದೆ. ಹೊರಟ್ಟಿ ಅವರ ಹೆಸರಿನಲ್ಲಿ ಹಣ ಹಂಚಿಕೆ ಮಾಡಲು ಬಂದಿದ್ದರು ಎಂದು ಸುದ್ದಿ ಬರೆಯಿರಿ. ನನ್ನ ಅಭ್ಯಂತರವಿಲ್ಲ’ ಎಂದೂ ತಿಳಿಸಿದರು.

ರಷ್ಯಾದ ಉನ್ನತ ಸೇನಾಧಿಕಾರಿ ಹತ್ಯೆ

ಮಾಸ್ಕೊ/ಕೀವ್/ಲಂಡನ್ (ಎಎಫ್‌ಪಿ/ರಾಯಿಟರ್ಸ್): ಉಕ್ರೇನ್‌ನ ಪೂರ್ವದ ಸೆವೆರೊಡೊನ್‌ಟ್‌ಸ್ಕ್‌ನಲ್ಲಿ ಯುದ್ಧ ಭೀಕರ ಸ್ವರೂಪ ಪಡೆದಿದ್ದು, ಉಕ್ರೇನ್ ದಾಳಿಗೆ ರಷ್ಯಾದ ಉನ್ನತ ಸೇನಾಧಿಕಾರಿ ಸೋಮವಾರ ಹತರಾಗಿದ್ದಾರೆ.

ಪೂರ್ವದ ಡಾನ್‌ಬಾಸ್‌ನಲ್ಲಿ ನಡೆದ ಕಾಳಗದಲ್ಲಿ ರಷ್ಯಾ ಹಿಡಿತದ ಡೊನೆಟ್‌ಸ್ಕ್ ಗಣರಾಜ್ಯದ ಪಡೆಗಳಿಗೆ ಕಮಾಂಡರ್ ಆಗಿದ್ದ ಮೇಜರ್ ಜನರಲ್ ರೋಮನ್ ಕುಟುಜೋವ್ ಬಲಿಯಾಗಿದ್ದಾರೆ. ಈವರೆಗೆ 12 ಮಂದಿ ಸೇನಾಧಿಕಾರಿಗಳು ಹತರಾಗಿದ್ದಾರೆ ಎಂದು ವರದಿ ತಿಳಿಸಿದೆ

ಉಕ್ರೇನ್‌ಗೆ ದೂರಗಾಮಿ ಕ್ಷಿಪಣಿಗಳನ್ನು ಪೂರೈಸಿದರೆ, ‘ನಾವು ವಿನಾಶಕಾರಿ ಶಸ್ತ್ರಾಸ್ತ್ರಗಳನ್ನು ಬಳಸಬೇಕಾಗುತ್ತದೆ’ ಎಂದು ರಷ್ಯಾ ಅಧ್ಯಕ್ಷ ಪುಟಿನ್ ನೀಡಿದ್ದ ಎಚ್ಚರಿಕೆಯ ಹಿಂದೆಯೇ, ಹಿಮಾರ್ಸ್ (ಎಂ142 ಹೈ ಮೊಬಿಲಿಟಿ ಆರ್ಟಿಲರಿ ರಾಕೆಟ್ ಸಿಸ್ಟಮ್ಸ್) ಕ್ಷಿಪಣಿ ವ್ಯವಸ್ಥೆ, ಎಂ270 ಬಹು ಉಡಾವಣಾ ವ್ಯವಸ್ಥೆಯ ಕ್ಷಿಪಣಿ ಪೂರೈಕೆ ನಿರ್ಧಾರದಲ್ಲಿ ಬದಲಾವಣೆಯಿಲ್ಲ ಎಂದು ಅಮೆರಿಕ ಮತ್ತು ಬ್ರಿಟನ್ ಸ್ಪಷ್ಟಪಡಿಸಿವೆ.

‘ಜಾನಪದ ದೀಪ’ ಪ್ರಶಸ್ತಿ ಪ್ರಕಟ

ಕಾರವಾರ: ಹೊನ್ನಾವರದ ಉದಯಗಿರಿಯಲ್ಲಿರುವ ಜಾನಪದ ವಿಶ್ವ ಪ್ರತಿಷ್ಠಾನವು 2020, 2021 ಹಾಗೂ 2022ರ ಸಾಲಿನ ವಿವಿಧ ‘ಜಾನಪದ ದೀಪ’ ಪ್ರಶಸ್ತಿಗಳನ್ನು ಪ್ರಕಟಿಸಿದೆ.

‘ಕುವೆಂಪು ದೀಪ ಪ್ರಶಸ್ತಿ’ಗೆ ಮಂಗಳೂರಿನ ವಿಶ್ರಾಂತ ಕುಲಪತಿ ಡಾ.ಬಿ.ಎ.ವಿವೇಕ ರೈ (2020), ಧಾರವಾಡದ ಕನ್ನಡ ವಿಶ್ವವಿದ್ಯಾಲಯದ ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದ ಅಧ್ಯಕ್ಷ ಡಾ.ನಿಜಲಿಂಗಪ್ಪ ಮಟ್ಟಿಹಾಳ (2021) ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ಕಾ.ವೆಂ.ಶ್ರೀನಿವಾಸ ಮೂರ್ತಿ (2022) ಅವರನ್ನು ಆಯ್ಕೆ ಮಾಡಲಾಗಿದೆ.

‘ಶಿವರಾಮ ಕಾರಂತ ದೀಪ ಪ್ರಶಸ್ತಿ’ಗೆ ಧಾರವಾಡದ ವಿಶ್ರಾಂತ ಪ್ರಾಧ್ಯಾಪಕಿ ಡಾ.ಶಾಲಿನಿ ರಘುನಾಥ (2020), ಧಾರವಾಡದ ವಿಶ್ರಾಂತ ಪ್ರಾಧ್ಯಾಪಕಿ ಡಾ.ಶಾಂತಾ ಇಮ್ರಾಪುರ (2021) ಹಾಗೂ ಕುಮಟಾದ ಯಕ್ಷಗಾನ ಕಲಾವಿದ ಮೋಹನ ನಾಯಕ ಕೂಜಳ್ಳಿ, ಕರ್ನಾಟಕ ವಿಶ್ವವಿದ್ಯಾಲಯದ ಜಾನಪದ ವಿಭಾಗದ ಅಧ್ಯಕ್ಷ ಡಾ.ವಿ. ಎಲ್.ಪಾಟೀಲ್ (2022) ಅವರನ್ನು ಆಯ್ಕೆ ಮಾಡಲಾಗಿದೆ.

‘ದೇವಮ್ಮ ರಾಮ ನಾಯಕ ದೀಪ ಪ್ರಶಸ್ತಿ’ಗೆ ಅಂಕೋಲಾ ಅಚವೆಯ ಕರಕುಶಲ ಕಲಾವಿದ ಮಹಾದೇವ ಬೊಮ್ಮಯ್ಯ ಗುನಗ (2020), ಹೊನ್ನಾವರ ಗುಣವಂತೆಯ ಜನಪದ ಗೀತೆ ಕಲಾವಿದೆ ಕೇಸಿ ಗೋವಿಂದ ಗೌಡ (2021) ಹಾಗೂ ಅಂಕೋಲಾ ಚೆನಗಾರದ ಸಾಂಪ್ರದಾಯಿಕ ಅಡುಗೆ ತಜ್ಞೆ ಶಾಲಿನಿ ಭಟ್ಟ (2022) ಭಾಜನರಾಗಲಿದ್ದಾರೆ.

‘ಪ್ರತಿಭಾ ವಿದ್ಯಾರ್ಥಿ ದೀಪ ಪ್ರಶಸ್ತಿ’ಗೆ ಕಾರವಾರದ ಮೀನಾಕ್ಷಿ ಪಾಟೀಲ (2020), ಅಂಕೋಲಾ ಬೇಲೆಕೇರಿಯ ಡಾ.ಶಾಂತಲಾ ಕಲಗುಜ್ಜಿ (2021) ಮತ್ತು ಉಡುಪಿಯ (ಅಂಕೋಲಾ ಬೆಳಸೆ ನಿವಾಸಿ) ಅರ್ಚಿತಾ ನಾಯಕ (2022) ಆಯ್ಕೆಯಾಗಿದ್ದಾರೆ.

ಪ್ರಶಸ್ತಿ ಪ್ರದಾನ ಸಮಾರಂಭವು ಜೂನ್ 30ರಂದು ಬೆಳಿಗ್ಗೆ 11ಕ್ಕೆ ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ವಿದೇಶಿ ಕರೆನ್ಸಿ ಸಾಗಣೆ ಭಾರತದ ಉದ್ಯಮಿ ಬಂಧನ

ಕೊಲಂಬೊ (ಪಿಟಿಐ): ಸುಮಾರು ₹ 4 ಕೋಟಿ ಮೌಲ್ಯದ ವಿದೇಶಿ ಕರೆನ್ಸಿಯನ್ನು ಕಳ್ಳಸಾಗಣೆ ಮಾಡುತ್ತಿದ್ದ ಆರೋಪದಡಿ 45 ವರ್ಷದ ಭಾರತೀಯ ಉದ್ಯಮಿಯನ್ನು ಶ್ರೀಲಂಕಾ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಅಧಿಕಾರಿಗಳು ಬಂಧಿಸಿದ್ದಾರೆ.

ಬಂಧಿತ ಉದ್ಯಮಿಯ ಹೆಸರು ಬಹಿರಂಗಪಡಿಸಿಲ್ಲ. ಇವರು 117,000 ಕೆನಡಾ ಡಾಲರ್‌ಗಳು (₹90 ಲಕ್ಷ), 19,000 ಯುರೊ(₹15.8 ಲಕ್ಷ) ಅನ್ನು ಸಾಗಣೆ ಮಾಡುತ್ತಿದ್ದರು. ಉದ್ಯಮಿಯ ವರ್ತನೆ ಕುರಿತು ಗುಮಾನಿಯಿಂದ ಬ್ಯಾಗ್ ತಪಾಸಣೆ ಮಾಡಿದಾಗ ಕೃತ್ಯ ಗೊತ್ತಾಗಿದೆ.

ಚೆನ್ನೈಗೆ ತೆರಳುತ್ತಿದ್ದ ಇಂಡಿಗೊ ವಿಮಾನ ಏರಲು ಉದ್ಯಮಿ ಸಿದ್ಧತೆ ನಡೆಸಿದ್ದರು ಎಂದು ಸ್ಥಳೀಯ ಡೈಲಿ ನ್ಯೂಸ್ ಲಂಕಾ ವರದಿ ಮಾಡಿದೆ.

ಚರ್ಚ್‌ನಲ್ಲಿ ದಾಳಿ, 50 ಜನರ ಹತ್ಯೆ

ಅಬುಜಾ, ನೈಜೀರಿಯಾ (ಎಎಫ್‌ಪಿ): ಬಂಧೂಕುದಾರಿಗಳಿಬ್ಬರು ಭಾನುವಾರ ಸ್ಫೋಟಕಗಳೊಂದಿಗೆ ಇಲ್ಲಿನ ಚರ್ಚ್‌ನ ಮೇಲೆ ನಡೆಸಿದ ದಾಳಿಯಲ್ಲಿ ಮಕ್ಕಳು ಸೇರಿದಂತೆ 50 ಮಂದಿ ಮೃತಪಟ್ಟಿದ್ದಾರೆ.

ಒವೊ ಪಟ್ಟಣದ ಸೇಂಟ್ ಫ್ರಾನ್ಸಿಸ್ ಕ್ಯಾಥೊಲಿಕ್ ಚರ್ಚ್‌ನಲ್ಲಿ ಈ ಕೃತ್ ನಡೆದಿದೆ. ಸುರಕ್ಷಿತ ಎಂದೇ ಭಾವಿಸಲಾಗಿದ್ದ ನೈಜೀರಿಯಾದಲ್ಲಿ ನಡೆದ ಈ ಕೃತ್ಯವನ್ನು ಅಂತರರಾಷ್ಟ್ರೀಯ ಸಮೂಹ ಖಂಡಿಸಿದೆ. ದಾಳಿಕೋರರಲ್ಲಿ ಒಬ್ಬ ಚರ್ಚ್‌ನ ಒಳನುಗ್ಗಿ ದಾಳಿ ನಡೆಸಿದರೆ, ಅಲ್ಲಿಂದ ತಪ್ಪಿಸಿಕೊಂಡು ಬರುವವರ ಹತ್ಯೆ ಮಾಡಲು ಇನ್ನೊಬ್ಬ ಹೊರಗಡೆ ಹೊಂಚುಹಾಕಿ ನಿಂತಿದ್ದ. ಭಾನುವಾರ ಸಾಮೂಹಿಕ ಪ್ರಾರ್ಥನೆ ವೇಳೆ ಈ ದಾಳಿ ನಡೆದಿದೆ ಎಂದು ಬಿಷಪ್ ಜ್ಯೂಡ್ ಅರೊಗುಂಡಡೆ ಹೇಳಿದರು.

ಕೃತ್ಯದ ನಂತರ ದಾಳಿಕೋರರು ಪರಾರಿಯಾಗಿದ್ದಾರೆ. ಇದು ಯಾರ ಕೃತ್ಯ ಎಂಬುದು ತಿಳಿದುಬಂದಿಲ್ಲ. ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಶುದ್ಧ ನೀರಿನಿಂದ ಮತ್ತೊಂದು ಸಾವು

ಪ್ರಜಾವಾಣಿ ವಾರ್ತೆ

ರಾಯಚೂರು: ನಗರಸಭೆ ಪೂರೈಸಿದ ಕಲುಷಿತ ನೀರು ಕುಡಿದು ವಾಂತಿ, ಭೇದಿಯಿಂದ ನರಳಿ ಆಸ್ಪತ್ರೆಗೆ ಸೇರಿದ್ದ ಅರಬ್ ಮೊಹಲ್ಲಾ ನಿವಾಸಿ ನೂರ್ ಮಹಮ್ಮದ್ (45) ಭಾನುವಾರ ರಾತ್ರಿ ಮೃತಪಟ್ಟಿದ್ದಾರೆ. ಹೀಗೆ ಮೃತರಾದವರ ಸಂಖ್ಯೆ 3ಕ್ಕೆ ಏರಿದೆ.

ಒಟ್ಟು 63 ಜನರಲ್ಲಿ ವಾಂತಿ ಭೇದಿ ಕಾಣಿಸಿಕೊಂಡಿದ್ದು, ಅವರು ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

‘ನೀರು ಪೂರೈಕೆಯಲ್ಲಿ ಕರ್ತವ್ಯ ಲೋಪವೆಸಗಿದ ಆರೋಪದ ಮೇಲೆ ನಗರಸಭೆ ಹೊರಗುತ್ತಿಗೆ ಕಿರಿಯ ಎಂಜಿನಿಯರ್ ಕೃಷ್ಣಾ ಅವರನ್ನು ಸೇವೆಯಿಂದ ವಜಾಗೊಳಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಎಲ್.ಚಂದ್ರಶೇಖರ್ ತಿಳಿಸಿದ್ದಾರೆ.

ನಗರಸಭೆ ತಾಂತ್ರಿಕ ಶಾಖೆಯ ಮುಖ್ಯಸ್ಥ ಹಾಗೂ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ವೆಂಕಟೇಶ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ.

ನಗರಸಭೆ ಆಡಳಿತ ವೈಖರಿ ವಿರುದ್ಧ ವಿವಿಧ ಸಂಘಟನೆಗಳು ಪ್ರತಿದಿನವೂ ಪ್ರತಿಭಟನೆ ನಡೆಸುತ್ತಿವೆ. ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಮತ್ತು ವ್ಯವಸ್ಥೆ ಸುಧಾರಿಸಬೇಕು ಎಂದು ಮುಖಂಡರು ಆಗ್ರಹಿಸಿದ್ದಾರೆ.

ಮೃತರ ಕುಟುಂಬಗಳಿಗೆ ತಲಾ ₹ 5 ಲಕ್ಷ ಪರಿಹಾರ

ಬೆಂಗಳೂರು: ‘ರಾಯಚೂರಿನಲ್ಲಿ ಕಲುಷಿತ ನೀರು ಕುಡಿದು ಮೃತಪಟ್ಟ ಮೂವರ ಕುಟುಂಬಗಳಿಗೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ತಲಾ ₹ 5 ಲಕ್ಷ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

‘ಪ್ರಕರಣದ ತನಿಖೆ ನಡೆಸಿ ತಾಂತ್ರಿಕ ವರದಿ ಸಲ್ಲಿಸುವಂತೆ ಜಲ ಮಂಡಳಿ ಮುಖ್ಯ ಎಂಜಿನಿಯರ್‌ಗೆ ಸೂಚಿಸಲಾಗಿದೆ. ರಾಯಚೂರಿನ ಎಲ್ಲ ವಾರ್ಡ್‌ಗಳ ನೀರಿನ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಬೇಕು. ಕುಡಿಯುವ ನೀರಿನ ಸುರಕ್ಷತೆ ಬಗ್ಗೆ ಪ್ರಮಾಣೀಕರಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಅಧಿಕಾರಿಗಳ ಲೋಪದೋಷವಿದೆಯೇ ಎಂಬ ಬಗ್ಗೆ ಅಲ್ಲಿನ ಡಿವೈಎಸ್ಪಿ ನೇತೃತ್ವದಲ್ಲಿ ತನಿಖೆ ಕೈಗೊಳ್ಳಲಾಗುವುದು. ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

ಹುಸ್ಕೂರು-ಸರ್ಜಾಪುರ ರಸ್ತೆ ದುಃಸ್ಥಿತಿ: ಆಕ್ರೋಶ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹುಸ್ಕೂರು-ಸರ್ಜಾಪುರ ರಸ್ತೆಯ ದುಃಸ್ಥಿತಿ ಬಗ್ಗೆ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ಅವರು ಟ್ವೀಟ್ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಿರಣ್ ಮಜುಂದಾರ್

ಶಾಸಕರು, ಸಂಸದರು ಮತ್ತು ಸ್ಥಳೀಯ ಗ್ರಾಮ ಪಂಚಾಯಿತಿಯ ಜವಾಬ್ದಾರಿಯ ಕೊರತೆಯಿಂದಾಗಿ ರಸ್ತೆಯು ಹದಗೆಟ್ಟಿದೆ ಎಂದು ನಿರಾಸೆ ವ್ಯಕ್ತಪಡಿಸಿದ್ದಾರೆ.

'ಇದೇ ರಸ್ತೆಯಲ್ಲಿ ಬಸ್ ಡಿಪೋ ಇದೆ. ಆದರೆ ವಾಹನಗಳು ಸಂಚರಿಸಲು ಸಾಧ್ಯವಾಗದ ಪರಿಸ್ಥಿತಿಯಿದೆ. ಇದು ಸ್ಥಳೀಯ ಆಡಳಿತಕ್ಕೆ ನಾಚಿಕೆಯ ಸಂಗತಿ' ಎಂದು ಟ್ವೀಟ್‌ನಲ್ಲಿ ಕುಟುಕಿದ್ದಾರೆ.

ಟ್ವೀಟ್ ಬಗ್ಗೆ ಶಾಸಕ ಬಿ.ಶಿವಣ್ಣ ಅವರು ಪ್ರತಿಕ್ರಿಯಿಸಿ, 'ಆನೇಕಲ್ ವಿಧಾನಸಭಾ ಕ್ಷೇತ್ರದ ಬಹುತೇಕ ರಸ್ತೆಗಳನ್ನು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸರ್ವ ಋತು ರಸ್ತೆಗಳನ್ನಾಗಿ ಮಾಡಲಾಗಿತ್ತು. ಸರ್ಕಾರ ಹೆಚ್ಚಿನ ಅನುದಾನ ಬಿಡುಗಡೆ ಮಾಡಿತ್ತು. ಆದರೆ ಬಿಜೆಪಿ ಸರ್ಕಾರ ಆಡಳಿತಕ್ಕೆ ಬಂದ ರಸ್ತೆಗಳ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಹುಸ್ಕೂರು ಗೇಟ್‌ನಿಂದ ಹುಸ್ಕೂರುವರೆಗಿನ ಸುಮಾರು 4 ಕಿ.ಮೀ. ರಸ್ತೆ ಅಭಿವೃದ್ಧಿಗೆ ಕ್ರಿಯಾ ಯೋಜನೆ ಸಿದ್ಧಪಡಿಸಿ ಸಲ್ಲಿಸಲಾಗಿದೆ. ಆದರೆ ಮಂಜೂರಾತಿ ದೊರೆತಿಲ್ಲ' ಎಂದರು.

ಮಹಾನಗರಗಳಲ್ಲಿ ಮುಂಬೈ ಬಳಿಕ ಬೆಂಗಳೂರಿನಲ್ಲಿ ಅಧಿಕ ಸಕ್ರಿಯ ಪ್ರಕರಣ

ಕೋವಿಡ್: ದೃಢ ಪ್ರಮಾಣ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಾರದಿಂದ ಕೋವಿಡ್ ಹೊಸ ಪ್ರಕರಣಗಳ ಜತೆಗೆ ಸೋಂಕು ದೃಢ ಪ್ರಮಾಣವೂ ಏರುಮುಖ ಮಾಡಿದೆ. ಇದರಿಂದಾಗಿ ಅಧಿಕ ಸಕ್ರಿಯ ಪ್ರಕರಣಗಳನ್ನು ಹೊಂದಿರುವ ಮಹಾನಗರಗಳಲ್ಲಿ ಮುಂಬೈ ನಂತರದ ಸ್ಥಾನವನ್ನು ಬೆಂಗಳೂರು ಪಡೆದಿದೆ.

ಕೋವಿಡ್ ಮೂರನೇ ಅಲೆಯಲ್ಲಿ ಸೋಂಕು ದೃಢ ಪ್ರಮಾಣ ದಿಢೀರ್ ಏರಿಕೆಯಾಗಿತ್ತು. ಜನವರಿ ಮೊದಲ ವಾರದಲ್ಲಿ ಶೇ 0.49ರಷ್ಟಿದ್ದ ದೃಢ ಪ್ರಮಾಣ, ತಿಂಗಳಾಂತ್ಯಕ್ಕೆ ಶೇ 22.39ಕ್ಕೆ ಏರಿಕೆಯಾಗಿತ್ತು. ಮರಣ ಪ್ರಮಾಣವು ಶೇ 1ರ ಗಡಿಯೊಳಗೆಯಿತ್ತು. ಏಪ್ರಿಲ್, ಮೇ ತಿಂಗಳಲ್ಲಿ ಬಹುತೇಕ ದಿನಗಳು ಸೋಂಕು ದೃಢ ಪ್ರಮಾಣವೂ ಶೇ 1ಕ್ಕಿಂತ ಕಡಿಮೆಯಿತ್ತು. ಈಗ ಆ ಪ್ರಮಾಣ ಏರುಗತಿ ಪಡೆದು, ಶೇ 1.62ಕ್ಕೆ ತಲುಪಿದೆ.

ಸಾವಿರದ ಆಸುಪಾಸಿನಲ್ಲಿದ್ದ ಸಕ್ರಿಯ ಪ್ರಕರಣಗಳು ಈಗ ಎರಡು ಸಾವಿರದ ಗಡಿ ದಾಟಿದೆ. ಮುಂಬೈನಲ್ಲಿ 4 ಸಾವಿರಕ್ಕೂ ಅಧಿಕ ಸೋಂಕಿತರಿದ್ದಾರೆ. ನವದೆಹಲಿಯಲ್ಲಿ ಈ ಸಂಖ್ಯೆ 1,500 ಆಸುಪಾಸಿನಲ್ಲಿದೆ. ಚೆನ್ನೈ ಮತ್ತು ಕೋಲ್ಕತ್ತದಲ್ಲಿ 500ಕ್ಕಿಂತ ಕಡಿಮೆ ಸೋಂಕಿತರಿದ್ದಾರೆ.

ಪರೀಕ್ಷೆ ಹೆಚ್ಚಳ: ಮುನ್ನೆಚ್ಚರಿಕಾ ಕ್ರಮವಾಗಿ ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಹೆಚ್ಚಳ ಮಾಡುವಂತೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯರು ಶಿಫಾರಸು ಮಾಡಿದ್ದಾರೆ.

ಮೇ ತಿಂಗಳಲ್ಲಿ 10 ಸಾವಿರದ ಆಸುಪಾಸಿನಲ್ಲಿದ್ದ ಕೋವಿಡ್ ಪರೀಕ್ಷೆಗಳ ಸಂಖ್ಯೆ, ವಾರದಿಂದ 14 ಸಾವಿರದ ಆಸುಪಾಸಿನಲ್ಲಿದೆ.

ನಗರದಲ್ಲಿ ಈವರೆಗೆ ವರದಿಯಾದ 17.88 ಲಕ್ಷ ಕೋವಿಡ್ ಪ್ರಕರಣಗಳಲ್ಲಿ 17.69 ಲಕ್ಷಕ್ಕೂ ಅಧಿಕ ಮಂದಿ ಗುಣಮುಖರಾಗಿದ್ದಾರೆ. ಚೇತರಿಕೆ ಪ್ರಮಾಣ ಶೇ 98.92ರಷ್ಟಿದೆ.

ಐದು ದಿನಗಳಲ್ಲಿ 1,178 ಮಂದಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಈ ಅವಧಿಯಲ್ಲಿ ಒಬ್ಬರು ಮಾತ್ರ ಕೋವಿಡ್‌ನಿಂದ ಮೃತಪಟ್ಟಿರುವುದು ವರದಿಯಾಗಿದೆ.

'ವೈರಾಣುವಿನ ವಂಶವಾಹಿ ಸಂರಚನಾ ವಿಶ್ಲೇಷಣೆಯಲ್ಲಿ (ಜೀನೋಮ್ ಸೀಕ್ವೆನ್ಸಿಂಗ್) ಹೊಸ ರೂಪಾಂತರಿ ಪತ್ತೆಯಾಗಿಲ್ಲ. ಆದರೂ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸಿ, ಅಧಿಕ ಪ್ರಕರಣಗಳು ವರದಿಯಾಗುತ್ತಿರುವ ಕಡೆ ನಿಗಾ ಇಡಲಾಗಿದೆ' ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್ ಅವರು ತಿಳಿಸಿದರು.

ಆಸ್ಪತ್ರೆ ಚಿಕಿತ್ಸೆ ವಿವರ

21	ಚಿಕಿತ್ಸೆ ಪಡೆಯುತ್ತಿರುವವರು
4	ಐಸಿಯು ಹಾಸಿಗೆಯಲ್ಲಿರುವವರು
17	ಸಾಮಾನ್ಯ ಹಾಸಿಗೆಯಲ್ಲಿರುವವರು

ಸೋಂಕು ದೃಢ ಪ್ರಮಾಣ ಏರಿಕೆ



ಕೋವಿಡ್ ಪರೀಕ್ಷೆಗಳನ್ನು ಹೆಚ್ಚಳ ಮಾಡಲಾಗಿದೆ. ಪ್ರಕರಣಗಳ ಸಂಖ್ಯೆ ಹೆಚ್ಚಳವಾದರೂ ಆಸ್ಪತ್ರೆ ದಾಖಲಾತಿ ಕಡಿಮೆಯಿದೆ **ಡಿ. ರಂದೀಪ್** ಆರೋಗ್ಯ ಇಲಾಖೆ ಆಯುಕ್ತ

ಕೋವಿಡ್: ಹೆಚ್ಚಿನ ನಿಗಾಕ್ಕೆ ಶಿಫಾರಸು

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಿರುವುದರಿಂದ ಒಂದು ವಾರ ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಿ, ಸೋಂಕಿತರ ಮೇಲೆ ನಿಗಾ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಶಿಫಾರಸು ಮಾಡಿದೆ.

ಡಾ.ಎಂ.ಕೆ. ಸುದರ್ಶನ್ ನೇತೃತ್ವದ ಸಮಿತಿ ಸೋಮವಾರ ಸಭೆ ನಡೆಸಿ, ಸದ್ಯದ ಪರಿಸ್ಥಿತಿ ಅವಲೋಕಿಸಿತು. ಆರೋಗ್ಯ ಇಲಾಖೆಯ ಅಧಿಕಾರಿಗಳಿಂದ ಸೋಂಕು ದೃಢ ಪ್ರಮಾಣ, ಪರೀಕ್ಷೆ ಸೇರಿ ವಿವಿಧ ವಿಷಯಗಳ ಬಗ್ಗೆ ಸಮಿತಿಯ ಸದಸ್ಯರು ಮಾಹಿತಿ ಪಡೆದುಕೊಂಡರು. ಮುಂಬೈ, ದೆಹಲಿ ಸೇರಿ ದೇಶದ ವಿವಿಧೆಡೆ ಕೋವಿಡ್ ಹೆಚ್ಚಳವಾಗುತ್ತಿರುವ ಬಗ್ಗೆ ತಜ್ಞರು ಕಳವಳ ವ್ಯಕ್ತಪಡಿಸಿದರು.

'ಮೊದಲ ಮೂರು ಅಲೆಯಲ್ಲಿ ಬೆಂಗಳೂರಿನಲ್ಲಿಯೇ ಅಧಿಕ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿ, ಬಳಿಕ ಜಿಲ್ಲೆಗಳಿಗೆ ಸೋಂಕು ಹರಡಿತ್ತು. ಹೀಗಾಗಿ, ಈ ಬಾರಿ ಸೋಂಕು ಸಮುದಾಯದ ಹಂತದಲ್ಲಿ ಹರಡದಂತೆ ಈಗಲೇ ಕ್ರಮಗಳನ್ನು ಕೈಗೊಳ್ಳಬೇಕು. ಆಸ್ಪತ್ರೆ ದಾಖಲಾತಿ ಕಡಿಮೆ ಇರುವುದರಿಂದ ಆತಂಕ ಪಡಬೇಕಾದ ಪರಿಸ್ಥಿತಿಯಿಲ್ಲ' ಎಂದು ತಜ್ಞರು ಅಭಿಮತ ವ್ಯಕ್ತಪಡಿಸಿದರು. 'ಕೋವಿಡ್ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ನೋಡಿಕೊಳ್ಳಬೇಕು. ಲಸಿಕೆ ವಿತರಣೆಗೆ ಆದ್ಯತೆ ನೀಡಬೇಕು' ಎಂದು ತಜ್ಞರು ತಿಳಿಸಿದರು.

ಮಾಸ್ಕ್ ಕಡ್ಡಾಯ: ದಂಡ ಇಲ್ಲ

ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿದ್ದು, ಕೋವಿಡ್ ಪರೀಕ್ಷೆ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಜಾಗೃತಿ ಹೆಚ್ಚಿಸಲಾಗುವುದು ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಘನತ್ಯಾಜ್ಯ) ಡಾ.ಹರೀಶ್‌ಕುಮಾರ್ ತಿಳಿಸಿದರು.

ದಿನಕ್ಕೆ 220 ಪ್ರಕರಣಗಳು ದಾಖಲಾಗುತ್ತಿದ್ದು, ಜನ ಆತಂಕಕ್ಕೆ ಒಳಗಾಗಬೇಕಿಲ್ಲ. ದಿನಕ್ಕೆ 16 ಸಾವಿರ ಜನರಿಗೆ ಕೋವಿಡ್ ಪರೀಕ್ಷೆ ಮಾಡಲಾಗುತ್ತಿತ್ತು. ಅದನ್ನು 20 ಸಾವಿರಕ್ಕೆ ಹೆಚ್ಚಿಸಲಾಗುತ್ತಿದೆ. ಮಾಸ್ಕ್ ಬಳಕೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುವುದು ಎಂದರು. ಕಡ್ಡಾಯವಾಗಿ ಮಾಸ್ಕ್ ಬಳಕೆ ಮಾಡಬೇಕಿದ್ದು, ಅದನ್ನು ಮಾರ್ಷಲ್‌ಗಳು ನಿಭಾಯಿಸಲಿದ್ದಾರೆ. ದಂಡ ಹಾಕದೆ ಜನರಿಗೆ ತಿಳುವಳಿಕೆ ನೀಡಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಸುದ್ದಿ 2 ನಿಮಿಷ

6–14 ವರ್ಷ ಮಕ್ಕಳಿಗೆ ಸೆರೋ ಸಮೀಕ್ಷೆ ಪ್ರಾರಂಭ

ಬೆಂಗಳೂರು: ಮಕ್ಕಳ ಮೇಲೆ ಕೊರೊನಾ ಸೋಂಕಿನ ತೀವ್ರತೆ ಹಾಗೂ ಪರಿಣಾಮದ ಬಗ್ಗೆ ತಿಳಿಯಲು ಆರೋಗ್ಯ ಇಲಾಖೆಯು ಮತ್ತೊಂದು ಹಂತದ ಸೆರೋ ಸಮೀಕ್ಷೆ ಪ್ರಾರಂಭಿಸಿದ್ದು, 6 ರಿಂದ 14 ವರ್ಷದವರು ಈ ಸಮೀಕ್ಷೆಗೆ ಒಳಪಡುತ್ತಿದ್ದಾರೆ.

ಮಕ್ಕಳಲ್ಲಿ ಸೋಂಕು ಹರಡುವಿಕೆ, ಪ್ರತಿಕಾಯ ಅಭಿವೃದ್ಧಿ ಸೇರಿದಂತೆ ಕೋವಿಡ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಲೆ ಹಾಕಿ, ವಿಶ್ಲೇಷಣೆ ಮಾಡಲಾಗುತ್ತದೆ. ಎಲ್ಲ ಜಿಲ್ಲೆಗಳಲ್ಲಿ ಈ ಸಮೀಕ್ಷೆ ನಡೆಯಲಿದ್ದು, ದತ್ತಾಂಶ ಸಂಗ್ರಹಿಸಲು ಪ್ರತ್ಯೇಕ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ.

ಕೋವಿಡ್ ಪೀಡಿತರಾಗಿರದ, ಆದರೆ ರೋಗ ಲಕ್ಷಣಗಳನ್ನು ಹೊಂದಿರುವ ಮಕ್ಕಳನ್ನೂ ಸಮೀಕ್ಷೆಗೆ ಒಳಪಡಿಸಿ, ಗಂಟಲು ಹಾಗೂ ರಕ್ತದ ಮಾದರಿಗಳನ್ನು ಸಂಗ್ರಹಿಸಲಾಗುತ್ತದೆ. ಮಕ್ಕಳಲ್ಲಿ ಕಾಣಿಸಿಕೊಳ್ಳುವ ಮಧುಮೇಹದ ಬಗ್ಗೆಯೂ ಅಧ್ಯಯನ ನಡೆಸಲಾಗುತ್ತದೆ.

'ಕೋವಿಡ್ ಮೂರನೇ ಅಲೆಯಲ್ಲಿ ಸೋಂಕಿನ ತೀವ್ರತೆ ವಯಸ್ಕರ ಮೇಲೆ ಅಷ್ಟಾಗಿ ಇರಲಿಲ್ಲ. ಹಾಗಾಗಿ, ವಯಸ್ಕರನ್ನು ಸಮೀಕ್ಷೆಯಿಂದ ಹೊರಗಿಡಲಾಗಿದೆ. 18 ವರ್ಷಗಳು ಮೇಲ್ಪಟ್ಟವರಲ್ಲಿ ಬಹುತೇಕರು ಲಸಿಕೆ ಪಡೆದುಕೊಂಡಿದ್ದಾರೆ. ಲಸಿಕೆ ಪಡೆಯದ 6 ರಿಂದ 14 ವರ್ಷದ 5,072 ಮಂದಿಯನ್ನು ಸಮೀಕ್ಷೆಗೆ ಒಳಪಡಿಸುವ ಗುರಿಯಿದೆ' ಎಂದು ಇಲಾಖೆ ಆಯುಕ್ತ ಡಿ. ರಂದೀಪ್ ತಿಳಿಸಿದ್ದಾರೆ.

ಗಿಡ ನೆಡಲು ಪೇಜಾವರ ಶ್ರೀ ಸಲಹೆ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆಯ ಸೌಂದರ್ಯ ಸಮೂಹ ಶಿಕ್ಷಣ ಸಂಸ್ಥೆಯಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು.

ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿ, 'ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದೊಂದು ಗಿಡವನ್ನು ನೆಟ್ಟು ಪೋಷಿಸಿ, ಬೆಳೆಸಬೇಕು. ತಮ್ಮ ಸುತ್ತಮುತ್ತಲಿನ ಪರಿಸರ ಸ್ವಚ್ಛವಾಗಿಟ್ಟುಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಜಾಥಾ ನಡೆಸಿ ಸುಮಾರು ಎರಡು ಸಾವಿರ ಸಸಿಗಳನ್ನು ವಿತರಣೆ ಮಾಡಿದರು.

ಬಿಬಿಎಂಪಿಯ ಜಂಟಿ ಆಯುಕ್ತ ಜಗದೀಶ್, ಬಾಗಲಗುಂಟೆ ಪೊಲೀಸ್ ಠಾಣೆಯ ಪಿಎಸ್‌ಐ ಶ್ರೀಕಂಠೇಗೌಡ, ಸಂಸ್ಥೆಯ ಕಾರ್ಯನಿರ್ವಾಹಕ ಅಧಿಕಾರಿ ಕೀರ್ತನ್ ಕುಮಾರ್ ಹಾಜರಿದ್ದರು.

ಕೋವಿಡ್ : 23 ಶಿಕ್ಷಕರಿಗೆ ಪರಿಹಾರ ನೀಡಲು ₹ 6.90 ಕೋಟಿಗೆ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ವಾರಿಯರ್ಸ್‌ಗಳಾಗಿ ಕರ್ತವ್ಯ ನಿರ್ವಹಿಸುವ ವೇಳೆ ಮೃತಪಟ್ಟ ಸರ್ಕಾರಿ ಪ್ರೌಢ ಶಾಲೆಗಳ 23 ಶಿಕ್ಷಕರಿಗೆ ತಲಾ ₹ 30 ಲಕ್ಷದಂತೆ ಪರಿಹಾರ ನೀಡಲು ₹ 6.90 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಇಲಾಖೆಯ ಆಯುಕ್ತರು ಪತ್ರ ಬರೆದಿದ್ದಾರೆ.

2021–22 ನೇ ಸಾಲಿನಲ್ಲಿ ಶಾಲಾ ನಿರ್ವಹಣೆಗೆ (ಸಾದಿಲ್ವಾರು ವೆಚ್ಚ) ಅನುದಾನ ನಿಗದಿಗೊಳಿಸಿರಲಿಲ್ಲ. ಹೀಗಾಗಿ, ಸರ್ಕಾರಿ ಪ್ರೌಢ ಶಾಲೆಗಳಲ್ಲಿ ವಿದ್ಯುತ್ ವೆಚ್ಚ, ನೀರಿನ ವೆಚ್ಚ, ಶೌಚಾಲಯ ಸ್ವಚ್ಛತೆಯ ವೆಚ್ಚ, ಕರ್ತವ್ಯದಲ್ಲಿದ್ದಾಗ ಮೃತಪಟ್ಟ ನೌಕರರ ಶವ ಸಂಸ್ಕಾರಕ್ಕೆ ವೆಚ್ಚಕ್ಕೆ ಸಹಾಯಧನ ಹಾಗೂ ಕೋವಿಡ್ ವಾರಿಯರ್ಸ್‌ಗಳಾಗಿ ಕರ್ತವ್ಯ ನಿರ್ವಹಿಸುವಾಗ ಮೃತಪಟ್ಟವರಿಗೆ ಪರಿಹಾರ ನೀಡಲು ಜಿಲ್ಲಾ ಕಚೇರಿಗಳಿಂದ ಪಡೆದ ಮಾಹಿತಿಯಂತೆ ₹ 29.25 ಕೋಟಿ ಅನುದಾನಕ್ಕೆ ಬೇಡಿಕೆ ಸಲ್ಲಿಸಲಾಗಿತ್ತು. ಆದರೆ, ಸರ್ಕಾರದಿಂದ ಅನುದಾನ ಬಿಡುಗಡೆ ಆಗಿರಲಿಲ್ಲ.

'2022– 23ನೇ ಸಾಲಿನಲ್ಲಿ ಈ ವೆಚ್ಚಗಳಿಗೆ ₹ 24.76 ಕೋಟಿ ಅನುದಾನ ನಿಗದಿಪಡಿಸಲಾಗಿದೆ. ಜಿಲ್ಲೆಗಳಿಂದ ಪಡೆದ ಮಾಹಿತಿಯ ಅನ್ವಯ ಈ ಅನುದಾನದಲ್ಲಿ, ಪ್ರತಿ ಶಾಲೆಗಳಿಗೆ ತಲಾ ₹ 60 ಸಾವಿರದಂತೆ ಸಾದಿಲ್ವಾರು ವೆಚ್ಚಗಳಿಗೆಂದು ಅನುದಾನ ನೀಡಲಾಗಿದೆ. ಕರ್ತವ್ಯದಲ್ಲಿದ್ದಾಗ ಮೃತಪಟ್ಟ ನೌಕರರ ಶವ ಸಂಸ್ಕಾರದ ವೆಚ್ಚದ ಸಹಾಯಧನಕ್ಕೆ ಈ ಮೊತ್ತದಿಂದ ಹಣ ಬಳಸಿಕೊಳ್ಳಲಾಗಿದೆ. ಆದರೆ, ಕೋವಿಡ್ ವಾರಿಯರ್ಸ್‌ಗಳಾಗಿ ಕರ್ತವ್ಯ ನಿರ್ವಹಿಸುವ ವೇಳೆ ಮೃತಪಟ್ಟ ಸರ್ಕಾರಿ ನೌಕರರಿಗೆ ಪರಿಹಾರಧನ ನೀಡಲು ಅನುದಾನ ಲಭ್ಯ ಇಲ್ಲದಂತಾಗಿದೆ' ಎಂದೂ ಪತ್ರದಲ್ಲಿ ಅವರು ಉಲ್ಲೇಖಿಸಿದ್ದಾರೆ.

ಶಾಸಕರ ಜೊತೆ ಮಹಿಳೆ ವಾಗ್ವಾದ

ಬೆಂಗಳೂರು: ಕನಕಗಿರಿ ವಿಧಾನಸಭಾ ಕ್ಷೇತ್ರದ ಶಾಸಕ ಬಸವರಾಜ ದಢೇಸೂಗೂರು ಹಾಗೂ ಮಹಿಳಾ ಅಧಿಕಾರಿಯೊಬ್ಬರ ನಡುವೆ ಸೋಮವಾರ ವಾಗ್ವಾದ ನಡೆದಿದೆ.

'ನಗರದ ಶಾಸಕರ ಭವನದಲ್ಲಿರುವ ಕೊಠಡಿ ಬಳಿ ಬಂದಿದ್ದ ಮಹಿಳಾ ಅಧಿಕಾರಿ, 'ನನ್ನ ಜೀವನ ಹಾಳು ಮಾಡಿದ್ದೀಯ, ನನಗೆ ನ್ಯಾಯ ಬೇಕು' ಎಂದು ಶಾಸಕ ದಢೇಸೂಗೂರು ಜೊತೆ ವಾಗ್ವಾದಕ್ಕೆ ಇಳಿದಿದ್ದರು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು. ಪೊಲೀಸರು, ಸ್ಥಳಕ್ಕೆ ಬಂದು ಪರಿಸ್ಥಿತಿ ನಿಭಾಯಿಸಿದರು' ಎಂದೂ ತಿಳಿಸಿದರು.

ದಾಖಲಾಗದ ದೂರು: 'ಶಾಸಕ ದಢೇಸೂಗೂರು ಹಾಗೂ ಮಹಿಳೆ ನಡುವೆ ಹಲವು ದಿನಗಳಿಂದ ವೈಷಮ್ಯ ಬೆಳೆದಿದೆ. ಇಬ್ಬರ ನಡುವಿನ ಪ್ರಕರಣ ನ್ಯಾಯಾಲಯದಲ್ಲಿದೆ. ಘಟನೆ ಸಂಬಂಧ ಯಾರೊಬ್ಬರೂ ದೂರು ನೀಡಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಪುನೀತ್ ರಾಜಕುಮಾರ್, ಸಂಚಾರಿ ವಿಜಯ್ ಸ್ಮರಣಾರ್ಥ

'ಎಲ್ಲ ಜಿಲ್ಲೆಗಳಿಗೂ ಸಂಚಾರಿ ಕ್ಲಿನಿಕ್ ವಿಸ್ತರಣೆ ಚಿಂತನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಥಳದಲ್ಲೇ ಆರೋಗ್ಯ ತಪಾಸಣೆ ಹಾಗೂ ಪರಿಹಾರ ಒದಗಿಸುವ ವ್ಯವಸ್ಥೆ ಗ್ರಾಮೀಣ ಪ್ರದೇಶಗಳಲ್ಲಿಯೂ ಅಗತ್ಯವಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸೌಧದಲ್ಲಿ ರೋಟರಿ ಬೆಂಗಳೂರು ಹೈಗ್ರೌಂಡ್ಸ್, ಇನ್ಫೋಸಿಸ್ ಫೌಂಡೇಷನ್ ಮತ್ತು ಆರೋಗ್ಯ ಇಲಾಖೆ ಸಹಯೋಗದಲ್ಲಿ ಸಿಎಸ್‌ಆರ್ ಯೋಜನೆಯಡಿ ಒದಗಿಸಿರುವ 'ಲ್ಯಾಬ್ ಬಿಲ್ಟ್ ಆನ್ ವೀಲ್ಸ್ - ಮೊಬೈಲ್ ಕ್ಲಿನಿಕ್' ಉದ್ಘಾಟಿಸಿ ಅವರು ಮಾತನಾಡಿದರು.

'ಗಾಲಿಗಳ ಮೇಲೆ ಆಸ್ಪತ್ರೆ ಯೋಜನೆಗೆ ಈ ಬಾರಿಯ ಬಜೆಟ್‌ನಲ್ಲಿ ಅನುದಾನ ಮೀಸಲಿರಿಸಲಾಗಿದೆ. ಬಸ್‌ನಲ್ಲಿ ಪ್ರಯೋಗಾಲಯ ಹಾಗೂ ಆರೋಗ್ಯ ಸೇವಾ ಸೌಲಭ್ಯಗಳನ್ನು ನಾಲ್ಕು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗುವುದು. ಪ್ರಯೋಗ ಯಶಸ್ವಿಯಾದರೆ, ಇತರ ಜಿಲ್ಲೆಗಳಿಗೂ ವಿಸ್ತರಿಸುವ ಚಿಂತನೆ ಇದೆ' ಎಂದು ಹೇಳಿದರು.

'ಗ್ರಾಮೀಣ ಪ್ರದೇಶಗಳಲ್ಲಿ ಸಂಚಾರಿ ಕ್ಲಿನಿಕ್‌ನ ಉಪಯೋಗ ಅರಿತು ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು ಮಹಾನಗರ ಪಾಲಿಕೆಗಳಿಗೆ ಆರೋಗ್ಯ ಇಲಾಖೆ ಅವುಗಳನ್ನು ಹಸ್ತಾಂತರಿಸುತ್ತಿದೆ. ರಾಜ್ಯದಲ್ಲಿ ಇನ್ಫೋಸಿಸ್ ಪ್ರತಿಷ್ಠಾನವು ಶಿಕ್ಷಣ, ಆರೋಗ್ಯ ಮತ್ತು ಪರಿಸರ ಸಂರಕ್ಷಣೆಯಲ್ಲಿ ಬಹಳ ದೊಡ್ಡ ಪಾತ್ರ ವಹಿಸಿದೆ. ಜಯದೇವ ಸಂಸ್ಥೆಯಲ್ಲಿ 500 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆ ಒದಗಿಸಿದೆ. ಕಿದ್ವಾಯಿ, ನಿಮ್ಹಾನ್ಸ್ ಸಂಸ್ಥೆಗಳಿಗೆ ಧರ್ಮಛತ್ರ ನಿರ್ಮಿಸಿದೆ' ಎಂದು ಹೇಳಿದರು.

ಸಂಚಾರಿ ಕ್ಲಿನಿಕ್: ಇನ್ಫೋಸಿಸ್ ಫೌಂಡೇಷನ್ ₹ 4 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಒಂದು ಮೊಬೈಲ್ ಕ್ಲಿನಿಕ್‌ಗೆ ಚಾಲನೆ ನೀಡಲಾಗಿದೆ. ಈ ಕ್ಲಿನಿಕ್ ಅನ್ನು ಪುನೀತ್ ರಾಜಕುಮಾರ್ ಮತ್ತು ಸಂಚಾರಿ ವಿಜಯ್ ಸ್ಮರಣಾರ್ಥವಾಗಿ ಫೌಂಡೇಷನ್ ನೀಡಿದೆ. ಒಂದೇ ಸೂರಿನಡಿ– ಕ್ಲಿನಿಕ್, ಟೆಲಿ ಮೆಡಿಸಿನ್, ಫಾರ್ಮಸಿ, ಲಸಿಕೆ ಮತ್ತು ಇತರ ಔಷಧಿಗಳನ್ನು ಕೊಂಡೊಯ್ಯಲು ಸಹಕಾರಿಯಾಗುವಂತೆ -2 ಡಿಗ್ರಿಯಿಂದ -18 ಡಿಗ್ರಿ ಸೆಲ್ಸಿಯಸ್‌ನ ರೆಫ್ರಿಜರೇಟರ್, ತುರ್ತುಚಿಕಿತ್ಸೆಗಾಗಿ ಆಮ್ಲಜನಕ ಸಹಿತ ಕನಿಷ್ಠ ಶಸ್ತ್ರಚಿಕಿತ್ಸಾ ವಿಧಾನ ಒದಗಿಸುವ ಪ್ರತ್ಯೇಕ ಕೊಠಡಿ, ವಿದ್ಯುತ್ ಸಂಪರ್ಕ ಇಲ್ಲದಿರುವ ಕಡೆ ಉಪಯೋಗಿಸುವಂತೆ ಕೆಪಿ ಜನರೇಟರ್ ಮತ್ತು ಯುಪಿಎಸ್ ವ್ಯವಸ್ಥೆಯನ್ನು ಈ ಕ್ಲಿನಿಕ್ ಹೊಂದಿದೆ.

ರೆಸಾರ್ಟ್ ವಾಸ್ತವ್ಯಕ್ಕೆ ಶಿವಸೇನೆಯ ಶಾಸಕರು

ಮುಂಬೈ: ಆಡಳಿತರೂಢ ಮೈತ್ರಿಕೂಟದ ಶಿವಸೇನೆಯ ಶಾಸಕರು ಮತ್ತು ಕೆಲ ಪಕ್ಷೇತರರು ಸೋಮವಾರ ಬಸ್‌ನಲ್ಲಿ ರೆಸಾರ್ಟ್ ವಾಸ್ತವ್ಯಕ್ಕೆ ತೆರಳಿದರು.

ಮಹಾರಾಷ್ಟ್ರ ವಿಧಾನಸಭೆಯಿಂದ ರಾಜ್ಯಸಭೆಯ ಆರು ಸ್ಥಾನಗಳಿಗೆ ಇದೇ 10ರಂದು ದ್ವೈವಾರ್ಷಿಕ ಚುನಾವಣೆ ನಡೆಯಲಿದೆ. ಬಿಜೆಪಿಯು ಶಾಸಕರ ಖರೀದಿಗೆ ಮುಂದಾಗಬಹುದು ಎಂಬ ಸೂಚನೆ ಹಿನ್ನೆಲೆಯಲ್ಲಿ ಶಾಸಕರನ್ನು ರೆಸಾರ್ಟ್‌ಗೆ ಒಯ್ಯಲಾಗಿದೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ.

ಗೋವಿಂದರಾಜನಗರ ಅಭಿವೃದ್ಧಿಗೆ ₹200 ಕೋಟಿ: ವಿ.ಸೋಮಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಅವರು ₹200 ಕೋಟಿ ಅನುದಾನ ನೀಡಿದ್ದಾರೆ ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ನಾಗರಬಾವಿ ವಾರ್ಡ್‌ನಲ್ಲಿ ನಿರ್ಮಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮೂಡಲಪಾಳ್ಯ ವಾರ್ಡ್‌ನಲ್ಲಿ ನೆಲಮಟ್ಟದ ಜಲ ಸಂಗ್ರಹಾಗಾರ, ಕಾವೇರಿಪುರದಲ್ಲಿನ ನಾಡಪ್ರಭು ಕೆಂಪೇಗೌಡ ಬಹುಪಯೋಗಿ ಕಟ್ಟಡಗಳ ಉದ್ಘಾಟನೆ ಸಮಾರಂಭದಲ್ಲಿ ಮಾತನಾಡಿದರು.

ಕೆಂಪೇಗೌಡರ ಹೆಸರಿನಲ್ಲಿ ಬಹು ಉಪಯೋಗಿ ಬಸ್ ನಿಲ್ದಾಣ ನಿರ್ಮಿಸಲಾಗಿದೆ. 3.5 ದಶಲಕ್ಷ ಲೀಟರ್ ನೀರು ಸಂಗ್ರಹ ಸಾಮರ್ಥ್ಯದ ಜಲಸಂಗ್ರಹಾಗಾರ, 52 ದೇವಸ್ಥಾನ ಜೀರ್ಣೋದ್ಧಾರ ಮಾಡಲಾಗಿದೆ .75 ಶುದ್ಧ ಕುಡಿಯುವ ನೀರಿನ ಘಟಕ, 17 ಗ್ರಂಥಾಲಯ, 24 ಬ್ಯಾಡ್ಮಿಂಟನ್ ಅಂಕಣ, 17 ವ್ಯಾಯಾಮ ಕೇಂದ್ರ, ಬಾಲಗಂಗಾಧರನಾಥ ಸ್ವಾಮೀಜಿ ಕ್ರೀಡಾಂಗಣ ಮತ್ತು ಪೇಜಾವರ ಶ್ರೀ ಕ್ರೀಡಾಂಗಣ ನಿರ್ಮಿಸಲಾಗಿದೆ ಎಂದು ವಿವರಿಸಿದರು.

ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮಾತನಾಡಿ, 'ಖಾಲಿ ಜಾಗಗಳನ್ನು ಕಂಡರೆ ಅದನ್ನು ಕಬಳಿಸಲು ಯೋಚಿಸುವ ರಾಜಕಾರಣಿಗಳು ಇದ್ದಾರೆ. ವಿ.ಸೋಮಣ್ಣ ಅವರು ಅದನ್ನು ಸಾರ್ವಜನಿಕರ ಉಪಯೋಗಕ್ಕೆ ಬಳಸುವುದು ಹೇಗೆ ಎಂದು ಯೋಚಿಸುತ್ತಾರೆ. ಅದರಿಂದಲೇ ಇಷ್ಟೆಲ್ಲಾ ಅಭಿವೃದ್ಧಿಯನ್ನು ಕ್ಷೇತ್ರ ಕಂಡಿದೆ' ಎಂದು ಬಣ್ಣಿಸಿದರು.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಮಾನಸನಗರ ಬಡಾವಣೆಯಲ್ಲಿ ಬಿಬಿಎಂಪಿ ನಿರ್ಮಿಸಿರುವ ಸರ್ಕಾರಿ ಶಾಲಾ ಕಟ್ಟಡ ಉದ್ಘಾಟಿಸಿದ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವೃದ್ಧೆಯೊಬ್ಬರ ಕಷ್ಟ–ಸುಖ ಆಲಿಸಿದರು. ವಸತಿ ಸಚಿವ ವಿ.ಸೋಮಣ್ಣ ಜತೆಯಲ್ಲಿದ್ದರು

ನಾನು ಪ್ರಜ್ಞಾವಂತ ದಲಿತ: ಪ್ರಿಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯವರಿಗೆ ಕಾನ್ವೆಂಟ್‌ನಲ್ಲಿ ಓದುವ ದಲಿತರು ಇಷ್ಟ ಇಲ್ವಾ' ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ದಲಿತರು ಎಲ್ಲಿ ಇರಬೇಕು ಎಂದು ನೀವು ಬಯಸುತ್ತೀರಿ? ಎಂದೂ ಆಕ್ರೋಶ ವ್ಯಕ್ತಪಡಿಸಿದರು.

'ಪ್ರಿಯಾಂಕ್ ಖರ್ಗೆ ಕಾನ್ವೆಂಟ್ ದಲಿತ' ಎಂದು ಸಚಿವ ಸುನೀಲ್ ಕುಮಾರ್ ಹೇಳಿಕೆಗೆ ತಿರುಗೇಟು ನೀಡಿದ ಪ್ರಿಯಾಂಕ್, 'ಸುನಿಲ್ ಕುಮಾರ್ ನನ್ನ ಬಗ್ಗೆ ವೈಯಕ್ತಿಕವಾಗಿ ಮಾತನಾಡಿದ್ದಾರೆ. ಕಾನ್ವೆಂಟ್ ದಲಿತ ಎಂದು ನನ್ನ ಬಗ್ಗೆ ಹೇಳಿದ್ದಾರೆ. ಇಂಥ ಹೇಳಿಕೆಗಳನ್ನು ಮಂತ್ರಿಗಳಿಗೆ ಬಿಜೆಪಿ ಐಟಿ ಸೆಲ್ ಹೇಳಿಕೊಡುತ್ತಾ? ಏಕೆ ದಲಿತರು ಬೆಂಗಳೂರಲ್ಲಿ ಹುಟ್ಟಬಾರದಾ? ಮೈಸೂರು ದಲಿತರು ಬೇರೆ, ಬೆಂಗಳೂರು ದಲಿತರು ಬೇರೆಯೇ? ಎಂದೂ ಅವರು ಪ್ರಶ್ನಿಸಿದರು.

ಪ್ರಿಯಾಂಕ್ ಖರ್ಗೆ

'ನಾನು ಓದಿದ್ದು ಕಾನ್ವೆಂಟ್‌ನಲ್ಲಿ ಅಲ್ಲ. ಉಡುಪಿಯ ಅದಮಾರು ಮಠದ ಶಾಲೆ ಬೆಂಗಳೂರಲ್ಲಿದೆ. ಆ ಅದಮಾರು ಮಠದ ಶಾಲೆಯಲ್ಲಿ ಓದಿದ್ದೇನೆ. ನಾನು ಪ್ರಜ್ಞಾವಂತ ದಲಿತ, ನಾನು ಕಾಸ್ಮೋಪಾಲಿಟನ್ ದಲಿತ. ಷಿಕಾಗೋದಿಂದ ಹಿಡಿದು ಚಿತ್ತಾಪುರದವರೆಗೆ ಯಾವುದೇ ವಿಷಯದಲ್ಲಿ ನಾನು ಚರ್ಚೆಗೆ ಸಿದ್ದನಿದ್ದೇನೆ. ನಿಮ್ಮ ₹ 2 ಟ್ರೋಲರ್‌ಗಳು ನೆಹರೂ ಬಗ್ಗೆ, ಸಿದ್ದರಾಮಯ್ಯ ಬಗ್ಗೆ ಮಾತನಾಡುತ್ತಾರೆ. ಅವರಿಗೆ ಇರುವ ಯೋಗ್ಯತೆ ನಮಗಿಲ್ವಾ? ನಾನು ಕೂಡ ಎರಡು ಬಾರಿ ಮಂತ್ರಿ ಆಗಿದ್ದೇನೆ. ಮುಖ್ಯಮಂತ್ರಿಗೆ ಪ್ರಶ್ನೆ ಮಾಡುವ ಜವಾಬ್ದಾರಿ ನನ್ನದು. ನಾನು ವಿರೋಧ ಪಕ್ಷದ ವಕ್ತಾರ' ಎಂದು ಪ್ರಿಯಾಂಕ್ ಕಿಡಿಕಾರಿದರು.

'ವೈಯಕ್ತಿಕ ಟೀಕೆ ಮಾಡುವುದು ನಿಮ್ಮ ಕಾರ್ಯತಂತ್ರ. ನೀವು ಎಷ್ಟೇ ವೈಯಕ್ತಿಕ ಟೀಕೆ ಮಾಡಿದರೂ ನಾನು ಪ್ರಶ್ನಿಸುವುದನ್ನು ನಿಲ್ಲಿಸುವುದಿಲ್ಲ. ನಮ್ಮ ಸರಳ ಪ್ರಶ್ನೆಗಳಿಗೆ ಉತ್ತರ ಕೊಡಲು ಬಿಜೆಪಿಯವರಿಗೆ ಯೋಗ್ಯತೆ ಇಲ್ಲ' ಎಂದ ಅವರು, 'ನಾರಾಯಣ ಗುರು ಸ್ತಬ್ಧ ಚಿತ್ರಕ್ಕೆ ನಿರ್ಬಂಧ ಮಾಡಿದಾಗ ಯಾಕೆ ಸುಮ್ಮನಿದ್ದಿರಿ' ಎಂದು ಸುನಿಲ್ ಕುಮಾರ್ ಅವರನ್ನು ಪ್ರಶ್ನಿಸಿದರು.

'ಇದು ನಿಮ್ಮಿಂದ ಸಾಧ್ಯವೇ?'

'ಚಿತ್ತಾಪುರದ ಮೀಸಲು ಕ್ಷೇತ್ರವನ್ನು ಸಾಮಾನ್ಯ ದಲಿತ ಕುಟುಂಬದಿಂದ ಬಂದ ವ್ಯಕ್ತಿಗೆ ಯಾವಾಗ ಬಿಟ್ಟು ಕೊಡುತ್ತೀರಿ. ಇದು ನಿಮ್ಮಿಂದ ಸಾಧ್ಯವೇ' ಎಂದು ಇಂಧನ ಸಚಿವ ವಿ.ಸುನಿಲ್ ಕುಮಾರ್ ಪ್ರಶ್ನಿಸಿದ್ದಾರೆ.

'ನೀವು ಆ ಉದಾರತೆ ತೋರಿಸಿದರೆ ನಾವು ನಿಮ್ಮನ್ನು ಗೌರವಿಸಿ, ಆರಾಧಿಸುತ್ತೇವೆ. ಯೋಚಿಸಿ ಉತ್ತರಿಸಿ' ಎಂದು ಹೇಳಿದ್ದಾರೆ.

ಚಿತ್ರಾವಳಿ

ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಸೋಮವಾರ ಹಮ್ಮಿಕೊಂಡ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಎಸ್.ಆರ್. ಬೊಮ್ಮಾಯಿ ಅವರ ಜನ್ಮದಿನ ಕಾರ್ಯಕ್ರಮದಲ್ಲಿ ಪರಿಷತ್ತಿನ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗಶೆಟ್ಟಿ, ಪತ್ರಕರ್ತ ಎನ್. ಎಸ್. ಶ್ರೀಧರಮೂರ್ತಿ, ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹಾಗೂ ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್‌ಪಾಂಡು ಅವರು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಎಸ್.ಆರ್. ಬೊಮ್ಮಾಯಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಜಯ ಕರ್ನಾಟಕ ಜನಪರ ವೇದಿಕೆ ವತಿಯಿಂದ ಐ ಕೇರ್ ಬ್ರಿಗೇಡ್, ಐ ಕೇರ್ ಫೌಂಡೇಷನ್ ಸಹಯೋಗದಲ್ಲಿ ಯಲಹಂಕ ತಾಲ್ಲೂಕಿನ ಗಂಟಿಗಾನಹಳ್ಳಿ ಗ್ರಾಮದ ಕೆರೆ ಆವರಣದಲ್ಲಿ ಸಸಿ ನೆಡಲಾಯಿತು. ವೇದಿಕೆಯ ರಾಜ್ಯ ಉಪಾಧ್ಯಕ್ಷೆ ಡಾ.ಜಿ. ಎಸ್.ಪುಷ್ಪಲತಾ, ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಜೆ.ಶ್ರೀನಿವಾಸ್ ಹಾಜರಿದ್ದರು.

ಎಂಬೈಬ್ ಸಂಸ್ಥೆಯ ಕಲಿಕಾ ಆ್ಯಪ್ ಅನ್ನು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಬಿಡುಗಡೆಗೊಳಿಸಿ ಸಂಸ್ಥೆಯ ಮುಖ್ಯಸ್ಥರೊಂದಿಗೆ ಸಮಾಲೋಚನೆ ನಡೆಸಿದರು

ಕಲಿಕಾ ಆ್ಯಪ್ ಬಿಡುಗಡೆ

ಬೆಂಗಳೂರು: ಎಂಬೈಬ್ ಸಂಸ್ಥೆಯ ಕಲಿಕಾ ಆ್ಯಪ್ ಅನ್ನು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಲೋಕಾರ್ಪಣೆಗೊಳಿಸಿದರು.

ಬಳಿಕ ಮಾತನಾಡಿದ ನಾಗೇಶ್, 'ರಾಜ್ಯದ ಎಲ್ಲ ವಿದ್ಯಾರ್ಥಿಗಳಿಗೆ ವೈಯಕ್ತಿಕ ಕಲಿಕಾ ಆ್ಯಪ್ ಅನ್ನು ಉಚಿತವಾಗಿ ನೀಡುತ್ತಿರುವುದು ಸಂತಸದ ವಿಚಾರ. ಕಲಿಕೆ, ತರಬೇತಿ ಮತ್ತು ಸ್ವಯಂ ಮೌಲ್ಯಮಾಪನದಂತಹ ಸಾಧನಗಳನ್ನು ಹೊಂದಿರುವ ಈ ಆ್ಯಪ್‌ನಲ್ಲಿ ಇಂಗ್ಲಿಷ್‌ನಲ್ಲಿ ಮಾತ್ರವಲ್ಲದೆ ಕನ್ನಡ ಮಾಧ್ಯಮದಲ್ಲೂ ಅಧ್ಯಯನ ಮಾಡಬಹುದು. ರಾಷ್ಟ್ರೀಯ ಶಿಕ್ಷಣ ನೀತಿಯ ಪಠ್ಯಕ್ರಮ ಚೌಕಟ್ಟಿನ ಅಡಿಯಲ್ಲಿ ಸ್ಪರ್ಧಾತ್ಮಕತೆ ಮತ್ತು ಕೌಶಲ ಸಾಧಿಸಲು ಪ್ರತಿ ವಿದ್ಯಾರ್ಥಿಗೆ ನೆರವಾಗಲಿದೆ' ಎಂದು ಹೇಳಿದರು.

ಎಂಬೈಬ್ ಸಂಸ್ಥೆಯ ಸಿಇಒ ಅದಿತಿ ಅವಸ್ಥಿ, 'ಎಲ್ಲ ವಿದ್ಯಾರ್ಥಿಗಳು ತಮ್ಮ ಭಾಷೆಯ ಗಡಿಯನ್ನು ಮೀರಿ ಕಲಿಕೆಗೆ ಸಹಾಯವಾಗಲೆಂದು ಈ ಆ್ಯಪ್ ರೂಪಿಸಿದ್ದೇವೆ. ಕೋವಿಡ್ ಪಿಡುಗಿನಿಂದಾಗಿ ಶಾಲೆಗಳು ಸಮಸ್ಯೆಗೆ ಸಿಲುಕಿದ್ದು, ರಾಜ್ಯ ಸರ್ಕಾರದೊಂದಿಗೆ ಕೈಜೋಡಿಸಲು ಉತ್ಸುಕರಾಗಿದ್ದೇವೆ' ಎಂದರು.

ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಆಗ್ರಹ

ಶಿಗ್ಗಾವಿಯ ಸಿ.ಎಂ. ಮನೆ ಮುಂದೆ 27ಕ್ಕೆ ಧರಣಿ

ಪ್ರಜಾವಾಣಿ ಚಿತ್ರ

ಬೆಂಗಳೂರು: 'ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ನೀಡಲು ಸರ್ಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿರುವುದರಿಂದ ಜೂನ್ 27 ರಂದು ಹಾವೇರಿ ಜಿಲ್ಲೆ ಶಿಗ್ಗಾವಿಯಲ್ಲಿರುವ ಮುಖ್ಯಮಂತ್ರಿ ನಿವಾಸದ ಮುಂದೆ ಧರಣಿ ನಡೆಸಲಾಗುವುದು' ಎಂದು ಕೂಡಲ ಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರು ತಿಳಿಸಿದರು.

'ಜೂನ್ 27ರ ಒಳಗೆ ಅಂತಿಮ ಮಾತುಕತೆಗೆ ಆಹ್ವಾನಿಸಿ ಸ್ಪಷ್ಟ ನಿಲುವು ಪ್ರಕಟಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿ ಅವರಿಗೆ ಬಹಿರಂಗ ಪತ್ರ ಬರೆದಿದ್ದೇವೆ. ಇದು ನಮ್ಮ ಕೊನೆಯ ಪತ್ರ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಸರ್ಕಾರಕ್ಕೆ ಹಲವು ಬಾರಿ ಗಡುವು ನೀಡಿದ್ದರೂ ಬೇಡಿಕೆಗೆ ಸ್ಪಂದಿಸಿಲ್ಲ. ನುಡಿದಂತೆಯೂ ನಡೆಯುತ್ತಿಲ್ಲ.

ಮುಖ್ಯಾಂಶಗಳು

- ವರ್ಷವಾದರೂ ಆಯೋಗದಿಂದ ವರದಿ ಪಡೆಯದ ಸರ್ಕಾರ
- ಧರಣಿಯಲ್ಲಿ 30 ಸಾವಿರಕ್ಕೂ ಹೆಚ್ಚುಮಂದಿ ಪಾಲ್ಗೊಳ್ಳುವ ನಿರೀಕ್ಷೆ
- ಬೊಮ್ಮಾಯಿ ಅವರ ಕೆಲವು ಅನುಯಾಯಿಗಳಿಂದ ನಮ್ಮ ಮೇಲೆ ಒತ್ತಡ: ಆರೋಪ

ಒಂದು ವರ್ಷ ಮೂರು ತಿಂಗಳಾದರೂ ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಪಡೆದುಕೊಂಡಿಲ್ಲ. ಮುಖ್ಯಮಂತ್ರಿ ಅವರು ತಮ್ಮ ಅಧಿಕಾರ ಬಳಸಿ ತಕ್ಷಣವೇ ವರದಿ ಪಡೆದುಕೊಳ್ಳಬಹುದು. ಆದರೆ, ಅವರು ಮೌನವಹಿಸುತ್ತಿದ್ದಾರೆ. ಮುಖ್ಯಮಂತ್ರಿ ಅವರಿಗೆ ಸಮಾಜದ ಋಣಭಾರ ಇದೆ ಎನ್ನುವುದನ್ನು ಅರಿತುಕೊಳ್ಳಬೇಕು' ಎಂದು ಅವರು ತಿಳಿಸಿದರು.

ಕೂಡಲಸಂಗಮ ಸ್ವಾಮೀಜಿ

'ಶಿಗ್ಗಾವಿಯಲ್ಲಿ ನಡೆಯುವ ಧರಣಿಯಲ್ಲಿ ಸಮುದಾಯದ 30 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ ನಡೆಸಲಾಗುವುದು. ನಂತರ ಅಕ್ಟೋಬರ್‌ನಲ್ಲಿ 25 ಲಕ್ಷಕ್ಕೂ ಹೆಚ್ಚು ಮಂದಿಯನ್ನು ಸೇರಿಸಿ, ಬೃಹತ್ ಸಮಾವೇಶವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗುವುದು' ಎಂದು ಹೇಳಿದರು.

'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕೆಲವು ಅನುಯಾಯಿಗಳು ನಮ್ಮ ಮೇಲೆ ಒತ್ತಡ ಹೇರುವ ಪ್ರಯತ್ನವನ್ನು ಸಹ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಅವರ ಇತ್ತೀಚಿನ ನಡವಳಿಕೆಗಳು ನಮಗೆ ಅಸಮಾಧಾನ ತಂದಿವೆ. ನಮ್ಮ ಹೋರಾಟದ ಸಹನೆಯ ಕಟ್ಟೆ ಒಡೆದು ಹೋಗಿದೆ. ಮುಖ್ಯಮಂತ್ರಿ ಅವರು ಕಾಲಹರಣ ಮಾಡುವ ಪ್ರಯತ್ನ ಮಾಡಬಾರದು. ದೃಢವಾದ ನಿಲುವು ಪ್ರಕಟಿಸಲಿ. ಮೀಸಲಾತಿ ಕಲ್ಪಿಸಲು ಸಾಧ್ಯವಿಲ್ಲ ಎನ್ನುವುದನ್ನಾದರೂ ಮುಖ್ಯಮಂತ್ರಿ ಪ್ರಕಟಿಸಲಿ' ಎಂದು ಒತ್ತಾಯಿಸಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜದ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ ಮಾತನಾಡಿ, 'ಮೀಸಲಾತಿ ಆದೇಶ ಪತ್ರ ಸಿಗುವವರೆಗೂ ನಮ್ಮ ಹೋರಾಟ ಮುಂದುವರಿಯಲಿದೆ. ರಾಜ್ಯದಲ್ಲಿ ಒಟ್ಟು 1.25 ಕೋಟಿ ಲಿಂಗಾಯತ ಪಂಚಮಸಾಲಿ ಸಮುದಾಯದ ಜನಸಂಖ್ಯೆ ಇದೆ. ಬೇರೆ, ಬೇರೆ ಜಿಲ್ಲೆಗಳಲ್ಲಿ ವಿವಿಧ ಪದನಾಮಗಳಿಂದ ಕರೆಯಲಾಗುತ್ತಿದೆ. ಬೇಡಿಕೆಗೆ ಸರ್ಕಾರ ಸ್ಪಂದಿಸದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಕಾರ್ಯಕ್ರಮ ಆಯೋಜಿಸಲಾಗುವುದು' ಎಂದು ತಿಳಿಸಿದರು.

ನಗರದಲ್ಲಿ ಇಂದು

ಲಕ್ಷ್ಮೀನರಸಿಂಹಸ್ವಾಮಿ ಜಾತ್ರಾ ಮಹೋತ್ಸವ: ಸ್ಥಳ: ಮಾದಾಪಟ್ಟಣ, ತಾವರೆಕೆರೆ, ಬೆಳಿಗ್ಗೆ 8ರಿಂದ

ಪ್ರಸನ್ನ ವೆಂಕಟರಮಣ ಸ್ವಾಮಿಯ ಬ್ರಹ್ಮ ರಥೋತ್ಸವ: ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನ, ಕೋಟೆ, ಬೆಳಿಗ್ಗೆ 10ರಿಂದ

ಶಿವಮೂರ್ತಿ ಮುರುಘಾ ಶರಣರಿಗೆ ಅಭಿನಂದನೆ: 'ವಚನ ಸಂಸ್ಕೃತಿಯ ಸಮುದಾಯ ತತ್ವ ಮತ್ತು ಸಮಕಾಲೀನ ಸಂದರ್ಭ' ಡಿ.ಲಿಟ್. ಗ್ರಂಥ ಲೋಕಾರ್ಪಣೆ, ಉಪಸ್ಥಿತಿ: ಶಿವಮೂರ್ತಿ ಮುರುಘಾ ಶರಣರು, ಕೃತಿ ಲೋಕಾರ್ಪಣೆ: ಬಿ.ವಿ. ವಸಂತ ಕುಮಾರ್, ಗ್ರಂಥಾವಲೋಕನ: ಓ.ಎಲ್. ನಾಗಭೂಷಣಸ್ವಾಮಿ, ಅಧ್ಯಕ್ಷತೆ: ಮಹೇಶ ಜೋಶಿ, ಉಪಸ್ಥಿತಿ: ಶೈಲಜಾ ಸೋಮಣ್ಣ, ಆಯೋಜನೆ: ಸೋಮಣ್ಣ ಪ್ರತಿಷ್ಠಾನ, ಬಸವ ಕೇಂದ್ರ, ಸ್ಥಳ: ನಗರ ಕೇಂದ್ರ ಗ್ರಂಥಾಲಯ ಸಭಾಂಗಣ, ಹಂಪಿನಗರ, ಬೆಳಿಗ್ಗೆ 10.30

ಶಿವಮೂರ್ತಿ ಮುರುಘಾ ಶರಣರು

ಕ್ರೀಡಾಕೂಟಕ್ಕೆ ಚಾಲನೆ: ಪ್ರೊ.ಕೆ.ಆರ್. ವೇಣುಗೋಪಾಲ್, ಮುಖ್ಯ ಅತಿಥಿಗಳು: ಪ್ರೊ.ಎಂ. ಕೊಟ್ರೇಶ್, ಪ್ರೊ.ಜಿ.ಟಿ. ದೇವರಾಜ್, ಪ್ರೊ. ಚಂದ್ರಕಾಂತ್ ಎಸ್. ಕರಿಗಾರ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಕೇತರ ನೌಕರರ ಸಂಘ, ಸ್ಥಳ: ದೈಹಿಕ ಶಿಕ್ಷಣ ಆಟದ ಮೈದಾನ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

ಮಕ್ಕಳ ನಾಟಕೋತ್ಸವ: ಉದ್ಘಾಟನೆ: ಪ್ರಕಾಶ್ ನಿಟ್ಟಾಲಿ, ಮುಖ್ಯ ಅತಿಥಿಗಳು: ಎಸ್. ಎನ್. ಸೇತುರಾಮ್, ಬೇಲೂರು ರಘುನಂದನ್, ಚಿನ್ಮಯಿ ಪ್ರವೀಣ್, ಮಹೇಂದ್ರ ಮುನ್ನೋತ್, ಏಕವ್ಯಕ್ತಿ ರಂಗ ಪ್ರಯೋಗ: 'ಚಿಟ್ಟೆ', ಅಭಿನಯ: ಗೋಕುಲ, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಸಂಜೆ 6.30

ಅಕ್ರಮ ಕಟ್ಟಡ: ಬಿಬಿಎಂಪಿಗೆ ಹೈಕೋರ್ಟ್ ನಿರ್ದೇಶನ

ಸಣ್ಣ ಲೋಪಗಳಿದ್ದರೆ ಸಕ್ರಮಗೊಳಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಟ್ಟಡ ನಿರ್ಮಾಣದಲ್ಲಿ ಸಣ್ಣಪುಟ್ಟ ಉಲ್ಲಂಘನೆಗಳಿದ್ದರೆ ನಿಯಮಾನುಸಾರ ದಂಡ ಕಟ್ಟಿಸಿಕೊಂಡು ಅಂಥವುಗಳನ್ನು ಸಕ್ರಮಗೊಳಿಸ-ಲು ಸೂಕ್ತ ಕ್ರಮ ಕೈಗೊಳ್ಳಿ' ಎಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಹೈಕೋರ್ಟ್ ನಿರ್ದೇಶಿಸಿದೆ.

ಬೆಂಗಳೂರು ಮಹಾನಗರದ-ಲ್ಲಿನ ಅನಧಿಕೃತ ಕಟ್ಟಡಗಳ ತೆರವು ಕುರಿತಂತೆ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ಮತ್ತು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ಹಾಜರಿದ್ದ ಹಿರಿಯ ವಕೀಲ ನಂಜುಂಡರೆಡ್ಡಿ, 'ಮಹಾನಗರದ ವ್ಯಾಪ್ತಿಯಲ್ಲಿ 2016ರ ಜನವರಿಯಿಂದ ಈಚೆಗೆ ನಿರ್ಮಿಸಲಾದ ಅನಧಿಕೃತ ಕಟ್ಟಡಗಳ ಸರ್ವೆ ನಡೆಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯ ಎಂಟು ವಲಯಗಳಲ್ಲಿ 400 ರಿಂದ 500 ಅಕ್ರಮ ಕಟ್ಟಡಗಳನ್ನು ಗುರುತಿಸಲಾಗಿದೆ. ಒಟ್ಟು 36,759 ಕಟ್ಟಡ ನಕ್ಷೆಗಳಲ್ಲಿ 16 ಸಾವಿರ ಕಟ್ಟಡಗಳ ಸರ್ವೆ ನಡೆಸಲಾಗಿದ್ದು, ಕೆಲವು ಕಟ್ಟಡಗಳ ನೆಲಸಮಕ್ಕೆ ಕ್ರಮ ಕೈಗೊಳ್ಳಲಾಗಿದೆ' ಎಂದು ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಈವರೆಗೆ ಎಷ್ಟು ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿದ್ದೀರಿ, ಎಷ್ಟು ಸಕ್ರಮಗೊಳಿಸಿದ್ದೀರಿ ಮತ್ತು ಎಷ್ಟು ಕಟ್ಟಡಗಳಿಂದ ದಂಡ ಸಂಗ್ರಹ ಮಾಡಿದ್ದೀರಿ ಎಂಬುದರ ವಿವರ ನೀಡಿ' ಎಂದು ಸೂಚಿಸಿತು.

ಇದಕ್ಕೆ ನಂಜುಂಡರೆಡ್ಡಿ, 'ನಿಯಮ ಉಲ್ಲಂಘಿಸಿದ ಅಕ್ರಮ ಕಟ್ಟಡಗಳ ಮಾಲೀಕರಿಂದ ದಂಡ ಕಟ್ಟಿಸಿಕೊಂಡು ಸಕ್ರಮಗೊಳಿಸುವ ಅಕ್ರಮ-ಸಕ್ರಮ ಕಾಯ್ದೆ ಸಿಂಧುತ್ವ ಪ್ರಶ್ನಿಸಿದ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ. ಹಾಗಾಗಿ, ದಂಡ ಕಟ್ಟಿಸಿಕೊಂಡು ಸಕ್ರಮಗೊಳಿಸಲು ಆಗುತ್ತಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಎಷ್ಟು ಕಟ್ಟಡಗಳನ್ನು ಅನಧಿಕೃತ ಎಂದು ನೆಲಸಮ ಮಾಡಲು ಗುರುತಿಸಿದ್ದೀರಿ, ಎಷ್ಟು ಪ್ರಕರಣಗಳನ್ನು ಸಣ್ಣ ಉಲ್ಲಂಘನೆ ಎಂದು ಸಕ್ರಮಗೊಳಿಸಲು ಗುರುತಿಸಿದ್ದೀರಿ ಎಂಬ ಬಗ್ಗೆ ಹತ್ತು ದಿನಗಳ ಒಳಗೆ ಸಮಗ್ರ ಮಾಹಿತಿ ನೀಡಿ' ಎಂದು ಸೂಚಿಸಿ ವಿಚಾರಣೆಯನ್ನು ಇದೇ 20ಕ್ಕೆ ಮುಂದೂಡಿತು.

ಮುಖ್ಯಾಂಶಗಳು

- 16 ಸಾವಿರ ಕಟ್ಟಡಗಳ ಸರ್ವೆ
- 400ರಿಂದ 500 ಅಕ್ರಮಗಳ ಗುರುತು: ಬಿಬಿಎಂಪಿ ಮಾಹಿತಿ
- ಸಕ್ರಮಕ್ಕೆ ಗುರುತಿಸಿರುವ ಕಟ್ಟಡಗಳ ಮಾಹಿತಿ ಸಲ್ಲಿಕೆಗೆ ಸೂಚನೆ

ಹೈಕೋರ್ಟ್

'ಸಮಯ ಪೋಲು ಮಾಡಬೇಡಿ'

'ಸಾರ್ವಜನಿಕರು ಪ್ರತಿದಿನವೂ ನಿಮ್ಮ ಕಚೇರಿಗಳ ಸುತ್ತ ತಿರುಗುವ ಅಗತ್ಯವಿಲ್ಲ. ಸಣ್ಣಪುಟ್ಟ ಉಲ್ಲಂಘನೆ ಕಂಡುಬಂದರೆ ನಿಯಮಾನುಸಾರ ದಂಡ ಕಟ್ಟಿಸಿಕೊಂಡು ಅವುಗಳನ್ನು ಸಕ್ರಮಗೊಳಿಸಿ. ಭಾರಿ ಪ್ರಮಾಣದಲ್ಲಿ ಉಲ್ಲಂಘನೆ ಆಗಿದ್ದರೆ ತೆರವುಗೊಳಿಸಿ. ಕಾನೂನು ಪ್ರಕಾರ ಏನಿದೆಯೋ ಅದರಂತೆ ಕ್ರಮ ಕೈಗೊಳ್ಳಿ. ಅನಗತ್ಯ ಸಮಯ ಪೋಲು ಮಾಡಬೇಡಿ' ಎಂದು ಮುಖ್ಯ ನ್ಯಾಯಮೂರ್ತಿಗಳು ಪಾಲಿಕೆಗೆ ತಾಕೀತು ಮಾಡಿದರು.

ಪ್ರತಿ ಚದರ ಮೀಟರ್ ಗುಂಡಿ ಮುಚ್ಚಲು ₹ 551

ಹೈಕೋರ್ಟ್‌ಗೆ ಕಾಮಗಾರಿ ಒಪ್ಪಂದ ವಿವರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಳೆಗಾಲ ಆರಂಭವಾಗಿದ್ದು, ಕೂಡಲೇ ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸಕ್ಕೆ ಮುಂದಾಗಿ. ಸಮಸ್ಯೆಗಳನ್ನು ಹೊತ್ತು ಮತ್ತೆ ಮತ್ತೆ ಕೋರ್ಟ್‌ಗೆ ಬರಬೇಡಿ' ಎಂದು ಅಮೆರಿಕನ್ ರೋಡ್ ಟೆಕ್ನಾಲಜೀಸ್ ಸಂಸ್ಥೆ (ಎಆರ್‌ಟಿಸಿ) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ತಾಕೀತು ಮಾಡಿರುವ ಹೈಕೋರ್ಟ್, ರಸ್ತೆ ಗುಂಡಿ ಮುಚ್ಚಿದ ಕಾರ್ಯಪ್ರಗತಿ ವರದಿಯನ್ನು ಹತ್ತು ದಿನಗಳಲ್ಲಿ ಸಲ್ಲಿಸುವಂತೆ ಬಿಬಿಎಂಪಿಗೆ ನಿರ್ದೇಶಿಸಿದೆ.

'ನಗರ ವ್ಯಾಪ್ತಿಯಲ್ಲಿನ ರಸ್ತೆ ಗುಂಡಿಗಳನ್ನು ಮುಚ್ಚಲು ಸರ್ಕಾರ ಹಾಗೂ ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ವಿಜಯನ್ ಮೆನನ್ ಹಾಗೂ ಇತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಎಆರ್‌ಟಿಸಿ ಪರ ಹಿರಿಯ ವಕೀಲೆ ಜಯ್ನಾ ಕೊಠಾರಿ, 'ಪೈಥಾನ್ ಯಂತ್ರದಿಂದ ರಸ್ತೆ ಗುಂಡಿಗಳನ್ನು ಮುಚ್ಚಲು ಪ್ರತಿ ಚದರ ಮೀಟರ್‌ಗೆ ₹ 551 ದರ ನಮೂದಿಸಲಾಗಿದೆ' ಎಂದು ಪ್ರಮಾಣ ಪತ್ರ ಸಲ್ಲಿಸಿದರು. ಇದಕ್ಕೆ ಬಿಬಿಎಂಪಿ ಪರ ವಕೀಲ ವಿ. ಶ್ರೀನಿಧಿ, 'ಎಆರ್‌ಟಿಸಿ ನಮೂದಿಸಿರುವ ದರಕ್ಕೆ ಕಾಮಗಾರಿ ನೀಡಲು ಮುಖ್ಯ ಆಯುಕ್ತರು ಒಪ್ಪಿ-ಕೊಂಡಿದ್ದಾರೆ' ಎಂದು ತಿಳಿಸಿದರು.

ವರದಿ ಸಲ್ಲಿಕೆ: ಚೀಫ್ ಎಂಜಿನಿಯರ್ ಪ್ರಹ್ಲಾದ್ ಅವರು ಕಂಪನಿಯ ನಿರ್ದೇಶಕರ ಮೇಲೆ ದೈಹಿಕ ಹಲ್ಲೆ ನಡೆಸಿದ ಬಗ್ಗೆ ಮುಖ್ಯ ಆಯುಕ್ತರಿಗೆ ದೂರು ನೀಡಿರುವ ಮಾಹಿತಿಯನ್ನು ಜಯ್ನಾ ಕೊಠಾರಿ ನ್ಯಾಯಪೀಠಕ್ಕೆ ಸಲ್ಲಿಸಿದರು. ಇದನ್ನು ಪರಿಶೀಲಿಸಿದ ನ್ಯಾಯಪೀಠ, 'ಎಆರ್‌ಟಿಸಿ ನಡೆಸುವ ಕಾಮಗಾರಿಯ ಮೇಲುಸ್ತುವಾರಿಯನ್ನು ಪ್ರಹ್ಲಾದ್ ಮಾಡುವಂತಿಲ್ಲ. ಬೇರೊಬ್ಬ ಮುಖ್ಯ ಎಂಜಿನಿಯರ್‌ಗೆ ಈ ಜವಾಬ್ದಾರಿ ವಹಿಸಬೇಕು' ಎಂದು ನಿರ್ದೇಶಿಸಿತು.

ಇದಕ್ಕೆ ಸ್ಪಷ್ಟನೆ ನೀಡಿದ ಶ್ರೀನಿಧಿ, 'ಈಗಾಗಲೇ ಪ್ರಹ್ಲಾದ್ ಅವರನ್ನು ಬದಲಾಯಿಸಿ ಬೇರೊಬ್ಬ ಮುಖ್ಯ ಎಂಜಿನಿಯರ್ ನಿಯೋಜಿಸಲಾಗಿದೆ. ಪ್ರಹ್ಲಾದ್ ವಿರುದ್ಧದ ದೂರಿನ ಬಗ್ಗೆ ಹಿರಿಯ ಐಎಎಸ್ ಅಧಿಕಾರಿಯಿಂದ ತನಿಖೆಗೆ ಆದೇಶಿಸಲಾಗಿದೆ' ಎಂದು ತಿಳಿಸಿದರು. ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಲಾಗಿದೆ.

2020 ಗುಂಡಿ ಇನ್ನೂ ಬಾಕಿ

ಜೂನ್ 6ರೊಳಗೆ ನಗರದ ರಸ್ತೆಗಳೆಲ್ಲವೂ ಗುಂಡಿ ಮುಕ್ತ ಆಗಲಿವೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ನೀಡಿದ್ದ ಭರವಸೆ ಹುಸಿಗೊಂಡಿದೆ.

ನಗರದಲ್ಲಿ 10,608 ರಸ್ತೆ ಗುಂಡಿಗಳನ್ನು ಗುರುತಿಸಲಾಗಿದ್ದು, ಒಂದು ವಾರದಲ್ಲಿ ಅವುಗಳನ್ನು ಮುಚ್ಚಲಾಗುವುದು ಎಂದು ಕಳೆದ ವಾರ ಅವರು ಭರವಸೆ ನೀಡಿದ್ದರು. ಬಿಬಿಎಂಪಿ ಅಧಿಕಾರಿಗಳ ಪ್ರಕಾರ ಇನ್ನೂ 2020 ಗುಂಡಿಗಳು ಮುಚ್ಚಲು ಬಾಕಿ ಉಳಿದುಕೊಂಡಿವೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಬಿಬಿಎಂಪಿ ವಿಶೇಷ ಆಯುಕ್ತ (ಘನತ್ಯಾಜ್ಯ ನಿರ್ವಹಣೆ) ಡಾ.ಹರೀಶ್‌ಕುಮಾರ್, 'ಗುಂಡಿ ಮುಚ್ಚುವ ಕೆಲಸವನ್ನು ರಾತ್ರಿ ವೇಳೆ ನಡೆಸಲಾಗುತ್ತಿದೆ. ಪ್ರತಿದಿನ ರಾತ್ರಿ ಮಳೆ ಸುರಿಯುತ್ತಿರುವುದರಿಂದ ಕೆಲಸಕ್ಕೆ ಅಡ್ಡಿಯಾಗಿದೆ. ಬುಧವಾರದ ವೇಳೆಗೆ ಬಾಕಿ ಕಾಮಗಾರಿ ಪೂರ್ಣಗೊಳ್ಳಲಿದೆ' ಎಂದರು.

'ಬಿಎಸ್‌ಡಬ್ಲ್ಯುಎಂಎಲ್‌ಗೆ ಶೀಘ್ರ ಕಸ ನಿರ್ವಹಣೆ ಹೊಣೆ'

ಬೆಂಗಳೂರು: 'ಹೊಸದಾಗಿ ರೂಪುಗೊಂಡಿರುವ ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಕಂಪನಿಯು ಶೀಘ್ರದಲ್ಲೇ ಕಸ ನಿರ್ವಹಣೆ ಜವಾಬ್ದಾರಿ ವಹಿಸಿ-ಕೊಳ್ಳಲಿದೆ' ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಘನತ್ಯಾಜ್ಯ ನಿರ್ವಹಣೆ) ಡಾ.ಹರೀಶ್‌ಕುಮಾರ್ ತಿಳಿಸಿದರು.

'ಆರು ತಿಂಗಳ ಹಿಂದೆ ಆರಂಭಗೊಂಡ ಈ ಕಂಪನಿಗೆ ತಾಂತ್ರಿಕ ಕಾರಣಗಳಿಂದ ಜವಾಬ್ದಾರಿ ನೀಡಿರಲಿಲ್ಲ. ಕಸ ಸಂಗ್ರಹಣೆ, ಸಾಗಣೆ ಮತ್ತು ಸಂಸ್ಕರಣೆಯನ್ನು ವಹಿಸಿಕೊಳ್ಳಲಿದೆ. ಸದ್ಯ ಎಲ್ಲಾ ಏಳು ತ್ಯಾಜ್ಯ ನಿರ್ವಹಣಾ ಘಟಕಗಳೂ ಕಾರ್ಯಾಚ-ರಣೆಯಲ್ಲಿ ಇಲ್ಲ. ಆರಂಭಿಸಲು ಕ್ರಮ ಕೈಗೊಳ್ಳಲಾಗಿದೆ. ಬಳಿಕ ಈ ಕಂಪನಿಗೆ ಹಸ್ತಾಂತರ ಮಾಡಲಾಗುವುದು ಎಂದರು.

ಈದ್ಗಾ ಮೈದಾನ ಸಾರ್ವಜನಿಕ ಸ್ಥಳ: 'ಚಾಮರಾಜಪೇಟೆ ಈದ್ಗಾ ಮೈದಾನ ಸಾರ್ವಜನಿಕ ಸಂಸ್ಥೆಯಾಗಿದ್ದು, ಅಲ್ಲಿ ಬೇರೆ ಕಾರ್ಯಕ್ರಮಗಳಿಗೂ ಪಾಲಿಕೆ ಅನುಮತಿ ನೀಡಲಿದೆ' ಎಂದು ಹರೀಶ್‌ಕುಮಾರ್ ಸ್ಪಷ್ಟಪಡಿಸಿದರು.

'ಪಶ್ಚಿಮ ವಲಯದ ಜಂಟಿ ಆಯುಕ್ತರು ಈ ಮೈದಾನದ ನಿರ್ವಹಣೆ ಜವಾಬ್ದಾರಿ ಹೊಂದಿದ್ದಾರೆ. ಅವರಿಂದ ಮಾಹಿತಿ ಪಡೆದುಕೊಂಡಿದ್ದೇನೆ. ವರ್ಷದಲ್ಲಿ ಎರಡು ದಿನ ಇಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಲು ಮುಸ್ಲಿಂ ಸಮುದಾಯದ-ವರಿಗೆ ಅನುಮತಿ ನೀಡಲು ಹೈಕೋರ್ಟ್ ತಿಳಿಸಿದೆ. ಅದನ್ನು ಹೊರತುಪಡಿಸಿ ಬೇರೆ ದಿನಗಳಲ್ಲಿ ಅನುಮತಿ ಕೋರಿದರೆ ಪರಿ-ಗಣಿಸಲಾಗುವುದು' ಎಂದರು.



ನ್ಯಾಯಾಧೀಶರಿಗೆ ಸ್ವಾಗತ ಬೆಂಗಳೂರು ನಗರ ಸಿವಿಲ್ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿರುವ ನೂತನ 30 ನ್ಯಾಯಾಧೀಶರಿಗೆ ಬೆಂಗಳೂರು ವಕೀಲರ ಸಂಘದ ವತಿಯಿಂದ ಸೋಮವಾರ ಸಿಟಿ ಸಿವಿಲ್ ಕೋರ್ಟ್ ಆವರಣದ ವಕೀಲರ ಭವನದಲ್ಲಿ ಸ್ವಾಗತ ಕೋರಲಾಯಿತು. ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಸಿಟಿ ಸಿವಿಲ್ ಸೆಷನ್ಸ್ ಮತ್ತು ಪ್ರಧಾನ ನ್ಯಾಯಾಧೀಶ ಸಿ.ಎಂ. ಜೋಶಿ, ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಜಿ. ರವಿ, ಖಜಾಂಚಿ ಎಂ.ಟಿ.ಹರೀಶ್ ಹಾಗೂ ಸದಸ್ಯರು ಇದ್ದಾರೆ. -ಪ್ರಜಾವಾಣಿ ಚಿತ್ರ/ ಪ್ರಶಾಂತ ಎಚ್.ಜಿ.

ಕರಾವಳಿಯಲ್ಲಿ ಮತ್ತೆ ಸ್ಯಾಟ್‌ಲೈಟ್ ಫೋನ್ ಸದ್ದು

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ 3 ಕಡೆಗಳಲ್ಲಿ ನಿಷೇಧಿತ ಸ್ಯಾಟ್‌ಲೈಟ್ ಫೋನ್ ಸದ್ದು ಮಾಡಿರುವುದನ್ನು ಗುಪ್ತಚರ ಇಲಾಖೆ ಮೂಲಗಳು ದೃಢಪಡಿಸಿವೆ. ವರ್ಷದ ಅವಧಿಯಲ್ಲಿ ಕರಾವಳಿಯಲ್ಲಿ ಇದು ಮೂರನೇ ಬಾರಿ ಆಗಿದೆ.

ಮೇ 21ರಿಂದ 29ರ ನಡುವಿನ ಅವಧಿಯಲ್ಲಿ ಕರಾವಳಿಯಲ್ಲಿ ಈ ಫೋನ್ ಸಂಪರ್ಕ ಆಗಿವೆ ಎನ್ನಲಾಗಿದ್ದು, ರಾಜ್ಯ ಆಂತರಿಕ ಭದ್ರತಾ ವಿಭಾಗ (ಐಎಸ್‌ಡಿ) ಈ ಸಂಬಂಧ ತನಿಖೆ ಆರಂಭಿಸಿದೆ.

ಮಂಗಳೂರು ನಗರದ ಹೊರವಲಯದ ನಾಟೆಕಲ್, ಕುಳಾಯಿ ಹಾಗೂ ನವ ಮಂಗಳೂರು ಬಂದರು ಪ್ರಾಧಿಕಾರ (ಎನ್‌ಎಂಪಿಎ) ಆವರಣದಲ್ಲಿ ಸ್ಯಾಟ್‌ಲೈಟ್ ಫೋನ್ ಸಂಪರ್ಕ ಆಗಿರುವುದು ದೃಢವಾಗಿದೆ. ನಾಟೆಕಲ್‌ನಲ್ಲಿ ಈ ಸ್ಯಾಟ್‌ಲೈಟ್ ಫೋನ್ ರಿಂಗ್ ಆಗಿರುವ ಸ್ಥಳ ಖಾಸಗಿಯವರಿಗೆ ಸೇರಿದ್ದು, ಅಲ್ಲಿ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಗುಪ್ತಚರ ಇಲಾಖೆ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ.

ಸ್ಯಾಟ್‌ಲೈಟ್ ಫೋನ್ ಬಳಸಿದವರು ಯಾರು, ಅದರ ಮೂಲಕ ಯಾರನ್ನು ಸಂಪರ್ಕಿಸಲಾಗಿದೆ ಎಂಬುದನ್ನು ಖಚಿತವಾಗಿ ಪತ್ತೆ ಮಾಡಲು ಆಗದು. ಈ ಫೋನ್ ಬಳಕೆಯಾಗಿ ಒಂದು ದಿನದ ಬಳಿಕ ಗುಪ್ತಚರ ಪಡೆಗಳಿಗೆ ಸಂದೇಶ ಬರುತ್ತದೆ. ಹೀಗಾಗಿ ಈ ಫೋನ್ ಬಳಕೆಯನ್ನು ಭಾರತದಲ್ಲಿ 2012ರಲ್ಲೇ ನಿಷೇಧಿಸಲಾಗಿದೆ.

'ಈ ಸಂಬಂಧ ಐಎಸ್‌ಡಿ ಯಾವುದೇ ವರದಿ ನೀಡಿಲ್ಲ. ವರದಿ ಬಂದಲ್ಲಿ ಈ ಬಗ್ಗೆ ಮುಂದಿನ ಕ್ರಮವಹಿ-ಸಲಾಗುತ್ತದೆ' ಎಂದು ಡಿಸಿಪಿ ಹರಿರಾಂ ಶಂಕರ್ ಪ್ರತಿಕ್ರಿಯಿಸಿದರು.

ಕೇಂದ್ರ ಗುಪ್ತಚರ ಸಂಸ್ಥೆಯೊಂದಿಗೆ ಜಂಟಿ ತನಿಖೆ : ಆರಗ ಜ್ಞಾನೇಂದ್ರ

ಶಿವಮೊಗ್ಗ: ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಅರಣ್ಯ ಪ್ರದೇಶಗಳಲ್ಲಿ ನಿಷೇಧಿತ ಸ್ಯಾಟ್‌ಲೈಟ್ ಫೋನ್ ಸಿಗ್ನಲ್‌ಗಳು ಅಕ್ರಮವಾಗಿ ಕಾರ್ಯಾಚರಣೆ ನಡೆಸಿರುವ ಬಗ್ಗೆ ಕೇಂದ್ರ ಗುಪ್ತಚರ ಸಂಸ್ಥೆಯೊಂದಿಗೆ (ಐಬಿ) ರಾಜ್ಯದ ಪೊಲೀಸರು ಜಂಟಿಯಾಗಿ ತನಿಖೆ ಕೈಗೊಂಡಿದ್ದಾರೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

ತೀರ್ಥಹಳ್ಳಿಯಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿರುವ ಅವರು, ಈ ಬಗ್ಗೆ ರಾಜ್ಯದ ಪೊಲೀಸರೂ ಕೇಂದ್ರದ ಗುಪ್ತಚರ ಸಂಸ್ಥೆಯೊಂದಿಗೆ ಮಾಹಿತಿ ಹಂಚಿಕೊಂಡಿದ್ದಾರೆ ಎಂದು ಹೇಳಿದರು.

ಕಟ್ಟಡದಿಂದ ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ಅಕ್ಕಿಪೇಟೆ ವೃತ್ತದಲ್ಲಿ-ರುವ ನಿರ್ಮಾಣ ಹಂತದ ಕಟ್ಟಡದ ಐದನೇ ಮಹಡಿಯಿಂದ ಬಿದ್ದು ಕಾರ್ಮಿಕ ಧರ್ಮೇಂದ್ರಕುಮಾರ್ (22) ಎಂಬುವವರು ಮೃತಪಟ್ಟಿದ್ದಾರೆ.

'ಬಿಹಾರದ ಧರ್ಮೇಂದ್ರ ಕುಮಾರ್, ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಕಟ್ಟಡ ನಿರ್ಮಾಣ ಕಾರ್ಮಿಕರಾಗಿ ಕೆಲಸಕ್ಕೆ ಸೇರಿದ್ದರು. ನಿರ್ಮಾಣ ಹಂತದ ಕಟ್ಟಡದಲ್ಲೇ ಧರ್ಮೇಂದ್ರ ಹಾಗೂ ಇತರ ಕಾರ್ಮಿಕರು ವಾಸವಿದ್ದರು' ಎಂದು ಕಾಟನ್‌ಪೇಟೆ ಪೊಲೀಸರು ಹೇಳಿದರು.

'ಭಾನುವಾರ ರಾತ್ರಿ ಊಟ ಮುಗಿಸಿದ್ದ ಧರ್ಮೇಂದ್ರ ಕಟ್ಟಡದಲ್ಲೇ ಓಡಾಡುತ್ತಿದ್ದರು. ಅವರ ಮೊಬೈಲ್‌ಗೆ ಕರೆ ಬಂದಿತ್ತು. ಮಾತನಾಡುತ್ತಲೇ 5ನೇ ಮಹಡಿಗೆ ಹೋಗಿದ್ದರು. ಕೆಲ ನಿಮಿಷ ಮೊಬೈಲ್‌ನಲ್ಲಿ ಮಾತನಾಡಿದ್ದ ಧರ್ಮೇಂದ್ರ, ಏಕಾಏಕಿ ಆಯತಪ್ಪಿ ನೆಲಮಹಡಿಗೆ ಬಿದ್ದಿದ್ದರು. ತೀವ್ರ ರಕ್ತ-ಸ್ರಾವದಿಂದಾಗಿ ಸ್ಥಳದಲ್ಲೇ ಮೃತಪಟ್ಟಿ-ದ್ದಾರೆ' ಎಂದೂ ತಿಳಿಸಿದರು.

ಮನೆಗೆ ಆಧಾರ: 'ಕುಟುಂಬದ ಆಧಾರವಾಗಿದ್ದ ಧರ್ಮೇಂದ್ರಕುಮಾರ್, ಪ್ರತಿ ತಿಂಗಳು ಊರಿಗೆ ಹಣ ಕಳುಹಿಸುತ್ತಿದ್ದರು' ಎಂದು ಹೇಳಿದರು.

ಹಣಕ್ಕಾಗಿ ಬ್ಲ್ಯಾಕ್‌ಮೇಲ್: ಮಗನ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಆರ್.ಟಿ. ನಗರ ಠಾಣೆ ವ್ಯಾಪ್ತಿಯಲ್ಲಿ ಮೊಹಮ್ಮದ್ ಸುಲೇಮಾನ್ (18) ಎಂಬುವವರನ್ನು ಕೊಲೆ ಮಾಡಲಾಗಿದ್ದು, ತಂದೆ ಮೊಹಮ್ಮದ್ ಸಂಶೀರ್ (41) ಅವರೇ ಕೃತ್ಯ ಎಸಗಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

'ಚಾಮುಂಡಿನಗರದ ನಿವಾಸಿ ಸಂಶೀರ್ ಹಾಗೂ ಮಗ ಸುಲೇಮಾನ್ ನಡುವೆ ಮನೆಯಲ್ಲಿ ಸೋಮವಾರ ಬೆಳಿಗ್ಗೆ ಜಗಳ ಆಗಿತ್ತು. ಇದೇ ವೇಳೆಯೇ ಆರೋಪಿ ಸಂಶೀರ್, ಸುಲೇಮಾನ್ ಅವರನ್ನು ಕೊಲೆ ಮಾಡಿ ಪರಾರಿಯಾಗಿದ್ದಾನೆ. ಆತನ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸಂಶೀರ್‌ನಿಗೆ ಇಬ್ಬರು ಪತ್ನಿಯರು. ಮೊದಲ ಪತ್ನಿ ಕೃಷ್ಣಗಿರಿಯಲ್ಲಿದ್ದು, ಅವರ ಮಗನೇ ಸುಲೇಮಾನ್. ಬಾರ್ ಬೆಂಡಿಂಗ್ ಕೆಲಸ ಮಾಡುತ್ತಿದ್ದ ಸಂಶೀರ್, ಎರಡನೇ ಪತ್ನಿ ಜೊತೆ ವಾಸವಿದ್ದ. ದಂಪತಿಗೆ ಮಕ್ಕಳಿರಲಿಲ್ಲ. ತಂದೆ ಜೊತೆ ನೆಲೆಸಿದ್ದ ಸುಲೇಮಾನ್, ಗ್ಯಾರೇಜೊಂದರಲ್ಲಿ ಕೆಲಸ ಮಾಡುತ್ತಿದ್ದರು' ಎಂದೂ ತಿಳಿಸಿದರು.

'ಖರ್ಚಿಗೆ ಹಣ ನೀಡುವಂತೆ ಸುಲೇಮಾನ್, ತಂದೆಯನ್ನು ನಿತ್ಯವೂ ಒತ್ತಾಯಿಸುತ್ತಿದ್ದರು. ಹಣ ನೀಡದಿದ್ದರೆ, ಮೊದಲ ಪತ್ನಿಯನ್ನು ಕೊಲ್ಲುವುದಾಗಿ ಬೆದರಿಸುತ್ತಿದ್ದರು. ಮಗನ ಬ್ಲ್ಯಾಕ್‌ಮೇಲ್‌ನಿಂದ ಬೇಸತ್ತಿದ್ದ ತಂದೆ, ಆತನಿಗೆ ಹಲವು ಬಾರಿ ಬುದ್ಧಿ ಹೇಳಿದರೂ ತಿದ್ದಿಕೊಂಡಿರಲಿಲ್ಲ' ಎಂದೂ ಮಾಹಿತಿ ನೀಡಿದರು.

ರಾಡ್‌ನಿಂದ ಹೊಡೆದು, ವೈರ್‌ನಿಂದ ಬಿಗಿದ: 'ಆರೋಪಿ ಸಂಶೀರ್, ಕಬ್ಬಿಣದ ರಾಡ್‌ನಿಂದ ಮಗ ಸುಲೇಮಾನ್ ತಲೆಗೆ ಹೊಡೆದಿದ್ದ. ಕುಸಿದು ಬಿದ್ದು ಪ್ರಜ್ಞೆ ತಪ್ಪಿದ್ದ ಮಗ ಸಣ್ಣದಾಗಿ ಉಸಿರಾಡುತ್ತಿದ್ದ. ಅದನ್ನು ಗಮನಿಸಿದ್ದ ತಂದೆ, ಪುನಃ ವೈರ್‌ನಿಂದ ಕತ್ತು ಬಿಗಿದು ಉಸಿರು ನಿಲ್ಲಿಸಿದ್ದಾನೆ' ಎಂದು ಪೊಲೀಸರು ಹೇಳಿದರು.

'ಕೊಲೆ ಬಳಿಕ ಆರೋಪಿ ಮನೆಯಿಂದ ಪರಾರಿಯಾಗಿದ್ದಾನೆ. ಸ್ಥಳೀಯರು ನೀಡಿದ್ದ ಮಾಹಿತಿ ಆಧರಿಸಿ ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದೂ ಹೇಳಿದರು.

ಕಾರ್ಕಳ ಪಡುಗಿರಿ ರಸ್ತೆಯಲ್ಲಿ ಗೋಡ್ಸೆ ನಾಮಫಲಕ

ಪ್ರಜಾವಾಣಿ ವಾರ್ತೆ

ಉಡುಪಿ: ಕಾರ್ಕಳ ತಾಲ್ಲೂಕಿನ ಬೋಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಡುಗಿರಿ ರಸ್ತೆಯಲ್ಲಿ ನಾಥೂರಾಮ್ ಗೋಡ್ಸೆ ನಾಮಫಲಕ ಅಳವಡಿಸಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವಿರೋಧ ವ್ಯಕ್ತವಾಗಿದ್ದರಿಂದ ತೆರವು-ಗೊಳಿಸಲಾಗಿದೆ.

ಗೋಡ್ಸೆ ನಾಮಫಲಕ ಹಾಕಿರುವ ವಿಷಯ ತಿಳಿಯುತ್ತಿದ್ದಂ-ತೆ ಸ್ಥಳಕ್ಕೆ ತೆರಳಿದ ಯುವ ಕಾಂಗ್ರೆಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿ ನಾಮಫಲಕ ತೆರವಿಗೆ ಒತ್ತಾಯಿಸಿದರು. ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿದರು. ಬಳಿಕ ಬೋಳ ಗ್ರಾಮ ಪಂಚಾಯಿತಿ ಸಿಬ್ಬಂದಿ ಗೋಡ್ಸೆ ನಾಮಫಲಕ ತೆರವುಗೊಳಿಸಿದರು.

ಘಟನೆ ಸಂಬಂಧ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ ಜಿಲ್ಲಾ ಪಂಚಾಯಿತಿ ಸಿಇಒ ಎಚ್.ಪ್ರಸನ್ನ ಅವರು, 'ಗೋಡ್ಸೆ ನಾಮಫಲಕವ-ನ್ನು ಬೋಳ ಗ್ರಾಮ ಪಂಚಾಯಿತಿ ಕಡೆಯಿಂದ ಯಿಂದ ಹಾಕಿಲ್ಲ. ರಸ್ತೆಗೆ ನಾಥೂರಾಮ್ ಗೋಡ್ಸೆ ಹೆಸರಿಡುವ ಯಾವ ನಿರ್ಣಯವನ್ನೂ ಗ್ರಾಮ ಪಂಚಾಯಿತಿ ತೆಗೆದು-ಕೊಂಡಿರಲಿಲ್ಲ. ಪಂಚಾಯಿತಿಯ ಗಮನಕ್ಕೆ ಬಾರದಂತೆ ನಾಮಫಲಕ ಹಾಕಲಾಗಿದೆ. ವಿಷಯ ತಿಳಿದ ಕೂಡಲೇ ತೆರವುಗೊಳಿಸಲಾಗಿದೆ. ಕಾರ್ಕಳ ಇಒಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸುವಂತೆ ಹಾಗೂ ಫಲಕ ಹಾಕಿದವರ ವಿರುದ್ಧ ಠಾಣೆಗೆ ದೂರು ನೀಡುವಂತೆ ಸೂಚನೆ ನೀಡಲಾಗಿದೆ' ಎಂದು ತಿಳಿಸಿದರು.

ಕಾರ್ಕಳ ತಾಲ್ಲೂಕಿನ ಬೋಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಡುಗಿರಿ ರಸ್ತೆಯಲ್ಲಿದ್ದ ನಾಥೂರಾಮ್ ಗೋಡ್ಸೆ ನಾಮಫಲಕವನ್ನು ಪಂಚಾಯಿತಿ ಸಿಬ್ಬಂದಿ ತೆರವುಗೊಳಿಸಿದರು

ಕಾಶ್ಮೀರ: ಪಾಕ್ ಉಗ್ರನ ಹತ್ಯೆ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಸೋಮವಾರ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಲಷ್ಕರ್ -ಎ- ತಯಬಾಗೆ (ಎಲ್‌ಇಟಿ) ಸೇರಿದ ಪಾಕಿಸ್ತಾನದ ಉಗ್ರನನ್ನು ಹತ್ಯೆ ಮಾಡಲಾಗಿದ್ದು, ಇತರ ಮೂವರು ಉಗ್ರರು ಪರಾರಿಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಹತ್ಯೆಗೀಡಾದ ಉಗ್ರನನ್ನು ಪಾಕಿಸ್ತಾನದ ಲಾಹೋರ್‌ನ ಹಂಜಲ್ಲಾ ಎಂದು ಗುರುತಿಸಲಾಗಿದೆ ಎಂದು ಕಾಶ್ಮೀರ ವಲಯದ ಐಜಿಪಿ ವಿಜಯ್‌ಕುಮಾರ್ ತಿಳಿಸಿದ್ದಾರೆ.

ಬ್ರಿಟನ್ ಪ್ರಧಾನಿ ಜಾನ್ಸನ್ ವಿಶ್ವಾಸಮತ ಯಾಚನೆ

ಲಂಡನ್ (ಎಎಫ್‌ಪಿ, ರಾಯಿಟರ್ಸ್): ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರ ವಿರುದ್ಧದ ಅವಿಶ್ವಾಸ ನಿರ್ಣಯದ ಮೇಲೆ ಮತದಾನ ಪ್ರಕ್ರಿಯೆ ಸೋಮವಾರ ಆರಂಭವಾಯಿತಲ್ಲದೇ, ತಡರಾತ್ರಿವರೆಗೂ ಮುಂದುವರಿಯಿತು.

ಬೋರಿಸ್ ಜಾನ್ಸನ್

ಪ್ರಧಾನಿ ಪಟ್ಟ ಉಳಿಸಿಕೊಳ್ಳಲು ಜಾನ್ಸನ್ ಅವರಿಗೆ ಒಟ್ಟು 359 ಮತಗಳಲ್ಲಿ 180 ಮತಗಳು ಬೇಕು. ಒಂದು ವೇಳೆ ಜಾನ್ಸನ್ ಅವರು ಅಧಿಕಾರ ಕಳೆದುಕೊಂಡರೆ, ಬ್ರಿಟನ್ ಸಂಪುಟದ ಸಚಿವ ರಿಷಿ ಸುನಕ್ ಅವರು ಪ್ರಧಾನಿ ಸ್ಥಾನಕ್ಕೆ ಸ್ಪರ್ಧಿಯಾಗುವ ಸಾಧ್ಯತೆ ಇದೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಕೋವಿಡ್ ನಿರ್ವಹಣೆಯ-ಲ್ಲಿನ ವೈಫಲ್ಯ, ಅನೇಕ ಹಗರಣಗಳಿಂದಾಗಿ ಪಕ್ಷದ ಘನತೆಗೆ ಸಾರ್ವಜನಿಕವಾಗಿ ಧಕ್ಕೆ ತಂದ ಆರೋಪ ಎದುರಿಸುತ್ತಿರುವ ಜಾನ್ಸನ್ ಅವರು ಈ ಅಗ್ನಿಪರೀಕ್ಷೆ ಎದುರಿಸು-ತ್ತಿದ್ದಾರೆ. ಅದರಲ್ಲೂ, 'ಪಾರ್ಟಿಗೇಟ್' ವಿವಾದವು ಅವರ ಪ್ರಧಾನಿ ಸ್ಥಾನಕ್ಕೆ ಕುತ್ತಾಗಿ ಪರಿಣಮಿಸಿದೆ. ಹಾಗಾಗಿ, ಪಕ್ಷದ ಸದಸ್ಯರೇ ಜಾನ್ಸನ್ ಅವರ ರಾಜೀನಾಮೆಗೆ ಆಗ್ರಹಿಸಿದ್ದರು.

ಕಲ್ಲು ತೂರಾಟ: ಸಿಕ್ಕಿಬಿದ್ದ ಆರೋಪಿ

ಬೆಂಗಳೂರು: ಜಮ್ಮುವಿನಲ್ಲಿ ಸೈನಿಕರು ಹಾಗೂ ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿದ್ದ ಪ್ರಕರಣದ ಆರೋಪಿ ತಾಲಿಬ್ ಹುಸೇನ್ ಎಂಬಾತ ಬೆಂಗಳೂರಿನಲ್ಲಿ ಸಿಕ್ಕಿಬಿದ್ದಿದ್ದಾನೆ.

'ತಾಂತ್ರಿಕ ಸುಳಿವು ಆಧರಿಸಿ ನಗರಕ್ಕೆ ಬಂದಿದ್ದ ಕಾಶ್ಮೀರ ಪೊಲೀಸರ ತಂಡ, ತಾಲಿಬ್‌ನನ್ನು ಬಂಧಿಸಿ ಕರೆದೊಯ್ದಿದೆ' ಎಂದು ನಗರದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. 'ಜಮ್ಮು ನಿವಾಸಿ ಆಗಿದ್ದ ತಾಲಿಬ್, 2 ವರ್ಷಗಳ ಹಿಂದೆ ನಡೆದಿದ್ದ ಕಲ್ಲು ತೂರಾಟ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ. ಈತನ ವಿರುದ್ಧ ಜಮ್ಮುವಿನ ಕಿಸ್ತವಾರ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು ಎಂದರು.

ಮಂಗಳೂರಿನಲ್ಲಿ ₹ 52,000 ಕೋಟಿ ಹೂಡಿಕೆಗೆ ಒಪ್ಪಂದ

ಬೆಂಗಳೂರು: ಹರಿಯಾಣದ ಆಕ್ಮೆ ಕ್ಲೀನ್‌ಟೆಕ್ ಸಲ್ಯೂಷನ್ಸ್ ಕಂಪನಿ ಮಂಗಳೂರಿನಲ್ಲಿ ₹ 52,000 ಕೋಟಿ ವೆಚ್ಚದಲ್ಲಿ ಹಸಿರು ಹೈಡ್ರೋಜನ್-ಅಮೋನಿಯಾ ತಯಾರಿಕಾ ಘಟಕ ಹಾಗೂ ಪೂರಕವಾಗಿ ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲಿದೆ.

ಆಕ್ಮೆ ಸಮೂಹದ ಮುಖ್ಯ ಕಾರ್ಯನಿರ್ವಹ-ಣಾಧಿಕಾರಿ ಸಂದೀಪ್ ಕಶ್ಯಪ್ ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ. ರಮಣ ರೆಡ್ಡಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ಈ ಸಂಬಂಧ ಸೋಮವಾರ ಒಪ್ಪಂದಕ್ಕೆ ಸಹಿ ಹಾಕಿದರು. ಐದು ವರ್ಷಗಳ ಅವಧಿಯಲ್ಲಿ ಈ ಯೋಜನೆ ಪೂರ್ಣಗೊಳ್ಳಲಿದೆ.

ಈ ಯೋಜನೆಯ ಅಡಿಯಲ್ಲಿ 1,800 ಉದ್ಯೋಗಗಳ ಸೃಜನೆಯಾಗಲಿದೆ. ಯೋಜನೆ ಅನುಷ್ಠಾನಕ್ಕೆ ಅಗತ್ಯವಿರುವ ಪರವಾನಗಿ ವಿತರಣೆ, ನೋಂದಣಿ ಪ್ರಕ್ರಿಯೆ, ಅನುಮೋದನೆ, ನಿರಾಕ್ಷೇಪಣಾ ಪತ್ರ, ಪ್ರೋತ್ಸಾಹಧನವನ್ನು ಸಕಾಲದಲ್ಲಿ ಒದಗಿಸುವುದಾಗಿ ರಾಜ್ಯ ಸರ್ಕಾರ ಒಪ್ಪಂದದಲ್ಲಿ ತಿಳಿಸಿದೆ. ಐದು ವರ್ಷಗಳೊಳಗೆ ಘಟಕವನ್ನು ಆರಂಭಿಸುವುದಾಗಿ ಆಕ್ಮೆ ಸಮೂಹ ವಾಗ್ದಾನ ನೀಡಿದೆ.

ಒಪ್ಪಂದದ ಬಳಿಕ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ರಾಜ್ಯ ಸರ್ಕಾರವು ಹಸಿರು ಹೈಡ್ರೋಜನ್ ನೀತಿಯನ್ನು ಶೀಘ್ರದಲ್ಲಿ ಜಾರಿಗೆ ತರಲಿದೆ. ಆಕ್ಮೆ ಸಮೂಹವು ಅದರ ಪ್ರಯೋಜನ ಪಡೆದುಕೊಳ್ಳಬೇಕು' ಎಂದರು.

ಸಂಕ್ಷಿಪ್ತ ಸುದ್ದಿ

ಪತಿ ಕೊಲೆಗೆ ₹40 ಲಕ್ಷ ಸುಪಾರಿ: ಸೆರೆ

ದೊಡ್ಡಬಳ್ಳಾಪುರ: ಗಂಡನ ಕೊಲೆಗೆ ಹೆಂಡಿಯೇ ಸುಪಾರಿ ನೀಡಿ ಪೊಲೀಸರ ಕೈಗೆ ಸಿಕ್ಕಿಬಿದ್ದು ಜೈಲು ಸೇರುವಂತಾಗಿದೆ. ನಗರದ ಹೊರವಲಯದ ಕೈಗಾರಿಕಾ ಪ್ರದೇಶದಲ್ಲಿನ ಬಾಂಬೆರೇಯಾನ್ ಬಳಿ ಶಿಕ್ಷಣ ಇಲಾಖೆ ನೌಕರರ ಕಾರನ್ನು ಅಡ್ಡಗಟ್ಟಿ ಹಲ್ಲೆ ನಡೆಸಿದ್ದ, ಪ್ರಕರಣವನ್ನು ಗ್ರಾಮಾಂತರ ಠಾಣೆ ಪೊಲೀಸರು ಭೇದಿಸಿ ನಾಲ್ಕು ಜನ ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಈ ಕುರಿತಂತೆ ಸೋಮವಾರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕೋನ ವಂಶಿಕೃಷ್ಣ, ಮೇ 25 ರಂದು ಬೀರಸಂದ್ರದಲ್ಲಿನ ಡಿಡಿಪಿಐ ಕಚೇರಿಯಲ್ಲಿ ಕರ್ತವ್ಯ ಮುಗಿಸಿ ಮನೆಗೆ ತೆರಳುತ್ತಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆ ಸಿಬ್ಬಂದಿ ಕಾರನ್ನು ಅಡ್ಡಗಟ್ಟಿದ್ದ ನಾಲ್ಕು ಜನರು ಕಾರಿನ ಗಾಜುಗಳನ್ನು ಜಖಂಗೊಳಿಸಿ ಪರಾರಿಯಾಗಿದ್ದರು. ಕಾರನ್ನು ಚಲಾಯಿಸುತ್ತಿದ್ದ ಸಿಬ್ಬಂದಿ ಮುಕುಂದ ಅವರ ಮೇಲೆ ಹಲ್ಲೆ ನಡೆಸಿದ್ದ ಕುರಿತಾಗಿ ಕಾರಿನಲ್ಲಿದ್ದ ಹನುಮಂತರಾಜು ಎಂಬುವವರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು ಎಂದರು.

ಶಿಡ್ಲಘಟ್ಟದ ಮೌಲಾ(36), ಬೆಂಗಳೂರಿನ ಕೆ.ಜಿ.ಹಳ್ಳಿ ನಿವಾಸಿ ಸೈಯದ್ ನಹೀಮ್(32), ಟಿ.ದಾ-ಸರಹಳ್ಳಿಯ ತಸ್ಲೀಮ್(45), ಹಲ್ಲೆ ಕುರಿತು ಠಾಣೆಗೆ ದೂರ ನೀಡಿದ್ದ ಮುಕುಂದ ಅವರ ಪತ್ನಿ ಮಮತಾ(44) ಎಂಬುವವರನ್ನು ಬಂಧಿಸಲಾಗಿದೆ.

ಚಿರತೆ ಚರ್ಮ, ಗಾಂಜಾ ಮಾರಾಟ: ರೌಡಿ ಬಂಧನ

ಬೆಂಗಳೂರು: ಚಿರತೆ ಚರ್ಮ ಹಾಗೂ ಗಾಂಜಾ ಮಾರಾಟ ಪ್ರಕರಣದಲ್ಲಿ ರೌಡಿ ಧನರಾಜ್ (30) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ನಗರದಲ್ಲಿ ರೌಡಿ ಚಟುವಟಿಕೆ ಹತ್ತಿಕ್ಕಲು ಕಾರ್ಯಾಚರಣೆ ನಡೆಸಲಾಗುತ್ತಿದೆ. ರೌಡಿ ಧನರಾಜ್, ಚರ್ಮ ಹಾಗೂ ಗಾಂಜಾ ಮಾರಾಟದಲ್ಲಿ ತೊಡಗಿದ್ದ ಮಾಹಿತಿ ಸಿಕ್ಕಿತ್ತು. ದಾಳಿ ಮಾಡಿ ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಜಪ್ತಿ ಮಾಡಲಾದ ಚಿರತೆ ಚರ್ಮ

'ಹಲ್ಲೆ, ಸುಲಿಗೆ ಸೇರಿದಂತೆ ಹಲವು ಪ್ರಕರಣಗಳಲ್ಲಿ ಧನರಾಜ್ ಭಾಗಿಯಾಗಿದ್ದ. ಭಾರತಿನಗರ ಠಾಣೆಯ ರೌಡಿ ಪಟ್ಟಿಯಲ್ಲಿ ಈತನ ಹೆಸರಿತ್ತು. ಸದ್ಯ ಈತನಿಂದ ₹ 10 ಲಕ್ಷ ಮೌಲ್ಯದ ಚಿರತೆ ಚರ್ಮ ಹಾಗೂ ₹ 8 ಸಾವಿರ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

'ಎನ್‌ಡಿಪಿಎಸ್ ಹಾಗೂ ವನ್ಯಜೀವಿಗಳ ಕಾಯ್ದೆಯಡಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಚಿರತೆ ಚರ್ಮವನ್ನು ರೌಡಿ ಎಲ್ಲಿಂದ ತಂದಿದ್ದನೆಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದೂ ಹೇಳಿದರು.

ರಮೇಶ್ ಕುಮಾರ್ ಭರ್ಜರಿ ಸ್ಟೆಪ್ಸ್!

ಶ್ರೀನಿವಾಸಪುರ: ಪಟ್ಟಣದಲ್ಲಿ ಭಾನುವಾರ ರಾತ್ರಿ ಜನ್ಮಭೂಮಿ ವೇದಿಕೆ ವತಿಯಿಂದ ಶ್ರೀನಿವಾಸಪುರ ಹಬ್ಬದ ಪ್ರಯುಕ್ತ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಾಸಕ ಕೆ.ಆರ್. ರಮೇಶ್ ಕುಮಾರ್, ತೆಲುಗು ಚಿತ್ರಗೀತೆಗಳಿಗೆ ದಣಿವರಿಯದೆ ಕುಣಿಯುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಗಾಯಕಿ ಮಂಗ್ಲಿ ಅವರ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ವೇಳೆ ವೇದಿಕೆ ಮೇಲಿದ್ದ ಶಾಸಕ ರಮೇಶ್ ಕುಮಾರ್ ಅವರನ್ನು ಹಾಡೊಂದಕ್ಕೆ ಕುಣಿಯುವಂತೆ ಕೇಳಿಕೊಳ್ಳಲಾಯಿತು. ಮೊದಲು ನಿರಾಕರಿಸಿದರಾದರೂ ಪ್ರೇಕ್ಷಕರಿಂದ ಒತ್ತಾಯ ಹೆಚ್ಚಿದಾಗ ಖ್ಯಾತ ನಟ ಹಾಗೂ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಅವರು ನಟಿಸಿದ್ದ ಚಿತ್ರಗಳ ಜನಪ್ರಿಯ ಹಾಡುಗಳಿಗೆ ಹೆಜ್ಜೆ ಹಾಕಿದರು.

ಟಿಕಾಯತ್ ಮೇಲಿನ ಹಲ್ಲೆ ಪ್ರಕರಣ: ಮನೆ ಮೇಲೆ ದಾಳಿ: 7 ಮಚ್ಚು, 2 ತಲ್ವಾರ್ ಜಪ್ತಿ

'ಶ್ರೀ ಶಿವಶಕ್ತಿ' ಸಂಘದ ಅಧ್ಯಕ್ಷೆ ಬಂಧನ

ಪ್ರಜಾವಾಣಿ ವಾರ್ತೆ

ಉಮಾದೇವಿ

ಬೆಂಗಳೂರು: ಭಾರತೀಯ ಕಿಸಾನ್ ಒಕ್ಕೂಟದ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್ (55) ಮೇಲೆ ಹಲ್ಲೆ ಮಾಡಿ, ಮಸಿ ಎರಚಿದ್ದ ಪ್ರಕರಣದ ಸಂಬಂಧ ಮತ್ತೊಬ್ಬ ಆರೋಪಿ ಎಚ್.ಆರ್. ಉಮಾದೇವಿ ಅವರನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹೆಬ್ಬಾಳ ನಿವಾಸಿ ಉಮಾದೇವಿ, ಶ್ರೀ ಶಿವಶಕ್ತಿ ಮಹಿಳಾ ಸಂಘ ಹಾಗೂ ಶ್ರೀ ಶಿವಶಕ್ತಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷೆ. ಭಾನುವಾರ ಈಕೆಯನ್ನು ಬಂಧಿಸಲಾಗಿದ್ದು, ಸೋಮವಾರ ಬೆಳಿಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿ-ಸಲಾಯಿತು. ಹೆಚ್ಚಿನ ವಿಚಾರಣೆಗಾಗಿ 5 ದಿನ ಕಸ್ಟಡಿಗೆ ಪಡೆಯಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಗಾಂಧಿಭವನ ಸಭಾಭವನದಲ್ಲಿ ಮೇ 30 ರಂದು ಆಯೋಜಿಸಿದ್ದ ರೈತ ಮುಖಂಡರ ಪತ್ರಿಕಾಗೋಷ್ಠಿಯಲ್ಲಿ ರಾಕೇಶ್ ಮೇಲೆ ಹಲ್ಲೆ ಮಾಡಿ, ಕಪ್ಪು ಮಸಿ ಎರಚಿ 'ಮೋದಿ... ಮೋದಿ...' ಘೋಷಣೆ ಕೂಗಲಾಗಿತ್ತು. ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದಡಿ 'ಭಾರತ ರಕ್ಷಣಾ ವೇದಿಕೆ' ರಾಜ್ಯ ಘಟಕದ ಅಧ್ಯಕ್ಷ ಭರತ್ ಶೆಟ್ಟಿ, ಶಿವಕುಮಾರ್ ಹಾಗೂ ಪ್ರದೀಪ್ ಎಂಬುವರನ್ನು ಬಂಧಿಸಲಾಗಿತ್ತು' ಎಂದೂ ತಿಳಿಸಿದರು.

'ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿ ಸನ್ನಡತೆ ಆಧಾರದಲ್ಲಿ ಬಿಡುಗಡೆ ಆಗಿದ್ದ ಶಿವಕುಮಾರ್‌ನ ತಂಗಿಯಾಗಿದ್ದ ಉಮಾದೇವಿ ಸಹ ಕೃತ್ಯದಲ್ಲಿ ಭಾಗಿಯಾಗಿದ್ದಳು. ಕೆಲ ಪುರಾವೆಗಳನ್ನು ಸಂಗ್ರಹಿಸಿ, ಈಕೆಯನ್ನು ಬಂಧಿಸಲಾಗಿದೆ. ಕೃತ್ಯ ಎಸಗಲು ಕಾರಣವೇನು ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದೂ ಹೇಳಿದರು.

7 ಮಚ್ಚು, 2 ತಲ್ವಾರ್ ಜಪ್ತಿ: ಹೆಬ್ಬಾಳದಲ್ಲಿರುವ ಉಮಾದೇವಿ ಮನೆ ಮೇಲೆ ಪೊಲೀಸರು ಭಾನುವಾರ ದಾಳಿ ಮಾಡಿದ್ದಾರೆ. ಈ ವೇಳೆ 7 ಮಚ್ಚು ಹಾಗೂ 2 ತಲ್ವಾರ್‌ಗಳು ಪತ್ತೆಯಾಗಿವೆ.

'ನ್ಯಾಯಾಲಯದ ವಾರೆಂಟ್ ಪಡೆದು ಮನೆಯಲ್ಲಿ ಶೋಧ ನಡೆಸಲಾಯಿತು. ಹಲವೆಡೆ ಮಚ್ಚು ಹಾಗೂ ತಲ್ವಾರ್‌ಗಳನ್ನು ಬಚ್ಚಿಡಲಾ-ಗಿತ್ತು. ಈ ಬಗ್ಗೆ ಪ್ರಶ್ನಿಸಿದರೆ, ಆರೋಪಿ ಯಾವುದೇ ಉತ್ತರ ನೀಡುತ್ತಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಶ್ರೀ ಶಿವಶಕ್ತಿ ಸಂಘ ಹಾಗೂ ಟ್ರಸ್ಟ್ ಸ್ಥಾಪಿಸಿದ್ದ ಆರೋಪಿ ಉಮಾದೇವಿ, ಮಹಿಳೆಯರನ್ನು ಸಂಘಟಿಸಿ ಕಾರ್ಯಕ್ರಮ ಮಾಡುತ್ತಿದ್ದರು. ಇದರ ಜೊತೆಯಲ್ಲೇ ಕೆಲ ಅಪರಾಧ ಕೃತ್ಯಗಳಲ್ಲೂ ಉಮಾದೇವಿ ಭಾಗಿಯಾಗಿರುವ ಮಾಹಿತಿ ಇದೆ' ಹೇಳಿವೆ.

ಆರೋಪಿ ಉಮಾದೇವಿ ಮನೆಯಲ್ಲಿ ದೊರೆತ ಮಚ್ಚು ಹಾಗೂ ತಲ್ವಾರ್‌ಗಳನ್ನು ಪೊಲೀಸರು ಪರಿಶೀಲಿಸಿದರು

'ಕೃತ್ಯ ಎಸಗಲು ಕುಮ್ಮಕ್ಕು'

'ರಾಕೇಶ್ ಟಿಕಾಯತ್ ಹಾಗೂ ಇತರರ ಮೇಲೆ ಹಲ್ಲೆ ಮಾಡಿ, ಮಸಿ ಎರಚಲು ಕೆಲವರು ಕುಮ್ಮಕ್ಕು ನೀಡಿರುವ ಮಾಹಿತಿ ಇದೆ. ಅವರು ಯಾರು ಎಂಬುದನ್ನು ಪತ್ತೆ ಮಾಡಲು ಆರೋಪಿಗಳ ವಿಚಾರಣೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.



❦ ಸುಭಾಷಿತ ❦
ಎಲ್ಲರನ್ನೂ ನಂಬುವುದು ಅಥವಾ ಯಾರನ್ನೂ ನಂಬದಿರುವುದು ತಪ್ಪು. –ಚಾಣಕ್ಯ

ಹಿಂದಿನ ಪುಸ್ತಕಗಳನ್ನೇ ಮುಂದುವರಿಸಿ ಪರಿಷ್ಕರಣೆ ಮುಂದಿನ ವರ್ಷಕ್ಕಿರಲಿ

ಪರಿಷ್ಕೃತ ಪಠ್ಯಪುಸ್ತಕಗಳ ಬಗ್ಗೆ ಸಾರ್ವಜನಿಕ ವಲಯದಿಂದ ಆಕ್ಷೇಪಗಳು ಮತ್ತು ದೂರುಗಳು ಪ್ರತಿದಿನವೂ ವ್ಯಕ್ತವಾಗುತ್ತಿರುವ ಸಂದರ್ಭದಲ್ಲೇ ‘ಪಠ್ಯಪುಸ್ತಕ ಪರಿಷ್ಕರಣೆ ಸಮಿತಿ’ಯನ್ನು ವಿಸರ್ಜಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆದೇಶ ಹೊರಡಿಸಿದ್ದಾರೆ. ಮುಖ್ಯಮಂತ್ರಿ ಆದೇಶ ‘ಕೋಲೂ ಮುರಿಯಬಾರದು, ಹಾವೂ ಸಾಯಬಾರದು’ ಎನ್ನುವ ಮಾತಿಗೆ ತಕ್ಕಂತಿದೆ. ವಿಸರ್ಜನೆಗೊಂಡ ಸಮಿತಿ ಪರಿಷ್ಕರಿಸಿದ ಪಠ್ಯಪುಸ್ತಕಗಳನ್ನು ಮಕ್ಕಳ ಕೈಗೆ ನೀಡುವ ಸರ್ಕಾರದ ನಿರ್ಧಾರ, ಪಠ್ಯಪುಸ್ತಕಗಳ ಮೂಲ ಉದ್ದೇಶವನ್ನೇ ಅಣಕಿಸುವಂತಿದೆ. ಮಕ್ಕಳ ಕಲಿಕೆ ಮತ್ತು ಮನೋವಿಕಾಸಕ್ಕೆ ಕಾರಣವಾಗಬೇಕಾದ ಪುಸ್ತಕಗಳು ಗೊಂದಲಗಳಿಂದ ಮುಕ್ತವಾಗಿರುವುದು ಅವಶ್ಯಕ. ಆದರೆ, ಪರಿಷ್ಕೃತ ಪಠ್ಯಪುಸ್ತಕಗಳ ಕುರಿತು ಹೊಸ ಹೊಸ ದೂರುಗಳು ನಿರಂತರವಾಗಿ ವ್ಯಕ್ತವಾಗುತ್ತಲೇ ಇವೆ. ಪರಿಷ್ಕರಣಾ ಸಮಿತಿಯ ಕಾರ್ಯವೈಖರಿ ಬಗ್ಗೆ ತಾತ್ವಿಕ ವಿರೋಧ ವ್ಯಕ್ತಪಡಿಸಿರುವ ಕೆಲವು ಬರಹಗಾರರು ತಮ್ಮ ರಚನೆಗಳನ್ನು ಪಠ್ಯಪುಸ್ತಕಗಳಲ್ಲಿ ಬಳಸಿಕೊಳ್ಳಲು ನೀಡಿದ್ದ ಅನುಮತಿ ಹಿಂತೆಗೆದುಕೊಂಡಿದ್ದಾರೆ. ಕನ್ನಡ ಸಂಘಟನೆಗಳು, ಕೆಲವು ಮಠಾಧೀಶರು, ಶಿಕ್ಷಣ ತಜ್ಞರು ಪರಿಷ್ಕೃತ ಪಠ್ಯಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪರಿಷ್ಕೃತ ಪಠ್ಯಗಳಲ್ಲಿ ಇರುವ ಲೋಪದೋಷಗಳ ಕುರಿತು ಸಾರ್ವಜನಿಕ ವಲಯದಿಂದಲೂ ಟೀಕೆಟಿಪ್ಪಣಿಗಳು ವ್ಯಕ್ತವಾಗುತ್ತಿವೆ. ಭಿನ್ನಾಭಿಪ್ರಾಯ ಮತ್ತು ದೂರುಗಳನ್ನು ಬದಿಗಿರಿಸಿ, ವಿವಾದಕ್ಕೆ ಕಾರಣವಾಗಿರುವ ಸಮಿತಿ ರೂಪಿಸಿದ ಪಠ್ಯಪುಸ್ತಕಗಳನ್ನು ಮಕ್ಕಳ ಕೈಗೆ ನೀಡುವುದು ತಾತ್ವಿಕವಾಗಿ ಸರಿಯಾದ ಕ್ರಮವಲ್ಲ. ವಿವಾದಕ್ಕೆ ಕಾರಣವಾದ, ಗೊಂದಲಗಳ ಗೂಡಾದ ಪಠ್ಯಪುಸ್ತಕಗಳನ್ನು ಎಳೆಯ ಮನಸ್ಸುಗಳ ಮೇಲೆ ಹೇರುವ ಸರ್ಕಾರದ ಪ್ರಯತ್ನಕ್ಕೆ ಯಾವ ಸಮರ್ಥನೆಯೂ ಇಲ್ಲ. ಹಿಂದಿನ ಪಠ್ಯಪುಸ್ತಕಗಳನ್ನೇ ಮುಂದುವರಿಸುವ ಮೂಲಕ ಎಲ್ಲ ಗೊಂದಲಗಳಿಗೆ ತೆರೆ ಎಳೆಯುವುದು ಸದ್ಯಕ್ಕೆ ಸರ್ಕಾರದ ಮುಂದಿರುವ ವಿವೇಕದ ದಾರಿ. ಹಳೆಯ ಪಠ್ಯಪುಸ್ತಕಗಳನ್ನೇ ಮುಂದುವರಿಸಿರುವ ಸಿಬಿಎಸ್‌ಇ ನಿರ್ಧಾರವು ರಾಜ್ಯ ಪಠ್ಯಕ್ರಮಕ್ಕೂ ಮಾದರಿಯಾಗಬೇಕು.

ಹಟಮಾರಿ ಧೋರಣೆಯನ್ನು ಕೈಬಿಟ್ಟು, ವಿದ್ಯಾರ್ಥಿಗಳ ಹಿತವನ್ನಷ್ಟೇ ಗಮನದಲ್ಲಿ ಇಟ್ಟುಕೊಂಡು ನಿರ್ಧಾರಗಳನ್ನು ಕೈಗೊಳ್ಳಬೇಕು

ಪ್ರಸ್ತುತ ಸಿದ್ಧಗೊಂಡಿರುವ ಪಠ್ಯಪುಸ್ತಕಗಳು ಯಾರಿಗೂ ತೃಪ್ತಿ ತಂದಂತಿಲ್ಲ. ಅಂಬೇಡ್ಕರ್ ಕುರಿತ ಪಾಠದಲ್ಲಿ ‘ಸಂವಿಧಾನ ಶಿಲ್ಪಿ’ ಎನ್ನುವ ವಿಶೇಷಣವನ್ನು ಬಿಟ್ಟಿರುವುದರ ಬಗ್ಗೆ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ದಲಿತ ಬರಹಗಾರರ ಬರಹಗಳನ್ನು ಪ್ರಜ್ಞಾಪೂರ್ವಕವಾಗಿ ಕೈಬಿಡಲಾಗಿದೆ ಎಂದು ಹೇಳಲಾಗುತ್ತಿದೆ. ಪರಿಷ್ಕರಣಾ ಸಮಿತಿ ಅಧ್ಯಕ್ಷರಿಂದ ಕುವೆಂಪು ಅವರಿಗೆ ಅವಮಾನವಾಗಿದೆ ಎಂದು ಒಕ್ಕಲಿಗ ಸಮುದಾಯ ಆರೋಪಿಸಿದೆ. ಬಸವಣ್ಣನವರ ಚಿತ್ರಣವು ಅವರ ಬದುಕು ಮತ್ತು ಆಶಯಗಳಿಗೆ ತಕ್ಕಂತಿಲ್ಲ ಎಂದು ಲಿಂಗಾಯತ ಸಮುದಾಯ ತಕರಾರು ಎತ್ತಿದೆ. ಧರ್ಮಗುರುಗಳನ್ನು ಪರಿಚಯಿಸುವ ಟಿಪ್ಪಣಿಗಳಲ್ಲಿ ಕೆಲವರಿಗೆ ಏಕವಚನ, ಮತ್ತೆ ಕೆಲವರಿಗೆ ಬಹುವಚನ ಬಳಸಿರುವ ಬರವಣಿಗೆಗಳೂ ಟೀಕೆಗೊಳಗಾಗಿವೆ. ಪ್ರಖ್ಯಾತ ಗೀತರಚನೆಕಾರ ಚಿ. ಉದಯಶಂಕರ್ ಅವರ ಗೀತೆಯನ್ನು ಆರ್.ಎನ್. ಜಯಗೋಪಾಲ್ ಹೆಸರಿನಲ್ಲಿ ಬಳಸಿಕೊಳ್ಳಲಾಗಿದೆ. ಒಂದೇ ಪದ್ಯವನ್ನು ಎರಡು ತರಗತಿಗಳ ಪಠ್ಯಗಳಲ್ಲಿ ಬಳಸಿಕೊಳ್ಳಲಾಗಿದೆ. ಹೀಗೆ, ಪರಿಷ್ಕೃತ ಪಠ್ಯಗಳ ಬಗ್ಗೆ ದಿನವೂ ಹೊಸ ಹೊಸ ಆಕ್ಷೇಪಗಳು ವ್ಯಕ್ತವಾಗುತ್ತಿವೆ. ಇಷ್ಟೆಲ್ಲ ದೂರುಗಳನ್ನು ಒಳಗೊಂಡ ಪಠ್ಯಪುಸ್ತಕಗಳನ್ನು ಮಕ್ಕಳ ಕೈಗೆ ಕೊಡುವುದು ನೈತಿಕತೆ ಅಲ್ಲ, ಶೈಕ್ಷಣಿಕ ಶಿಸ್ತೂ ಅಲ್ಲ.

ಪಠ್ಯಪುಸ್ತಕ ಪರಿಷ್ಕರಣೆಯು ಅವಸರದಲ್ಲಿ ನಡೆಯುವಂತಹದ್ದಲ್ಲ. ಹೆಚ್ಚು ಕಾಲಾವಕಾಶ, ಸಂಯಮ, ಪರಿಣತಿ ಹಾಗೂ ವಿವೇಕವನ್ನು ಅಪೇಕ್ಷಿಸುವ ಪ್ರಕ್ರಿಯೆಯದು. ಪಠ್ಯಪುಸ್ತಕಗಳನ್ನು ಯಾರು ಪರಿಷ್ಕರಣೆ ಮಾಡಬೇಕೆನ್ನುವುದು ಸರ್ಕಾರದ ವಿವೇಚನೆಗೆ ಸಂಬಂಧಿಸಿದ ಸಂಗತಿ. ಯಾರ, ಯಾವ ಬರಹಗಳನ್ನು ಪಾಠಗಳನ್ನಾಗಿ ಮಾಡಬೇಕೆನ್ನುವುದು ಆಯ್ಕೆ ಸಮಿತಿಗೆ ಸಂಬಂಧಿಸಿದ ಸಂಗತಿ. ಆದರೆ, ಈ ಆಯ್ಕೆಗಳು ಹಾಗೂ ಪರಿಷ್ಕರಣೆಯು ಗೊಂದಲಗಳಿಗೆ ಆಸ್ಪದ ಕಲ್ಪಿಸಬಾರದು. ಆದಷ್ಟೂ ಸರ್ವಸಮ್ಮತ ಪಠ್ಯಪುಸ್ತಕಗಳನ್ನು ರೂಪಿಸಲಿಕ್ಕೆ ಸರ್ಕಾರ ಪ್ರಯತ್ನಿಸಬೇಕು. ಆ ಪ್ರಯತ್ನವನ್ನು ಮಾಡದೆ, ಅವಸರದಲ್ಲಿ ಪಠ್ಯ ಪರಿಷ್ಕರಣೆ ಮುಗಿಸುವುದು ಮತ್ತಷ್ಟು ಎಡವಟ್ಟುಗಳಿಗೆ ಅವಕಾಶ ಮಾಡಿಕೊಡುತ್ತದೆ ಎನ್ನುವುದಕ್ಕೆ ಪ್ರಸ್ತುತ ಪರಿಷ್ಕೃತಗೊಂಡಿರುವ ಪಠ್ಯಗಳು ಉದಾಹರಣೆಯಂತಿವೆ. ಈ ಪಠ್ಯಪುಸ್ತಕಗಳನ್ನು ಸರ್ಕಾರ ತಡೆಹಿಡಿದು, ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹಳೆಯ ಪುಸ್ತಕಗಳನ್ನೇ ಮುಂದುವರಿಸುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಗತ್ಯವಾಗಿರುವ ಕ್ರಮ. ಗೊಂದಲಗಳ ಗೂಡಾದ ಪರಿಷ್ಕೃತ ಪಠ್ಯಗಳನ್ನು ಉಳಿಸಿಕೊಳ್ಳುವುದನ್ನು ಸರ್ಕಾರ ಪ್ರತಿಷ್ಠೆಯ ವಿಷಯವಾಗಿ ಭಾವಿಸಬಾರದು. ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ ಎದುರಾಗಿರುವ ತಾತ್ವಿಕ ವಿರೋಧವನ್ನು ಹಾಗೂ ಸಾರ್ವಜನಿಕ ಅಭಿಪ್ರಾಯಗಳನ್ನು ಸರ್ಕಾರ ಸಾವಧಾನದಿಂದ ಪರಿಶೀಲಿಸಬೇಕು. ಹಟಮಾರಿ ಧೋರಣೆಯನ್ನು ಕೈಬಿಟ್ಟು, ವಿದ್ಯಾರ್ಥಿಗಳ ಹಿತವನ್ನಷ್ಟೇ ಗಮನದಲ್ಲಿ ಇಟ್ಟುಕೊಂಡು ನಿರ್ಧಾರಗಳನ್ನು ಕೈಗೊಳ್ಳಬೇಕು. ಪರಿಷ್ಕೃತ ಪಠ್ಯಪುಸ್ತಕಗಳ ಬಗ್ಗೆ ಉಂಟಾಗಿರುವ ಗೊಂದಲಗಳನ್ನು ಬಗೆಹರಿಸಿದ ನಂತರ, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಹೊಸ ಪಠ್ಯಪುಸ್ತಕಗಳನ್ನು ಪರಿಚಯಿಸುವುದಕ್ಕೆ ಅವಕಾಶ ಇದ್ದೇ ಇದೆ. ಆ ಕೆಲಸವನ್ನು ಮಾಡದೆ, ಈಗ ಸಿದ್ಧಗೊಂಡಿರುವ ಪುಸ್ತಕಗಳನ್ನೇ ಮಕ್ಕಳ ಕೈಗೆ ಕೊಡಲು ಹೊರಡುವುದು ಪ್ರಜಾಸತ್ತಾತ್ಮಕ ಸರ್ಕಾರಕ್ಕೆ ಶೋಭೆ ತರುವ ನಡವಳಿಕೆಯಲ್ಲ.

ದಿನದ ಟ್ವೀಟ್

ಮೈ ಲಾರ್ಡ್ ಪ್ರಲಾಪ!

ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ: ಪ್ರತೀ ಎರಡು ಪದಗಳಿಗೊಮ್ಮೆ ನೀವು ‘ಮೈ ಲಾರ್ಡ್’ ಎನ್ನುತ್ತಿದ್ದೀರಿ. ದಯವಿಟ್ಟು ಹಾಗೆ ಹೇಳುವುದನ್ನು ನಿಲ್ಲಿಸಿ ಮತ್ತು ನಿಮ್ಮ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ ಆರಂಭಿಸಿ.
ವಕೀಲ: ಕ್ಷಮಿಸಿ ಮೈ ಲಾರ್ಡ್. ಇದು ಅಭ್ಯಾಸವಾಗಿ ಹೋಗಿದೆ ಮೈ ಲಾರ್ಡ್. ಅದನ್ನು ನಿಯಂತ್ರಿಸಲು ನಾನು ಪ್ರಯತ್ನಿಸುತ್ತೇನೆ ಮೈ ಲಾರ್ಡ್...

ಮಹಮ್ಮದ್ ಇಮ್ರಾನುಲ್ಲಾ ಎಸ್., ಪತ್ರಕರ್ತ

ಕಿಡಿನುಡಿ

ಹುಸ್ಕೂರು- ಸರ್ಜಾಪುರ ರಸ್ತೆ ಕೆಟ್ಟ ಸ್ಥಿತಿಯಲ್ಲಿದೆ. ಈ ವಿಷಯದಲ್ಲಿ ತಮ್ಮ ಜವಾಬ್ದಾರಿಯನ್ನು ಸಂಪೂರ್ಣವಾಗಿ ಮರೆತಿರುವ ನಮ್ಮ ಶಾಸಕರು, ಆನೇಕಲ್ ತಾಲ್ಲೂಕನ್ನು ಪ್ರತಿನಿಧಿಸುವ ಸಂಸದರು ಹಾಗೂ ಹುಸ್ಕೂರು ಗ್ರಾಮ ಪಂಚಾಯಿತಿಯ ಬಗ್ಗೆ ಅತೀವ ಬೇಸರವಾಗಿದೆ ಮತ್ತು ಸಿಟ್ಟು ಬಂದಿದೆ. ಸರಿಯಾದ ರಸ್ತೆ ಸಂಪರ್ಕವೇ ಇಲ್ಲದ ಮೇಲೆ ಸರ್ಕಾರವು ಬಸ್ ಡಿಪೊ ಹಾಗೂ ಕ್ವಾರ್ಟರ್ಸ್ ಅನ್ನು ನಿರ್ಮಿಸುವುದೇಕೆ? ಎಲ್ಲ ಸ್ಥಳೀಯ ರಾಜಕಾರಣಿಗಳಿಗೂ ನಾಚಿಕೆಯಾಗಬೇಕು.

ಕಿರಣ್ ಮಜುಂದಾರ್ ಶಾ, ಉದ್ಯಮಿ

25 ವರ್ಷಗಳ ಹಿಂದೆ
ಶನಿವಾರ, 7-6-1997

• ಏಳು ಹೊಸ ಜಿಲ್ಲೆ ರಚನೆಗೆ ಸಂಪುಟ ಸಭೆ ಒಪ್ಪಿಗೆ

ಬೆಂಗಳೂರು, ಜೂನ್ 6– ದಾವಣಗೆರೆ, ಬಾಗಲಕೋಟೆ, ಗದಗ, ಹಾವೇರಿ, ಕೊಪ್ಪಳ, ಚಾಮರಾಜನಗರ ಮತ್ತು ಉಡುಪಿ ಕೇಂದ್ರವಾಗುಳ್ಳ ಏಳು ಹೊಸ ಜಿಲ್ಲೆಗಳ ರಚನೆಗೆ ಸಚಿವ ಸಂಪುಟ ಸಭೆಯು ಇಂದು ಒಪ್ಪಿಗೆ ನೀಡಿತು. ಇವುಗಳಲ್ಲಿ ಒಂದೆರಡು ಜಿಲ್ಲೆಗಳು ಆಗಸ್ಟ್ 15ರಂದು ಉದ್ಘಾಟನೆಗೊಳ್ಳಲಿವೆ.

• ಜೆ.ಎಚ್. ಪಟೇಲ್‌ಗೆ ಹೆಗಡೆ ಸೂಚನೆ

ಬೆಂಗಳೂರು, ಜೂನ್ 6– ಜನತಾದಳದ ರಾಷ್ಟ್ರೀಯ ಅಧ್ಯಕ್ಷರ ಚುನಾವಣೆ ಕಾವಿನ ಬಿಸಿ ರಾಜ್ಯ ಜನತಾದಳಕ್ಕೂ ತಟ್ಟಿದ್ದು, ಹಾಲಿ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್ ಅಥವಾ ಹಾಲಿ ಕಾರ್ಯಾಧ್ಯಕ್ಷ ಶರದ್ ಯಾದವ್ ಇಬ್ಬರಲ್ಲಿ ಯಾರ ಪರ ಒಲವು ತೋರಬೇಕೆಂಬ ಜಿಜ್ಞಾಸೆ ಉಂಟಾಗಿದೆ.

ಅಧ್ಯಕ್ಷರ ಆಯ್ಕೆಯಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯದ ಅವಕಾಶ ಉಪಯೋಗಿಸಿಕೊಂಡು ಗೌಡರ ಹಿಡಿತದಿಂದ ಹೊರಬಂದು ತಮ್ಮದೇ ಅದ ನಿಲುವನ್ನು ತಾಳುವಂತೆ ಮಾಜಿ ಮುಖ್ಯಮಂತ್ರಿ ಹಾಗೂ ಲೋಕಶಕ್ತಿಯ ಅಧ್ಯಕ್ಷ ರಾಮಕೃಷ್ಣ ಹೆಗಡೆ ಅವರು ಪಟೇಲರಿಗೆ ಸೂಚನೆ ನೀಡಿದ್ದಾರೆಂಬ ವದಂತಿ ಹಬ್ಬಿದೆ.

50 ವರ್ಷಗಳ ಹಿಂದೆ
ಬುಧವಾರ, 7-6-1972

• ದೇವಾಲಯಗಳ ನಿಧಿ ನಿರ್ವಹಣೆ: ಪ್ರತ್ಯೇಕ ಶಾಸನ ರಚನೆ

ಬೆಂಗಳೂರು, ಜೂನ್ 6– ರಾಜ್ಯದಲ್ಲಿ ಗಣನೀಯ ಪ್ರಮಾಣದಲ್ಲಿ ಆದಾಯವಿರುವ ದೇವಾಲಯಗಳ ನಿಧಿಯ ನಿರ್ವಹಣೆ ಯೋಗ್ಯ ರೀತಿಯಲ್ಲಿ ನಡೆಯುವಂತಾಗಲು ಸರ್ಕಾರ ಈ ದೇವಾಲಯಗಳ ಆಡಳಿತ ವ್ಯವಸ್ಥೆ ಬಗ್ಗೆ ಪ್ರತ್ಯೇಕ ಶಾಸನಗಳನ್ನು ರಚಿಸಲಿದೆ.

ಈ ನಿರ್ಧಾರವನ್ನನುಸರಿಸಿ, ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿರುವ ಪ್ರಸಿದ್ಧ ಎಲ್ಲಮ್ಮ ದೇವಸ್ಥಾನದ ಆಡಳಿತ ವ್ಯವಸ್ಥೆ ಸಂಬಂಧದಲ್ಲಿ ಪ್ರಥಮವಾಗಿ ಶಾಸನ ರಚಿಸಲಾಗುವುದು.

• ಎಂ.ಎಸ್. ಕೃಷ್ಣಮೂರ್ತಿ ಅವರ ಕೃತಿಗೆ ಪ್ರಥಮ ಬಹುಮಾನ

ನವದೆಹಲಿ, ಜೂನ್ 6– ಹಿಂದಿ ಮಾತನಾಡದ ರಾಜ್ಯಗಳ 10 ಮಂದಿ ಹಿಂದಿ ಲೇಖಕರು 1971–72ನೇ ಸಾಲಿನಲ್ಲಿ ತಮ್ಮ ಹಿಂದಿ ಭಾಷಾ ಸಾಹಿತ್ಯ ಕೃತಿಗಾಗಿ ಬಹುಮಾನ ಗಳಿಸಿದ್ದಾರೆ.

ಈ ಲೇಖಕರ ಮಾತೃಭಾಷೆ ಹಿಂದಿಯಲ್ಲ. ಕನ್ನಡ ಮಾತೃಭಾಷೆಯ ಡಾ. ಎಂ.ಎಸ್. ಕೃಷ್ಣಮೂರ್ತಿ (ಇಂದ್ರೇಶ್) ಅವರು ಹಿಂದಿಯಲ್ಲಿ ಬರೆದ ‘ಅಪರಾಜಿತ’ ಕೃತಿಗೆ ಪ್ರಥಮ ಬಹುಮಾನ ದೊರಕಿದೆ.

ಸಾಮಾಜಿಕ ಸಂಘರ್ಷ ಹೆಚ್ಚಾಗುತ್ತಿರುವ ಈ ಹೊತ್ತಿನಲ್ಲಿ, ಆರ್‌ಎಸ್‌ಎಸ್ ಮುಖ್ಯಸ್ಥರ ಮಾತು ಗಮನಾರ್ಹ

ಭಾಗವತ್ ವಿವೇಕದ ಮಾತು ಆಲಿಸಿ

ಸೂರ್ಯ-ನಮಸ್ಕಾರ
ಎ.ಸೂರ್ಯಪ್ರಕಾಶ್

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಅವರು ಹಿಂದೂಗಳನ್ನು ಉದ್ದೇಶಿಸಿ ವಿವೇಕದ ಹಾಗೂ ಎಚ್ಚರಿಕೆಯ ಮಾತುಗಳನ್ನು ಬಹಳ ಸೂಕ್ತವಾದ ಹೊತ್ತಿನಲ್ಲಿ ಆಡಿದ್ದಾರೆ.

ದೇಶದ ವಿವಿಧ ಭಾಗಗಳಲ್ಲಿ ಕೋಮು ಭಾವನೆಯು ಹಿಂದೆಂದೂ ಇಲ್ಲದ ರೀತಿಯಲ್ಲಿ ಕೆರಳುತ್ತಿದೆ. ಹಿಂದೂ ಬಹುಸಂಖ್ಯಾತರಲ್ಲಿನ ಒಂದು ವರ್ಗವು ಇತಿಹಾಸದಲ್ಲಿ ಆಗಿರುವ ತಪ್ಪುಗಳನ್ನು ನ್ಯಾಯಾಲಯಗಳು, ಆಡಳಿತಾತ್ಮಕ ಪ್ರಕ್ರಿಯೆಗಳು ಮತ್ತು ಪ್ರತಿಭಟನೆಗಳ ಮೂಲಕ ಸರಿಪಡಿಸಲು ಮುಂದಾಗಿದೆ. ವಾರಾಣಸಿಯ ಜ್ಞಾನವಾಪಿ ಮಸೀದಿ ಹಾಗೂ ಮಥುರಾದಲ್ಲಿನ ಶ್ರೀಕೃಷ್ಣನ ಜನ್ಮಸ್ಥಾನದ ಪಕ್ಕದ ಮಸೀದಿಯ ವಿಚಾರದಲ್ಲಿ ಇಂತಹ ಬೆಳವಣಿಗೆ ಕಂಡುಬಂದಿದೆ. ಹಿಂದಿನ ಇಸ್ಲಾಮಿಕ್ ಆಡಳಿತಗಾರರ ತಪ್ಪುಗಳನ್ನು ಅನಾವರಣಗೊಳಿಸಲು, ತಮ್ಮ ಪೂಜಾ ಸ್ಥಳಗಳ ಮೇಲೆ ಹೊಸದಾಗಿ ಹಕ್ಕು ಸ್ಥಾಪಿಸಲು ಹಿಂದೂಗಳು ಮುಂದಾದ ಹೊತ್ತಿನಲ್ಲಿ ಹಲವು ರಾಜ್ಯಗಳಲ್ಲಿ ಘರ್ಷಣೆಗಳು ನಡೆದಿವೆ.

ಈ ಎಲ್ಲ ಬೆಳವಣಿಗೆಗಳ ಕಾರಣದಿಂದಾಗಿ ಮಾಧ್ಯಮಗಳಲ್ಲಿ, ಅದರಲ್ಲೂ ಮುಖ್ಯವಾಗಿ ಟಿ.ವಿ. ವಾಹಿನಿಗಳಲ್ಲಿ ಎಗ್ಗಿಲ್ಲದ ಚರ್ಚೆಗಳು ನಡೆಯುತ್ತಿವೆ. ಚರ್ಚೆಗಳಲ್ಲಿ ಭಾಗಿಯಾದ ಕೆಲವರು ಬೇಜವಾಬ್ದಾರಿಯಿಂದ ಹೇಳಿಕೆಗಳನ್ನು ನೀಡಿದ್ದೂ ಆಗಿದೆ.

ಟಿ.ವಿ. ವಾಹಿನಿಗಳಲ್ಲಿ ನಡೆಯುವ ಚರ್ಚೆಗಳಲ್ಲಿ ಪಾಲ್ಗೊಳ್ಳುವವರು ಮಾಡುವ ಕಿವಿಗಡಚಿಕ್ಕುವ ಮಾತಿನ ದಾಳಿ, ಪ್ರತಿದಾಳಿಗಳನ್ನು ಗಮನಿಸಿದರೆ, ಕಾನೂನಿಗೆ ಅನುಗುಣವಾಗಿ ನಡೆಯಬೇಕಿರುವ ಆಡಳಿತ ವ್ಯವಸ್ಥೆ ಕುಸಿದುಬಿದ್ದಿದೆಯೇನೋ ಅನ್ನಿಸುತ್ತದೆ. ಈ ಚರ್ಚೆಗಳಲ್ಲಿ ನಾಗರಿಕ ಪ್ರಜ್ಞೆಯೇ ಕಾಣಿಸುತ್ತಿಲ್ಲ. ಅಷ್ಟೇ ಅಲ್ಲ, ಬೀದಿಗಳಲ್ಲಿ ಘರ್ಷಣೆಯನ್ನು ಪ್ರಚೋದಿಸುವ ಪ್ರಯತ್ನಗಳೂ ಅಲ್ಲಿವೆ. ಟಿ.ವಿ. ವಾಹಿನಿಗಳಲ್ಲಿ ನಡೆದ ಚರ್ಚೆಗಳ ವಿಚಾರವಾಗಿ ಕಾನ್ಪುರ ಹಾಗೂ ಇತರ ಕೆಲವು ನಗರಗಳಲ್ಲಿ ಆಗಿರುವ ಸಂಘರ್ಷವನ್ನು ಕಂಡಾಗ ಇದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ಭಾರತದ ಬಹುತ್ವ ಹಾಗೂ ಇಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವು ಸಂಪೂರ್ಣ ಅಸ್ತವ್ಯಸ್ತವೂ ಅನಿಯಂತ್ರಿತವೂ ಆಗಿರುವುದನ್ನು ಗಮನಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ನ್ಯಾಯಾಲಯಗಳು ಮಧ್ಯ ಪ್ರವೇಶಿಸಬೇಕು. ಈಗಿನ ಸಂಘರ್ಷಮಯ ವಾತಾವರಣವು ಕೈಮೀರದಂತೆ ನೋಡಿಕೊಳ್ಳಬೇಕು.

ಭಾಗವತ್ ಅವರು ಸರಿಯಾದ ಹೊತ್ತಿನಲ್ಲಿ ಎಚ್ಚರಿಕೆಯ ಮಾತು ಆಡಿದ್ದಾರೆ. ‘ಪ್ರತೀ ಮಸೀದಿಯಲ್ಲಿಯೂ ಶಿವಲಿಂಗ ಪತ್ತೆ ಮಾಡಲು ಏಕೆ ಮುಂದಾಗಬೇಕು’ ಎಂದು ಅವರು ಪ್ರಶ್ನಿಸಿದ್ದಾರೆ. ಈ ವಿಚಾರಗಳಿಗೆ ಸಂಬಂಧಿಸಿದಂತೆ ಇನ್ನೊಂದು ಅಭಿಯಾನ ಆರಂಭಿಸುವ ಒಲವು ಸಂಘಕ್ಕೆ ಇಲ್ಲ ಎಂದು ಅವರು ಆರ್‌ಎಸ್‌ಎಸ್ ತರಬೇತಿ ಪಡೆಯುತ್ತಿರುವವರನ್ನು ಉದ್ದೇಶಿಸಿ ಹೇಳಿದ್ದಾರೆ.

ದೇಶದ ವಿವಿಧ ಭಾಗಗಳಲ್ಲಿ ಸಾಮಾಜಿಕ ಸಂಘರ್ಷ ಹೆಚ್ಚಾಗುತ್ತಿರುವ ಹೊತ್ತಿನಲ್ಲಿ ಭಾಗವತ್ ಅವರ ಮಾತುಗಳನ್ನು ಗಮನಿಸಬೇಕಿರುವುದು ಮಹತ್ವದ್ದು. ಜ್ಞಾನವಾಪಿಯ ಇತಿಹಾಸವನ್ನು ಈಗ ಬದಲಾಯಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ. ಇಂದಿನ ಮುಸ್ಲಿಮರಾಗಲೀ ಹಿಂದೂಗಳಾಗಲೀ ಈ ಐತಿಹಾಸಿಕ ಸತ್ಯಕ್ಕೆ ಹೊಣೆಗಾರರಲ್ಲ. ಆಕ್ರಮಣಕಾರರ ಮೂಲಕ ಇಸ್ಲಾಂ ಭಾರತಕ್ಕೆ ಬಂತು, ಹಿಂದೂಗಳ ನೈತಿಕ ಸ್ಥೈರ್ಯ ಮುರಿಯುವ ಉದ್ದೇಶದಿಂದ ದೇವಸ್ಥಾನಗಳನ್ನು ನಾಶಪಡಿಸಲಾಯಿತು. ನಿಜ, ಇದು ನಮ್ಮ ಇತಿಹಾಸದ ಭಾಗ. ಆದರೆ, ವಿಷಯವನ್ನು ಹಿಗ್ಗಿಸಿ ಪ್ರತೀ ಮಸೀದಿಯಲ್ಲಿಯೂ ಒಂದು ಶಿವಲಿಂಗ ಅರಸುವ ಕೆಲಸ ಶುರುಮಾಡುವುದು ಏಕೆ?

ಪ್ರತಿದಿನವೂ ಒಂದು ಹೊಸ ವಿಚಾರವನ್ನು ಮೇಲಕ್ಕೆ ತರುವ ಕೆಲಸ ಬೇಡವೆಂದು ಭಾಗವತ್ ಹೇಳಿದ್ದಾರೆ. ನ್ಯಾಯಾಲಯದ ಕದ ತಟ್ಟುವವರು ಅದು ನೀಡುವ ಆದೇಶವನ್ನು ಒಪ್ಪಿಕೊಳ್ಳಬೇಕು. ದೇಶದ ಸಂವಿಧಾನ ಹಾಗೂ ನ್ಯಾಯಾಂಗ ವ್ಯವಸ್ಥೆ ಪವಿತ್ರ. ಅವುಗಳಿಗೆ ಗೌರವ ನೀಡಬೇಕು.

ಸಾಮಾಜಿಕ ಜಾಲತಾಣಗಳಲ್ಲಿನ ಕೆಲವು ಪೋಸ್ಟ್‌ಗಳ, ಟಿ.ವಿ. ವಾಹಿನಿಗಳಲ್ಲಿನ ಕೆಲವು ಚರ್ಚೆಗಳಲ್ಲಿನ ಅಶ್ಲೀಲ ಹಾಗೂ ನಿಂದನಾತ್ಮಕ ಧಾಟಿಯನ್ನು ಗಮನಿಸಿದರೆ, ಪೋಸ್ಟ್ ಹಾಕುವವರು ಹಾಗೂ ಚರ್ಚೆಗಳಲ್ಲಿ ಪಾಲ್ಗೊಳ್ಳುವವರಿಗೆ ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್‌ಗಳು ಹಾಗೂ ಪ್ರಚೋದನಕಾರಿ ಮಾತುಗಳನ್ನು ನಿರ್ಬಂಧಿಸುವ ಇತರ ಕಾನೂನುಗಳ ಬಗ್ಗೆ ಅರಿವೇ ಇಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇಂತಹ ವ್ಯಕ್ತಿಗಳ ವಿಚಾರವಾಗಿ ಸರ್ಕಾರ ಏನು ಮಾಡಬೇಕು ಎಂಬುದನ್ನು ದಂಡ ಸಂಹಿತೆಯು ಬಹಳ ಸ್ಪಷ್ಟವಾಗಿ ಹೇಳಿದೆ. ಐಪಿಸಿಯ ಸೆಕ್ಷನ್ 295 (ಎ) ಹೀಗೆ ಹೇಳಿದೆ:

‘ಧರ್ಮ ಅಥವಾ ಧಾರ್ಮಿಕ ನಂಬಿಕೆಗಳನ್ನು ಅವಹೇಳನ ಮಾಡುವ ಮೂಲಕ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಉದ್ದೇಶಪೂರ್ವಕ ಹಾಗೂ ಕೆಟ್ಟ ಕೃತ್ಯ: ಯಾವುದೇ ವ್ಯಕ್ತಿಯು ಭಾರತದ ಯಾವುದೇ ವರ್ಗದ ಪ್ರಜೆಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಉದ್ದೇಶದಿಂದ, ಕೆಟ್ಟ ಕೆಲಸವನ್ನು, ಮಾತಿನ ಮೂಲಕ, ಬರಹದ ಮೂಲಕ, ಸಂಜ್ಞೆಗಳ ಮೂಲಕ, ಚಿತ್ರಗಳ ಮೂಲಕ, ಧರ್ಮವನ್ನು ಅಥವಾ ಧಾರ್ಮಿಕ ನಂಬಿಕೆಗಳನ್ನು ಅವಹೇಳನ ಮಾಡಿದರೆ ಅಥವಾ ಅವಹೇಳನ ಮಾಡಲು ಯತ್ನಿಸಿದರೆ, ಆ ವ್ಯಕ್ತಿಗೆ ಗರಿಷ್ಠ ಮೂರು ವರ್ಷಗಳ ಅವಧಿಗೆ ಜೈಲು ಶಿಕ್ಷೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದು’.

ದೇಶದಲ್ಲಿ ಇಂದು ಟಿ.ವಿ. ವಾಹಿನಿಗಳ ಮೂಲಕ ನಡೆಯುವ ಚರ್ಚೆಗಳಿಗೆ ಯಾವುದೇ ಚೌಕಟ್ಟು ಇಲ್ಲ, ಯಾವ ನಿಯಂತ್ರಣವೂ ಇಲ್ಲ. ದೇಶದಲ್ಲಿನ ಕೋಮು ಸೌಹಾರ್ದ ಕುಸಿಯುವುದಕ್ಕೆ ಈ ಚರ್ಚೆಗಳು ದೊಡ್ಡ ಮಟ್ಟದಲ್ಲಿ ಕಾರಣವಾಗುತ್ತಿವೆ. ಇಂತಹ ಟಿ.ವಿ. ಚರ್ಚೆಗಳಲ್ಲಿ ಲಕ್ಷ್ಮಣ ರೇಖೆಯನ್ನು ದಾಟುವ ವ್ಯಕ್ತಿಗಳ ವಿರುದ್ಧ ದಂಡ ಸಂಹಿತೆಯ ಈ ಸೆಕ್ಷನ್ ಅನ್ನು ಬಳಸಿ ಪ್ರಕರಣ ದಾಖಲಿಸದೇ ಇದ್ದರೆ ಪರಿಸ್ಥಿತಿ ಕೈಮೀರಿ ಹೋಗಬಹುದು.

ಭಾಗವತ್ ಅವರು ನೀಡಿದ ವಿವೇಚನೆಯುಳ್ಳ ಸಲಹೆಗಳ ನಂತರದಲ್ಲಿ, ಭಾರತೀಯ ಜನತಾ ಪಕ್ಷವು (ಬಿಜೆಪಿ) ಮೊದಲ ದೃಢ ಹೆಜ್ಜೆಯನ್ನು ಇರಿಸಿದೆ. ತನ್ನ ಕಾರ್ಯಕರ್ತರು ಶಿಸ್ತಿನಿಂದ ವರ್ತಿಸುವಂತೆ ಮಾಡುವಲ್ಲಿ ಮೊದಲ ಹೆಜ್ಜೆ ಇದು. ಪಕ್ಷವು ಇಬ್ಬರು ವಕ್ತಾರರ ವಿರುದ್ಧ ಶಿಸ್ತು ಕ್ರಮ ಕೈಗೊಂಡಿದೆ.

ಶಿಸ್ತು ಕ್ರಮಕ್ಕೆ ಗುರಿಯಾದ ಇಬ್ಬರ ಪೈಕಿ ಒಬ್ಬರು ಹೇಳಿರುವಂತೆ, ಚರ್ಚೆಯೊಂದರಲ್ಲಿ ಶಿವನನ್ನು ಗುರಿಯಾಗಿಸಿಕೊಂಡು ನಿರಂತರ ವಾಗ್ದಾಳಿ ನಡೆಯುತ್ತಿತ್ತು. ಆ ಕಾರಣಕ್ಕಾಗಿ ಆಕೆ ಪ್ರತಿಕ್ರಿಯಿಸಬೇಕಾಯಿತು. ಚರ್ಚೆಗಳನ್ನು ಇಡಿಯಾಗಿ ಪರಿಶೀಲಿಸಿ, ಐಪಿಸಿಯ ಸೆಕ್ಷನ್ನುಗಳನ್ನು ಯಾರು ಉಲ್ಲಂಘಿಸಿದ್ದಾರೆ, ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ಯಾರು ಮಾತನಾಡಿದ್ದಾರೆ ಎಂಬುದನ್ನು ಕಾನೂನು ಜಾರಿ ಸಂಸ್ಥೆಗಳು ಕೂಲಂಕಷವಾಗಿ ಪರಿಶೀಲಿಸಬೇಕು. ಇಸ್ಲಾಂ ಕುರಿತು ಸಾಮಾಜಿಕ ಜಾಲತಾಣಗಳ ಮೂಲಕ ಅಭಿಪ್ರಾಯ ಹೇಳಿದ್ದ ಇನ್ನೊಬ್ಬ ವಕ್ತಾರನನ್ನೂ ಪಕ್ಷವು ಉಚ್ಚಾಟಿಸಿದೆ.

ಆರ್‌ಎಸ್‌ಎಸ್ ಮುಖ್ಯಸ್ಥರು ಹೇಳಿರುವ ಮಾತುಗಳ ಸಾರವನ್ನು ಅರಿತು, ಬಿಜೆಪಿಯು ತನ್ನ ವಕ್ತಾರರ ವಿರುದ್ಧ ಕೈಗೊಂಡಿರುವ ಶಿಸ್ತು ಕ್ರಮವನ್ನು ಪರಿಗಣಿಸಿ, ಕೋಮು ಸೌಹಾರ್ದ ಪುನರ್‌ಸ್ಥಾಪಿಸುವ ದಿಸೆಯಲ್ಲಿ ಕೆಲಸ ಮಾಡಬೇಕಿರುವುದು ಈಗ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಹಾಗೂ ಇತರ ಮುಸ್ಲಿಂ ಸಂಘಟನೆಗಳ ಕೆಲಸ. ಸ್ವಾತಂತ್ರ್ಯ ಬಂದ ನಂತರದಲ್ಲಿ ದೇಶದಲ್ಲಿ ನೆಲೆ ಕಂಡ ಧರ್ಮನಿರಪೇಕ್ಷ, ಪ್ರಜಾತಾಂತ್ರಿಕ ಮೌಲ್ಯಗಳನ್ನು ಅವು ಗೌರವಿಸುವುದೇ ಆದಲ್ಲಿ, ತಮ್ಮ ಕಡೆ ಇರುವ, ಉಗ್ರವಾಗಿ ಮಾತನಾಡುವ ವ್ಯಕ್ತಿಗಳನ್ನು ಹದ್ದುಬಸ್ತಿನಲ್ಲಿ ಇರಿಸಬೇಕು ಮತ್ತು ಕೋಮು ಸೌಹಾರ್ದ ಪುನರ್‌ಸ್ಥಾಪನೆಗೆ ಮುಂದಾಗಬೇಕು.

ಚುರುಮುರಿ



ವೈಲೆಂಟ್ ಪ್ರೋಗ್ರಾಂ!

• ಲಿಂಗರಾಜು ಡಿ.ಎಸ್.

‘ಕಾಶ್ಮೀರದೇಲಿ ಪಂಡಿತರನ್ನ ಬಲವಂತವಾಗಿ ಕೂಡಾಕ್ಯವ್ರಂತೆ. ಪಂಡಿತರು ‘ನಾವು ಊರು ಬುಟ್ಟು ಎಲ್ಲಿಗಾರ ಹೊಂಟೋಯ್ತಿವಿ ಬುಟ್ಬುಡಿ ನಿಮ್ಮ ದಮ್ಮಯ್ಯ’ ಅಂತ ಲಬೋಲಬೋ ಮಾಡ್ತಾವ್ರೆ’ ಅಂತಂದೆ.

‘ಅದು ವೈಲೆಂಟ್ ಫೈಲ್ಸ್ ಕನೋ!’ ಅಂತು ಯಂಟಪ್ಪಣ್ಣ.

‘ಕರ್ನಾಟಕದೇಲಿ ಸೈಲೆಂಟ್ ವೈಲೆನ್ಸ್ ಪ್ರಯೋಗ ನಡಿತಾ ಅದೆ ಕಯ್ಯಾ. ಸರ್ಕಾರ ಹೇಳ್ತದೆ ‘ಪೂಜಾ ಸ್ಥಳದೇಲಿ ಮೈಕು ಹಾಕಬ್ಯಾಡಿ ಸೈಲೆಂಟಾಗಿರಿ, ಚನ್ನಾಗಿರ ಪಠ್ಯಪುಸ್ತಕ ಕೊಟ್ಟುದವಿ ಸೈಲೆಂಟಾಗಿ ಒಪ್ಪಿಕ್ಯಳಿ, ಪೆಟ್ರೋಲ್-ಡೀಜೆಲ್ ರೇಟು ಜಾಸ್ತಿ ಮಾಡ್ತೀವಿ ತಗಂಡ್ರೆ ತಗಳಿ ಬುಟ್ರೆ ಬುಡಿ, ಗ್ಯಾಸ್ ಸಬ್ಸಿಡಿ ಇನ್ನು ಕೊಡಂಗಿಲ್ಲ ಸೈಲೆಂಟಾಗಿರಿ, ರಾಜ್ಯಸಭೆಗೆ ಕಾಸಿರೋರು ಹೋಯ್ತರೆ ಸೈಲೆಂಟಾಗಿರಿ. ನಾಡಗೀತೆಯ ನಮಗೆ ಬೇಕಾದಂಗೆ ಬದ್ಲಾಸಿ ಕೊಡ್ತೀವಿ ಸೈಲೆಂಟಾಗಿ ಹಾಡಿಕ್ಯಳಿ! ಕೆಲಸಾಗಬಕಾ ಸೈಲೆಂಟಾಗಿ ಕಾಸು ಕೊಡಿ! ಲೊಟ್ಟೆಲೊಸಕು ಅಂತ ನಿಮ್ಮ ಬ್ಯಾಡ್ ಬಾಯ್ ಏನಾದ್ರೂ ತಗುದ್ರೋ ನಾವು ವೈಲೆಂಟಾಯ್ತಿವಿ’ ಅಂತ ಜನಕ್ಕೆ-ಸಾಹಿತಿಗಳಿಗೆ ಖಟ್‌ನಿಟ್ ಮಾಡ್ಯವುರಲ್ಲೋ!’ ಅಂತ ಉಸುರೂದರು.

‘ಕಾಂಗ್ರೆಸ್ಸೂ ಕಮ್ಮಿ ಇಲ್ಲ ಸಾ ‘ರಾಜ್ಯದೇಲಿ ಮುಂದೆ ನಮ್ಮದೇ ಸರ್ಕಾರ, ಸೈಲೆಂಟಾಗಿರಿ’ ಅಂದ್ರೆ, ಕುಮಾರಣ್ಣ ‘ನಾವು ಒಂದು ಎರಡು ಮೂರು ಸೀಟು ಗೆದ್ದು ಸರ್ಕಾರ ಮಾಡ್ತೀವಿ, ಸೈಲೆಂಟಾಗಿರಿ’ ಅಂದದೆ’ ಅಂತ ಮಾಹಿತಿ ಕೊಟ್ಟೆ.

‘ಮೋದಿ ಮಾವಾರು ‘ಸೈಲೆನ್ಸ್, ಸೈಲೆನ್ಸ್, ಸೈಲೆನ್ಸ್! ಐ ಡೋಂಟ್ ಲೈಕ್ ವಯಲೆನ್ಸ್. ಬಟ್ ವಯಲೆಂಟ್ಸ್ ಲೈಕ್ಸ್ ಮಿ’ ಅಂದುಲ್ಲವಂತೆ ಸಾ! ನಮ್ಮ ಕತೆಯೂ ಪಂಡಿತರ ಥರವೇ ಆಗ್ಯದೆ. ವೈಲೆನ್ಸ್ ಯಂಗೆ ಕಮ್ಮಿ ಮಾಡದು?’ ಅಂದೆ.

‘ವೈಲೆಂಟಾದ್ರೇ ಸೈಲೆಂಟ್ ರಾಜಕೀಯ! ಸೈಲೆನ್ಸ್ ಬುಟ್ಟೋರಿಗೆ ‘ಅಕ್ಸೆಪ್ಟ್ ಟೂಲ್ ಕಿಟ್ ಕೈ ಕಟ್- ಬಾಯ್ ಮುಚ್’ ಅಂತ ಸವೆದು ತುಂಡಾಗಿರೋ ಮೋಟು ಗುಳವ ಕಾಯಿಸಿ ಬಾಯಿಗೆ ಬರೆ ಹಾಕೋ ವೈಲೆಂಟ್ ಪ್ರೋಗ್ರಾಂ ತಯಾರಾಗ್ಯದಂತೆ’.

ಚರ್ಚೆ

ವೇಶ್ಯಾವಾಟಿಕೆ ಮತ್ತು ಘನತೆಯ ಬದುಕು

ಈ ದಂಧೆಯನ್ನು ನಿರ್ನಾಮಗೊಳಿಸಿ ಮಹಿಳೆಯರ ಘನತೆಯನ್ನು ಎತ್ತಿ ಹಿಡಿದಿದ್ದ ಸೋವಿಯತ್ ಒಕ್ಕೂಟದ ನಡೆ ನಮಗೆ ಮಾದರಿ ಆಗಬಾರದೇಕೆ?

• ಡಾ. ಸುಧಾ ಕೆ.

ವೇಶ್ಯಾವಾಟಿಕೆ ಕುರಿತು ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿದ ತೀರ್ಪಿನ ನಂತರ ಈ ಬಗೆಗಿನ ಚರ್ಚೆ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಇದೊಂದು ಅನಾದಿ ಕಾಲದಿಂದ ಬಂದಂಥ ವೃತ್ತಿ, ಸ್ವಯಿಚ್ಛೆಯಿಂದ ಆರಿಸಿಕೊಂಡವರಿಗೆ ಅದರಲ್ಲಿ ಮುಂದುವರಿಯುವ ಅವಕಾಶ ಇರಬೇಕು ಎಂಬಂಥ ವಾದವೂ ಕೇಳಿಬರುತ್ತಿದೆ. ಹಾಗಿದ್ದಲ್ಲಿ, ಹೆಣ್ಣುಮಕ್ಕಳು ವಿದ್ಯಾಭ್ಯಾಸದ ಬಳಿಕ ಯಾವ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದಾಗ, ಅವರ ಹೆತ್ತವರಾಗಲೀ ಶಿಕ್ಷಕರು ಅಥವಾ ಬಂಧು-ಮಿತ್ರರಾಗಲೀ ಸಾಮಾನ್ಯವಾಗಿ ಕೊಡುವ ಸಲಹೆಗಳಾದ ಡಾಕ್ಟರ್, ಎಂಜಿನಿಯರ್, ಶಿಕ್ಷಕಿ, ಕಲಾವಿದೆ ಮುಂತಾದವುಗಳ ಜೊತೆಗೆ ಈ ವೃತ್ತಿಯನ್ನೂ ಸೇರಿಸುತ್ತಾರೆಯೇ? ಯಾವುದೇ ಹೆಣ್ಣುಮಗಳು ವೇಶ್ಯಾವೃತ್ತಿಯೇ ತನ್ನ ಆಯ್ಕೆ ಎಂದು ಹೇಳಬಯಸುತ್ತಾಳೆಯೇ? ಈ ಪ್ರಶ್ನೆಯಿಂದ ಬಹುತೇಕರು ಕೆಂಡಾಮಂಡಲ ಆಗುವುದಂತೂ ಖಂಡಿತ!

ಹಾಗಾದರೆ, ಇದು ಆರ್ಥಿಕ ಅವಶ್ಯಕತೆಯಿಂದಾಗಿ ಮತ್ತು ಆರ್ಥಿಕವಾಗಿ ಕೆಳಸ್ತರದಲ್ಲಿರುವ, ಕಳಂಕಿತ ಹಣೆಪಟ್ಟಿ ಕಟ್ಟಿಸಿಕೊಂಡ ಮನೆತನದ ಅಸಹಾಯಕ ಹೆಣ್ಣುಮಕ್ಕಳೇ ಹೆಚ್ಚಾಗಿ ಅವಲಂಬಿಸುತ್ತಿರುವ ಒಂದು ಸಾಮಾಜಿಕ ಕಳಂಕದ ಕೆಲಸ ಎಂದಾಯಿತಲ್ಲ. ಅವರನ್ನು ಮುಖ್ಯವಾಹಿನಿಗೆ ತರುವ, ಅವರಿಗೆ ಆರ್ಥಿಕ ಸುಭದ್ರತೆ ಒದಗಿಸುವ ಜವಾಬ್ದಾರಿಯನ್ನು ಆಳುವ ಸರ್ಕಾರ ಹೊತ್ತುಕೊಳ್ಳಬೇಕು ಎಂದು ಒತ್ತಾಯಿಸುವ ಬದಲಿಗೆ, ಈ ವೃತ್ತಿಯಲ್ಲೇ ಅವರನ್ನು ಮುಂದುವರಿಸುವ ಮಾತುಗಳನ್ನು ಆಡುವುದು ಎಷ್ಟು ಸರಿ? ಸಮಾಜದ ಸ್ವಾಸ್ಥ್ಯ ಕಾಪಾಡಲು ಅವರ ಅವಶ್ಯಕತೆ ಇದೆ ಎನ್ನುವ ವಾದ, ನಮ್ಮ ಮನೆಯ ಹೆಣ್ಣುಮಕ್ಕಳು ಕ್ಷೇಮದಿಂದಿರಲಿ, ಬದಲಿಗೆ, ಬೇರೆ ಯಾರೋ ಹೆಣ್ಣುಮಕ್ಕಳು ಕಾಮುಕರಿಗೆ ಬಲಿಯಾದರೆ ಆಗಲಿ ಎನ್ನುವುದು ನೈತಿಕವೇ?

ಈ ವೃತ್ತಿ ಹಳೆಯ ಊಳಿಗಮಾನ್ಯ ಸಮಾಜದಲ್ಲಿ, ರಾಜ- ಜಮೀನ್ದಾರ ವ್ಯವಸ್ಥೆಯಲ್ಲಿ ಮನ್ನಣೆ ಪಡೆದಿತ್ತು, ಹಾಗಾಗಿ ಈಗಲೂ ಹಾಗೆಯೇ ಮುಂದುವರಿಯಲಿ ಎನ್ನುವವರು ಸ್ತ್ರೀಯನ್ನು ಒಂದು ಭೋಗದ ವಸ್ತುವನ್ನಾಗಿ ಕಾಣುವ ಮನಃಸ್ಥಿತಿಯನ್ನು ಹೊಂದಿಲ್ಲವೇ? ಹಾಗಿದ್ದರೆ ಇದಕ್ಕೆ ಪರಿಹಾರವೇನು? ಇದನ್ನು ಈ ಹಿಂದಿನ ಸಮಾಜವಾದಿ ಸೋವಿಯತ್ ಒಕ್ಕೂಟ ಪ್ರಾಯೋಗಿಕವಾಗಿಯೇ ತೋರಿಸಿಕೊಟ್ಟಿದ್ದನ್ನು ಅನೇಕ ಸಮಾಜಶಾಸ್ತ್ರಜ್ಞರು, ಲೇಖಕರು ವಿವರಿಸಿದ್ದಾರೆ. ಕೆನಡಾದ ಡೈಸನ್ ಕಾರ್ಟರ್ ಅವರು, ‘ಸಿನ್ ಆ್ಯಂಡ್ ಸೈನ್ಸ್’ ಎಂಬ ತಮ್ಮ ಪುಸ್ತಕದಲ್ಲಿ ಈ ಕುರಿತು ವಿಸ್ತಾರವಾಗಿ ಚರ್ಚಿಸಿದ್ದಾರೆ. ಕರ್ನಾಟಕದ ಸಾಹಿತಿ ತರಾಸು, ಈ ಕುರಿತು ತಮ್ಮ ‘ಮಸಣದ ಹೂವು’ ಕಾದಂಬರಿಯ ಮುನ್ನುಡಿಯಲ್ಲಿ ಉಲ್ಲೇಖಿಸಿದ್ದಾರೆ.

ಲೈಂಗಿಕ ರೋಗಗಳು ವ್ಯಾಪಕವಾಗಿ ಹಬ್ಬುತ್ತಿದ್ದಂಥ ಇಡೀ ಯುರೋಪು, ಅಮೆರಿಕದಂಥ ದೇಶಗಳಲ್ಲಿ ವೇಶ್ಯಾವಾಟಿಕೆಯನ್ನು ತೊಡೆದುಹಾಕಲು ಸಮರೋಪಾದಿಯಲ್ಲಿ ಕ್ರಮಗಳನ್ನು ತೆಗೆದುಕೊಂಡರು. ವೇಶ್ಯೆಯರನ್ನು ಪ್ರತ್ಯೇಕಿಸುವುದು, ಈ ರೋಗಗಳಿಗೆ ನೀಡಿದ ಚಿಕಿತ್ಸೆ, ವಿಟಪುರುಷರಿಗೆ ಈ ಕುರಿತ ಒಳ್ಳೆಯ ಬೋಧನೆ- ಇದ್ಯಾವುದರಿಂದಲೂ ಪ್ರಯೋಜನವಾಗಲಿಲ್ಲ. ಆದರೆ, ಸೋವಿಯತ್ ಒಕ್ಕೂಟ ಮಾತ್ರವೇ ಸಮಾಜವಾದಿ ಕ್ರಾಂತಿಯ ಬಳಿಕ ಇದಕ್ಕೆ ವೈಜ್ಞಾನಿಕ ಪರಿಹಾರ ಕಂಡುಕೊಂಡಿತು. ವೇಶ್ಯಾವೃತ್ತಿಯ ಪ್ರಮುಖ ಕಾರಣ ಆರ್ಥಿಕ ಸಮಸ್ಯೆ. ಜೊತೆಗೆ, ವೇಶ್ಯಾವಾಟಿಕೆಯನ್ನು ಒಂದು ದಂಧೆ ಮಾಡಿ ಅದರಿಂದ ಹಣ ಮಾಡುತ್ತಿದ್ದ ದಲ್ಲಾಳಿಗಳ ಮೋಸದಿಂದ ಈ ವೃತ್ತಿಗೆ ಎಳೆಯಲ್ಪಟ್ಟ ಹೆಣ್ಣುಮಕ್ಕಳು. ಇವರು ವೇಶ್ಯೆಯರಾಗಿ ದುಡಿಯುವ ಹಣ ಅಲ್ಪ ಮಾತ್ರ. ಹೆಚ್ಚಿನಂಶ ತಲೆಹಿಡುಕರಿಗೆ, ಪೊಲೀಸರು ಮತ್ತಿತರರಿಗೆ. ಅವರಲ್ಲಿ ಬಹುಪಾಲು ಹೆಣ್ಣುಮಕ್ಕಳು ಈ ವೃತ್ತಿಯನ್ನು ತೊರೆದು ಬೇರೆ ಉದ್ಯೋಗಗಳನ್ನು ಹಿಡಿದು ಗೌರವಯುತವಾಗಿ ಬಾಳಲು ಸಿದ್ಧರಿದ್ದರು. ತಮ್ಮ ಮಕ್ಕಳು, ತಾಯಂದಿರು ನೈತಿಕವಾಗಿ ಸಮಾಜದಿಂದ ಹೊರದೂಡಲ್ಪಟ್ಟವರೆಂದು ಕುಗ್ಗಬಾರದು ಎಂದು ಆಶಿಸಿದ್ದರು.

1925ರಲ್ಲಿ ಸೋವಿಯತ್ ಸರ್ಕಾರವು ವೇಶ್ಯಾವಾಟಿಕೆಯ ನಿರ್ಮೂಲನಕ್ಕಾಗಿ, ಹೆಣ್ಣುಮಕ್ಕಳ ಆರ್ಥಿಕ ಸಬಲತೆಗಾಗಿ ವ್ಯಾಪಕ ಕ್ರಮಗಳನ್ನು ತೆಗೆದುಕೊಂಡಿತು. ನಿರಾಶ್ರಿತ ಮಹಿಳೆಯರು ಮತ್ತು ಮಕ್ಕಳಿಗೆ ಸುರಕ್ಷೆ ಖಚಿತಪಡಿಸಲಾಯಿತು. ಜೊತೆಗೆ ಮೂರು ಶಾಸನಗಳನ್ನು- ‘ಜಾರ್ ಆಡಳಿತದಲ್ಲಿ ವೇಶ್ಯೆಯರ ವಿರುದ್ಧ ದಮನಕಾರಿಯಾಗಿದ್ದ ಎಲ್ಲ ಕಾನೂನು ಹಾಗೂ ಪೊಲೀಸ್ ಕ್ರಮಗಳ ನಿರ್ಮೂಲನೆ, ವೇಶ್ಯಾವಾಟಿಕೆ ದಂಧೆ ನಡೆಸಿ ಲಾಭ ಗಳಿಸುತ್ತಿದ್ದವರ ಮೇಲೆ ನಿರ್ದಯ ಸಮರ, ಲೈಂಗಿಕ ಸೋಂಕುರೋಗಗಳಿಂದ ಬಳಲುತ್ತಿದ್ದವರಿಗೆ ಎಲ್ಲ ವೈದ್ಯಕೀಯ ಅನುಕೂಲಗಳು’- ಜಾರಿಗೆ ತರಲಾಯಿತು. ಈ ಅನಿಷ್ಟ ವೃತ್ತಿಗೆ ಬಲಿಯಾದವರ ಕುರಿತು ಸರ್ಕಾರ ಅತ್ಯಂತ ಮಾನವೀಯ ಧೋರಣೆ ಹೊಂದಿದ್ದು, ವೇಶ್ಯೆಯರನ್ನು ಯಾವುದೇ ರೀತಿಯ ಅವಮಾನಕ್ಕೆ ಗುರಿಪಡಿಸುತ್ತಿರಲಿಲ್ಲ. ಅವರನ್ನು ಬಂಧಿಸುತ್ತಿರಲಿಲ್ಲ. ಗೌರವದಿಂದ, ಸಭ್ಯತೆಯಿಂದ ಹಾಗೂ ವೈಯಕ್ತಿಕವಾಗಿ ಅಗೌರವವಾಗದಂತೆ ನೋಡಿಕೊಳ್ಳಲಾಯಿತು. ವೇಶ್ಯಾವಾಟಿಕೆ ಜಾಲ ನಡೆಸುತ್ತಿದ್ದವರ ಮೇಲೆ ಸದಾ ಕಣ್ಣಿಟ್ಟು, ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಲಾಯಿತು. ಜೊತೆಗೆ, ‘ಒಬ್ಬ ಹೆಣ್ಣಿನ ಘನತೆಯನ್ನು ನಾಶಪಡಿಸಿ ಅವಳಿಂದ ಇಂಥಾ ಸೇವೆ ಖರೀದಿಸುವಾತ ಅಪರಾಧಿ’ ಎಂಬ ಅಂಶವನ್ನೂ ಸಾರ್ವಜನಿಕವಾಗಿ ಘೋಷಿಸಲಾಯಿತು. ಅಂಥಾ ವಿಟರಿಗೆ ಸಾಮಾಜಿಕ ಬಹಿಷ್ಕಾರವನ್ನೂ ಹಾಕಲಾಯಿತು.

ಇದರ ಪ್ರತಿಫಲ ದೊರೆತು, 1938ರ ಹೊತ್ತಿಗೆ ದೇಶದಲ್ಲಿ ವೇಶ್ಯಾವಾಟಿಕೆ ಸಂಪೂರ್ಣವಾಗಿ ನಿರ್ನಾಮವಾಗಿದ್ದೇ ಅಲ್ಲದೆ, ವ್ಯಾಪಕವಾಗಿ ಹರಡಿದ್ದ ಲೈಂಗಿಕ ಸೋಂಕು ರೋಗಗಳು ಸಣ್ಣ ಆರೋಗ್ಯ ಸಮಸ್ಯೆಗಳಾಗಿ ಮಾತ್ರ ಉಳಿದವು.

ವಾಚಕರ ವಾಣಿ

ಮುಂಜಾಗ್ರತೆ ಇಲ್ಲದ ಅಸಡ್ಡೆಯ ನಡೆ

ಈಗ ಮುಂಗಾರು ಹಂಗಾಮಿನಲ್ಲಿ ಬಿತ್ತನೆಗೆ ಬೇಕಾದ ರಸಗೊಬ್ಬರದ ಬೆಲೆ ಬೇಕಾಬಿಟ್ಟಿ ಏರಿಕೆಯಾಗಿದೆ. ಕೃತಕ ಅಭಾವ ಸೃಷ್ಟಿಯಾಗಿದೆ. ಒಂದು ಕ್ವಿಂಟಲ್ ಭತ್ತಕ್ಕೆ ₹ 1,500ರಿಂದ ₹ 2,000. ಡಿಎಪಿ ಗೊಬ್ಬರ ಕ್ವಿಂಟಲ್‌ಗೆ ₹ 2,800. ಒಂದು ಕ್ವಿಂಟಲ್ ಗೊಬ್ಬರ ಕೊಳ್ಳಲು ಒಂದೂವರೆ ಕ್ವಿಂಟಲ್ ಭತ್ತ ಮಾರಬೇಕು! (ಪ್ರ.ವಾ., ಜೂನ್ 6).

ಇದರಿಂದ ಸಣ್ಣ, ಅತಿಸಣ್ಣ ರೈತರಿಗೆ ಆರ್ಥಿಕ ಹೊರೆ. ಸರ್ಕಾರ ಈ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳುವ ವೇಳೆಗೆ ಬಿತ್ತನೆ ಅವಧಿ ಮುಗಿದಿರುತ್ತದೆ! ಬಹುಶಃ ಸರ್ಕಾರವೇ ಎಲ್ಲಾ ರೈತರು ಸಾವಯವದತ್ತ ಮುಖ ಮಾಡಲಿ ಎಂದು ಈ ರೀತಿ ಮಾಡಿರಲೂಬಹುದು! ಪ್ರತಿವರ್ಷ ಮೇ- ಜೂನ್ ಬಿತ್ತನೆಗೆ ತಯಾರಿ ನಡೆಸುವ ಅವಧಿ ಎಂದು ಗೊತ್ತಿದ್ದೂ ಮುಂಜಾಗ್ರತೆ ತೆಗೆದುಕೊಳ್ಳದ ಸರ್ಕಾರದ ನಡೆ ಅಸಡ್ಡೆಯದು ಮತ್ತು ರೈತರ ಕಡೆಗಣನೆಯೇ ಸರಿ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ನುಂಗಣ್ಣರಿಗೆ ಯಾವಾಗ ಕಡಿವಾಣ?

ನಾಗರಿಕರಿಗೆ ಉತ್ತಮ ಮೂಲಸೌಕರ್ಯ, ವ್ಯಾಪಾರ-ವಹಿವಾಟಿಗೆ ಅನುಮೋದನೆ ಸೇರಿದಂತೆ ತಳಮಟ್ಟದಲ್ಲಿ ಆಡಳಿತ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುವುದು ಬಿಬಿಎಂಪಿ ಹಾಗೂ ಇತರ ಸ್ಥಳೀಯ ಸಂಸ್ಥೆಗಳ ಹೊಣೆ. ಆದರೆ ಇವು ಭ್ರಷ್ಟರ ಕಾಮಧೇನುಗಳಾಗಿರುವುದು (ಪ್ರ.ವಾ., ಜೂನ್ 6) ನಾಗರಿಕರಿಗೆ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಯಾವುದಕ್ಕೆ ಎಷ್ಟೇ ಆನ್‌ಲೈನ್ ವ್ಯವಸ್ಥೆ ಮಾಡಿದ್ದರೂ ನುಂಗಣ್ಣರು ಮಾತ್ರ ಆಯಕಟ್ಟಿನ ಜಾಗಗಳಲ್ಲಿ ಕುಳಿತು ಹಣ ಮಾಡುವ ದಂಧೆಗೇನೂ ಕಡಿವಾಣ ಬಿದ್ದಿಲ್ಲ. ಶೇ 50ಕ್ಕಿಂತಲೂ ಹೆಚ್ಚು ಸಿಬ್ಬಂದಿ ವರ್ಗ ಡೆಪ್ಯುಟೇಶನ್ ಮೇಲೆ ಕೆಲಸ ಮಾಡುತ್ತಿರುವುದು, ಭ್ರಷ್ಟ ಅಧಿಕಾರಿಗಳು, ರಾಜಕಾರಣಿಗಳ ಕೃಪಾಪೋಷಿತ ಗುತ್ತಿಗೆದಾರರು, ಬ್ರೋಕರ್‌ಗಳು ಶಾಮೀಲಾಗಿ ತಂಡಗಳನ್ನು ಮಾಡಿಕೊಂಡಿರುವುದು ಇದಕ್ಕೆಲ್ಲ ಕಾರಣ.

ಇನ್ನು ಕೆಲವು ನಿಯಮಗಳನ್ನಂತೂ ಕೇವಲ ದುಡ್ಡು ಮಾಡಿಕೊಳ್ಳುವ ಉದ್ದೇಶದಿಂದಲೇ ರೂಪಿಸಲಾಗಿದೆಯೇನೋ ಎಂಬ ಸಂಶಯ ಬರುತ್ತದೆ. ಸರ್ಕಾರವನ್ನು ನಡೆಸುತ್ತಿರುವವರಿಗೆ ಈ ವಿಷಯಗಳು ಗೊತ್ತಿಲ್ಲವೆಂದೇನಿಲ್ಲ. ಎಲ್ಲರಿಗೂ ಜಾಣಕುರುಡು ಹಾಗೂ ಜಾಣಕಿವುಡು ಅಷ್ಟೆ. ಬಿಬಿಎಂಪಿಯ ಭ್ರಷ್ಟಾಚಾರವನ್ನು ಗಮನಿಸಿದರೆ, ಇದೊಂದು ಪ್ರಜಾಪ್ರಭುತ್ವದ ಅಣಕವೆಂಬಂತೆ ಕಾಣುತ್ತದೆ. ನಾಗರಿಕರ ನಿರಂತರ ಹೋರಾಟದಿಂದ ಮಾತ್ರ ಇದಕ್ಕೆ ಪರಿಹಾರ.

ಸುಘೋಷ ಸ. ನಿಗಳೆ, ಬೆಂಗಳೂರು

ಸೆಲ್ಫಿ ಆಯಿತು, ಮುಂದೆ...?

ವಿಶ್ವ ಪರಿಸರ ದಿನದಂದು (ಜೂನ್ 5)
ಸೆಲ್ಫಿಯೊಂದಿಗೆ ಗಿಡ ನೆಟ್ಟಿದ್ದು
ಅದನ್ನು ವಾಟ್ಸ್‌ಆ್ಯಪ್ ಸ್ಟೇಟಸ್‌ಗೆ ಹಾಕಿದ್ದು
ಲೈಕು, ಕಮೆಂಟು ಎಂಜಾಯ್ ಮಾಡಿದ್ದು!
ಇಷ್ಟು ಮಾಡಿದರಷ್ಟೇ ಸಾಲದು...
ನೆಟ್ಟ ಗಿಡಗಳಿಗೆ ಒಂದಷ್ಟು ತಿಂಗಳಾದರೂ
ನೀರೆರೆದು ಪೋಷಿಸಿ, ಆ ಮೂಲಕ
ಪರಿಸರ ದಿನವನ್ನು ಸಾರ್ಥಕವಾಗಿಸಿ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ನೆನಪಾಗುತ್ತಿದೆ ಉಪ್ಪಿನ ಸತ್ಯಾಗ್ರಹ

ಮನೆವಾರ್ತೆಗೆ ಸಂಬಂಧಿಸಿದ ಎಲ್ಲವನ್ನೂ ನನ್ನ ಮಡದಿಯೇ ನೋಡಿಕೊಳ್ಳುವುದು ವಾಡಿಕೆ. ಮೊನ್ನೆ ಆಕೆಯ ಜೊತೆಗೆ ದಿನಸಿ ಅಂಗಡಿಗೆ ಹೋಗಿ ಬೇಕಾದ ಪದಾರ್ಥಗಳನ್ನು ಕೊಂಡು ತಂದಿದ್ದೆ. ಅವುಗಳ ಬೆಲೆಯ ಕುರಿತು ತಲೆಗೆ ಹಾಕಿಕೊಳ್ಳದ ನಾನು, ಅಂದು ಕುತೂಹಲಕ್ಕೆ ಕೆಲವು ಪ್ಯಾಕೆಟ್‌ಗಳ ಮೇಲೆ ಕಣ್ಣಾಡಿಸಿದೆ. ಆಗ ಉಪ್ಪಿನ ಪ್ಯಾಕೆಟ್ ನೋಡಿ ಒಂದು ಕ್ಷಣ ಅವಾಕ್ಕಾದೆ. ಅದರ ಬೆಲೆ ಕೆ.ಜಿ.ಗೆ ₹ 25 ಎಲ್ಲ ತೆರಿಗೆಗಳೂ ಸೇರಿ ಎಂದಿತ್ತು.

ಅಂದಿನ ಬ್ರಿಟಿಷ್ ಕಂಪನಿ ಸರ್ಕಾರ ಉಪ್ಪಿನ ಮೇಲೆ ತೆರಿಗೆ ಹಾಕಿತೆಂದೇ ಮಹಾತ್ಮ ಗಾಂಧಿ ಅವರು ಉಪ್ಪಿನ ಸತ್ಯಾಗ್ರಹ ಮಾಡಿದ್ದು ನೆನಪಾಯಿತು. ಹೆಚ್ಚೆಂದರೆ ಒಂದು ಕುಟುಂಬ ತಿಂಗಳಿಗೆ ಒಂದು ಕೆ.ಜಿ. ಉಪ್ಪು ಬಳಸಬಹುದು. ಅದರ ಮೇಲೂ ತೆರಿಗೆ ವಿಧಿಸಬೇಕೆ? ಇದು ರಾಷ್ಟ್ರಪಿತನಿಗೆ ಮಾಡಿದ ಅಪಮಾನವೇ ಹೌದು. ಕೂಡಲೇ ಉಪ್ಪಿನ ಮೇಲೆ ವಿಧಿಸಿರುವ ತೆರಿಗೆ ಹಿಂಪಡೆಯಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಶಿಕ್ಷಣ ರಂಗ ಎಡವಿದರೆ...

ರಾಷ್ಟ್ರೀಯ ಸಾಧನೆ ಸಮೀಕ್ಷೆ– 2021ರ ವರದಿಯ ಅಂಕಿಅಂಶ ಓದಿದರೆ ತಲೆಸುತ್ತಿ ಬರುವಂತಿದೆ. ಶಿಕ್ಷಣ ಕ್ಷೇತ್ರದ ಅಧೋಗತಿಯನ್ನು ತೆರೆದಿಟ್ಟಿದೆ. ಮಕ್ಕಳ ಕಲಿಕಾ ಸಾಧನೆ ಕುಸಿಯುತ್ತಿರುವುದು ಆತಂಕಕಾರಿ ಬೆಳವಣಿಗೆ. ಭಾಷಾ ಗ್ರಹಿಕೆಯ ವಿಚಾರದಲ್ಲಿ ಎಲ್ಲ ಸಾಮಾಜಿಕ ವರ್ಗಗಳ ವಿದ್ಯಾರ್ಥಿಗಳು ಹಾಗೂ ಎಲ್ಲ ರೀತಿಯ ಶಾಲೆಗಳ ಮಕ್ಕಳ ಸ್ಥಿತಿ ಶೋಚನೀಯವಾಗಿದೆ. ಹೀಗಾದರೆ ನಾಳೆಯ ಭಾರತ ಹೇಗಿರುತ್ತದೆ ಎಂದು ಊಹಿಸಬಹುದು. ಭಾಷೆಯ ಮೇಲೆ ಪ್ರಭುತ್ವ ಇರದಿದ್ದರೆ ಕೋರ್ ವಿಷಯ ಅರಿಯಲು, ಕಲಿಯಲು ಸಾಧ್ಯವೇ ಇಲ್ಲ. ಓದಲು, ಬರೆಯಲು, ಅರಿಯಲು ಗೊತ್ತಿಲ್ಲದವರಿಂದ ಬೇರೆ ಬೇರೆ ಕ್ಷೇತ್ರಗಳ ಬೆಳವಣಿಗೆ ಹೇಗೆ ಸಾಧ್ಯ?

ಭ್ರಷ್ಟಾಚಾರ, ಹಿಂಸೆ, ದರೋಡೆ, ಸುಲಿಗೆ, ಮೋಸ, ಹಸುಳೆಗಳ ಮೇಲೆ ಲೈಂಗಿಕ ದೌರ್ಜನ್ಯ ಇಂದು ಹೆಚ್ಚಾಗಲು ಶಿಕ್ಷಣದ ವೈಫಲ್ಯ ಕಾರಣ ಎನ್ನಲು ಅಡ್ಡಿಯಿಲ್ಲ. ಗುಣಮಟ್ಟದ ಶಿಕ್ಷಣ ಎಲ್ಲರಿಗೂ ದೊರೆಯಬೇಕು. ಅದಕ್ಕಾಗಿ ಪ್ರತೀ ತರಗತಿಯ ಪ್ರವೇಶ ಸಂಖ್ಯೆಯನ್ನು ಮಿತಿಗೆ ಒಳಪಡಿಸಬೇಕು. ಶಿಕ್ಷಕ-ವಿದ್ಯಾರ್ಥಿ ಅನುಪಾತವನ್ನು ಈಗಿರುವ 1:70ಕ್ಕೆ ಬದಲಾಗಿ 1:40ಕ್ಕೆ ನಿಗದಿಪಡಿಸಬೇಕು. ಶಿಕ್ಷಕರಿಗೆ ಕಾಲಕಾಲಕ್ಕೆ ತರಬೇತಿ, ಕೌಶಲಗಳ ಬೆಳವಣಿಗೆಗೆ ಅನುವು ಮಾಡಿಕೊಡಬೇಕು. ಅದಕ್ಕಿಂತ ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ಕಲಿಯುವ ಮನಸ್ಸು, ಹುಮ್ಮಸ್ಸನ್ನು ಉದ್ದೀಪನಗೊಳಿಸಬೇಕು. ಇದು ಕಲಿಸುವವರು ಮತ್ತು ಕಲಿಯುವವರನ್ನು ಒಂದು ಕಡೆಗೆ ತರುತ್ತದೆ. ಕೆಲಸ ಸರಳವಾಗುತ್ತದೆ. ಉದ್ದೇಶ ಈಡೇರುತ್ತದೆ. ಶಿಕ್ಷಣದ ಪಾಲುದಾರರು, ಮುಖ್ಯವಾಗಿ ವಿದ್ಯಾರ್ಥಿಗಳು ಮತ್ತು ಪೋಷಕರು, ಸರ್ಕಾರ ಕ್ರಿಯಾಶೀಲ ಆಗಿರಬೇಕು. ಶಿಕ್ಷಣ ರಂಗ ಎಡವಿದರೆ ಎಲ್ಲವೂ ಕೆಡವಲ್ಪಡುತ್ತವೆ.

ಬಿ.ಆರ್.ಅಣ್ಣಾಸಾಗರ, ಸೇಡಂ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜೀವ ಭಯದಲ್ಲಿ ಕಾಶ್ಮೀರಿ ಪಂಡಿತರು

ಪ್ರಜಾವಾಣಿ ವಾರ್ತೆ

ಕಾಶ್ಮೀರಿ ಪಂಡಿತರು ಮತ್ತು ಡೋಗ್ರಾ ಸಮುದಾಯದ ಜನರು ಸೋಮವಾರವೂ ಪ್ರತಿಭಟನೆ ಮುಂದುವರಿಸಿದ್ದಾರೆ. ಸತತ ಆರನೇ ದಿನ ಪ್ರತಿಭಟನೆ ನಡೆದಿದೆ. ಈ ಎರಡೂ ಸಮುದಾಯಗಳ ಸುಮಾರು ಆರು ಸಾವಿರದಷ್ಟಿರುವ ಸರ್ಕಾರಿ ನೌಕರರನ್ನು ಕಾಶ್ಮೀರ ಕಣಿವೆಯಿಂದ ಹೊರಗೆ ವರ್ಗಾಯಿಸಬೇಕು ಎಂಬುದು ಅವರ ಬೇಡಿಕೆ. ಆದರೆ, ಜಮ್ಮು-ಕಾಶ್ಮೀರ ಆಡಳಿತವು ಈ ಬೇಡಿಕೆ ಈಡೇರಿಕೆಗೆ ಸಿದ್ಧವಿಲ್ಲ. ಪಂಡಿತರು ಮತ್ತು ಡೋಗ್ರಾ ಸಮುದಾಯದ ಜನರಿಗೆ ಭದ್ರತೆ ಒದಗಿಸಲಾಗುವುದು ಮತ್ತು ಅವರನ್ನು ಕಣಿವೆಯೊಳಗಿನ ಸುರಕ್ಷಿತ ಸ್ಥಳಗಳಿಗೆ ವರ್ಗ ಮಾಡಲಾಗುವುದು ಎಂದು ಸರ್ಕಾರವು ಹೇಳಿದೆ.

ಪಂಡಿತರನ್ನು ಮತ್ತು ಹಿಂದೂಗಳನ್ನು ಗುರುತಿಸಿ ಹತ್ಯೆ ಮಾಡುವ ಭಯೋತ್ಪಾದಕರ ದುಷ್ಕೃತ್ಯ ಆರಂಭವಾದದ್ದು 2021ರ ಫೆಬ್ರುವರಿಯಲ್ಲಿ. ಕೃಷ್ಣ ಢಾಬಾದ ಮಾಲೀಕನನ್ನು 2021ರ ಫೆಬ್ರುವರಿಯಲ್ಲಿ ಶ್ರೀನಗರದಲ್ಲಿ ಗುಂಡಿಕ್ಕಿ ಕೊಲ್ಲಲಾಯಿತು. ಶ್ರೀನಗರದ ಪ್ರಸಿದ್ಧ ಔಷಧ ಅಂಗಡಿ ಮಾಲೀಕ ಬಿ.ಎಲ್. ಬಿಂದ್ರೂ ಅವರನ್ನು 2021ರ ಅಕ್ಟೋಬರ್ 5ರಂದು ಅವರ ಅಂಗಡಿಯಲ್ಲಿಯೇ ಹತ್ಯೆ ಮಾಡಲಾಯಿತು. ಇದು ನಾಗರಿಕ ಸಮಾಜ ಮತ್ತು ರಾಜಕೀಯ ಪಕ್ಷಗಳ ಆಕ್ರೋಶಕ್ಕೆ ಕಾರಣವಾಯಿತು. 2021ರಿಂದ ಈವರೆಗೆ 17 ಜನರನ್ನು ಹೀಗೆ ಗುರುತಿಸಿ ಕೊಲ್ಲಲಾಗಿದೆ. 2022ರ ಮೇ ತಿಂಗಳ ನಂತರ ಇಂತಹ ಹತ್ಯೆ ತೀವ್ರತೆ ಪಡೆದುಕೊಂಡಿದೆ.

ತಹಶೀಲ್ದಾರ್ ಕಚೇರಿಯಲ್ಲಿ ಕ್ಲರ್ಕ್ ಆಗಿದ್ದ ರಾಹುಲ್ ಭಟ್ ಅವರನ್ನು ಇದೇ ಮೇ 12ರಂದು ಕಚೇರಿಯಲ್ಲಿಯೇ ಗುಂಡಿಟ್ಟು ಹತ್ಯೆ ಮಾಡಲಾಯಿತು. ಅದಾದ ಬಳಿಕ ಎರಡೂ ಸಮುದಾಯಗಳ ಜನರು ಭೀತರಾಗಿದ್ದಾರೆ. ಕಣಿವೆಯಿಂದ ಹೊರಗೆ ವರ್ಗಾಯಿಸುವಂತೆ ಪಟ್ಟು ಹಿಡಿದಿದ್ದಾರೆ. 1990ರ ನರಮೇಧದ ನೆನಪು ಅವರನ್ನು ಕಾಡ ತೊಡಗಿದೆ. ಮತ್ತೊಂದು ವಲಸೆ ಸನ್ನಿಹಿತ ಎಂಬ ಭಾವನೆ ಅವರಲ್ಲಿ ಮೂಡಿದೆ.

ಇದೇ ಮಾರ್ಚ್‌ನಲ್ಲಿ ಬಿಡುಗಡೆಯಾದ 'ದಿ ಕಾಶ್ಮೀರ್ ಫೈಲ್ಸ್' ಎಂಬ ಸಿನಿಮಾ, ಪಂಡಿತರ ಹತ್ಯೆ ಪ್ರಕರಣಗಳು ತೀವ್ರವಾಗಿ ಹೆಚ್ಚಲು ಒಂದು ಕಾರಣ ಎಂಬ ವಾದವೂ ಇದೆ. 'ಈ ಸಿನಿಮಾವು ನಮ್ಮ ಮೇಲಿನ ದಾಳಿ ಅಪಾಯವನ್ನು ಹೆಚ್ಚಿಸಿತು' ಎಂದು ಕಾಶ್ಮೀರಿ ಪಂಡಿತ್ ಸಂಘರ್ಷ ಸಮಿತಿಯ ಅಧ್ಯಕ್ಷ ಸಂಜಯ ಟಿಕೂ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಬಿಜೆಪಿ ಆಳ್ವಿಕೆ ಇರುವ ಹಲವು ರಾಜ್ಯಗಳಲ್ಲಿ ಈ ಸಿನಿಮಾಕ್ಕೆ ತೆರಿಗೆ ವಿನಾಯಿತಿ ನೀಡಲಾಗಿದೆ. ಬಿಜೆಪಿ ಮತ್ತು ಅದಕ್ಕೆ ಸಂಬಂಧಿಸಿದ ಸಂಘಟನೆಗಳು ಹಲವೆಡೆ ಉಚಿತ ಪ್ರದರ್ಶನವನ್ನು ಏರ್ಪಡಿಸಿದ್ದವು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚಿತ್ರತಂಡವನ್ನು ಭೇಟಿಯಾಗಿ, ತಂಡದ ಪ್ರಯತ್ನವನ್ನು ಶ್ಲಾಘಿಸಿದ್ದರು.

'ಸದ್ಯದ ಸ್ಥಿತಿಯಲ್ಲಿ ನನಗೆ ಯಾವುದೇ ಆಶಾಕಿರಣ ಕಾಣಿಸುತ್ತಿಲ್ಲ. ಸೇನೆ, ಪೊಲೀಸ್ ಪಡೆಗೆ ಸಿನಿಮಾವನ್ನು ತೋರಿಸಲಾಗಿದೆ... 16–25 ವರ್ಷ ವಯೋಮಾನದವರಿಗೆ ಸಿನಿಮಾ ತೋರಿಸಿದರೆ ಅದು ನಿಜ ಎಂದು ಅವರು ನಂಬುತ್ತಾರೆ. ಚಿತ್ರಮಂದಿರಗಳಲ್ಲಿ 'ಜೈ ಶ್ರೀರಾಂ' ಎಂಬ ಘೋಷಣೆ ಕೂಗಿದ್ದು ಏಕೆ? ಹಾನಿ ಈಗಾಗಲೇ ಆಗಿದೆ. ಧ್ರುವೀಕರಣ ನಡೆದಿದೆ. ವಿರುದ್ಧದ ಪ್ರತಿಕ್ರಿಯೆ ಕಾಶ್ಮೀರದಲ್ಲಿ ಮಾತ್ರ ವ್ಯಕ್ತವಾಗುತ್ತದೆ' ಎಂದು ಟಿಕೂ ಹೇಳಿದ್ದಾರೆ.

'1990ರಲ್ಲಿ ಕಾಶ್ಮೀರಿ ಪಂಡಿತರ ಬಗ್ಗೆ ಸಹಾನುಭೂತಿ ಇತ್ತು. ಸಂಘರ್ಷದ ದಿನಗಳಲ್ಲಿ ಬೆಳೆದ ಹುಡುಗರು ತಮ್ಮ ಮಾತು ಕೇಳುವ ಸ್ಥಿತಿಯಲ್ಲಿ ಇಲ್ಲ. ಈಗ ಕಾಶ್ಮೀರಿ ಪಂಡಿತರಿಗೆ ಏನಾದರೂ ಆದರೆ ತಾವೇನೂ ಮಾಡುವ ಸ್ಥಿತಿಯಲ್ಲಿ ಇಲ್ಲ ಎಂದು ಕಾಶ್ಮೀರದ ಜನರು ನನಗೆ ಹೇಳಿದ್ದಾರೆ' ಎಂದು ಸಿಟಿಜನ್ಸ್ ಫಾರ್ ಜಸ್ಟಿಸ್ ಎಂಡ್ ಪೀಸ್ (ಸಿಜೆಪಿ) ಪೋರ್ಟಲ್‌ಗೆ ನೀಡಿದ ಸಂದರ್ಶನದಲ್ಲಿ ಟಿಕೂ ಹೇಳಿದ್ದಾರೆ.

ಪಂಡಿತ ಸಮುದಾಯದ ಜನರು ಶ್ರೀನಗರ–ಬುಡ್ಗಾಂ ರಸ್ತೆ ತಡೆ ನಡೆಸಿ ಇತ್ತೀಚೆಗೆ ಪ್ರತಿಭಟಿಸಿದ್ದರು

ಜಮ್ಮುವಿನಲ್ಲಿರುವ ಕಾಶ್ಮೀರಿ ವಲಸಿಗರು (2021 ಡಿಸೆಂಬರ್ ಪ್ರಕಾರ)



● ಸರ್ಕಾರಿ ದಾಖಲೆಗಳಲ್ಲಿ ಕಾಶ್ಮೀರಿ ಪಂಡಿತರನ್ನು, ಕಾಶ್ಮೀರಿ ಪಂಡಿತರು ಎಂದು ಉಲ್ಲೇಖಿಸಿಲ್ಲ. ಬದಲಿಗೆ ಅವರನ್ನು 'ಕಾಶ್ಮೀರಿ ಹಿಂದೂಗಳು' ಎಂದು ಕರೆಯಲಾಗಿದೆ. 1990ರ ವಲಸೆ ವೇಳೆ ಕಾಶ್ಮೀರದಲ್ಲೇ ಉಳಿದ ಕಾಶ್ಮೀರಿ ಪಂಡಿತರನ್ನು, 'ವಲಸಿಗರಲ್ಲದ ಕಾಶ್ಮೀರಿ ಹಿಂದೂಗಳು' ಎಂದು ಕರೆಯಲಾಗಿದೆ. 2016ರ ಅಕ್ಟೋಬರ್ 3ರಂದು ಕೇಂದ್ರ ಗೃಹ ಸಚಿವಾಲಯ ಹೊರಡಿಸಿದ್ದ ಆದೇಶ ಪತ್ರವೊಂದರಲ್ಲಿ ಮಾತ್ರ, 'ಕಾಶ್ಮೀರಿ ಪಂಡಿತರು' ಎಂದು ಬಳಸಲಾಗಿದೆ

1990ರ ಕರಾಳ ನೆನಪು

ಮೂರು ದಶಕಗಳ ಹಿಂದೆ ಅಂದರೆ, 1990ರ ಜನವರಿ 19ರಂದು ಕಾಶ್ಮೀರದ ಇತಿಹಾಸದಲ್ಲಿ ಕರಾಳ ಘಟನೆ ನಡೆದಿತ್ತು. ಹಿಂಸಾಚಾರದಿಂದ ಕಾಶ್ಮೀರದ ಪಂಡಿತರು ಕಣಿವೆಯನ್ನು ರಾತ್ರೋರಾತ್ರಿ ತೊರೆದಿದ್ದರು. ಈ ಸಾಮೂಹಿಕ ವಲಸೆಯ ಹಿಂದೆ ಹತ್ತಾರು ಕಾರಣಗಳಿದ್ದವು.

ಕಾಶ್ಮೀರದ ರಾಜಕಾರಣಿ ಶೇಕ್ ಅಬ್ದುಲ್ಲಾ ಹಾಗೂ ಪ್ರಧಾನಿ ಇಂದಿರಾ ಗಾಂಧಿ ಅವರ ನಡುವೆ1975ರಲ್ಲಿ ಒಪ್ಪಂದ ಏರ್ಪಟ್ಟು, ಶೇಕ್ ಅವರು ಕಾಶ್ಮೀರದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. ಇದಾದ ಎರಡು ವರ್ಷಗಳಲ್ಲಿ, ಅಮಾನುಲ್ಲಾ ಖಾನ್ ಹಾಗೂ ಮೊಹಮ್ಮದ್ ಮಕ್ಬೂಲ್ ಭಟ್ ಎಂಬುವರು ಜಮ್ಮು ಕಾಶ್ಮೀರ ಲಿಬರೇಷನ್ ಫ್ರಂಟ್ (ಜೆಕೆಎಲ್‌ಎಫ್) ಹುಟ್ಟುಹಾಕಿದರು. ಕಾಶ್ಮೀರವನ್ನು ಸ್ವತಂತ್ರಗೊಳಿಸುವುದು ಈ ಸಂಘಟನೆಯ ಉದ್ದೇಶವಾಗಿತ್ತು.

1984ರಲ್ಲಿ ಮಕ್ಬೂಲ್ ಭಟ್ ಹತ್ಯೆಯ ಬಳಿಕ ರಾಜ್ಯದಲ್ಲಿ ಪ್ರತ್ಯೇಕತೆಗೆ ಆಗ್ರಹಿಸಿ ಹಿಂಸಾಚಾರ ಆರಂಭವಾದವು. 1986ರಲ್ಲಿ ಬಾಬರಿ ಮಸೀದಿ–ರಾಮಜನ್ಮಭೂಮಿ ದೇವಸ್ಥಾನಕ್ಕೆ ಹಿಂದೂಗಳ ಪ್ರವೇಶಕ್ಕೆ ರಾಜೀವ್ ಗಾಂಧಿ ಸರ್ಕಾರ ಅನುಮತಿ ನೀಡಿತು. ಈ ಆದೇಶದ ಪರಿಣಾಮ ಕಾಶ್ಮೀರದಲ್ಲಿ ಕಾಣಿಸಿತು. ಕಣಿವೆಯ ಹಿಂದೂಗಳ ಮನೆಗಳ ಮೇಲೆ ದಾಳಿ ನಡೆದವು.

1989ರಲ್ಲಿ ಪಾಕಿಸ್ತಾನ ಪರ, ಐಎಸ್‌ಐ ಬೆಂಬಲಿತ ಹಿಜ್ಬುಲ್ ಮುಜಾಹಿದೀನ್ ಸಂಘಟನೆ ತಲೆಎತ್ತಿತು. ಕಾಶ್ಮೀರದ ಭಯೋತ್ಪಾದನಾ ಚಟುವಟಿಕೆಗಳಿಗೆ ಇದು ತಳಹದಿ ಹಾಕಿತು. ಪ್ರತ್ಯೇಕ ಕಾಶ್ಮೀರ ಎಂಬ ಧ್ಯೇಯದೊಂದಿಗೆ ಯುವಕರನ್ನು ಬಳಸಿಕೊಂಡು ಕೋಮು ಹಿಂಸಾಚಾರ ಹಾಗೂ ಜಿಹಾದ್‌ಗೆ ಕರೆ ಕೊಟ್ಟಿತು. ಬಿಜೆಪಿ ಮುಖಂಡ ಟೀಕಾ ಲಾಲ್ ತಪ್ಲೂ ಎಂಬುವರ ಕೊಲೆಯೊಂದಿಗೆ ರಾಜ್ಯದಲ್ಲಿ ಕಾಶ್ಮೀರಿ ಪಂಡಿತರ ಹತ್ಯೆಗಳು ಆರಂಭವಾದವು. ಹಾಗೆಯೇ ಕಾಶ್ಮೀರದ ಮುಸ್ಲಿಮರು, ನ್ಯಾಷನಲ್ ಕಾನ್ಫರೆನ್ಸ್ ಮುಖಂಡರು, ಸರ್ಕಾರಿ ಅಧಿಕಾರಿಗಳೂ ಭಯೋತ್ಪಾದಕರ ಗುರಿಯಾದರು.

ಫಾರೂಕ್ ಅಬ್ದುಲ್ಲಾ ಅವರ ರಾಜೀನಾಮೆಯಿಂದಾಗಿ, 1990ರ ಜನವರಿ 19ರಂದು ರಾಜ್ಯಪಾಲ ಜಗಮೋಹನ್ ಅವರ ಆಡಳಿತ ಶುರುವಾಯಿತು. ಅದೇ ರಾತ್ರಿ ಹಿಂದೂಗಳ ಮನೆಗಳ ಮೇಲೆ ಭಯೋತ್ಪಾದಕರ ದಾಳಿ ನಡೆಯಿತು. ಮನೆಗಳಿಗೆ ಬೆಂಕಿ ಹಚ್ಚಲಾಯಿತು. ಮಹಿಳೆಯರ ಮೇಲೆ ದೌರ್ಜನ್ಯ ನಡೆಯಿತು. ಜನವರಿ 20ರ ಬೆಳಿಗ್ಗೆ ಹೊತ್ತಿಗೆ, ಜೀವ ಉಳಿಸಿಕೊಂಡ ಕಾಶ್ಮೀರಿ ಪಂಡಿತರು ಕಣಿವೆಯಿಂದ ಪಲಾಯನ ಮಾಡಿದರು. ಕಾಶ್ಮೀರ ಸಂಘರ್ಷ ಸಮಿತಿ ಪ್ರಕಾರ, ಅಂದು ಸುಮಾರು 75 ಸಾವಿರ ಪಂಡಿತರು ಕಣಿವೆ ತೊರೆದರು. 650 ಪಂಡಿತರ ಹತ್ಯೆಯಾಯಿತು. ನಂತರದ ದಿನಗಳಲ್ಲೂ ವಲಸೆ ಮುಂದುವರಿಯಿತು.

ಪಂಡಿತರ ಹತ್ಯೆ, ವಲಸೆ: ಯಾವುದು ಸರಿ?: ಇತ್ತೀಚೆಗೆ ತೆರೆಕಂಡ 'ದಿ ಕಾಶ್ಮೀರ್ ಫೈಲ್ಸ್' ಸಿನಿಮಾದಲ್ಲಿ 1990ರ ಜನವರಿ 19ರಂದು ಕಾಶ್ಮೀರ ಪಂಡಿತರ ಮೇಲೆ ನಡೆದ ಹಿಂಸಾಚಾರವನ್ನು ಚಿತ್ರಿಸಲಾಗಿದೆ. 'ಈ ಹಿಂಸಾಚಾರದಿಂದಾಗಿ 5 ಲಕ್ಷ ಪಂಡಿತರು ಕಾಶ್ಮೀರದಿಂದ ಪಲಾಯನ ಮಾಡಿದರು. 4 ಸಾವಿರ ಪಂಡಿತರು ಹತ್ಯೆಗೀಡಾದರು' ಎಂದು ಸಿನಿಮಾದಲ್ಲಿ ವಿವರಿಸಲಾಗಿದೆ. ಕೇಂದ್ರ ಸರ್ಕಾರದ 'ಜಮ್ಮು ಕಾಶ್ಮೀರ ವಲಸಿಗರ ಪುನರ್ವಸತಿ' ಕುರಿತ ವೆಬ್‌ಸೈಟ್‌ನಲ್ಲಿ 1.35 ಲಕ್ಷ ಹಿಂದೂಗಳು ಪಲಾಯನ ಮಾಡಿದ್ದಾರೆ ಎಂದು ಉಲ್ಲೇಖಿಸಲಾಗಿದೆ.

ಯುಪಿಎ ಅವಧಿಯಲ್ಲಿ ಪುನರ್ವಸತಿ

1990ರಲ್ಲಿ ಕಾಶ್ಮೀರ ಕಣಿವೆ ತೊರೆದಿದ್ದ ಕಾಶ್ಮೀರಿ ಪಂಡಿತ ಕುಟುಂಬಗಳಿಗೆ ಜಮ್ಮುವಿನಲ್ಲಿ ಪುನರ್ವಸತಿ ಕಲ್ಪಿಸುವ ಕೆಲಸ ಆ ದಶಕದಲ್ಲೇ ನಡೆದಿತ್ತು. ಆದರೆ, ಕಾಶ್ಮೀರ ಕಣಿವೆಯಲ್ಲೇ ಪುನರ್ವಸತಿ ಕಲ್ಪಿಸುವ ಕೆಲಸ ನಡೆದದ್ದು ಯುಪಿಎ-1 ಸರ್ಕಾರದ ಅವಧಿಯಲ್ಲಿ. 2004ರಲ್ಲಿ ಕೇಂದ್ರದಲ್ಲಿ ಯುಪಿಎ ಸರ್ಕಾರ ಬಂದ ನಂತರ, ಈ ವಸತಿ ಶಿಬಿರಗಳ ಮೂಲಸೌಕರ್ಯವನ್ನು ಹೆಚ್ಚಿಸಲಾಯಿತು. 2004ರ ನವೆಂಬರ್‌ನಲ್ಲಿ ಅಂದಿನ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರು ಜಮ್ಮುವಿನಲ್ಲಿ ಇದ್ದ ಇಂತಹ ಒಂದು ಶಿಬಿರಕ್ಕೆ ಭೇಟಿ ನೀಡಿದ್ದರು. ಅಂದಿನ ಪ್ರಧಾನಿ ಕಚೇರಿಯ ಉನ್ನತಾಧಿಕಾರಿಗಳ ತಂಡ ಸಹ ಭೇಟಿ ನೀಡಿ, ಮೂಲಸೌಕರ್ಯ ಅಭಿವೃದ್ಧಿಗೆ ಶಿಫಾರಸು ಮಾಡಿತ್ತು.

ಜಮ್ಮುವಿನಲ್ಲಿ ಕಾಶ್ಮೀರಿ ವಲಸಿಗ ಹಿಂದೂ ಕುಟುಂಬಗಳಿಗಾಗಿ 5,248 ಫ್ಲ್ಯಾಟ್‌ಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಳ್ಳಲಾಗಿತ್ತು. 2005ರ ಸೆಪ್ಟೆಂಬರ್‌ನಲ್ಲಿ ಮೊದಲ ಹಂತದಲ್ಲಿ 1,024 ಫ್ಲ್ಯಾಟ್‌ಗಳ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿತ್ತು. ಕಾಶ್ಮೀರ ಕಣಿವೆಯ ಮುಥಿ, ಪುರ್ಖೂ ಮತ್ತು ನಗರೋಟಾದಲ್ಲಿನ ಶಿಬಿರಗಳಲ್ಲಿ ಈ ಫ್ಲ್ಯಾಟ್‌ಗಳ ನಿರ್ಮಾಣ ನಡೆಸಲಾಗಿತ್ತು. 2007ರಲ್ಲಿ ನಗರೋಟಾ ಶಿಬಿರದಲ್ಲಿ ಎರಡನೇ ಹಂತದಲ್ಲಿ 4,224 ಫ್ಲ್ಯಾಟ್‌ಗಳ ನಿರ್ಮಾಣ ಕಾಮಗಾರಿ ಆರಂಭಿಸಲಾಗಿತ್ತು.

ಈ ಯೋಜನೆಗಳ ಕಾಮಗಾರಿಗಳು ನಡೆಯುತ್ತಿದ್ದ ಸಂದರ್ಭದಲ್ಲೇ 2008ರಲ್ಲಿ ಕೇಂದ್ರ ಸರ್ಕಾರವು, ಕಾಶ್ಮೀರಿ ಪಂಡಿತರಿಗೆ ಕಣಿವೆಯಲ್ಲೇ ಪುನರ್ವಸತಿ ಕಲ್ಪಿಸಲು ಕ್ರಮ ತೆಗೆದುಕೊಂಡಿತು. ಇದಕ್ಕಾಗಿ 'ಪ್ರಧಾನ ಮಂತ್ರಿಗಳ ಪುನರ್ವಸತಿ ಕಾರ್ಯಕ್ರಮ–2008' ಆರಂಭಿಸಲಾಯಿತು. ಈ ಕಾರ್ಯಕ್ರಮದ ಅಡಿಯಲ್ಲಿ, ವಲಸಿಗ ಕಾಶ್ಮೀರಿ ಪಂಡಿತ ಕುಟುಂಬದ ಒಟ್ಟು 6,000 ಜನರಿಗೆ ಕಾಶ್ಮೀರ ಕಣಿವೆಯಲ್ಲಿ ಸರ್ಕಾರಿ ನೌಕರಿ ಮತ್ತು ವಸತಿ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಯಿತು. ಈ ಯೋಜನೆ ಅಡಿ ಕಾಶ್ಮೀರ ಕಣಿವೆಯ ವಿವಿಧ ಜಿಲ್ಲೆಗಳಲ್ಲಿರುವ ಸರ್ಕಾರಿ ಶಾಲೆಗಳು, ವಿವಿಧ ಇಲಾಖೆಗಳು ಮತ್ತು ಬ್ಯಾಂಕ್‌ಗಳಲ್ಲಿ ಉದ್ಯೋಗ ನೀಡಲಾಯಿತು. ಇದರ ಜತೆಯಲ್ಲಿ ಶಿಬಿರಗಳನ್ನು ನಿರ್ಮಿಸಿ, ಆ ಉದ್ಯೋಗಿಗಳ ಕುಟುಂಬಕ್ಕೆ ವಸತಿ ಕಲ್ಪಿಸಲಾಯಿತು. ಈ ಉದ್ಯೋಗಿಗಳ ವೇತನ ಮತ್ತು ವಿವಿಧ ಭತ್ಯೆಗಳನ್ನು ಅಂದಿನಿಂದ ಕೇಂದ್ರ ಸರ್ಕಾರವೇ ಭರಿಸುತ್ತಾ ಬಂದಿದೆ.

ಎನ್‌ಡಿಎ ಅವಧಿ: ಪ್ರತ್ಯೇಕ ಕಾರ್ಯಕ್ರಮವಿಲ್ಲ

2008ರ ಯೋಜನೆ ಅಡಿ ಕಾಶ್ಮೀರದಲ್ಲಿ ಪುನರ್ವಸತಿ ಪಡೆದವರನ್ನು, 'ಪಿಎಂ ಪ್ಯಾಕೇಜ್ ನೌಕರರು' ಎಂದು ಕರೆಯಲಾಗುತ್ತದೆ. 2008ರ ನಂತರ ಹಲವು ವರ್ಷಗಳವರೆಗೆ ಮತ್ತೆ ಇಂತಹ ಯೋಜನೆ ಜಾರಿಗೆ ಬರುವುದಿಲ್ಲ. ಕಾಶ್ಮೀರಿ ಪಂಡಿತ್ ಸಂಘರ್ಷ ಸಮಿತಿಯು 2014ರಲ್ಲಿ ಮತ್ತೆ ನೇಮಕಾತಿ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿತ್ತು. ನೇಮಕಾತಿಯ ಮೂಲಕ ಮತ್ತೆ 3,000 ಕಾಶ್ಮೀರಿ ಪಂಡಿತರಿಗೆ ಪುನರ್ವಸತಿ ಕಲ್ಪಿಸುವಂತೆ ಒತ್ತಾಯಿಸಿತ್ತು.

ಆಗ ಕೇಂದ್ರದ ಎನ್‌ಡಿಎ ಸರ್ಕಾರವು 'ಪ್ರಧಾನ ಮಂತ್ರಿಗಳ ಅಭಿವೃದ್ಧಿ ಪ್ಯಾಕೇಜ್–2015' ಕಾರ್ಯಕ್ರಮವನ್ನು ಜಾರಿಗೆ ತಂದಿತು. ಈ ಯೋಜನೆ ಅಡಿ 3,000 ಜನರಿಗೆ ಉದ್ಯೋಗ ಕಲ್ಪಿಸಲು ಸಿದ್ಧತೆ ನಡೆಸಲಾಯಿತು. ಇದಕ್ಕಾಗಿ ₹2,000 ಕೋಟಿಯ ಪ್ಯಾಕೇಜ್ ಘೋಷಿಸಲಾಯಿತು. ಆದರೆ, 1947ರ ಪಾಕ್ ಅತಿಕ್ರಮಣದ ಸಂದರ್ಭದಲ್ಲಿ, 1965 ಮತ್ತು 1971ರ ಯುದ್ಧದ ಸಂದರ್ಭದಲ್ಲಿ ನಿರಾಶ್ರಿತರಾದವರಿಗೆ ಪುನರ್ವಸತಿ ಘೋಷಿಸಲಾಯಿತು. ಕಾಶ್ಮೀರಿ ಪಂಡಿತ್ ಸಂಘರ್ಷ ಸಮಿತಿಯ ಆಕ್ಷೇಪದ ನಂತರ, ವಲಸಿಗರಲ್ಲದ ಕಾಶ್ಮೀರಿ ಹಿಂದೂಗಳೂ ಈ ಯೋಜನೆ ಅಡಿ ಸೌಲಭ್ಯ ಪಡೆಯಬಹುದು ಎಂದು 2016ರ ಅಕ್ಟೋಬರ್ 3ರಂದು ಕೇಂದ್ರ ಸರ್ಕಾರವು ಸ್ಪಷ್ಟನೆ ನೀಡಿತು. 1990ರಲ್ಲಿ ಕಾಶ್ಮೀರ ತೊರೆದ ಕಾಶ್ಮೀರಿ ಪಂಡಿತರಿಗೆ ಈ ಯೋಜನೆ ಅಡಿ ಯಾವುದೇ ಪ್ರತ್ಯೇಕ ಕಾರ್ಯಕ್ರಮ ಘೋಷಿಸಿಲ್ಲ.

ಈ ಕಾರ್ಯಕ್ರಮದ ಪ್ರಗತಿ ಏನಾಗಿದೆ ಎಂದು ರಾಜ್ಯಸಭೆಯಲ್ಲಿ ಈಚೆಗೆ ಪ್ರಶ್ನೆ ಕೇಳಲಾಗಿತ್ತು. 'ಸರ್ಕಾರವು 3,000 ಕಾಶ್ಮೀರಿ ವಲಸಿಗರಿಗೆ ಈ ಯೋಜನೆ ಅಡಿ ಉದ್ಯೋಗ ನೀಡಿದೆ. ಜತೆಗೆ ಈ ಕಾಶ್ಮೀರಿ ವಲಸಿಗ ನೌಕರರಿಗಾಗಿ 6,000 ವಸತಿಗಳನ್ನು ನಿರ್ಮಿಸುವ ಕಾಮಗಾರಿ ಆರಂಭಿಸಲಾಗಿದೆ' ಎಂದು ಕೇಂದ್ರ ಗೃಹ ಸಚಿವಾಲಯವು 2022ರ ಫೆಬ್ರುವರಿ 9ರಂದು ರಾಜ್ಯಸಭೆಯಲ್ಲಿ ಉತ್ತರ ನೀಡಿದೆ. ಆದರೆ, ಹೀಗೆ ಉದ್ಯೋಗ ಪಡೆದುಕೊಂಡರವಲ್ಲಿ 1990ರಲ್ಲಿ ಕಾಶ್ಮೀರ ತೊರೆದಿದ್ದ ವಲಸಿಗರೆಷ್ಟು ಎಂಬುದರ ಮಾಹಿತಿಯನ್ನು ಕೇಂದ್ರ ಸರ್ಕಾರ ನೀಡಿಲ್ಲ. 2015ರಲ್ಲಿ ಆರಂಭವಾದ ಈ ಯೋಜನೆ ಅಡಿ ಕೇವಲ ₹754 ಕೋಟಿಯನ್ನಷ್ಟೇ ಬಿಡುಗಡೆ ಮಾಡಲಾಗಿದೆ. ಕಾರ್ಯಕ್ರಮ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬಂದಿಲ್ಲ.

ಈ ಎರಡೂ ಕಾರ್ಯಕ್ರಮಗಳ ಅಡಿ ನೇಮಕವಾದ 1,321 ಮಂದಿಗೆ ಕಾಶ್ಮೀರ ಕಣಿವೆಯಲ್ಲಿ ಇನ್ನೂ ವಸತಿ ಸೌಲಭ್ಯ ದೊರೆತಿಲ್ಲ.

ಆಧಾರ: ಕೇಂದ್ರ ಗೃಹ ಸಚಿವಾಲಯ, ರಾಜ್ಯಸಭೆಯಲ್ಲಿ ಕೇಂದ್ರ ಗೃಹ ಸಚಿವಾಲಯ ನೀಡಿದ ಲಿಖಿತ ಉತ್ತರ, ಜಮ್ಮು–ಕಾಶ್ಮೀರ ಸರ್ಕಾರದ ಪರಿಹಾರ ಮತ್ತು ಪುನರ್ವಸತಿ ಇಲಾಖೆ, ಪ್ರಧಾನ ಮಂತ್ರಿ ಅಭಿವೃದ್ಧಿ ಪ್ಯಾಕೇಜ್–2015, ಪಿಟಿಐ, ಕಾಶ್ಮೀರಿ ಪಂಡಿತ್ ಸಂಘರ್ಷ ಸಮಿತಿ, ಸಿಟಿಜನ್ಸ್ ಫಾರ್ ಜಸ್ಟಿಸ್ ಆ್ಯಂಡ್ ಪೀಸ್

ಪ್ರತ್ಯಕ್ಷಳಾದ ಚಂಡಿಕಾದೇವಿ

ನಾರದಮುನಿಯು ಬ್ರಹ್ಮನಲ್ಲಿ 'ವಿಷ್ಣು ಅಂತರ್ಧಾನನಾದ ಮೇಲೆ ಮುಂದೇನಾಯಿತು' ಎಂದು ಕೇಳುತ್ತಾನೆ. ಅದಕ್ಕೆ ಬ್ರಹ್ಮ 'ಎಲೈ ನಾರದ! ಸಾವಧಾನವಾಗಿ ಕೇಳು. ವಿಷ್ಣುವು ಅಂತರ್ಧಾನನಾಗಲು ಮುಂದೆ ನಾನೇನು ಮಾಡಿದೆನೆಂಬುದನ್ನು ಹೇಳುವೆನು' ಎಂದು ಶಿವಕಥೆಯನ್ನ ಮುಂದುವರೆಸುತ್ತಾನೆ.

ಜಗತ್ತಿಗೆ ಕಾರಣಳು, ಭಕ್ತರ ಕಷ್ಟವನ್ನು ನೀಗಿಸುವವಳು, ಶಂಕರನ ಪ್ರಿಯೆಯೂ ಆದಂತಹ ದೇವಿಯನ್ನು ಬ್ರಹ್ಮ ಭಕ್ತಿಯಿಂದ ಧ್ಯಾನಿಸಿ ಹೀಗೆ ಸ್ತುತಿಸಿದ. 'ಓ ದೇವಿಯೆ! ಎಲ್ಲೆಡೆಯಲ್ಲಿಯು ವ್ಯಾಪಿಸಿರುವವಳು, ಜ್ಞಾನಸ್ವರೂಪಳು, ಎಲ್ಲಕ್ಕೂ ಆಧಾರಳು, ದುಃಖಸಂಬಂಧವಿಲ್ಲದವಳೂ ಆದ ತ್ರಿಮೂರ್ತಿಗಳಿಗೆ ಮಾತೆಯೇ. ಸ್ಥೂಲ ಸೂಕ್ಷ್ಮಸ್ವರೂಪವೂ ಆದಂತಹ ನೀನು ಜ್ಞಾನಸ್ವರೂಪಳು ಮಾತ್ರವಲ್ಲ, ಆನಂದಸ್ವರೂಪಳು ಹೌದು, ಪರಮಾತ್ಮಸ್ವರೂಪಳು ಹೌದು. ನಾನು ಕೋರಿದ ಕಾರ್ಯ ನೆರವೇರುವಂತೆ ಅನುಗ್ರಹಿಸು. ನಿನಗೆ ನಮಸ್ಕಾರ' ಎಂದ.

ಬ್ರಹ್ಮನ ಸ್ತುತಿಗೆ ಯೋಗನಿದ್ರಾರೂಪಳಾದ ಚಂಡಿಕಾದೇವಿಯು ಪ್ರತ್ಯಕ್ಷವಾಗಿ ಆವಿರ್ಭವಿಸಿದಳು. ಆ ದೇವಿಯನ್ನು ನೋಡಿ ಬ್ರಹ್ಮ ಭಾವಪರವಶನಾದ. ದಟ್ಟವಾದ ಅಂಜನದಂತೆ ನೀಲವಾದ ಶರೀರಕಾಂತಿಯಿಂದ, ಪುಷ್ಟವಾದ ನಾಲ್ಕು ಸುಂದರಬಾಹುಗಳಿಂದ ಕಂಗೊಳಿಸುತ್ತಿದ್ದ ಚಂಡಿಕಾದೇವಿ ಸಿಂಹವನ್ನೇರಿ ಕುಳಿತಿದ್ದಳು. ಅವಳು ಕೈಯಲ್ಲಿ ವರದಮುದ್ರೆಯನ್ನು ಪ್ರದರ್ಶಿಸುತ್ತಲಿದ್ದಳು. ಮುತ್ತುಗಳಿಂದ ಕೇಶಪಾಲನವನ್ನಲಂಕರಿಸಿದ್ದಳು. ಅವಳ ಮುಖವಂತೂ, ಶರತ್ಕಾಲದ ಪೂರ್ಣಚಂದ್ರನಂತೆ ಶೋಭಿಸುತ್ತಿತ್ತು. ಹಣೆಯಲ್ಲಿ ಚಂದ್ರಕಲೆಯು ಹೊಳೆಯುತ್ತಿತ್ತು. ಅವಳ ಕೈಕಾಲುಗಳ ಉಗುರುಗಳು ಕಮಲದಂತೆ ಕೆಂಪಾಗಿದ್ದುವು. ಒಟ್ಟಾರೆ, ಶಿವನಂತೆ ಮೂರು ನಯನಗಳಿಂದ ಸರ್ವಾಂಗ ಸುಂದರಿಯಾಗಿ ಕಾಣಿಸುತ್ತಿದ್ದಳು.

ಇಂತಹ ಶಿವಶಕ್ತಿ ದೇವಿಯನ್ನು ಪ್ರತ್ಯಕ್ಷವಾಗಿ ನೋಡಿದ ಬ್ರಹ್ಮ, 'ಓ ದೇವಿಯೇ! ಜಗತ್ತಿನ ಪ್ರವೃತ್ತಿ ನಿವೃತ್ತಿಗಳು ನಿನ್ನಿಂದಲೇ ಆಗುವುವು. ಪಾಲನ ಮತ್ತು ಸೃಷ್ಟಿಗಳ ಸ್ವರೂಪಗಳು ನೀನೇ ಆಗಿರುವೆ. ಜಗತ್ತಿನ ಚರಾಚರ ಪ್ರಾಣಿಗಳಲ್ಲಿ ಕಂಡುಬರುವ ಕಾರ್ಯಶಕ್ತಿ ನೀನೇ ಆಗಿರುವೆ. ನಿನಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ನೀನು ಎಲ್ಲರನ್ನೂ ಮೋಹಗೊಳಿಸುವ ಸರ್ವಶಕ್ತೆ.

'ಓ ದೇವಿ! ನೀನು ಲಕ್ಷ್ಮೀರೂಪದಿಂದ ವಿಷ್ಣುವನ್ನು ಮೋಹಗೊಳಿಸುವೆ. ಭೂದೇವಿಯ ರೂಪದಿಂದ ಜಗತ್ತೆಲ್ಲವನ್ನೂ ಧರಿಸುವೆ. ನೀನೇ ಜಗತ್ತನ್ನು ಸೃಷ್ಟಿಸುವೆ, ನೀನೆ ಅದನ್ನು ರಕ್ಷಿಸುವೆ, ನೀನೇ ಜಗತ್ತನ್ನು ಪ್ರಳಯದ ಮೂಲಕ ಸಂಹರಿಸುವೆ. ನೀನು ಸತ್ತ್ವರಜಸ್ತಮೋಗುಣಗಳ ಸಂಪರ್ಕವಿಲ್ಲದ ಪರಬ್ರಹ್ಮಸ್ವರೂಪಳು. ಮಹಾಮಹಿಮಳು, ಚರ್ಮಚಕ್ಷುಸ್ಸುಗಳಿಂದ ತಿಳಿಯಲು ಅಶಕ್ಯಳು. ಇಂತಹ ನಿನ್ನನ್ನು ಯೋಗಿಗಳು ಇಂದ್ರಿಯದಿಂದ ಪರಿಶುದ್ಧವಾದ ಮನಸ್ಸಿನಲ್ಲಿ ಧ್ಯಾನಿಸುವರು.

'ಓ ದೇವಿ! ನೀನು ಜ್ಞಾನಜ್ಯೋತಿ, ಪ್ರಕಾಶಸ್ವರೂಪಳು, ಪರಿಶುದ್ಧಳು, ಸಂಸಾರ ಸಂಬಂಧವಿಲ್ಲದವಳು; ಜಗತ್ತಿನಲ್ಲಿ ಅನೇಕ ಬಗೆಯ ವಿದ್ಯಾಸ್ವರೂಪಗಳನ್ನು ಪ್ರಕಟಿಸಿರುವೆ. ನೀನು ವಿಕಾರವಿಲ್ಲದವನು, ಇಂದ್ರಿಯಗಳಿಗೆ ಅಗೋಚರನು, ನಾಶವಿಲ್ಲದವನೂ ಆದಂತಹ ಪರಮಾತ್ಮನ ಸ್ವರೂಪಳು. ನೀನು ಪ್ರಳಯಕಾಲದಲ್ಲಿ ಜಗತ್ತೆಲ್ಲವನ್ನೂ ನಿನ್ನಲ್ಲಿ ಸೇರಿಸಿಕೊಳ್ಳುವೆ.

'ಓ ಶಿವೆ! ನೀನು ಸಗುಣರೂಪಳಾಗಿದ್ದು ನಿತ್ಯವೂ ಜನಗಳಲ್ಲಿ ನಿನ್ನ ಮಾಯೆಯಿಂದ ಅಜ್ಞಾನವನ್ನು ಹರಡುವೆ, ವಿಕಾರವನ್ನು ಬೆಳೆಸುವೆ. ಸತ್ವ-ರಜಸ್ಸು-ತಮೋಗುಣಗಳು ನಿನ್ನಿಂದಲೇ ಜನಿಸುವುವು. ನೀನು ಆ ಗುಣಗಳಿಗಿಂತ ಭಿನ್ನಳಾಗಿರುವೆ. ಸೃಷ್ಟಿಗೆ ಮೊದಲು ನಿನ್ನಲ್ಲಿ ಈ ಗುಣಗಳು ವಿಕಾರವಿಲ್ಲದೆ ಸಮವಾಗಿರುವುವು. ಆ ಗುಣಗಳ ಸಾಮ್ಯಾವಸ್ಥೆಯ ಸ್ವರೂಪವೇ ನೀನಾಗಿರುವೆ. ಇಂತಹ ಗುಣಗಳ ಮೂಲಕ ಜಗತ್ತೆಲ್ಲವನ್ನೂ ಸೃಷ್ಟಿಸುವೆ, ರಕ್ಷಿಸುವೆ, ಕೊನೆಗೆ ಸಂಹರಿಸುವೆ. ಸಕಲ ಜಗತ್ತಿಗೂ ಕಾರಣಳಾದ ಓ ಶಿವಶಕ್ತಿಜ್ಞಾನಸ್ವರೂಪಳು, ವಿಷಯಸ್ವರೂಪಳು, ಸದಾ ಜಗತ್ತಿಗೆ ಕಲ್ಯಾಣವನ್ನು ಮಾಡುವ ನಿನಗೆ ನಮಸ್ಕಾರ.

'ಓ ದೇವಿ, ಪರಮೇಶ್ವರಿ! ನನ್ನಲ್ಲಿ ಅನುಗ್ರಹವನ್ನಿರಿಸಿ ನಾನು ಹೇಳುವುದನ್ನು ದಯವಿಟ್ಟು ಕೇಳು. ನೀನು ಎಲ್ಲವನ್ನೂ ಬಲ್ಲ ಸರ್ವಜ್ಞಳು. ಆದರೂ ನಿನ್ನ ಅಪ್ಪಣೆಯಂತೆ ನನ್ನ ಮನಸ್ಸಿನಲ್ಲಿದ್ದುದನ್ನು ಹೇಳುವೆನು. ಅದನ್ನು ಈಡೇರಿಸಿಕೊಡು' ಎಂದು ಬ್ರಹ್ಮ ವಿಧವಿಧವಾಗಿ ಸ್ತುತಿಸಿದ.

ಬ್ರಹ್ಮನ ಸ್ತುತಿ ಕೇಳಿದ ಪರಮೇಶ್ವರಿ, ಪ್ರಸನ್ನಳಾಗಿ 'ಎಲೈ ಬ್ರಹ್ಮದೇವ, ನಾನು ಪ್ರತ್ಯಕ್ಷಳಾದಮೇಲೆ ನಿನ್ನ ಕಾರ್ಯವು ನಿಶ್ಚಯವಾಗಿ ನೆರವೇರುವುದು. ಆದುದರಿಂದ ನಾನು ಮಾಡಬೇಕಾದ ನಿನ್ನ ಇಷ್ಟಕಾರ್ಯ ಯಾವುದು ಎಂಬುದನ್ನು ಹೇಳು' ಎನ್ನುತ್ತಾಳೆ. •

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜೂನ್ 7, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ–ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಸಪ್ತಮಿ ಗಂ. 07-55 ನಕ್ಷತ್ರ: ಪೂರ್ವಫಲ್ಗುನಿ ಗಂ. 27-50 ಯೋಗ: ವಜ್ರ ಗಂ. 28-26 ಕರಣ: ವಣಿಜ ಗಂ. 07-55, ವೃಷಭ ಮಾಸದ 23 ನೇ ದಿನ.
ರಾಹುಕಾಲ: ಸಾಯಂಕಾಲ 03:00–04:30
ಸೂರ್ಯೋದಯ: 06-07 **ಸೂರ್ಯಾಸ್ತ:** 06-52
ಮುಸ್ಲಿಂ ದಿನಾಂಕ: 07 ಜುಲ್ಖಾಯದ್
ಅದೃಷ್ಟ ಸಂಖ್ಯೆ: 3, 10

ಮೇಷ: ನೀವು ಆಡಿದ ಮಾತುಗಳು ನಿಮಗೆ ಮುಳ್ಳಾಗುವ ದಿನ. ದಾಖಲೆಪತ್ರಗಳನ್ನು ಬರೆಸುವಾಗ ಸಂಖ್ಯೆ ಅಥವಾ ವಾಕ್ಯಗಳ ಬಗ್ಗೆ ಹೆಚ್ಚಿನ ಗಮನವಹಿಸಿ; ಪರಿಣಿತರ ಅನುಭವವನ್ನು ಕೇಳಿ ಮುನ್ನುಗ್ಗಿ.

ವೃಷಭ: ವೈದ್ಯರು ಅದರಲ್ಲೂ ನರರೋಗ ತಜ್ಞರು ಅಭ್ಯಾಸದಲ್ಲಿ ತೋರಿದ ನಿರ್ಲಕ್ಷ್ಯದಿಂದ ಪಾಪ ಸಂಗ್ರಹಣೆಯಾಗುವುದು. ಧಾರ್ಮಿಕ ಕೆಲಸವನ್ನು ಮಾಡುವ ಬಗ್ಗೆ ತೀರ್ಮಾನಿಸಿ.

ಮಿಥುನ: ಬೇಸರ ಕಳೆಯಲು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ. ವಾಹನಗಳ ಬಿಡಿ ಭಾಗಗಳ ಮಾರಾಟಗಾರರಿಗೆ ಮತ್ತು ರಿಪೇರಿ ಮಾಡುವವರಿಗೆ ಬಿಡುವಿಲ್ಲದ ದಿನವಾಗುವುದು.

ಕರ್ಕಾಟಕ: ನಿಮ್ಮ ಆಹಾರ ಶೈಲಿಯು ಆರೋಗ್ಯ ಹದಗೆಡಲು ಕಾರಣವಾಗುತ್ತದೆ. ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಯಿಂದ ಈ ದಿನ ನಿರುತ್ಸಾಹಿಯಾಗಿರುತ್ತೀರಿ. ಜಾಗ್ರತೆವಹಿಸಿ.

ಸಿಂಹ: ದಿನದ ನಿಮ್ಮ ಈ ಪರಿಶ್ರಮವು ಮುಂದಿನ ದಿನಕ್ಕೆ ಅಡಿಪಾಯವಾಗಲಿದೆ. ವಂಶ ಪಾರಂಪರ್ಯವಾಗಿ ಬಂದ ನಿಮ್ಮ ಉದ್ಯೋಗದಲ್ಲಿ ಈಗ ಹೆಚ್ಚಿನ ಏಳಿಗೆ ಕಾಣುವಿರಿ. ವೃಥಾ ಅಲೆದಾಟಗಳು ತಪ್ಪುವುದು.

ಕನ್ಯಾ: ಉದ್ಯೋಗ ತ್ಯಜಿಸಿ ಹುಟ್ಟಿದ ಊರಿನಲ್ಲಿ ಕೃಷಿ ಮಾಡಲು ಯೋಚನೆ ಬರುವುದು. ಕಾರ್ಖಾನೆಯೊಂದನ್ನು ಗುತ್ತಿಗೆ ಆಧಾರದಲ್ಲಿ ಪಡೆದುಕೊಳ್ಳುವ ಅವಕಾಶಗಳು ನಿಮ್ಮ ಸ್ನೇಹಿತನ ಸಹಾಯದಿಂದ ನೆಡೆಸಬಹುದು.

ತುಲಾ: ಕೆಲವೊಂದು ಜವಾಬ್ದಾರಿಯುತವಾದ ಸಾರ್ವಜನಿಕ ಕಾರ್ಯಗಳು ನಿಮ್ಮ ಮುಂದಾಳತ್ವದಲ್ಲಿ ನಡೆಯಲಿದೆ. ದಾಂಪತ್ಯದಲ್ಲಿ ಹೊಂದಾಣಿಕೆಯಿಂದ ಜೀವನ ಹಸನವಾಗಲಿದೆ.

ವೃಶ್ಚಿಕ: ಮಸಾಲೆ ಪದಾರ್ಥ ಅಥವಾ ಖಾದ್ಯಗಳ ಮಾರಾಟಗಾರರಿಗೆ ಅಧಿಕ ಮಟ್ಟದಲ್ಲಿ ಬೇಡಿಕೆಗಳು ಉಂಟಾಗುವುದು. ಮಕ್ಕಳ ವರ್ತನೆಯು ನಿಮ್ಮ ಮನಸ್ಸಿಗೆ ಸಂತೋಷ ತಂದುಕೊಡಲಿದೆ.

ಧನು: ಸಂಶೋಧನಾ ವೃತ್ತಿಯಲ್ಲಿರುವವರಿಗೆ ಈ ದಿನ ಅಧ್ಯಯನಕ್ಕೆ ಸುಸಮಯವಾಗಲಿದೆ. ದೇಹದಲ್ಲಿ ಪಿತ್ತದ ಅಂಶ ಅಧಿಕವಾಗುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವಶ್ಯಕವಾಗುತ್ತದೆ.

ಮಕರ: ಕೆಲಸ ಕಾರ್ಯಗಳನ್ನು ಶೀಘ್ರದಲ್ಲಿ ಪೂರ್ತಿಗೊಳಿಸಿಕೊಳ್ಳಲು ನಿರ್ಧಾರ ಮಾಡಿ. ಆರೋಗ್ಯದ ಬಗ್ಗೆ ಕಾಳಜಿ ತೋರಿ. ಮನೆಯಲ್ಲಿ ಉದ್ವೇಗದ ವಾತಾವರಣ ಎದುರಾಗಬಹುದು.

ಕುಂಭ: ಇಂದಿನ ನಿಮ್ಮ ನಡವಳಿಕೆ ಎಲ್ಲರ ಕೇಂದ್ರ ಬಿಂದುವಾಗಲಿದೆ. ಈ ದಿನ ದೊರೆತಿರುವ ಖ್ಯಾತಿಯನ್ನು ಉಳಿಸಿಕೊಳ್ಳುವತ್ತ ಹೆಚ್ಚಿನ ಗಮನ ಹರಿಸುವುದು ಉತ್ತಮ. ಮನರಂಜನೆಗೂ ಸಾಕಷ್ಟು ಸಮಯ ಇರಿಸಿ.

ಮೀನ: ಹಣಕಾಸಿನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸೂಕ್ತ ಕಾಲ. ಷೇರು ವ್ಯವಹಾರಗಳು ಇಂದು ಕೂಡಿ ಬರುವುವು. ನಿಮ್ಮ ಒಳ್ಳೆಯ ನಿರ್ಧಾರಗಳಿಂದ ಸಹೋದ್ಯೋಗಿಗಳಿಗೆ ಸಂತಸವಾಗುವುದು.

ಬೆರಗಿನ ಬೆಳಕು

ಗುರುರಾಜ ಕರಜಗಿ

ಬದುಕು ನರಳಾಟವೇ?

**ತರಚುಗಾಯವ ಕೆರೆದು ಹುಣ್ಣನಾಗಿಪುದು ಕಪಿ|
ಕೊರತೆಯೊಂದನು ನೀನು ನೆನೆನೆನೆದು ಕೆರಳಿ||
ಧರೆಯೆಲ್ಲವನು ಶಪಿಸಿ, ಮನದಿ ನರಕವ ನಿಲಿಸಿ|
ನರಳುವುದು ಬದುಕೇನೊ ? –
ಮಂಕುತಿಮ್ಮ||644||**

ಪದ-ಅರ್ಥ: ಹುಣ್ಣನಾಗಿಪುದು = ಹುಣ್ಣನು + ಆಗಿಪುದು (ಮಾಡಿಕೊಳ್ಳುವುದು), ಕೊರತೆಯೊಂದನು = ಕೊರತೆ + ಒಂದನು, ಧರೆಯೆಲ್ಲವನು = ಧರೆಯ + ಎಲ್ಲವನು

ವಾಚ್ಯಾರ್ಥ: ಸಣ್ಣ ತರಚುಗಾಯವನ್ನು ಕೋತಿ ಕೆರೆದು ಹುಣ್ಣನಾಗಿಸಿಕೊಳ್ಳುತ್ತದೆ. ಅಂತೆಯೇ ಯಾವುದೊ ಚಿಕ್ಕ ಕೊರತೆಯನ್ನು ನೆನೆನೆನೆದು, ಅದಕ್ಕೆ ಪ್ರಪಂಚವನ್ನೆಲ್ಲ ಶಪಿಸಿ, ಮನವನ್ನು ನರಕವನ್ನಾಗಿಸಿಕೊಂಡು ನರಳುವುದು ಬದುಕೇನು?

ವಿವರಣೆ: ನನಗೊಬ್ಬ ಶಿಕ್ಷಕರೊಂದಿಗೆ ಆತ್ಮೀಯತೆ ಇತ್ತು. ಅವರು ಬದುಕಿನಲ್ಲಿ ಎಲ್ಲವನ್ನು ಕಂಡಿದ್ದವರು. ಏನೇ ಆಗಲಿ, 'ಆಯ್ತು, ಅದು ಭಗವಂತನ ಇಚ್ಛೆ' ಎನ್ನುವವರು. ಅವರಿಗೆ ಇಬ್ಬರು ಮಕ್ಕಳು. ದೊಡ್ಡಮಗ ಬುದ್ಧಿವಂತ. ಶಿಕ್ಷಕರು ನಿವೃತ್ತರಾಗುವ ಹೊತ್ತಿಗೆ ಮಗ ಕೈಗೆ ಬರುತ್ತಾನೆ ಎಂದುಕೊಂಡಿದ್ದರು. ಅವನಿಗೆ ಕೆಲಸ ಸಿಕ್ಕ ಮರುತಿಂಗಳೇ ಅಪಘಾತಕ್ಕೀಡಾಡಿ ಸತ್ತು ಹೋದ. ಹೆಂಡತಿ ಹಾಸಿಗೆ ಹಿಡಿದರು. ಆಸ್ಪತ್ರೆಗೆ ಸೇರಿಸಿದಾಗ ವಿಪರೀತ ಖರ್ಚು. ಆಸ್ಪತ್ರೆಗೆ ನಡೆದುಕೊಂಡು ಹೋಗುವಾಗ ಎರಡನೆಯ ಮಗ ಕೇಳಿದ 'ಅಪ್ಪಾ, ಸ್ಕೂಟರ್ ಯಾಕೆ ಮಾರಿಬಿಟ್ಟರಿ? ಈಗ ತುಂಬ ಅನುಕೂಲವಾಗುತ್ತಿತ್ತಲ್ಲ?' ಅಪ್ಪ ಹೇಳಿದರು, 'ಮಗೂ, ಸ್ಕೂಟರ್‌ಗಿಂತ ನಿಮ್ಮ ಅಮ್ಮ ನನಗೆ ಮುಖ್ಯ', ಹೆಂಡತಿ ತೀರಿಹೋದರು. ಮುಂದೆ ಶಿಕ್ಷಕರಿಗೆ ತಮ್ಮ ಸಾವು ಹತ್ತಿರ ಬಂತೆಂದು ತಿಳಿದಿರಬೇಕು. ಸಾವಿನಲ್ಲೂ ಅದೇ ಶಾಂತತೆ, ಸಮತ್ವ, ಅದೇ ಶುದ್ಧತೆ! ಕಿರಿಯ ಮಗನನ್ನು ಕರೆದು ಹೇಳಿದರು, 'ಮಗೂ, ಅಲ್ಲಿ ಮೇಜಿನ ಮೇಲೆ ಭಗವಗ್ಗೀತೆ ಪುಸ್ತಕ ಇಟ್ಟಿದ್ದೇನೆ. ನಾನು ತೀರಿದ ಮೇಲೆ ಯಾವ ಯಾವ ಶ್ಲೋಕ ಹೇಳಬೇಕು ಎಂದು ಗುರುತುಮಾಡಿ ಇಟ್ಟಿದ್ದೇನೆ. ಆದರೆ ಜೋಪಾನ. ಅವಸರದಿಂದ, ದುಃಖದಿಂದ ಪದಗಳನ್ನು ತಪ್ಪಾಗಿ ಉಚ್ಚರಿಸಬೇಡ. ನಿನ್ನ ಉಚ್ಚರಣೆ ಸರಿಯಾಗಿರಲಿ'. ಹೀಗೆ ಹೇಳಿ ಅವನ ತಲೆಯ ಮೇಲೆ ಪ್ರೀತಿಯಿಂದ ಕೈಯಾಡಿಸಿದರು. ಮರುದಿನವೇ ಸಾವನ್ನು ಬಹುದಿನಗಳಿಂದ ಕಾಣದೇ ಇದ್ದ ಅತ್ಯಂತ ಪ್ರೀತಿಯ ಸ್ನೇಹಿತನಂತೆ ಅಪ್ಪಿಕೊಂಡು ನಡೆದೇ ಬಿಟ್ಟರು, ಗೊಣಗದೆ.

ಅವರಿಗೆ ಕಷ್ಟ ಇರಲಿಲ್ಲವೆ? ನೋವು ಇರಲಿಲ್ಲವೆ? ಎಲ್ಲವೂ ಇತ್ತು. ಆದರೆ ಅದನ್ನು ನೆನೆನೆನೆದು ಬದುಕನ್ನು ಹಾಳು ಮಾಡಿಕೊಳ್ಳಲಿಲ್ಲ. ತಮ್ಮ ಕಷ್ಟಗಳನ್ನು ಮತ್ತೊಬ್ಬರ ಬದುಕಿನಲ್ಲಿ ಸುರುವಿ ಗೋಳಾಡಲಿಲ್ಲ. ತಮ್ಮ ಕಷ್ಟಗಳಿಗೆ ಕಾರಣರಾದವರನ್ನು ಶಪಿಸುತ್ತ, ಕೋಪದಿಂದ ತಮ್ಮ ಶಾಂತಿ, ನೆಮ್ಮದಿಯ ಜೀವನವನ್ನು ಹಾಳು ಮಾಡಿಕೊಳ್ಳಲಿಲ್ಲ.

ಕಗ್ಗ, ಕೋತಿಯ ಉದಾಹರಣೆಯೊಂದಿಗೆ ನಮ್ಮ ಮನಃಸ್ಥಿತಿಯನ್ನು ವರ್ಣಿಸುತ್ತದೆ. ಕೋತಿಗೆ ಒಮ್ಮೆ ಎಲ್ಲಿಯೋ ತರಚಿ ಸಣ್ಣ ಗಾಯವಾಯಿತು. ಸುಮ್ಮನೆ ಬಿಟ್ಟಿದ್ದರೆ ಗಾಯ ಒಣಗಿಹೋಗುತ್ತದೆ. ಮೊದಲೇ ಕೋತಿ, ಸುಮ್ಮನಿದ್ದೀತೇ? ಗಾಯವನ್ನು ಕೆರೆದು ಕೆರೆದು ದೊಡ್ಡ ವ್ರಣವನ್ನಾಗಿ ಮಾಡಿತು. ಅಂದರೆ ದೊಡ್ಡ ವ್ರಣವಾಗುವುದಕ್ಕೆ ಕಾರಣ ಗಾಯವಲ್ಲ, ಕೋತಿಬುದ್ಧಿ ಕಾರಣ. ನಾವೂ ಹಾಗೆಯೇ ಅಲ್ಲವೆ? ಎಂದೋ ಆಗಿ ಹೋದ ಘಟನೆಯನ್ನು ನೆನಪಿಸಿಕೊಂಡು, ಮನಸ್ಸನ್ನು ವ್ಯಗ್ರಮಾಡಿಕೊಂಡು ನರಳುತ್ತೇವೆ. ನಮ್ಮ ಧಾರಾವಾಹಿ, ಸಿನಿಮಾಗಳಲ್ಲಿ ನೋಡಿಲ್ಲವೇ? 'ಇಪ್ಪತ್ತು ವರ್ಷಗಳಿಂದ ಈ ಸೇಡು ತೀರಿಸಿಕೊಳ್ಳಲು ಕಾಯುತ್ತಿದ್ದೆ' ಎನ್ನುತ್ತಾನೆ ನಾಯಕ! ಹಾಗೆಂದರೆ ತನ್ನ ಜೀವನದ ಇಪ್ಪತ್ತು ವರ್ಷಗಳನ್ನು ಕುದಿಯುತ್ತಲೇ ಹಾಳು ಮಾಡಿಕೊಂಡಿದ್ದಾನೆ. ಕಗ್ಗ ಕೇಳುತ್ತದೆ, 'ಹೀಗೆ ನರಳುವುದು ಬದುಕೇ?' ❖

ಪದಬಂಧ 4981

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆ ಮನೆ ಬಳಿ ಬಂದಿರುವ ಗಜ (2)
3.ವಿರಮಿಸುತ್ತಿದ್ದಾಗ ಕಾಣಿಸಿದ ದುಷ್ಟಹೆಂಗಸು (3)
5.ಪರುಷವನ್ನು ಹಿಡಿರುವ ಗಂಡುವ್ಯಕ್ತಿ! (3)
7.ಅದೇ ತಾನೆ ಹುಟ್ಟಿದುದು (4)
9.ಅವನ ಸಲುವಾಗಿ ತಂದಿರುವ ಮೂಲಧನ! (3)
10.ಗುಡಿ ಹತ್ತಿರ ಕಾಣಿಸಿದ್ದು ಹಬ್ಬುವ ಕುಡಿ (3)
11.ಕನ್ನಡಿಗರ ನಾಡಿದು (4)
13.ಜಗದ ಸುದ್ದಿಯನ್ನು ತಿಳಿಸುವ ವೇದಿಕೆ (3)
15.ಜರೂರಾಗಿ ತಿಳಿದುಕೊಳ್ಳ ಬೇಕಾದ ರೀತಿ! (3)
16.ತಟಕ್ಕನೆ ಪರಾರಿಯಾಗಿರುವ ಕಳ್ಳ! (2)

ಮೇಲಿಂದ ಕೆಳಕ್ಕೆ
2.ಒನಪು ತೋರುವಾಗ ಬಂದಿರುವ ಸ್ಮರಣೆ (3)
3.ಹರ್ಷವು ವಿರಳವಾಗಿ ಬಂದಿದೆ (3)
4.ಮಿಥ್ಯವನ್ನು ನುಡಿಯುತ್ತಿರುವ ಜೋಡಿ! (3)
6.ತಲೆಗೆ ಕಟ್ಟಿಕೊಳ್ಳುವ ಬಟ್ಟೆ (3)
8.ತೂಕ ಮಾಡಲು ತಕ್ಕುದಾದ ಸಾಧನ (3)
9.ಆ ಕಳ್ಳನ ಬಳಿ ಸಡಿಲವಾದುದು ಕಾಣುತ್ತಿದೆ! (3)
10.ಈತ ದಪ್ಪ ಮನುಷ್ಯ (3)
12.ಕರಿಯಲ್ಲಿರುವುದು ಸುವಾಸಿತ ದ್ರವ್ಯ (3)
13.ಹರಾಜಿಗಿರುವ ಹಡಗು! (3)
14.ಕಾಟವನ್ನು ತಡೆಯಲಾಗದ್ದಕ್ಕೇ ಇಷ್ಟು ಘರ್ಷಣೆ! (3)



4980ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹತ್ಯಾಕಾಂಡ 3.ಉಪೋದ್ಘಾತ 5.ಕೆಸರು 7.ದುಮ್ಮಾನ 9.ಮಕರ 10.ಶರಣ 11.ಅಂಗದ 15.ಕರವಾಲ 16.ಕಾರಬಾರು

ಮೇಲಿಂದ ಕೆಳಕ್ಕೆ: 1.ಹರಕೆ 2.ಡಬ್ಬು 3.ಉಮೇದುವಾರ 4.ತಖ್ತೆ 6.ಸದವಕಾಶ 8.ನರೆದಲೆಗ 9.ಮರಣಕಾಲ 12.ದರ್ಬಾರು 13.ಬಿಂಕ 14.ಕಾಕಾ

ಸುಡೊಕು 5367

	7				3		8	
		3						
	1		2	6		7		
	8			2		1		5
		2	8		5			
5				3			2	
9		7						6
	5			7		9		
			6		1		7	2

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5366 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪ್ರಥಮ ವಾರ್ಷಿಕ ಪುಣ್ಯಸ್ಮರಣೆ



ಜನನ: 06.12.1965
ಮರಣ: 07.06.2021

ಶ್ರೀ ವಿ.ಕೆ ಗೋಪಾಲ್ ರವರು

ಮಾಜಿ ಆಂತರಿಕ ಲೆಕ್ಕ ಪರಿಶೋದಕರು: ಕಮ್ಮವಾರಿ ಸಂಘಂ
ಅಧ್ಯಕ್ಷರು: J.D.S. ಪದ್ಮನಾಭ ನಗರ ವಿಧಾನಸಭಾ ಕ್ಷೇತ್ರ
ಅಧ್ಯಕ್ಷರು: ಬಿಡಿಎ ಕಂಟ್ರಾಕ್ಟರ್ಸ್ ಸಂಘ

ನೀವು ನಮ್ಮೆಲ್ಲರ ಪೂಜ್ಯರಾಗಿದ್ದು ಜೀವನದಲ್ಲಿ ಸದಾ ಸ್ಪೂರ್ತಿ, ಪ್ರೇರಣೆ, ಮಾರ್ಗದರ್ಶನ ನೀಡಿ ಮುನ್ನಡೆಸಿದ್ದೀರಿ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವ

ಇಂತಿ ದುಃಖತಪ್ತರು: ಪತ್ನಿ ಕೆ. ಗಾಯತ್ರಿ
ಮಗಳು ಜಿ. ವಂದನ, ಮಗ: ವಿ.ಜಿ. ಹೇಮಂತ್, ದೂ: 9900155908
ಕುಟುಂಬದವರು ಮತ್ತು ಸ್ನೇಹಿತರು, ಬೆಂಗಳೂರು

ಪ್ರಥಮ ವರ್ಷದ ಪುಣ್ಯಸ್ಮರಣೆ

ನಿಧನ : 08-06-2021
ಶ್ರೀಮತಿ ಶಾರದಮ್ಮನವರು
(ದಿ|| ಶ್ರೀ ಟಿ.ಕೆ. ಕಂಬಯ್ಯನವರ ಧರ್ಮಪತ್ನಿ)

ತಾ|| 07-06-2022ನೇ ಮಂಗಳವಾರ ಬೆಳಿಗ್ಗೆ 10-30 ಘಂಟೆಗೆ ವಾರ್ಷಿಕ ಪುಣ್ಯಸ್ಮರಣೆಯನ್ನು ಮೃತರ ಸ್ವಗೃಹದಲ್ಲಿ ನಡೆಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಮಕ್ಕಳು, ಮೊಮ್ಮಕ್ಕಳು, ಕುಟುಂಬದವರು
ದೂರವಾಣಿ : 9900717152, 9900143153

ಸವಿ ನೆನಪು

ಶ್ರೀಮಾನ್ ಕೆ. ಕರಿಯಪ್ಪನವರು
ಮಾಜಿ ಚೇರ್ಮನ್,
ಜಕ್ಕಸಂದ್ರ, ಬೇಗೂರು ಹೋಬಳಿ
ಜನನ : 8-04-1941 ಮರಣ : 7-06-1993
ಸದಾ ಸ್ಮರಿಸುವ
ಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಕುಟುಂಬ ವರ್ಗದವರು

NAME CHANGE ANNOUNCEMENT
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ದ್ವೇಷ ರಾಜಕಾರಣಕ್ಕೆ ಪ್ರಧಾನಿಯ ಪೋಷಣೆ: ವಿರೋಧ ಪಕ್ಷಗಳ ಟೀಕೆ

‘ಭಾರತ ತಲೆತಗ್ಗಿಸಲು ಮೋದಿಯೇ ಕಾರಣ’

ನವದೆಹಲಿ/ಮುಂಬೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಹಿರಿಯ ನಾಯಕರು ದ್ವೇಷ ರಾಜಕಾರಣವನ್ನು ಪೋಷಿಸಿದ ಕಾರಣದಿಂದಲೇ, ಭಾರತವು ಇಂದು ಜಾಗತಿಕ ಸಮುದಾಯದ ಎದುರು ತಲೆಬಗ್ಗಿಸುವಂತಾಗಿದೆ ಎಂದು ವಿರೋಧ ಪಕ್ಷಗಳು ಟೀಕಿಸಿವೆ. ಪ್ರವಾದಿ ಮಹಮ್ಮದರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದ ಬಿಜೆಪಿ ನಾಯಕರನ್ನು ತಕ್ಷಣವೇ ಬಂಧಿಸಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿವೆ.

‘ದ್ವೇಷ ಭಾಷಣವನ್ನು ಬಿಜೆಪಿ ಪ್ರೋತ್ಸಾಹಿಸಿದೆ. ಬಿಜೆಪಿ ಮುಖಂಡರು ಇಂತಹ ಹೇಳಿಕೆ ನೀಡಿದಾಗ ಪ್ರಧಾನಿ ನರೇಂದ್ರ ಮೋದಿ ಅವರು ಸುಮ್ಮನೆ ಇರುತ್ತಿದ್ದರು. ಈ ಕಾರಣದಿಂದಲೇ ಬಿಜೆಪಿ ಮುಖಂಡರು ಇಂದು ಇಂತಹ ಹೇಳಿಕೆ ನೀಡಿದ್ದಾರೆ. ಇದರಿಂದಲೇ ಭಾರತವು ಇಂದು ವಿಶ್ವದ ಎದುರು ತಲೆ ತಗ್ಗಿಸಿ ನಿಂತಿದೆ’ ಎಂದು ಎಎಪಿ ಸಂಸದ ಸಂಜಯ್ ಸಿಂಗ್ ಟೀಕಿಸಿದ್ದಾರೆ.

ಇದೇ ರೀತಿಯ ಹೇಳಿಕೆ ನೀಡಿರುವ ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ, ‘ನೂಪುರ್ ಆಗಲೀ ನವೀನ್ ಆಗಲೀ ಈ ರೀತಿಯ ಹೇಳಿಕೆ ನೀಡಿದ ಮೊದಲಿಗರಲ್ಲ. ಬದಲಿಗೆ ಅವರು ಇಂತಹ ಹೇಳಿಕೆ ನೀಡುವ ಮೂಲಕ ತಮ್ಮ ರಾಜನಿಗೆ ನಿಷ್ಠರಾಗಿರಲು ಯತ್ನಿಸಿದ್ದಾರೆ’ ಎಂದು ಲೇವಡಿ ಮಾಡಿದ್ದಾರೆ.

‘ಮಧ್ಯಪ್ರದೇಶದಲ್ಲಿ ಬಿಜೆಪಿ ಸಂಸದರೊಬ್ಬರು ಗಾಂಧೀಜಿ ಹಂತಕ ನಾಥೂರಾಮ್ ಗೋಡ್ಸೆಯನ್ನು ಹೊಗಳಿದರು. ಆಗ ಪ್ರಧಾನಿ ನರೇಂದ್ರ ಮೋದಿ ಮೌನವಾಗಿದ್ದರು. ಅದರಿಂದ ನಮಗೆ ತೀವ್ರ ಆಘಾತವಾಗಿತ್ತು. ನೀವು ಏನು ಮಾಡಲು ಅನುಮತಿ ನೀಡಿರುತ್ತೀರೋ ಅದನ್ನೇ ಪ್ರೋತ್ಸಾಹಿಸುತ್ತೀರಿ ಎಂದು ಮೋದಿ ಅವರಿಗೆ ಹೇಳಲು ಬಯಸುತ್ತೇನೆ’ ಎಂದು ಟಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ. ರಾಮರಾವ್ ಟೀಕಿಸಿದ್ದಾರೆ.

‘ಆಂತರಿಕವಾಗಿ ವಿಭಜನೆಯಾಗಿರುವ ಭಾರತವು ವಿಶ್ವದ ಎದುರು ದುರ್ಬಲವಾಗಿದೆ. ಬಿಜೆಪಿಯ ನಾಚಿಕೆಗೇಡಿನ ದ್ವೇಷ-ರಾಜಕಾರಣದಿಂದ ನಾವು ಜಾಗತಿಕ ಸಮುದಾಯದಲ್ಲಿ ಒಂಟಿಯಾಗಿದ್ದು ಮಾತ್ರವಲ್ಲ, ಭಾರತದ ಸ್ಥಾನಕ್ಕೂ ಧಕ್ಕೆಯಾಗಿದೆ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

‘ದೇಶದೊಳಗೆ ವ್ಯಕ್ತವಾದ ವಿರೋಧ ಪರಿಗಣಿಸಿ ತನ್ನ ಇಬ್ಬರು ಮುಖಂಡರ ವಿರುದ್ಧ ಬಿಜೆಪಿ ಕ್ರಮ ತೆಗೆದುಕೊಂಡಿಲ್ಲ. ಬಿಜೆಪಿಯ ನಿಲುವು ಕೂಡ ಈ ಕ್ರಮಕ್ಕೆ ಕಾರಣ ಅಲ್ಲ. ಬದಲಿಗೆ ಜಾಗತಿಕ ಒತ್ತಡಕ್ಕೆ ಮಣಿದು ಈ ಕ್ರಮ ತೆಗೆದುಕೊಂಡಿದೆ’ ಎಂದು ಸಿಪಿಎಂ ಟೀಕಿಸಿದೆ.

ನೂಪುರ್ ಶರ್ಮಾ ಮತ್ತು ನವೀನ್ ಜಿಂದಾಲ್ ಅವರನ್ನು ಮೂಲಭೂತ-ವಾದಿಗಳು ಎಂದು ಕರೆದ ಬಿಜೆಪಿಯ ನಡೆಯನ್ನೂ ವಿರೋಧ ಪಕ್ಷಗಳು ಪ್ರಶ್ನಿಸಿವೆ. ‘ನೂಪುರ್ ಶರ್ಮಾ ಮತ್ತು ನವೀನ್ ಜಿಂದಾಲ್ ಅವರನ್ನು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿಯ ಪ್ರಮುಖ ನಾಯಕರೆಲ್ಲರೂ ಟ್ವಿಟರ್‌ನಲ್ಲಿ ಅನುಸರಿಸುತ್ತಿದ್ದಾರೆ. ಆದರೆ ಈಗ ಇವರಿಬ್ಬರನ್ನು ಬಿಜೆಪಿ ಸರ್ಕಾರವೇ ‘ಮೂಲಭೂತವಾದಿಗಳು’ ಎಂದು ಕರೆದಿದೆ. ಪಕ್ಷದ ಅಧಿಕೃತ ಹುದ್ದೆಗಳಲ್ಲಿ ಇರುವವರನ್ನೇ ಬಿಜೆಪಿ ‘ಮೂಲಭೂ-ತವಾದಿಗಳು’ ಎಂದು ಕರೆಯಲು ಹೇಗೆ ಸಾಧ್ಯ’ ಎಂದು ಸಿಪಿಎಂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಪ್ರಶ್ನಿಸಿದ್ದಾರೆ.

‘ಆರ್‌ಎಸ್‌ಎಸ್ ಇದೇ ರೀತಿಯ ಹೇಳಿಕೆ ನೀಡುತ್ತಿರುತ್ತದೆ. ಬಿಜೆಪಿ ನಾಯಕರೂ ಇದೇ ರೀತಿಯ ಹೇಳಿಕೆ ನೀಡಿದ್ದಾರೆ. ಹಾಗಿದ್ದರೆ, ಆರ್‌ಎಸ್‌ಎಸ್ ಸಹ ಮೂ ಲ ಭೂ ತ ವಾ ದಿ ಸಂಘಟನೆಯೇ? ಬಿಜೆಪಿ ಇಂಥದ್ದನ್ನೆಲ್ಲಾ ನಿಲ್ಲಿಸಬೇಕು. ಧರ್ಮನಿಂದನೆಯನ್ನು ನಿಲ್ಲಿಸಬೇಕು. ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

ಮುಖ್ಯಾಂಶಗಳು

- ವಿವಾದಾತ್ಮಕ ಹೇಳಿಕೆ ನೀಡಿರುವ ಮುಖಂಡರನ್ನು ಬಂಧಿಸಲು ವಿಪಕ್ಷಗಳ ಆಗ್ರಹ
- ಜೀವ ಬೆದರಿಕೆ ಕರೆಗಳು ಬರುತ್ತಿವೆ ಎಂದು ನೂಪುರ್ ಆರೋಪಿಸಿದ್ದಾರೆ
- ಈ ಕುರಿತು ದೆಹಲಿಯಲ್ಲಿ ಎಫ್‌ಐಆರ್ ದಾಖಲಾಗಿದೆ

ನೂಪುರ್ ವಿರುದ್ಧ ಎಫ್‌ಐಆರ್

ಪ್ರವಾದಿ ಮಹಮ್ಮದರ ವಿರುದ್ಧ ಹೇಳಿಕೆ ನೀಡಿದ್ದ ಬಿಜೆಪಿ ನಾಯಕಿ ನೂಪುರ್ ಶರ್ಮಾ ವಿರುದ್ಧ ಮುಂಬೈನ ಪೊಲೀಸ್ ಠಾಣೆಯೊಂದರಲ್ಲಿ ದೂರು ದಾಖಲಾಗಿದೆ. ದೂರಿನ ಆಧಾರದಲ್ಲಿ ನೂಪುರ್ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಈಗ ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ. ಅವರನ್ನು ಶೀಘ್ರವೇ ವಿಚಾರಣೆಗೆ ಕರೆಯುತ್ತೇವೆ. ನಂತರ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮುಂಬೈ ಪೊಲೀಸ್ ಆಯುಕ್ತ ಸಂಜಯ್ ಪಾಂಡೆ ಹೇಳಿದ್ದಾರೆ.

> **ಬಿಜೆಪಿ ನಾಯಕರು ಎಸಗಿದ ತಪ್ಪಿಗೆ ಭಾರತವೇಕೆ ಜಾಗತಿಕ ಸಮುದಾಯದ ಕ್ಷಮೆ ಕೇಳಬೇಕು? ಕ್ಷಮೆ ಕೇಳಬೇಕಾಗಿದ್ದು ಬಿಜೆಪಿ, ಭಾರತವಲ್ಲ**
> **ಕೆ.ಟಿ.ರಾಮರಾವ್**
> ಟಿಆರ್‌ಎಸ್ ಕಾರ್ಯಾಧ್ಯಕ್ಷ

> **ಈ ಹೇಳಿಕೆಗಳು ಧಾರ್ಮಿಕ ವ್ಯಕ್ತಿತ್ವಗಳು, ಪವಿತ್ರ ಚಿಹ್ನೆಗಳಿಗೆ ಮಾಡಿದ ಅವಮಾನ. ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು**
> **ಮೌಲಾನಾ ಖಾಲಿದ್ ಸೈಫ್‌ಉಲ್ಲಾ ರಹಮಾನಿ,** ಎಐಎಂಪಿಎಲ್‌ಬಿ ಕಾರ್ಯದರ್ಶಿ

‘ಬಿಜೆಪಿ ಸಂಸದ ಸೊಂಕರ್ ಪರ ಫೇಸ್‌ಬುಕ್ ಕೆಲಸ’

ಕ್ರಮಕ್ಕೆ ಹಿಂದೇಟು: ಭ್ರಷ್ಟಾಚಾರ ವಿರೋಧಿ ಹೋರಾಟಗಾರ್ತಿ ಸೋಫಿ ಜಾಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 2019ರ ಚುನಾವಣೆ ವೇಳೆ ಉತ್ತರ ಪ್ರದೇಶದ ಕೌಶಾಂಬಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ವಿನೋದ್ ಕುಮಾರ್ ಸೊಂಕರ್ ಅವರ ಪರವಾಗಿ ಕೆಲಸ ಮಾಡುತ್ತಿದ್ದ ವ್ಯವಸ್ಥಿತ ಜಾಲದ ಬಗ್ಗೆ ಫೇಸ್‌ಬುಕ್ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ಭ್ರಷ್ಟಾಚಾರ ವಿರೋಧಿ ಹೋರಾಟಗಾರ್ತಿ ಸೋಫಿ ಜಾಂಗ್ ಅವರು ಆರೋಪಿಸಿದ್ದಾರೆ.

ವಿವಿಧ ದೇಶಗಳ ಚುನಾವಣೆ ಮೇಲೆ ಪ್ರಭಾವ ಬೀರಿದ ಖಾತೆಗಳ ಬಗ್ಗೆ ಫೇಸ್‌ಬುಕ್ ನಿರ್ಲಕ್ಷ್ಯ ವಹಿಸಿದೆ ಎಂದು ಈ ಮೊದಲು ಆರೋಪಿಸಿದ್ದ ಜಾಂಗ್ ಅವರು, ವಿನೋದ್ ಕುಮಾರ್ ಅವರಿಗೆ ಸಂಬಂಧಿಸಿದಂತೆ ಫೇಸ್‌ಬುಕ್‌ನಲ್ಲಿ ಆಂತರಿಕವಾಗಿ ನಡೆದ ಚರ್ಚೆಗಳ ಕಡತಗಳನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದಾರೆ. ವಿನೋದ್ ಕುಮಾರ್ ಅವರನ್ನು ಪ್ರಶಂಸಿಸುವ ಕೆಲಸ ಮಾಡುತ್ತಿದ್ದ ವ್ಯವಸ್ಥಿತ ಜಾಲದ ಬಗ್ಗೆ ಕ್ರಮ ತೆಗೆದುಕೊಳ್ಳದ ಫೇಸ್‌ಬುಕ್, ಇದೇ ರೀತಿಯ ಕೆಲಸ ಮಾಡುತ್ತಿದ್ದ ಇತರ ಮೂರು ಜಾಲಗಳ ವಿರುದ್ಧ ಕ್ರಮಕ್ಕೆ ಮುಂದಾಗಿದೆ ಎಂದು ಜಾಂಗ್ ಆರೋಪಿಸಿದ್ದಾರೆ.

ಜಾಂಗ್ ಅವರು ಫೇಸ್‌ಬುಕ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ರಾಜಕೀಯ ಪಕ್ಷಗಳ ಜೊತೆ ನಂಟು ಹೊಂದಿರುವ ನಾಲ್ಕು ಜಾಲಗಳ ಬಗ್ಗೆ 2019ರಲ್ಲಿ ಗಮನ ಸೆಳೆದಿದ್ದರು. ಆದರೆ, ಅವರು ಕಳವಳ ವ್ಯಕ್ತಪಡಿಸಿದ್ದ ಒಂದು ಜಾಲದ ಬಗ್ಗೆ ಫೇಸ್‌ಬುಕ್‌ನ ಸಂಬಂಧಿತ ತಂಡಗಳು ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಆ ಜಾಲವು ಬಿಜೆಪಿ ಸಂಸದರಿಗೆ ಸಂಬಂಧಿಸಿದ್ದಾಗಿತ್ತು ಎಂದು ಕಡತಗಳು ಉಲ್ಲೇಖಿಸಿವೆ.

ಬಿಜೆಪಿ ಸಂಸದರ ವೈಯಕ್ತಿಕ ಖಾತೆ ಜತೆ ನಂಟು ಹೊಂದಿರುವ ಹಲವು ನಕಲಿ ಖಾತೆಗಳ ವಿರುದ್ಧ ಕ್ರಮ ಕೈಗೊಳ್ಳಲು ಅನುಮೋದನೆ ಸಿಕ್ಕಿದ್ದರೂ, ಸಂಸದರು ಸರ್ಕಾರದ ಭಾಗವಾಗಿದ್ದಾರೆ ಎಂಬ ಕಾರಣಕ್ಕೆ ಫೇಸ್‌ಬುಕ್ ಆ ಜಾಲದ ವಿರುದ್ಧ ಕ್ರಮಕ್ಕೆ ಹಿಂದೇಟು ಹಾಕಿತು ಎಂದು ಸೋಫಿ ಅವರು ಮಾಧ್ಯಮಗಳಿಗೆ ಕಳುಹಿಸಿರುವ ಇ-ಮೇಲ್‌ನಲ್ಲಿ ಉಲ್ಲೇಖಿಸಿದ್ದಾರೆ.

‘ಪಂಜಾಬ್ ಐಎನ್‌ಸಿ ಕ್ಲಸ್ಟರ್’, ‘ಕೌಶಾಂಬಿ ಕ್ಲಸ್ಟರ್’ ಹಾಗೂ ರಾಜಕೀಯ ಪಕ್ಷಗಳಿಗೆ ಸೇರಿದ ಇತರೆ ಎರಡು ಜಾಲಗಳು 2019ರ ಡಿಸೆಂಬರ್‌ನಲ್ಲಿ ಕೆಲಸ ಮಾಡುತ್ತಿದ್ದವು ಎಂದು ಜಾಂಗ್ ಹೇಳಿದ್ದಾರೆ. ಈ ಪೈಕಿ ‘ಕೌಶಾಂಬಿ ಕ್ಲಸ್ಟರ್ ಎಂಬ ಜಾಲವು ವಿನೋದ್ ಕುಮಾರ್ ಅವರ ವರ್ಚಸ್ಸನ್ನು ಹೆಚ್ಚಿಸುವ ಅನಧಿಕೃತ ಸಂಘಟಿತ ಚಟುವಟಿಕೆಗಳಲ್ಲಿ ತೊಡಗಿತ್ತು. ಇದನ್ನು ಸರ್ಕಾರದ ಜೊತೆ ಭಾಗೀದಾರ ಜಾಲ ಎಂಬುದಾಗಿ ಫೇಸ್‌ಬುಕ್ ಪರಿಗಣಿಸಿತ್ತು. ಪಂಜಾಬ್ ಐಎನ್‌ಸಿ ಕ್ಲಸ್ಟರ್ ಜಾಲವು ಕಾಂಗ್ರೆಸ್ ಮುಖಂಡರಾದ ಅರುಣ್ ಡೋಗ್ರಾ, ಸುಂದರ್ ಶ್ಯಾಮ್ ಅರೋರಾ ಹಾಗೂ ಬಲ್ವಿಂದರ್ ಸಿಂಹ ಅವರ ಜೊತೆ ನಂಟು ಹೊಂದಿತ್ತು’ ಎಂದು ಹೇಳಿದ್ದಾರೆ.

ಪಂಜಾಬ್ ಚುನಾವಣೆ ವೇಳೆ ಕಾಂಗ್ರೆಸ್ ಪರವಾಗಿ ಕೆಲಸ ಮಾಡಿದ್ದ ಪಂಜಾಬ್ ಕ್ಲಸ್ಟರ್ ಹೆಸರಿನ ಜಾಲವು ದೆಹಲಿಯಲ್ಲಿ ಸಿಎಎ ಪ್ರತಿಭಟನೆ ವೇಳೆ ಎಎಪಿ ಪರವಾಗಿ ಕಾರ್ಯ ನಿರ್ವಹಿಸಿತ್ತು ಎಂದಿರುವ ಜಾಂಗ್, ಇದು ಹಣಕ್ಕಾಗಿ ಕೆಲಸ ಮಾಡಿರಬಹುದು ಎಂದಿದ್ದಾರೆ.

ಕಂಪನಿಯ ಆದ್ಯತೆಗಳ ಬಗ್ಗೆ ಜಾಂಗ್ ಮಾಡಿರುವ ಆರೋಪಗಳನ್ನು ಒಪ್ಪುವುದಿಲ್ಲ ಎಂದು ಫೇಸ್‌ಬುಕ್ ಮಾತೃ ಸಂಸ್ಥೆ ಮೆಟಾ ವಕ್ತಾರರು ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ. ಕೌಶಾಂಬಿ ಸಂಸದ, ಲೋಕ ಸಭೆ ಸ್ಪೀಕರ್ ಕಚೇರಿ ಹಾಗೂ ಸ್ಥಾಯಿ ಸಮಿತಿಯನ್ನು ಸಂಪರ್ಕಿಸಲಾಯಿತಾದ-ರೂ, ಪ್ರತಿಕ್ರಿಯೆ ಲಭ್ಯವಾಗಲಿಲ್ಲ.

ಸ್ಥಾಯಿಸಮಿತಿ ವಿಚಾರಣೆ

ಶಶಿ ತರೂರ್ ನೇತೃತ್ವದ ಮಾಹಿತಿ ತಂತ್ರಜ್ಞಾನ ಕುರಿತ ಸಂಸದೀಯ ಸ್ಥಾಯಿಸಮಿತಿಯ ಸದಸ್ಯರಿಗೆ ಸೋಫಿ ಜಾಂಗ್ ಅವರು ಈ ದಾಖಲೆಗಳನ್ನು ನೀಡಿದ್ದರು ಎನ್ನಲಾಗಿದೆ. ಹೀಗಾಗಿ, ಈ ವಿಚಾರವನ್ನು ಸ್ಥಾಯಿಸಮಿತಿಯು ಕೈಗೆತ್ತಿಕೊಂಡಿತು. ಫೇಸ್‌ಬುಕ್‌ನ ಅಧಿಕಾರಿಯೊಬ್ಬರು ನವೆಂಬರ್ 29ರಂದು ಸ್ಥಾಯಿಸಮಿತಿ ವಿಚಾರಣೆಗೆ ಹಾಜರಾಗಿ, ಜಾಂಗ್ ಮಾಡಿರುವ ಆರೋಪಗಳಲ್ಲಿ ಯಾವುದೇ ಸತ್ಯಾಂಶವಿಲ್ಲ ಎಂದು ಪ್ರತಿಪಾದಿಸಿದ್ದರು.

ಈ ಆರೋಪ ಮಾಡಿದ್ದ ಜಾಂಗ್ ಅವರನ್ನು ವಿಚಾರಣೆಗೆ ಕರೆಯುವಂತೆ ಸಮಿತಿಯ ಸದಸ್ಯರು ಪ್ರಸ್ತಾವ ಇಟ್ಟಿದ್ದರು. ಇದಕ್ಕೆ ಅನುಮತಿ ನೀಡುವಂತೆ ಲೋಕಸಭೆ ಸ್ಪೀಕರ್ ಅವರನ್ನು ಕೋರಲಾಗಿದೆ ಎನ್ನಲಾಗಿದೆ. ಈ ವಿಷಯದ ಕುರಿತು ಸಮಿತಿ ಮತ್ತೆ ಸಭೆ ನಡೆಸಿಲ್ಲ.

ತಿರುಪತಿಗೆ ₹10 ಕೋಟಿ

ತಿರುಪತಿ (ಪಿಟಿಐ): ತಿರುಮಲ ವೆಂಕಟೇಶ್ವರ ದೇಗುಲಕ್ಕೆ ತಮಿಳುನಾಡಿನ ಕುಟುಂಬವೊಂದು ₹10 ಕೋಟಿಯನ್ನು ದೇಣಿಗೆ ನೀಡಿದೆ ಎಂದು ದೇಗುಲದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಾರಾಣಸಿ ಸ್ಫೋಟ ಆರೋಪಿಗೆ ಗಲ್ಲು ಶಿಕ್ಷೆ

ಪ್ರಜಾವಾಣಿ ವಾರ್ತೆ

ಲಖನೌ: 2006ರ ಮಾರ್ಚ್‌ನಲ್ಲಿ ವಾರಾಣಸಿಯಲ್ಲಿ ನಡೆದಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ವಲೀಯುಲ್ಲಾಗೆ (55) ಗಾಜಿಯಾಬಾದ್ ಜಿಲ್ಲಾ ನ್ಯಾಯಾಲಯ ಸೋಮವಾರ ಮರಣ ದಂಡನೆ ವಿಧಿಸಿದೆ. ಭಾರತೀಯ ದಂಡ ಸಂಹಿತೆಯ (ಐಪಿಸಿ) ಮತ್ತೊಂದು ಸೆಕ್ಷನ್ ಅಡಿ ಜೀವಾವಧಿ ಶಿಕ್ಷೆಯನ್ನೂ ನ್ಯಾಯಾಲಯ ವಿಧಿಸಿದೆ.

ವಾರಾಣಸಿಯ ಸಂಕಟ ಮೋಚನ ದೇವಾಲಯ ಮತ್ತು ದಂಡು ರೈಲು ನಿಲ್ದಾಣದಲ್ಲಿ ಸರಣಿ ಸ್ಫೋಟಗಳು ನಡೆದಿದ್ದವು. ಸ್ಫೋಟದಲ್ಲಿ 28 ಜನರು ಮೃತಪಟ್ಟಿದ್ದರು. 100ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಆರೋಪಿ ವಲೀಯುಲ್ಲಾ ಪ್ರಯಾಗ್‌ರಾಜ್ ಜಿಲ್ಲೆಯ ಫೂಲ್ಪುರ ನಿವಾಸಿ. ಘಟನೆ ಬಳಿಕ ಆರೋಪಿಯನ್ನು ಲಖನೌ ಬಳಿಯ ಗೋಸಾಯಿಗಂಜ್‌ನಿಂದ ಸೆರೆಹಿಡಿಯಲಾಗಿತ್ತು. ಐಪಿಸಿ ಸೆಕ್ಷನ್ 302 (ಕೊಲೆ), ಸೆಕ್ಷನ್ 307 (ಕೊಲೆಗೆ ಯತ್ನ) ಮತ್ತು ಸ್ಫೋಟಕಗಳ ಕಾಯ್ದೆ ಅಡಿ ಆತ ದೋಷಿ ಎಂದು ನ್ಯಾಯಾಲಯವು ಶನಿವಾರ ಹೇಳಿತ್ತು. ಸೆಕ್ಷನ್ 302ರ ಅಡಿ ಆತನಿಗೆ ಮರಣ ದಂಡನೆ ವಿಧಿಸಲಾಗಿದ್ದರೆ, ಸ್ಫೋಟಕಗಳ ಕಾಯ್ದೆ ಅಡಿ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

ಇತರ ಮೂವರು ಆರೋಪಿಗಳಾದ ಮುಸ್ತಕೀಮ್, ಬಶೀರ್ ಮತ್ತು ಝುಕರಿಯಾ ತಲೆಮರೆಸಿಕೊಂಡಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

WALK- IN INTERVIEW
On
12th June 2022 (Sunday)
Reporting time between 10.00 am to 04.00 pm
AT
HOTEL AKSHAYA AURA
#6, 1st Main Road (Kalidasa Road), Next to Indian Overseas Bank / Freedom Park, Gandhinagar, Bangalore - 560009
Nikhil Adhesives Limited, a reputed chemical company is looking for candidates for their below location:
a) For Tumkur, Karnataka
-Plant Operators (10 nos reqd.) – with 3 to 5 yrs of experience in chemical plant, having a minimum qualification of AOCP (ITI)
-Supervisor / Shift In charge (3 nos reqd.) – with 5 to 8 yrs of experience, having a minimum qualification in Diploma in Chemical Engineering / B.Sc / M.Sc.
b) For Bangalore, Karnataka
-Sr. Sales Executive / Territory Manager – with more than 3 yrs. of experience in selling wood Adhesives.
Interested and eligible candidates may attend walk-in interviews which will be held on the date and venue mentioned above along with updated Bio-Data, last 3 Months' salary slips, qualification and CTC proof.
In case, you are not able to attend the personal interview, eligible candidates can send their Bio-data at
hr.careers@nikhiladhesives.com

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000-16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Security & Detectives

REPUTED SECURITY Agency Requires Security Guards, Security Supervisors, Field Officers, Area/ Training/ Operations Manager. Contact: 9886349781/ 8073668816

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

★||ಶ್ರೀಹುಲಿಗೆಮ್ಮ ಚೌಡೇಶ್ವರಿ ಜೋತಿಷ್ಯರು||★ ಸ್ತ್ರೀಪುರುಷ ವಶೀಕರಣ ಸಂಭೋಗ ವಶೀಕರಣ ಇನ್ನುಯಾವುದೇ ಘೋರ ನಿಗೂಡ ಗುಪ್ತಕಠಿಣ ಸಮಸ್ಯೆಗಳಿಗೆ 11ನಿಮಿಷಗಳಲ್ಲಿ ಶಾಶ್ವತ ಪರಿಹಾರ ನಂಬಿ ಕರೆಮಾಡಿ 9606735267

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಪ್ರವಾಸ

Travel

ಕೃಷ್ಣ ಹೆರಿಟೇಜ್ ಟೂರ್ಸ್ ಊಟ ರೂಮಿನೊಂದಿಗೆ 6/12 ದಿನಗಳು 16.06.2022 ಅಹೋಬಲ ನವನರಸಿಂಹ,ಶ್ರೀಶೈಲಾ ಮಂತ್ರಾಲಯಾ ಇತ್ಯಾದಿ 7200/-. 22.06.2022 ರಾಮೇಶ್ವರ ಕನ್ಯಾಕುಮಾರಿ ಮದುರೈ ಇತ್ಯಾದಿ 7200. 06.07.2022 ಶಿರಡಿ,ಪಂಡರಾಪುರ ಇತ್ಯಾದಿ 6800 14.07.2022 ನವಗ್ರಹ ದರ್ಶನಸೇರಿ 18 ಕ್ಷೇತ್ರಗಳು 6200 26.07.2022 ಕಾಶಿ,ಅಯೋಧ್ಯ ಇತ್ಯಾದಿ 17500 16.08.2022 ವೈಷ್ಣೊದೇವಿ 01.09.2022 ಚಾರ್‌ಧಾಮ್ 06.09.2022 ಗುಜರಾತ್ ಮಧ್ಯಪ್ರದೇಶ 9448390735 9449721678

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 23/6/22 ಕಾಶಿ, ಜಾರ್ಖಂಡ್ ಬೈದ್ಯನಾಥ್, ಗಯಾ, ಬುದ್ಧಗಯಾ, ಪ್ರಯಾಗ್ರಾಜ್, ಅಯೋಧ್ಯೆ ರೈಲು ವಿಮಾನ.14/7:ಶಿರಡಿ 9964527782

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR • Admission Notice, • Education Success • Congratulation Ads
For More Details Contact:
Santhosh Kumar : 9880856233
Jerry Louis : 9731810277 | Ravichandra : 9901641752
Vishal GM : 9845114560 | Tanveer : 9886213331
Email : dhclassifieds@deccanherald.co.in

ಕೇರಳದ ಪರ ರಾಹುಲ್ ಧ್ವನಿ

ನವದೆಹಲಿ: ನಿಲಂಬೂರು–ನಂಜನಗೂಡು ರೈಲು ಯೋಜನೆ ಪರವಾಗಿ ವಯನಾಡು ಸಂಸದರೂ ಆಗಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಧ್ವನಿ ಎತ್ತಿದ್ದಾರೆ. ಈ ಸಂಬಂಧ ರೈಲ್ವೆ ಸಚಿವ ಅಶ್ವಿನ್ ವೈಷ್ಣವ್ ಅವರಿಗೆ ಜೂನ್ 4ರಂದು ಪತ್ರ ಬರೆದಿರುವ ರಾಹುಲ್ ಗಾಂಧಿ, ಯೋಜನೆಯ ಜಾರಿಗೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಈ ಯೋಜನೆಗೆ ಕೇರಳ ಸರ್ಕಾರ ಒಪ್ಪಿಗೆ ನೀಡಿದೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದೊಳಗೆ ಈ ರೈಲು ಮಾರ್ಗ ಹಾದು ಹೋಗಲಿದೆ. ಹೀಗಾಗಿ, ಕರ್ನಾಟಕ ಸರ್ಕಾರ ಯೋಜನೆಗೆ ವಿರೋಧ ವ್ಯಕ್ತಪಡಿಸಿದೆ. ‘₹3,384 ಕೋಟಿ ಮೊತ್ತದ ಈ ಮಾರ್ಗ 22 ಕಿ.ಮೀ. ದೂರ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದೊಳಗೆ ಹಾಯ್ದು ಹೋಗುತ್ತದೆ. ಪರಿಸರ ಹಾಗೂ ಆರ್ಥಿಕ ದೃಷ್ಟಿಯಿಂದ ಇದು ಕಾರ್ಯಸಾಧುವಾದ ಯೋಜನೆ ಅಲ್ಲ’ ಎಂಬುದು ಕರ್ನಾಟಕದ ವನ್ಯಜೀವಿ ತಜ್ಞರ ಅಭಿಮತ.

‘ಈ ಯೋಜನೆಯ ಜಾರಿಯಲ್ಲಿ ಅನಗತ್ಯ ವಿಳಂಬ ಆಗುತ್ತಿದೆ. ವಯನಾಡು ಲೋಕಸಭಾ ಕ್ಷೇತ್ರದ ಜನರು ಯೋಜನೆಯ ವಿಳಂಬದ ಬಗ್ಗೆ ನಿರಂತರ ಹೋರಾಟ ಮಾಡುತ್ತಿದ್ದಾರೆ. ಸಂಸತ್ ಅಧಿವೇಶನದಲ್ಲೂ ಈ ಬಗ್ಗೆ ಧ್ವನಿ ಎತ್ತಿದ್ದೆ. ರೈಲ್ವೆ ಸಚಿವರಿಗೂ ಪತ್ರ ಬರೆದಿದ್ದೆ. ಆದರೂ, ಯಾವುದೇ ಕ್ರಮ ಕೈಗೊಂಡಿಲ್ಲ’ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

’ರಾಷ್ಟ್ರೀಯ ಹೆದ್ದಾರಿ 766ರಲ್ಲಿ ವಾಹನಗಳ ಸಂಚಾರಕ್ಕೆ ರಾತ್ರಿ ಹೊತ್ತಿನಲ್ಲಿ ನಿರ್ಬಂಧ ವಿಧಿಸಲಾಗಿದೆ. ಇದರಿಂದಾಗಿ, ರಾಜ್ಯ ಹಾಗೂ ಅಂತರ್ ರಾಜ್ಯದ ಓಡಾಟದ ಮೇಲೆ ಪರಿಣಾಮ ಬೀರುತ್ತಿದೆ. ಒಂದು ವೇಳೆ ಈ ಯೋಜನೆ ಜಾರಿಯಾದರೆ ಜನರ ಪ್ರಯಾಣದ ಅವಧಿ ಗಣನೀಯವಾಗಿ ಕಡಿಮೆ ಆಗಲಿದೆ’ ಎಂದು ಅವರು ಗಮನ ಸೆಳೆದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಜನ ಸಮರ್ಥ್ ಪೋರ್ಟಲ್‌ಗೆ ಪ್ರಧಾನಿ ಚಾಲನೆ

ನವದೆಹಲಿ (ಪಿಟಿಐ): ದೇಶದ ಬ್ಯಾಂಕ್‌ಗಳು ಹಾಗೂ ಕರೆನ್ಸಿಯನ್ನು ಅಂತರರಾಷ್ಟ್ರೀಯ ವ್ಯಾಪಾರ ವಹಿವಾಟುಗಳ ಮುಖ್ಯ ಭಾಗವಾಗಿ ಬೆಳೆಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದರು.

ಕೇಂದ್ರ ಹಣಕಾಸು ಸಚಿವಾಲಯ ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಣಕಾಸಿನ ಒಳಗೊಳ್ಳುವಿಕೆಗೆ ಭಾರತದಲ್ಲಿ ಅಭಿವೃದ್ಧಿಪಡಿಸಲಾದ ವೇದಿಕೆಗಳನ್ನು ಜಾಗತಿಕ ಮಟ್ಟಕ್ಕೆ ಒಯ್ಯುವ ಪ್ರಯತ್ನವೂ ಆಗಬೇಕು ಎಂದು ಅವರು ಹೇಳಿದರು. ‘ಇಂದು ಜಗತ್ತು ಭಾರತವನ್ನು ಒಂದು ದೊಡ್ಡ ಮಾರುಕಟ್ಟೆಯಾಗಷ್ಟೇ ನೋಡುತ್ತಿಲ್ಲ. ಬದಲಿಗೆ, ಸೃಜನಶೀಲ ಹಾಗೂ ಸಮರ್ಥ ವ್ಯವಸ್ಥೆಯನ್ನು ಹೊಂದಿರುವ ದೇಶವನ್ನಾಗಿ ಕಾಣುತ್ತಿದೆ’ ಎಂದರು.

ಯುವಕರಿಗೆ, ಉದ್ಯಮಿಗಳಿಗೆ ಮತ್ತು ರೈತರಿಗೆ ಸಾಲ ಪಡೆಯುವುದನ್ನು ಸುಲಭವಾಗಿಸುವ ‘ಜನ ಸಮರ್ಥ್’ ಪೋರ್ಟಲ್‌ಗೆ ಮೋದಿ ಅವರು ಚಾಲನೆ ನೀಡಿದರು. ಈ ಪೋರ್ಟಲ್ ಮೂಲಕ 13 ಯೋಜನೆಗಳ ಪ್ರಯೋಜನ ಪಡೆಯಬಹುದು.

ಈ ಪೋರ್ಟಲ್‌ನ ಕಾರಣದಿಂದಾಗಿ ಜನ ಹೆಚ್ಚಿನ ಸಂಖ್ಯೆಯಲ್ಲಿ ಸಾಲ ಪಡೆಯಲು ಮುಂದೆ ಬರುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜನ ಸಮರ್ಥ್ ಪೋರ್ಟಲ್‌ನಲ್ಲಿ 13 ಯೋಜನೆಗಳ ವಿವರ ನೀಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ತಿಂಗಳಿಗೆ 24 ರೈಲು ಟಿಕೆಟ್ ಬುಕ್ ಮಾಡಲು ಅವಕಾಶ

ನವದೆಹಲಿ (ಪಿಟಿಐ): ಯೂಸರ್ ಐಡಿ ಆಧಾರ್‌ಗೆ ಸಂಪರ್ಕಿಸಿದ್ದರೆ ಐಆರ್‌ಸಿಟಿಸಿ ವೆಬ್‌ಸೈಟ್ ಮತ್ತು ಆ್ಯಪ್ ಮೂಲಕ ತಿಂಗಳಿಗೆ 24 ರೈಲು ಟಿಕೆಟ್ ಬುಕ್ ಮಾಡಲು ಸೋಮವಾರದಿಂದ ರೈಲ್ವೆ ಇಲಾಖೆ ಅವಕಾಶ ನೀಡಿದೆ.

ಈವರೆಗೆ ಭಾರತೀಯ ರೈಲ್ವೆ ಕೇಟರಿಂಗ್ ಹಾಗೂ ಪ್ರವಾಸೋದ್ಯಮ ನಿಗಮ (ಐಆರ್‌ಸಿಟಿಸಿ) ಖಾತೆಯನ್ನು ಆಧಾರ್‌ಗೆ ಸಂಪರ್ಕಿಸದಿದ್ದಲ್ಲಿ ತಿಂಗಳಿಗೆ ಆರು ಮತ್ತು ಲಿಂಕ್ ಮಾಡಿದ್ದರೆ 12 ಟಿಕೆಟ್ ಮಾಡಲು ಜನರಿಗೆ ಅವಕಾಶ ಮಾಡಿಕೊಟ್ಟಿತ್ತು.

ಅಮೃತಸರ: ಖಾಲಿಸ್ತಾನ ಪರ ಘೋಷಣೆ

ಅಮೃತಸರ (ಪಿಟಿಐ): ‘ಆಪರೇಷನ್ ಬ್ಲೂಸ್ಟಾರ್’ನ 38ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸೋಮವಾರ ಅಮೃತಸರದ ಸ್ವರ್ಣಮಂದಿರದ ಬಳಿ ಜಮಾಯಿಸಿದ್ದ ಮೂಲಭೂತವಾದಿ ಸಿಖ್ ಸಂಘಟನೆಗಳು ಮತ್ತು ಶಿರೋಮಣಿ ಅಕಾಲಿದಳ (ಅಮೃತಸರ) ಬೆಂಬಲಿಗರು ಖಾಲಿಸ್ತಾನದ ಪರ ಘೋಷಣೆಗಳನ್ನು ಕೂಗಿದರು.

ಹಲವು ಯುವಕರು ‘ಖಾಲಿಸ್ತಾನ್ ಜಿಂದಾಬಾದ್’ ಎಂದು ಬರೆದಿರುವ ಬ್ಯಾನರ್ ಮತ್ತು ಫಲಕಗಳನ್ನು ಹಿಡಿದಿದ್ದರು. ಹತ್ಯೆಯಾದ ಪ್ರತ್ಯೇಕತಾವಾದಿ ನಾಯಕ ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆ ಚಿತ್ರವಿರುವ ಟೀ- ಶರ್ಟ್‌ಗಳನ್ನು ಅವರು ಧರಿಸಿದ್ದರು.

ಮಾಜಿ ಸಂಸದ ಸಿಮ್ರಂಜಿತ್ ಸಿಂಗ್ ಮಾನ್ ನೇತೃತ್ವದ ಶಿರೋಮಣಿ ಅಕಾಲಿದಳ (ಅಮೃತಸರ) ಸಂಘಟನೆಯ ಕಾರ್ಯಕರ್ತರೂ ಖಾಲಿಸ್ತಾನ್ ಪರ ಘೋಷಣೆಗಳನ್ನು ಕೂಗಿದರು. ಅವರು ಪಂಜಾಬಿ ಗಾಯಕ ಸಿಧು ಮೂಸೆವಾಲಾ ಅವರ ಹತ್ಯೆಯನ್ನು ಖಂಡಿಸಿ, ಅವರ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ಆಗ್ರಹಿಸಿದರು.

ಅಗ್ನಿ –4 ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ಸುಮಾರು ನಾಲ್ಕು ಸಾವಿರ ಕಿ.ಮೀ. ದೂರದ ಗುರಿಯತ್ತ ಅಣ್ವಸ್ತ್ರ ಸಿಡಿತಲೆ ಹೊತ್ತೊಯ್ಯುವ ಸಾಮರ್ಥ್ಯದ ಅಗ್ನಿ–4 ಬ್ಯಾಲೆಸ್ಟಿಕ್ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗ ಭಾನುವಾರ ಯಶಸ್ವಿಯಾಗಿ ನಡೆಯಿತು. ‘ಇದು ಕಾರ್ಯತಂತ್ರ ಪಡೆಗಳ ಕಮಾಂಡ್‌ನ ಆಶ್ರಯದಲ್ಲಿ ನಡೆಸಲಾದ ವಾಡಿಕೆಯ ಪರೀಕ್ಷೆ. ಕ್ಷಿಪಣಿ ಬಳಕೆ ತರಬೇತಿಗಾಗಿ ನಡೆಸುವ ಉಡಾವಣೆಗಳ ಮತ್ತು ದೇಶದ ನೀತಿಯ ಕನಿಷ್ಠ ರಕ್ಷಣಾ ಸಾಮರ್ಥ್ಯದ ಭಾಗವಾಗಿತ್ತು’ ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಖಜುರಾಹೊಗೆ ಐಎಎಫ್ ವಿಮಾನದಲ್ಲಿ ಮೃತ ದೇಹಗಳ ರವಾನೆ

ಉತ್ತರಕಾಶಿ ಜನರ ಮನಕಲಕಿದ ಅಪಘಾತ ಚಿತ್ರಣ

ಡೆಹ್ರಾಡೂನ್ (ಪಿಟಿಐ): ಪೊದೆಗಳ ನಡುವೆ ಅಲ್ಲಲ್ಲಿ ಬಿದ್ದಿದ್ದ ಕೈಕಾಲುಗಳಿಲ್ಲದ ಶವಗಳು, ಮರಗಳ ಕೊಂಬೆಗಳಿಗೆ ಸಿಲುಕಿ ನೇತಾಡುತ್ತಿದ್ದ ರಕ್ತಸಿಕ್ತ ಶವಗಳು ಮತ್ತು ಪುಡಿಪುಡಿಯಾದ ಬಸ್‌ಗಳ ಅವಶೇಷಗಳು... ಯಮುನೋತ್ರಿಯ ಯಾತ್ರಿಕರು ಪ್ರಯಾಣಿಸುತ್ತಿದ್ದ ಬಸ್ ಕಣಿವೆಗೆ ಉರುಳಿದ ಪರಿಣಾಮ 26 ಮಂದಿ ಸಾವಿಗೆ ಕಾರಣವಾದ ಭೀಕರ ಅಪಘಾತದ ಸ್ಥಳದ ಈ ಭಯಾನಕ ದೃಶ್ಯಗಳು ಉತ್ತರಕಾಶಿಯ ನಿವಾಸಿಗಳನ್ನು ದೀರ್ಘಕಾಲದವರೆಗೆ ಕಾಡುತ್ತಲೇ ಇರಲಿವೆ.

ಚಾಲಕ ಮತ್ತು ನಿರ್ವಾಹಕನನ್ನು ಹೊರತುಪಡಿಸಿ, ಮಧ್ಯಪ್ರದೇಶದ ಪನ್ನಾದಿಂದ 28 ಯಾತ್ರಾರ್ಥಿಗಳನ್ನು ಹೊತ್ತು ಹೊರಟಿದ್ದ ಬಸ್ ಭಾನುವಾರ ರಾಷ್ಟ್ರೀಯ ಹೆದ್ದಾರಿ– 94ರಲ್ಲಿ ದಮ್ಟಾ ಎಂಬಲ್ಲಿ ಕಂದಕಕ್ಕೆ ಬಿದ್ದಾಗ 26 ಯಾತ್ರಾರ್ಥಿಗಳು ಸಾವನ್ನಪ್ಪಿ, ನಾಲ್ವರು ಗಾಯಗೊಂಡಿದ್ದರು. ಮೊದಲು ಸ್ಥಳಕ್ಕೆ ದೌಡಾಯಿಸಿದವರು ದಮ್ಟಾ ಪ್ರದೇಶದ ಸ್ಥಳೀಯರು, ಅಧಿಕಾರಿಗಳಿಗೂ ಮಾಹಿತಿ ನೀಡಿ, ತಕ್ಷಣ ರಕ್ಷಣಾ ಕಾರ್ಯಕ್ಕೆ ಸಹಾಯ ಹಸ್ತ ಚಾಚಿದರು.

ಘಟನೆ ನಡೆದ ಅರ್ಧ ತಾಸಿನಲ್ಲಿ ರಕ್ಷಣಾ ತಂಡಗಳು ಸ್ಥಳ ತಲುಪಿದ್ದವು. ಆದರೆ, ಆ ವೇಳೆಗಾಗಲೇ ಗಾಯಾಳುಗಳ ಆರ್ತನಾದ, ಚೀರಾಟ ಸ್ತಬ್ಧಗೊಂಡಿತ್ತು. ಅವರಲ್ಲಿ ಹೆಚ್ಚಿನವರು ಸ್ಥಳದಲ್ಲೇ ಸಾವನ್ನಪ್ಪಿದ್ದರು ಎಂದು ರಿಖೌನ್ ಖಾಡ್‌ನಲ್ಲಿ ಹೋಟೆಲ್ ನಡೆಸುತ್ತಿರುವ ವೀರೇಂದ್ರ ಪನ್ವಾರ್ ಹೇಳಿದ್ದಾರೆ.

‘ಕೈಕಾಲುಗಳಿಲ್ಲದ ದೇಹಗಳು ಅಲ್ಲಲ್ಲಿ ಬಿದ್ದಿದ್ದವು. ಕೆಲವು ಶವಗಳು ಮರಗಳ ಕೊಂಬೆಗೆ ಸಿಲುಕಿದ್ದವು. ನಾನು ಬಸ್ ಹಿಂದೆಯೇ ವಾಹನದಲ್ಲಿ ಬರುತ್ತಿದ್ದೆ. ಒಮ್ಮೆ ಬಸ್ ಹಿಂದಿಕ್ಕಲು ಪ್ರಯತ್ನಿಸಿದೆ. ಆದರೆ, ಅದನ್ನು ಹಿಂದಿಕ್ಕುವ ಮೊದಲು, ಬಸ್ ಕಮರಿಗೆ ಬಿದ್ದ ಭಾರಿ ಶಬ್ದ ಕೇಳಿಸಿತು’ ಎಂದು ಪ್ರತ್ಯಕ್ಷದರ್ಶಿ, ಜಿಲ್ಲಾ ಪಂಚಾಯಿತಿ ಸದಸ್ಯ ಹಕಮ್ ಸಿಂಗ್ ರಾವತ್ ಹೇಳಿದರು.

ಅಪಘಾತದ ನಿಖರ ಕಾರಣ ಪತ್ತೆಗೆ ಮ್ಯಾಜಿಸ್ಟ್ರೇಟ್ ತನಿಖೆಗೆ ಆದೇಶಿಸಲಾಗಿದೆ ಎಂದು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ತಿಳಿಸಿದ್ದಾರೆ.

ಧಾಮಿ ಮತ್ತು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಭಾನುವಾರ ತಡರಾತ್ರಿ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಐಎಎಫ್ ವಿಮಾನದಲ್ಲಿ ಶವಗಳ ರವಾನೆ

ಮೃತದೇಹಗಳನ್ನು ಡೆಹ್ರಾಡೂನ್‌ಗೆ ತರಲಾಗಿದ್ದು, ಅಲ್ಲಿಂದ ಭಾರತೀಯ ವಾಯುಪಡೆಯ (ಐಎಎಫ್) ವಿಮಾನದಲ್ಲಿ ಖಜುರಾಹೊ ವಿಮಾನ ನಿಲ್ದಾಣಕ್ಕೆ ರವಾನಿಸಿ, ಕುಟುಂಬದವರಿಗೆ ಹಸ್ತಾಂತರಿಸಲಾಗುತ್ತದೆ.

‘ಗಾಯಾಳುಗಳ ರಕ್ಷಣೆಗೆ ಹೆಚ್ಚು ಸಮಯ ತೆಗೆದುಕೊಳ್ಳಲಿಲ್ಲ. ರಾತ್ರಿ 8 ಗಂಟೆ ಹೊತ್ತಿಗೆ ಅವರನ್ನು ರಸ್ತೆಗೆ ತರಲಾಯಿತು. ಆದರೆ, ಸುಮಾರು 500 ಮೀಟರ್ ಆಳದ ಕಮರಿಯಿಂದ ಶವಗಳನ್ನು ಕತ್ತಲೆಯಲ್ಲಿ ಮೇಲಕ್ಕೆ ತರುವುದು ರಕ್ಷಣಾ ತಂಡಗಳಿಗೆ ನಿಜಕ್ಕೂ ಸವಾಲಾಗಿತ್ತು’ ಎಂದು ಎನ್‌ಡಿಆರ್‌ಎಫ್ ಇನ್‌ಸ್ಪೆಕ್ಟರ್ ಸಂಜಯ್ ಹೇಳಿದ್ದಾರೆ.

ಷೇರುಪೇಟೆ ವಹಿವಾಟು 94



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	16,584
ಇಂದಿನ ಅಂತ್ಯ	16,569
▼	15
ದಿನದ ಕನಿಷ್ಠ	16,444

ವಿನಿಮಯ ದರ	
$ ಡಾಲರ್	77.66
£ ಪೌಂಡ್	97.55
€ ಯುರೊ	83.42
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹500
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹503

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈಂಡ್)	₹1615 (1620)
ಸೋಯಾ (ರಿಫೈಂಡ್)	₹1520 (1505)
ಸೂರ್ಯಕಾಂತಿ (ರಿಫೈಂಡ್)	₹1770 (1775)
ಪಾಮೋಲಿನ್	₹1480 (1480)

ರಾಮನಗರ ರೇಷ್ಮೆಗೂಡು ಧಾರಣೆ	
ಮಿಶ್ರತಳಿ (ಸಿ.ಬಿ)	₹400-616
ದ್ವಿತಳಿ (ಬಿ.ವಿ)	₹360-801

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹173
ಆರ್‌ಎಸ್‌ಎಸ್-5	₹165.50
ಗುಡ್ ಲಾಟ್	₹158.50

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)	
ದಪ್ಪ	₹1000-1400
ಮಧ್ಯಮ	₹800-1000
ಸಣ್ಣ	₹400-800

ವಾಹನ ರಿಟೇಲ್ ಮಾರಾಟ ಇಳಿಕೆ

ಮೇನಲ್ಲಿ ಪ್ರಯಾಣಿಕ ವಾಹನ ಮಾರಾಟ ಹೆಚ್ಚಳ: ಎಫ್‌ಎಡಿಎ ಮಾಹಿತಿ

ನವದೆಹಲಿ (ಪಿಟಿಐ): ವಾಹನಗಳ ರಿಟೇಲ್ ಮಾರಾಟವು 2019ರ ಮೇ ತಿಂಗಳಿಗೆ ಹೋಲಿಸಿದರೆ 2022ರ ಮೇನಲ್ಲಿ ಇಳಿಕೆ ಆಗಿದೆ ಎಂದು ಭಾರತೀಯ ವಾಹನ ವಿತರಕರ ಒಕ್ಕೂಟ (ಎಫ್‌ಎಡಿಎ) ಸೋಮವಾರ ತಿಳಿಸಿದೆ.

2019ರ ಮೇನಲ್ಲಿ 18.22 ಲಕ್ಷ ವಾಹನಗಳು ಮಾರಾಟ ಆಗಿದ್ದವು. 2022ರ ಮೇನಲ್ಲಿ 16.46 ಲಕ್ಷ ವಾಹನಗಳು ಮಾರಾಟ ಆಗಿವೆ. ಪ್ರಯಾಣಿಕ ವಾಹನಗಳ ಮಾರಾಟ ಸಂಖ್ಯೆಯಲ್ಲಿ ಮಾತ್ರ ಹೆಚ್ಚಳ ಕಂಡುಬಂದಿದೆ.

2019ರ ಮೇಗೆ ಹೋಲಿಸಿದರೆ 2022ರ ಮೇನಲ್ಲಿನ ಮಾರಾಟ ಪ್ರಮಾಣವು, ವಾಹನಗಳ ಮಾರಾಟ ಬೆಳವಣಿಗೆ ಹಾದಿಗೆ ಮರಳಿಲ್ಲ ಎನ್ನುವುದನ್ನು ಸೂಚಿಸುತ್ತಿದೆ. ಒಟ್ಟಾರೆ ಮಾರಾಟವು ಶೇಕಡ 10ರಷ್ಟು ಇಳಿಕೆ ಆಗಿದೆ. ಪ್ರಯಾಣಿಕ ವಾಹನ ಮತ್ತು ಟ್ರ್ಯಾಕ್ಟರ್ ಮಾರಾಟ ಹೆಚ್ಚಾಗಿದೆ. ದ್ವಿಚಕ್ರ, ತ್ರಿಚಕ್ರ ಮತ್ತು ವಾಣಿಜ್ಯ ವಾಹನಗಳ ಮಾರಾಟವು ಇನ್ನಷ್ಟೇ ಬೆಳವಣಿಗೆ ಹಾದಿಗೆ ಬರಬೇಕಿದೆ ಎಂದು ಒಕ್ಕೂಟದ ಅಧ್ಯಕ್ಷ ವಿಂಕೇಶ್ ಗುಲಾಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2021ರ ಮೇ ತಿಂಗಳಿಗೆ ಹೋಲಿಸಿದರೆ ಈ ವರ್ಷದ ಮೇನಲ್ಲಿ ಉತ್ತಮ ಬೆಳವಣಿಗೆ ದರ ದಾಖಲಾಗಿದೆ. ಕೋವಿಡ್ ಸಾಂಕ್ರಾಮಿಕದಿಂದಾಗಿ 2020 ಮತ್ತು 2021ರಲ್ಲಿ ಮಾರಾಟದ ಮೇಲೆ ಪರಿಣಾಮ ಉಂಟಾಗಿದೆ. ಹೀಗಾಗಿ ಕೋವಿಡ್ ಬರುವುದಕ್ಕೂ ಮುಂಚಿನ 2019ರ ಮೇ ತಿಂಗಳಿನ ಜೊತೆ ಹೋಲಿಕೆ ಹೆಚ್ಚು ಸೂಕ್ತ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮಾರಾಟದ ವಿವರ



‘ಕಾಯುವಿಕೆ ಹೆಚ್ಚಲಿದೆ’

ಪೂರೈಕೆಗೆ ಸಂಬಂಧಿಸಿದ ಸಮಸ್ಯೆಗಳು ಇರುವುದರಿಂದ ವಿತರಕರಿಗೆ ಬೇಡಿಕೆ ಈಡೇರಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ವಾಹನಗಳ ಕಾಯುವಿಕೆ ಅವಧಿಯು ಮೂರು ತಿಂಗಳಿನಿಂದ ಎರಡು ವರ್ಷ ಆಗಬಹುದು ಎಂದು ಅವರು ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಸಂಘರ್ಷದಿಂದಾಗಿ ಮುಂದಿನ ದಿನಗಳಲ್ಲಿಯೂ ಬೇಡಿಕೆ ಮತ್ತು ಪೂರೈಕೆ ನಡುವೆ ಅಸಮತೋಲನ ಮುಂದುವರಿಯಲಿದೆ. ಇದರಿಂದಾಗಿ ಪ್ರಯಾಣಿಕ ವಾಹನ ಲಭ್ಯತೆಯು ವಿಳಂಬ ಆಗಲಿದೆ ಎಂದು ಅವರು ತಿಳಿಸಿದ್ದಾರೆ.

ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಹೊಸ ಸರಣಿಯ ನಾಣ್ಯಗಳನ್ನು ಬಿಡುಗಡೆ ಮಾಡಿದರು–ಪಿಟಿಐ ಚಿತ್ರ

ಹೊಸ ಸರಣಿಯ ನಾಣ್ಯಗಳ ಬಿಡುಗಡೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ವಿಶೇಷ ಸರಣಿಯ ನಾಣ್ಯಗಳನ್ನು ಸೋಮವಾರ ಬಿಡುಗಡೆ ಮಾಡಿದ್ದಾರೆ. ಅಂಧರೂ ಸುಲಭವಾಗಿ ಗುರುತಿಸಬಹುದಾದ ರೀತಿಯಲ್ಲಿ ಈ ನಾಣ್ಯಗಳನ್ನು ವಿನ್ಯಾಸ-ಗೊಳಿಸಲಾಗಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ (ಆಜಾದಿ ಕಾ ಅಮೃತ್ ಮಹೋತ್ಸವ್) ಅಂಗವಾಗಿ ₹ 1, 2, 5, 10 ಮತ್ತು 20ರ ಮುಖಬೆಲೆಯ ನಾಣ್ಯಗಳನ್ನು ಬಿಡುಗಡೆ ಮಾಡಲಾಗಿದೆ. ಇವು ಚಲಾವಣೆಗೆ ಬರಲಿವೆ.

ಹಣಕಾಸು ಸಚಿವಾಲಯ ಆಯೋಜಿಸಿದ್ದ ಕಾರ್ಯಕ್ರಮದ-ಲ್ಲಿ ಮಾತನಾಡಿದ ಮೋದಿ, ‘ಹೊಸ ಸರಣಿಯ ನಾಣ್ಯಗಳು ಅಮೃತ ಕಾಲದ ಗುರಿಯನ್ನು ನೆನಪಿಸುತ್ತವೆ. ದೇಶದ ಅಭಿವೃದ್ಧಿಗೆ ಶ್ರಮಿಸಲು ಜನರನ್ನು ಪ್ರೇ-ರೇಪಿಸುತ್ತವೆ’ ಎಂದು ಹೇಳಿದ್ದಾರೆ.

ಹೊಸ ನಾಣ್ಯಗಳನ್ನು ಆಯ್ದ ಶಾಖೆಗಳ ಮೂಲಕ ವಿತರಿಸಲಾಗುವು-ದು ಎಂದು ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಕ್ಸಿಸ್ ಬ್ಯಾಂಕ್ ಹೇಳಿವೆ.

‘ನೋಟಿನಲ್ಲಿ ಗಾಂಧೀಜಿ ಚಿತ್ರ ಬದಲಿಸುವ ಪ್ರಸ್ತಾವ ಇಲ್ಲ’

ಮುಂಬೈ (ಪಿಟಿಐ): ಕರೆನ್ಸಿ ನೋಟುಗಳಲ್ಲಿ ಮಹಾತ್ಮ ಗಾಂಧೀಜಿ ಚಿತ್ರವನ್ನು ಬದಲಾಯಿಸಿ, ಬೇರೆಯವರ ಚಿತ್ರವನ್ನು ಬಳಸುವ ಯಾವುದೇ ಪ್ರಸ್ತಾವ ಇಲ್ಲ ಎಂದು ಆರ್‌ಬಿಐ ಸೋಮವಾರ ಸ್ಪಷ್ಟಪಡಿಸಿದೆ. ಕೆಲವು ಮಾಧ್ಯಮಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಆರ್‌ಬಿಐ ಈ ಮೂಲಕ ತಳ್ಳಿಹಾಕಿದೆ.

‘ಹಾಲಿ ಇರುವ ಕರೆನ್ಸಿ ನೋಟುಗಳಲ್ಲಿ ಕೆಲವು ಬದಲಾವಣೆಗಳ-ನ್ನು ತರುವ ಬಗ್ಗೆ ಆರ್‌ಬಿಐ ಆಲೋಚನೆ ನಡೆಸುತ್ತಿದ್ದು, ಮಹತ್ಮ ಗಾಂಧೀಜಿ ಚಿತ್ರಕ್ಕೆ ಬದಲಾಗಿ ರವೀಂದ್ರನಾಥ ಟ್ಯಾಗೋರ್ ಮತ್ತು ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಚಿತ್ರವನ್ನು ಬಳಸುವ ಬಗ್ಗೆ ಆರ್‌ಬಿಐ ಪರಿಶೀಲನೆ ನಡೆಸುತ್ತಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿವೆ. ಆದರೆ, ಅಂತಹ ಯಾವ ಪ್ರಸ್ತಾವವೂ ರಿಸರ್ವ್ ಬ್ಯಾಂಕ್ ಮುಂದೆ ಇಲ್ಲ’ ಎಂದು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ತಟ್ಟಿಬೆಟ್ಟೆ	37119-47269	ರಾಶಿ	37699-49609
ಬಂಟ್ವಾಳ		**ಶಿರಸಿ**		ಸಿಪ್ಪೆಗೋಟು	13999-21198
ಕೋಕ	12500-25000	ಬೆಟ್ಟೆ	31099-45099	**ಯಲ್ಲಾಪುರ**	
ಹೊಸತು	27500-45000	ಬಿಳಿಗೋಟು	22511-30899	ಬಿಳಿಗೋಟು	26899-31619
ಹಳತು	46000-54500	ಚಾಲಿ	32939-38099	ಚಾಲಿ	33970-37539
ಕುಮಟ		ರಾಶಿ	42699-49709	ಕೋಕ	18899-28899
ಚಿಪ್ಪು	24169-28889	**ಶಿವಮೊಗ್ಗ**		ಕೆಂಪುಗೋಟು	30599-34399
ಕೋಕ	20109-28169	ಬೆಟ್ಟೆ	50119-52899	ರಾಶಿ	45469-52490
ಹಳೆಚಾಲಿ	45069-48409	ಗೊರಬಲು	16500-37699	ತಟ್ಟಿಬೆಟ್ಟೆ	37899-43699
ಹೊಸಚಾಲಿ	32229-37019	ರಾಶಿ	44009-49809		
ಸಿದ್ದಾಪುರ		ಸರಕು	58169-79396		
ಬಿಳಿಗೋಟು	24899-30699	**ಸಾಗರ**			
ಚಾಲಿ	33899-37190	ಬಿಳಿಗೋಟು	20560-27869		
ಕೋಕ	21199-31682	ಚಾಲಿ	30000-37069		
ಕೆಂಪುಗೋಟು	24199-31699	ಕೋಕ	15022-34089		
ರಾಶಿ	45809-48709	ಕೆಂಪುಗೋಟು	22339-37199		

ಮುದ್ರಮನೆ ಕಾಫಿ (50ಕೆ.ಜಿಗೆ)	
ಎಪಿ	16500
ಎಸಿ	9100
ಆರ್‌ಪಿ	9750
ಆರ್‌ಸಿ	4800

ಟ್ವಿಟರ್ ಕಂಪನಿಗೆ ಟೆಸ್ಲಾ ಸಿಇಒ ಇಲಾನ್ ಮಸ್ಕ್ ಎಚ್ಚರಿಕೆ

‘ಟ್ವಿಟರ್ ಖರೀದಿ ಕೈಬಿಡುವೆ’

ಬೆಂಗಳೂರು (ರಾಯಿಟರ್ಸ್): ‘ನಕಲಿ ಖಾತೆಗಳ ಸಂಖ್ಯೆಯ ಬಗ್ಗೆ ಟ್ವಿಟರ್ ಕಂಪನಿಯು ಮಾಹಿತಿ ನೀಡಲು ವಿಫಲವಾದಲ್ಲಿ, ಆ ಕಂಪನಿಯನ್ನು ಖರೀದಿಸಲಾರೆ’ ಎಂದು ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವ-ಹಣಾ ಅಧಿಕಾರಿ ಇಲಾನ್ ಮಸ್ಕ್ ಹೇಳಿದ್ದಾರೆ. ಮಸ್ಕ್ ಅವರು ₹ 3.41 ಲಕ್ಷ ಕೋಟಿಗೆ (44 ಬಿಲಿಯನ್ ಡಾಲರ್) ಟ್ವಿಟರ್ ಕಂಪನಿಯನ್ನು ಖರೀದಿಸಲು ಮುಂದಾಗಿದ್ದರು.

ಮುಖ್ಯಾಂಶಗಳು

- ಮಸ್ಕ್‌ರಿಂದ ಇದೇ ಮೊದಲ ಬಾರಿಗೆ ಲಿಖಿತ ರೂಪದಲ್ಲಿ ಎಚ್ಚರಿಕೆ
- ನಕಲಿ ಖಾತೆಗಳ ಪ್ರಮಾಣ ಶೇ 20ರಷ್ಟು ಎಂದು ನಂಬಿರುವ ಮಸ್ಕ್

ಮಸ್ಕ್ ಅವರು ಈ ವಿಚಾರವಾಗಿ ಸೋಮವಾರ ಪತ್ರವೊಂದನ್ನು ಬರೆದಿದ್ದಾರೆ. ಟ್ವಿಟರ್ ಕಂಪನಿಯು ತನ್ನ ಹೊಣೆ-ಗಾರಿಕೆಗಳಿಗೆ ಚ್ಯುತಿ ತಂದಿರುವುದು ಸ್ಪಷ್ಟ. ಟ್ವಿಟರ್ ಖರೀದಿ ಒಪ್ಪಂದವನ್ನು ರದ್ದುಗೊಳಿಸುವ ಎಲ್ಲ ಹಕ್ಕುಗಳನ್ನು ಮಸ್ಕ್ ಅವರು ಹೊಂದಿದ್ದಾರೆ ಎಂದು ಪತ್ರದಲ್ಲಿ ಬರೆಯಲಾಗಿದೆ.

ಮಸ್ಕ್ ಅವರು ಟ್ವಿಟರ್ ಖರೀದಿ ಒಪ್ಪಂದವನ್ನು ರದ್ದುಪಡಿಸುವುದಾಗಿ ಲಿಖಿತವಾಗಿ ಎಚ್ಚರಿಕೆ ನೀಡಿರುವುದು ಇದೇ ಮೊದಲು. ಮಸ್ಕ್ ಅವರು ಈ ಹಿಂದೆ, ನಕಲಿ ಖಾತೆಗಳಿಗೆ ಸಂಬಂಧಿಸಿದ ಅಂಕಿ–ಅಂಶಗಳು ಟ್ವಿಟರ್ ಕಡೆಯಿಂದ ಸಲ್ಲಿಕೆ ಆಗುವವರೆಗೆ ಖರೀದಿ ಒಪ್ಪಂದವನ್ನು ತಡೆಹಿಡಿಯುವುದಾಗಿ ಟ್ವೀಟ್ ಮೂಲಕ ತಿಳಿಸಿದ್ದರು.

‘ವಿಲೀನ ಒಪ್ಪಂದದಲ್ಲಿ ಇರುವ ತನ್ನ ಹೊಣೆಗಾರಿಕೆಯನ್ನು ನಿಭಾಯಿಸಲು ಟ್ವಿಟರ್ ನಿರಾಕರಿಸುತ್ತಿದೆ ಎಂದು ಮಸ್ಕ್ ನಂಬಿದ್ದಾರೆ. ಇದು, ಕಂಪನಿಯು ಅಂಕಿ–ಅಂಶಗಳನ್ನು ತಡೆಹಿಡಿಯುತ್ತಿದೆ ಎಂಬ ಅನುಮಾನ ಹೆಚ್ಚಾಗಲು ಕಾರಣವಾಗಿದೆ’ ಎಂದು ಪತ್ರದಲ್ಲಿ ಹೇಳಲಾಗಿದೆ.

ನಕಲಿ ಖಾತೆಗಳ ಪ್ರಮಾಣವು ಒಟ್ಟು ಖಾತೆಗಳ ಶೇಕಡ 5ರಷ್ಟು ಎಂದು ಟ್ವಿಟರ್ ಸಾರ್ವಜನಿಕವಾಗಿ ತಿಳಿಸಿತ್ತು. ಆದರೆ, ಈ ವಿವರವನ್ನು ಮಸ್ಕ್ ಒಪ್ಪಿರಲಿಲ್ಲ. ನಕಲಿ ಖಾತೆಗಳ ಪ್ರಮಾಣವು ಕನಿಷ್ಠ ಶೇ 20ರಷ್ಟು ಆಗಿರಬೇಕು ಎಂದು ಅವರು ಹೇಳಿದ್ದರು.

ನಕಲಿ ಖಾತೆಗಳ ಪ್ರಮಾಣ ಎಷ್ಟಿದೆ ಎಂಬುದನ್ನು ಪತ್ತೆ ಮಾಡಲು ಕೆಲವು ಅಂಕಿ–ಅಂಶಗಳು ಬೇಕು ಎಂದು ಮಸ್ಕ್ ಹೇಳಿದ್ದರು. ‘ಟ್ವಿಟರ್‌ನ ಮಾಲೀಕತ್ವ-ವನ್ನು ಪಡೆಯಲು, ಅದರ ಖರೀದಿಗೆ ಹಣ ಒಗ್ಗೂಡಿಸಲು ಮಸ್ಕ್ ಅವರು ಈ ಮಾಹಿತಿ ಪಡೆಯುವ ಹಕ್ಕು ಹೊಂದಿದ್ದಾರೆ’ ಎಂದು ಪತ್ರದಲ್ಲಿ ಹೇಳಲಾಗಿದೆ.

ಈ ವಿಚಾರವಾಗಿ ಟ್ವಿಟರ್ ಕಡೆಯಿಂದ ತಕ್ಷಣಕ್ಕೆ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಕೆನರಾ: ಬಡ್ಡಿ ಹೆಚ್ಚಳ

ನವದೆಹಲಿ (ಪಿಟಿಐ): ಕೆನರಾ ಬ್ಯಾಂಕ್ ಎಂಸಿಎಲ್‌ಆರ್ ಅನ್ನು ಶೇಕಡ 0.05ರಷ್ಟು ಹೆಚ್ಚಿಸಿದೆ. ಇದರಿಂದ ಒಂದು ವರ್ಷದ ಅವಧಿಯ ಸಾಲದ ಬಡ್ಡಿಯು ಶೇ 7.40ಕ್ಕೆ ತಲುಪಿದೆ. ಮಂಗಳವಾರದಿಂದ ಇದು ಜಾರಿಗೆ ಬರಲಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ	6-6-2022
ಜಾವಾ 70/80(ಹೊಸ)	10750-10800
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	11150-11200
ದಪ್ಪ ಗುಜರಾತ್(ಹೊಸ)	10350-10400

ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1625 (1630)
ಒಂದು ವಾರದ ಡೆಲಿವರಿ	1620 (1625)
ಸೋಯಾ ಕಚ್ಚಾ	1477 (1460)
ಪಾಮ್ ವಾರದ ಡೆಲಿವರಿ	1478 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1740 (1740)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 50,950 (50,950)

ಬೆಳ್ಳಿ ಕೆ.ಜಿ 62,590 (61,500)

ಆವರಣದಲ್ಲಿ ಶನಿವಾರದ ಧಾರಣೆ

ರಫ್ತು, ಬಳಕೆ ಹೆಚ್ಚಳ: ರಾಜ್ಯದ ಬೆಳೆಗಾರರಿಗೆ ವರದಾನ

ಕಾಫಿ ಮಾರುಕಟ್ಟೆಗೆ ಚೇತರಿಕೆ ಕಾಲ

• ಆದಿತ್ಯ ಕೆ.ಎ.

ಬೆಂಗಳೂರು: ಕಾಫಿಯ ರಫ್ತು ಹಾಗೂ ಬಳಕೆ ಪ್ರಮಾಣ ಹೆಚ್ಚಳವಾಗಿದ್ದು ಕಾಫಿ ಧಾರಣೆಯು ಏರುಗತಿಯಲ್ಲಿ-ದೆ. ‘ದರ ಹೆಚ್ಚಳದಿಂದ ದೇಶದಲ್ಲಿ ಕಾಫಿ ವಹಿವಾಟು ₹ 5 ಸಾವಿರ ಕೋಟಿಯಿಂದ ₹ 7 ಸಾವಿರ ಕೋಟಿಗೆ ಈ ವರ್ಷ ಏರಿಕೆಯಾಗಿದೆ’ ಎಂದು ಕಾಫಿ ಬೆಳೆಗಾರರು ಸಂತಸ ವ್ಯಕ್ತಪಡಿಸಿ-ದ್ದಾರೆ.

ಕೋವಿಡ್‌ನಿಂದ ಎರಡು ವರ್ಷ ರಫ್ತು ಕುಸಿದಿತ್ತು. ಸ್ಥಳೀಯ ವ್ಯಾಪಾರಸ್ಥರು ಕಾಫಿ ಖರೀದಿಗೆ ಅಷ್ಟಾಗಿ ಆಸಕ್ತಿ ತೋರುತ್ತಿರಲಿಲ್ಲ. ಈಗ ಕಾಫಿ ಬೆಲೆ ಏರಿಕೆಯಿಂದ ಖರೀದಿದಾರರು ಆಸಕ್ತಿ ತೋರುತ್ತಿದ್ದರೂ ಕಾಫಿ ದಾಸ್ತಾನು ಬಹುತೇಕ ಖಾಲಿಯಾಗಿದೆ. ಮೂರು ವರ್ಷ ವಾಡಿಕೆಗೂ ಅಧಿಕವಾಗಿ ಸುರಿದ ಮಳೆಯಿಂದ ಫಸಲು ಕಡಿಮೆಯಾಗಿತ್ತು.

ನಾಲ್ಕು ತಿಂಗಳ ಹಿಂದೆ ಅರೇಬಿಕಾ ಕಾಫಿಯ 50 ಕೆ.ಜಿ ಪಾರ್ಚ್‌ಮೆಂಟ್ ಬೆಲೆ ₹ 17 ಸಾವಿರ ಆಗಿತ್ತು. ಈಗ ಅದು ₹ 16,750 ಆಗಿದೆ. ದರ ಏರಿಕೆಯಿಂದ ಸಂತಸಗೊಂಡಿದ್ದ ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಭಾಗದ ಬೆಳೆಗಾರರು, ಪೂರ್ಣ ಕಾಫಿ ಮಾರಾಟ ಮಾಡಿದ್ದರು. ಆದರೆ, ರೋಬಸ್ಟಾ ಕಾಫಿ ಬೆಲೆ ಏರಿಕೆಯಾಗದೆ ಬೆಳೆಗಾರರು ಹತಾಶಗೊಂಡಿದ್ದರು. ಈಗ ರೊಬಸ್ಟಾ ಪಾರ್ಚ್‌ಮೆಂಟ್‌ನ ದರವು ಮೊದಲ ಬಾರಿಗೆ ₹ 10 ಸಾವಿರ (50 ಕೆ.ಜಿಯ ಚೀಲ) ತಲುಪಿದ್ದು, ಬೆಳೆಗಾರರಲ್ಲಿ ಸಂತಸ ಮೂಡಿಸಿದೆ. ರೊಬಸ್ಟಾ ಚೆರ‍್ರಿಯ ದರವು ₹ 4,700 –₹ 4,900ರ (50 ಕೆ.ಜಿ) ಆಸುಪಾಸಿನಲ್ಲಿದೆ.

‘ಭಾರತದ ಕಾಫಿಯು ಐರೋಪ್ಯ ಮಾರುಕಟ್ಟೆಗೆ ಹೆಚ್ಚಾಗಿ ರಫ್ತು ಆಗುತ್ತಿದೆ’ ಎಂದು ಕರ್ನಾಟಕ ಕಾಫಿ ಬೆಳೆಗಾರರ ಒಕ್ಕೂಟದ ಪದಾಧಿಕಾರಿ ವಿಶ್ವನಾಥ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಾಂಶಗಳು

- ಪ್ರತಿವರ್ಷ 3 ಲಕ್ಷ ಟನ್ ಕಾಫಿ ರಫ್ತು
- ಈ ವರ್ಷ ₹ 2 ಸಾವಿರ ಕೋಟಿಯಷ್ಟು ವಹಿವಾಟು ಹೆಚ್ಚಳ
- ಕೋವಿಡ್‌ನಿಂದ ಎರಡು ವರ್ಷ ರಫ್ತು ಕುಸಿತ

ರೋಬಸ್ಟಾ ಕಾಫಿಯನ್ನು ಗೋದಾಮು ಅಥವಾ ಕಾಫಿ ಕ್ಯೂರಿಂಗ್‌ಗಳಲ್ಲಿ ದಾಸ್ತಾನು ಮಾಡಿದ್ದವರಿಗೆ ಬೆಲೆ ಏರಿಕೆ ಲಾಭ ದೊರೆಯುತ್ತಿದೆ

ವಿಶ್ವನಾಥ್, ಪದಾಧಿಕಾರಿ, ಕರ್ನಾಟಕ ಕಾಫಿ ಬೆಳೆಗಾರರ ಒಕ್ಕೂಟ

ಸಂಕ್ಷಿಪ್ತ ಸುದ್ದಿ

ಕೋರ್ಟ್‌ಗೆ ಮತ್ತೊಬ್ಬ ಟಿಟಿ ಆಟಗಾರ

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್‌ಗಾಗಿ ಆಯ್ಕೆ ಮಾಡಿರುವ ತಂಡದಲ್ಲಿ ತಮಗೆ ಅವಕಾಶ ನೀಡದಿ-ರುವುದನ್ನು ಪ್ರಶ್ನಿಸಿ ಟೇಬಲ್ ಟೆನಿಸ್ ಆಟಗಾರ ಮನುಷ್ ಶಾ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ತಂಡದಲ್ಲಿ ತಮಗೆ ಮೀಸಲು ಆಟಗಾರ್ತಿಯಾಗಿ ಸ್ಥಾನ ನೀಡಿದ್ದನ್ನು ಪ್ರಶ್ನಿಸಿ, ಟಿಟಿ ಆಟಗಾರ್ತಿ ದಿವ್ಯಾ ಚಿತಳೆ ಹೈಕೋರ್ಟ್ ಮೊರೆ ಹೋಗಿದ್ದರು. ಇದೀಗ ಪುರುಷರ ತಂಡದಲ್ಲಿ ಮೀಸಲು ಆಟಗಾರನಾಗಿ ಆಯ್ಕೆಯಾಗಿರುವ ಮನುಷ್ ಕೂಡಾ ತಮಗೆ ಅನ್ಯಾಯವಾಗಿದೆ ಎಂದು ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದಾರೆ.

’ಈ ಬಗ್ಗೆ ಸೋಮವಾರ ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದೇವೆ. ಚಿತಳೆ ಸಲ್ಲಿಸಿರುವ ಅರ್ಜಿ ಜತೆಯಲ್ಲೇ ನಮ್ಮ ಅರ್ಜಿಯನ್ನೂ ನ್ಯಾಯಾಲಯ ಜೂನ್ 10 ರಂದು ವಿಚಾರಣೆಗೆ ಕೈಗೆ-ತ್ತಿಕೊಳ್ಳಲಿದೆ‘ ಎಂದು ಮನುಷ್ ಅವರ ತಂದೆ, ಉತ್ಪಾ ಶಾ ತಿಳಿಸಿದ್ದಾರೆ.

ವಿಶ್ವಕಪ್ ಅರ್ಹತೆ: ಉಕ್ರೇನ್ ವಿಫಲ

ಕಾರ್ಡಿಫ್ (ಎಪಿ): ಯುದ್ಧಪೀಡಿತ ಉಕ್ರೇನ್ ರಾಷ್ಟ್ರದ ಫುಟ್‌ಬಾಲ್ ತಂಡವು ವಿಶ್ವಕಪ್ ಟೂರ್ನಿಗೆ ಅರ್ಹತೆ ಗಳಿಸಲು ವಿಫಲವಾಗಿದೆ.

ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ತಂಡವು 0–1ರಿಂದ ವೇಲ್ಸ್ ತಂಡಕ್ಕೆ ಮಣಿಯಿತು. ಆ್ಯಂಡ್ರಿಯ ಯಾರ್ಮ್‌ಲೆಂಕೊ ವಿಜೇತ ತಂಡದ ಗೋಲು ಗಳಿಸಿದರು. ಇದರೊಂದಿಗೆ ವೇಲ್ಸ್ 64 ವರ್ಷಗಳ ಬಳಿಕ ವಿಶ್ವಕಪ್‌ಗೆ ಅರ್ಹತೆ ಪಡೆಯಿತು.

ರಣತುಂಗಾ ತಮ್ಮನಿಗೆ 2 ವರ್ಷ ಜೈಲು

ಕೊಲಂಬೊ (ಪಿಟಿಐ): ಶ್ರೀಲಂಕಾ ಕ್ರಿಕೆಟ್ ತಂಡದ ಮಾಜಿ ನಾಯಕ ಅರ್ಜುನ ರಣತುಂಗಾ ಅವರ ತಮ್ಮ, ಸಚಿವರೂ ಆಗಿರುವ ಪ್ರಸನ್ನ ರಣತುಂಗಾ ಅವರಿಗೆ ಸುಲಿಗೆ ಪ್ರಕರಣ-ದಲ್ಲಿ ಇಲ್ಲಿನ ಹೈಕೋರ್ಟ್ ಎರಡು ವರ್ಷ ಜೈಲು ವಿಧಿಸಿದೆ.

ಉದ್ಯಮಿಯೊಬ್ಬರನ್ನು ಬೆದರಿಸಿ ಸುಲಿಗೆ ಮಾಡಿದ್ದ ಆರೋಪದಡಿ 55 ವರ್ಷದ ಪ್ರಸನ್ನ ವಿರುದ್ಧ 2015 ರಲ್ಲಿ ಪ್ರಕರಣ ದಾಖಲಾಗಿತ್ತು. ಅಪರಾಧ ಸಾಬೀತಾಗಿರುವುದರಿಂದ ಶಿಕ್ಷೆ ವಿಧಿಸಿದೆ.

₹ 53 ಲಕ್ಷ ದಂಡ ಮತ್ತು ಸಂತ್ರಸ್ತ ಉದ್ಯಮಿಗೆ ಪರಿಹಾರವಾಗಿ ₹ 2.14 ಲಕ್ಷ ಪಾವತಿಸುವಂತೆಯೂ ನ್ಯಾಯಾಲಯ ಆದೇಶಿಸಿದೆ. ಪ್ರಕರಣ-ದಲ್ಲಿ ಆರೋಪಿಯಾಗಿದ್ದ, ಪ್ರಸನ್ನ ಅವರ ಪತ್ನಿಯನ್ನು ದೋಷಮುಕ್ತಗೊಳಿಸಿದೆ.

ಪ್ರಶಸ್ತಿ ನಿರೀಕ್ಷೆಯಲ್ಲಿ ಸಿಂಧು, ಸೇನ್

ಇಂಡೊನೇಷ್ಯಾ ಸೂಪರ್ ಸಿರೀಸ್ ಬ್ಯಾಡ್ಮಿಂಟನ್ ಇಂದಿನಿಂದ

ಜಕಾರ್ತ (ಪಿಟಿಐ): ಥಾಮಸ್ ಕಪ್ ಟೂರ್ನಿಯಲ್ಲಿ ಭಾರತಕ್ಕೆ ಐತಿಹಾಸಿಕ ಜಯ ತಂದುಕೊಟ್ಟವರಲ್ಲಿ ಒಬ್ಬರಾದ ಲಕ್ಷ್ಯ ಸೇನ್ ಮತ್ತು ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಇಂಡೊನೇಷ್ಯಾ ಓಪನ್ ಸೂಪರ್ ಸಿರೀಸ್ 500 ಟೂರ್ನಿಯಲ್ಲಿ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಮಂಗಳವಾರದಿಂದ ಇಲ್ಲಿ ಆರಂಭವಾಗುವ ಟೂರ್ನಿಯ ಡ್ರಾಅನ್ನು ಸೋಮವಾರ ಪ್ರಕಟಿಸಲಾಗಿದೆ.

ಜುಲೈ 28ರಿಂದ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್‌ಗೆ ಸಜ್ಜಾಗುತ್ತಿ-ರುವ ಭಾರತದ ಪಟುಗಳು ಇಲ್ಲಿ ಉತ್ತಮ ಸಾಮರ್ಥ್ಯಕ್ಕೆ ಮುಂದಾಗಲಿದ್ದಾರೆ.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ ಲಕ್ಷ್ಯ ಸೇನ್ ಡೆನ್ಮಾರ್ಕ್‌ನ ಹನ್ಸ್ ಕ್ರಿಸ್ಟಿಯನ್ ಸೋಲ್‌ಬರ್ಗ್ ವಿಟಿಂಗಸ್ ಅವರನ್ನು ಎದುರಿಸುವರು. ಸಮೀರ್ ವರ್ಮಾ ಕೂಡ ಕಣದಲ್ಲಿದ್ದಾರೆ. ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಸಿಂಧು, ಡೆನ್ಮಾರ್ಕ್‌ನ ಲಿನೆ ಕ್ರಿಸ್ಟೊಫರ್ಸನ್ ಎದುರು ಆಡಲಿದ್ದಾರೆ.

ಪಿ.ವಿ.ಸಿಂಧು– ಪಿಟಿಐ ಚಿತ್ರ

ಪುರುಷರ ಡಬಲ್ಸ್‌ನಲ್ಲಿ ಮನು ಅತ್ರಿ– ಬಿ.ಸುಮೀತ್ ರೆಡ್ಡಿ, ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ– ಎನ್. ಸಿಕ್ಕಿ ರೆಡ್ಡಿ, ಸಿಮ್ರಾನ್ ಸಿಂಘಿ– ರಿತಿಕಾ ಥಾಕರ್ ಅದೃಷ್ಟ ಪರೀಕ್ಷಿಸಲಿದ್ದಾರೆ.

ಕಿದಂಬಿ ಶ್ರೀಕಾಂತ್, ಸೈನಾ ನೆಹ್ವಾಲ್, ಪರುಪಳ್ಳಿ ಕಶ್ಯಪ್ ಮತ್ತು ಎಚ್.ಎಸ್.ಪ್ರಣಯ್ ವಿವಿಧ ಕಾರಣಗಳಿಗಾಗಿ ಈ ಟೂರ್ನಿಯಲ್ಲಿ ಆಡುತ್ತಿಲ್ಲ

ನೇಮರ್ ಕಾಲ್ಚಳಕ: ಬ್ರೆಜಿಲ್ ಜಯಭೇರಿ

ಟೋಕಿಯೊ (ಎಎಫ್‌ಪಿ): ನೇಮರ್ ಪೆನಾಲ್ಟಿಯಲ್ಲಿ ಗಳಿಸಿದ ಗೋಲಿನ ಬಲದಿಂದ ಬಲದಿಂದ ಬ್ರೆಜಿಲ್ ತಂಡವು ಇಲ್ಲಿ ನಡೆದ ಸ್ನೇಹಪರ ಫುಟ್‌ಬಾಲ್ ಪಂದ್ಯದಲ್ಲಿ ಜಪಾನ್ ತಂಡಕ್ಕೆ ಸೋಲುಣಿಸಿತು.

ಸೋಮವಾರ ನಡೆದ ಹಣಾಹಣಿಯಲ್ಲಿ ಬ್ರೆಜಿಲ್ ಪರ ಒಟ್ಟಾರೆ 74ನೇ ಗೋಲು ಗಳಿಸಿದ ನೇಮರ್ 1–0 ಅಂತರದ ಜಯಕ್ಕೆ ಕಾರಣರಾದರು. ಪಂದ್ಯದ 77ನೇ ನಿಮಿಷದಲ್ಲಿ ಅವರು ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಬ್ರೆಜಿಲ್ ಪರ ಅತಿ ಹೆಚ್ಚು ಗೋಲು ಗಳಿಸಿದ ದಿಗ್ಗಜ ಪೆಲೆ (77) ದಾಖಲೆ ಸರಿಗಟ್ಟಲು ನೇಮರ್ ಅವರಿಗೆ ಇನ್ನು ಕೇವಲ ಮೂರು ಗೋಲು ಬೇಕಾಗಿದೆ.

ವಾರದ ಹಿಂದೆ ಸೋಲ್‌ನಲ್ಲಿ ನಡೆದ ಪಂದ್ಯದಲ್ಲಿ ಬ್ರೆಜಿಲ್ 5–1ರಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿತ್ತು. ಅದೇ ಲಯವನ್ನು ಇಲ್ಲಿಯೂ ಮುಂದುವರಿಸಿತು.

ಬ್ರೆಜಿಲ್‌ನ ನೇಮರ್ ಮತ್ತು ಜಪಾನ್‌ನ ಜೆಂಕಿ ಹರಾಗುಚಿ ನಡುವೆ ಚೆಂಡಿಗಾಗಿ ಪೈಪೋಟಿ– ಎಎಫ್‌ಪಿ ಚಿತ್ರ

ಫುಟ್‌ಬಾಲ್: ಅನಿಲ್ ಹ್ಯಾಟ್ರಿಕ್

ಬೆಂಗಳೂರು: ಅನಿಲ್ ಶಂಕರ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ತಿಲಕ್ ಮೆಮೊರಿಯಲ್ ಎಫ್‌ಸಿ ಬಿಡಿಎಫ್‌ಎ ಬಿ ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ತಿಲಕ್ ಮೆಮೊರಿಯಲ್ 6–2ರಿಂದ ಆರ್.ಎಸ್. ಸ್ಪೋರ್ಟ್ಸ್ ಎದುರು ಗೆದ್ದಿತು. ಅನಿಲ್ 11, 21 ಮತ್ತು 27ನೇ ನಿಮಿಷಗಳಲ್ಲಿ ಕಾಲ್ಚಳಕ ತೋರಿದರು. ವಿಜೇತ ತಂಡದ ಪ್ರವೀಣ್ ಪಿ. (12ನೇ ನಿಮಿಷ), ನೂತನ್ ಪಿ. (35 + 1ನೇ ನಿ.) ಮತ್ತು ಯತಿ ವಿಶ್ವನಾಥನ್ (70 + 1ನೇ ನಿ.) ಗೋಲು ಹೊಡೆದರು. ಆರ್.ಎಸ್. ಸ್ಪೋರ್ಟ್ಸ್ ಪರ ಸಂದೀಪ್ ಕೃಷ್ಣನ್ (8 ಮತ್ತು 30ನೇ ನಿ.) ಮಿಂಚಿದರು.

ಮತ್ತೊಂದು ಪಂದ್ಯದಲ್ಲಿ ಎ.ವಾಸೀಂ ಗಳಿಸಿದ ಹ್ಯಾಟ್ರಿಕ್ ಗೋಲು ಬೆಂಗಳೂರು ಮಾರ್ಸ್ ಎಫ್‌ಸಿ ತಂಡದ ಗೆಲುವಿಗೆ ಕಾರಣವಾದವು. ತಂಡವು 6–0ಯಿಂದ ವೆಹಿಕಲ್ ಎಫ್‌ಸಿ ತಂಡವನ್ನು ಸೋಲಿಸಿತು. ಇನ್ನುಳಿದ ಪಂದ್ಯಗಳಲ್ಲಿ ರೈಸ್ ಎಫ್‌ಸಿ 2–2ರಿಂದ ಶ್ರೀ ಗಜಾನನ ಎಫ್‌ಸಿಯೊಂದಿಗೆ ಮತ್ತು ಸೌಥ್ ಇಂಡಿಯನ್ ಎಫ್‌ಸಿ 1–1ರಿಂದ ಡಿವೈಇಎಸ್ ಎಫ್‌ಸಿಯೊಂದಿಗೆ ಡ್ರಾ ಸಾಧಿಸಿದವು.

ದಾಖಲೆ ಉತ್ತಮಪಡಿಸಿಕೊಂಡ ಅವಿನಾಶ್

ರಬಾತ್, ಮೊರೊಕ್ಕೊ (ಪಿಟಿಐ): ಭಾರತದ ಅಥ್ಲೀಟ್ ಅವಿನಾಶ್ ಸಬ್ಳೆ, ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ತಮ್ಮದೇ ಹೆಸ-ರಿನಲ್ಲಿರುವ ರಾಷ್ಟ್ರೀಯ ದಾಖಲೆಯನ್ನು ಎಂಟನೇ ಬಾರಿ ಉತ್ತ-ಮಪಡಿಸಿಕೊಂಡರು.

ಮೊರೊಕ್ಕೊ ದೇಶದ ರಬಾತ್‌ನಲ್ಲಿ ಭಾನುವಾರ ರಾತ್ರಿ ನಡೆದ ಡೈಮಂಡ್ ಲೀಗ್ ಕೂಟದಲ್ಲಿ ಅವರು 8 ನಿಮಿಷ 12.48 ಸೆಕೆಂಡುಗಳಲ್ಲಿ ಗುರಿತಲುಪಿ ಐದನೇ ಸ್ಥಾನ ಪಡೆದುಕೊಂಡರು.

ಮಹಾರಾಷ್ಟ್ರದ ಸಬ್ಳೆ, ಮಾರ್ಚ್ ತಿಂಗಳಲ್ಲಿ ತಿರುವ-ನಂತಪುರದಲ್ಲಿ ನಡೆದಿದ್ದ ಇಂಡಿಯನ್ ಗ್ರ್ಯಾನ್ ಪ್ರಿ ಅಥ್ಲೆಟಿ-ಕ್ಸ್‌ನಲ್ಲಿ 8 ನಿ. 16.21 ಸೆಕೆಂಡುಗಳಲ್ಲಿ ಗುರಿತಲುಪಿದ್ದರು. ಆ ದಾಖಲೆಯನ್ನು ಮೂರು ಸೆಕೆಂಡುಗಳಿಂದ ಉತ್ತಮಪಡಿಸಿ-ಕೊಂಡಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದ ಕೆನ್ಯಾದ ಬೆಂಜಮಿನ್ ಕಿಗೆನ್ ಅವರನ್ನು ಹಿಂದಿಕ್ಕಲು ಸಬ್ಳೆ ಯಶಸ್ವಿಯಾದರು. ಬೆಂಜಮಿನ್ (8ನಿ. 17.32 ಸೆ.) ಎಂಟನೇ ಸ್ಥಾನ ಗಳಿಸಿದರು.

ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ, ಸ್ಥಳೀಯ ಸ್ಪರ್ಧಿ ಸೋಫಿಯಾನ್ ಎಲ್ ಬಕಾಲಿ ಹೊಸ ಕೂಟ ದಾಖಲೆಯೊಂದಿಗೆ (7 ನಿ. 58.28 ಸೆ.) ಚಿನ್ನ ಗೆದ್ದರು. ಇಥಿಯೋಪಿಯದ ಲಮೆಚಾ ಗಿರ್ಮಾ (7:59.24) ಬೆಳ್ಳಿ, ಅದೇ ದೇಶದ ಹೈಲೆಮರಿಯನ್ ತೆಗೆನ್ ಕಂಚು ಪಡೆದರು.

ಅವಿನಾಶ್ ಸಬ್ಳೆ –ಟ್ವಿಟರ್ ಚಿತ್ರ

ಗಾಲ್ಫ್: ವಿರಾಜ್‌ಗೆ 6ನೇ ಸ್ಥಾನ

ನ್ಯೂಕ್ಯಾಸಲ್, ಇಂಗ್ಲೆಂಡ್ (ಪಿಟಿಐ): ಭಾರತದ ವಿರಾಜ್ ಮಾದಪ್ಪ ಅವರು ಇಲ್ಲಿ ಕೊನೆಗೊಂಡ ಇಂಟರ್‌ನ್ಯಾಷನಲ್ ಸೀರಿಸ್ ಇಂಗ್ಲೆಂಡ್ ಗಾಲ್ಫ್ ಟೂರ್ನಿಯಲ್ಲಿ ಜಂಟಿ ಆರನೇ ಸ್ಥಾನ ಗಳಿಸಿದರು.

ಮೊದಲ ಎರಡು ದಿನ ಉತ್ತಮ ಪ್ರದರ್ಶನ ನೀಡಿದ್ದ ಮಾದಪ್ಪ, ಬಳಿಕ ಅದೇ ಲಯ ಕಾಪಾಡಿಕೊಳ್ಳುವಲ್ಲಿ ವಿಫಲರಾದರು. ಇದರಿಂದ ಪ್ರಶಸ್ತಿ ಗೆಲ್ಲುವ ಅವಕಾಶ ಕಳೆದುಕೊಂಡರು.

ಕಣದಲ್ಲಿರುವ ಭಾರತದ ಇತರ ಯಾವುದೇ ಸ್ಪರ್ಧಿಗಳು ಅಗ್ರ 20 ರಲ್ಲಿ ಕಾಣಿಸಿಕೊಂಡಿಲ್ಲ. ಗಗನ್‌ಜೀತ್ ಭುಲ್ಲರ್ ಜಂಟಿ 23ನೇ ಸ್ಥಾನ, ಎಸ್‌ಎಸ್‌ಪಿ ಚೌರಾಸಿಯ ಜಂಟಿ 30ನೇ ಸ್ಥಾನ ಪಡೆದುಕೊಂಡರು. ಶಿವಕಪೂರ್ 36ನೇ ಸ್ಥಾನ ಗಳಿಸಿದರು.

ಕೊಕ್ಕೊ: ಫ್ರಾಂಚೈಸಿ ಖರೀದಿಸಿದ ಅದಾನಿ, ಜಿಎಂಆರ್ ಗ್ರೂಪ್

ನವದೆಹಲಿ (ಪಿಟಿಐ): ಅದಾನಿ ಮತ್ತು ಜಿಎಂಆರ್ ಗ್ರೂಪ್ ಈ ವರ್ಷ ಆರಂ-ಭವಾಗಲಿರುವ ‘ಅಲ್ಟಿಮೇಟ್ ಕೊಕ್ಕೊ ಲೀಗ್’ನಲ್ಲಿ ಕ್ರಮವಾಗಿ ಗುಜರಾತ್ ಮತ್ತು ತೆಲಂಗಾಣ ಫ್ರಾಂಚೈಸಿಗಳನ್ನು ಖರೀದಿಸಿವೆ.

ಡಾಬರ್ ಸಮೂಹದ ಮುಖ್ಯಸ್ಥ ಅಮಿತ್ ಬರ್ಮನ್ ಅವರು ಕೊಕ್ಕೊ ಫೆಡರೇಷನ್ ಆಫ್ ಇಂಡಿಯಾ (ಕೆಕೆಎಫ್‌ಐ) ಸಹಯೋಗದಲ್ಲಿ ಫ್ರಾಂಚೈಸಿ ಆಧಾರಿತ ಕೊಕ್ಕೊ ಲೀಗ್ ಆರಂಭಿಸಲು ನಿರ್ಧರಿ-ಸಿದ್ದಾರೆ.

‘ಕಬಡ್ಡಿ ಮತ್ತು ಬಾಕ್ಸಿಂಗ್ ಲೀಗ್‌ಗಳ ಜತೆ ನಾವು ಈಗಾಗಲೇ ಕೈಜೋಡಿಸಿದ್ದೇವೆ. ದೇಸಿ ಕ್ರೀಡೆ ಕೊಕ್ಕೊಗೆ ಉತ್ತೇಜನ ನೀಡಲು ಆರಂ-ಭವಾಗಲಿರುವ ಅಲ್ಟಿಮೇಟ್ ಕೊಕ್ಕೊ ಲೀಗ್ ಕೂಡಾ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯುವ ವಿಶ್ವಾಸ ನಮ್ಮದು’ ಎಂದು ಅದಾನಿ ಎಂಟರ್‌ಪ್ರೈಸಸ್‌ನ ನಿರ್ದೇಶಕ ಪ್ರಣವ್ ಅದಾನಿ ಪ್ರಕಟಣೆ-ಯಲ್ಲಿ ತಿಳಿಸಿದ್ದಾರೆ.

ಕೋಚ್ ವಿರುದ್ಧ ಅನುಚಿತ ವರ್ತನೆ ಆರೋಪ

ನವದೆಹಲಿ (ಪಿಟಿಐ): ವಿದೇಶದಲ್ಲಿ ತರಬೇತಿಗೆ ತೆರಳಿದ್ದ ವೇಳೆ ರಾಷ್ಟ್ರೀಯ ತಂಡದ ಕೋಚ್ ಆರ್.ಕೆ.ಶರ್ಮ ತಮ್ಮೊಂದಿಗೆ 'ಅನುಚಿತವಾಗಿ ವರ್ತಿಸಿದ್ದಾರೆ‘ ಎಂದು ಸೈಕ್ಲಿಸ್ಟ್ ಮಯೂರಿ ಲೂಟೆ, ಸೈಕ್ಲಿಂಗ್ ಫೆಡರೇಷನ್ ಆಫ್ ಇಂಡಿಯಾಗೆ (ಸಿಎಫ್‌ಐ) ದೂರು ನೀಡಿದ್ದಾರೆ.

ದೂರಿನ ಹಿನ್ನೆಲೆಯಲ್ಲಿ ಭಾರತ ಕ್ರೀಡಾ ಪ್ರಾಧಿಕಾರ ಮತ್ತು ಸಿಎಫ್‌ಐ ಸೋಮವಾರ ತನಿಖೆಗೆ ಸಮಿತಿಯನ್ನು ನೇಮಿಸಿದೆ.

ಗುರುಸಾಯಿದತ್ತ ಬ್ಯಾಡ್ಮಿಂಟನ್‌ಗೆ ವಿದಾಯ

ನವದೆಹಲಿ (ಪಿಟಿಐ): ಕಾಮನ್‌ವೆಲ್ತ್ ಕಂಚಿನ ಪದಕ ವಿಜೇತ ಆರ್‌ಎಂವಿ ಗುರುಸಾಯಿದತ್ತ ಅವರು ಅಂತರರಾ-ಷ್ಟ್ರೀಯ ಬ್ಯಾಡ್ಮಿಂಟನ್‌ಗೆ ಸೋಮವಾರ ವಿದಾಯ ಹೇಳಿದ್ದಾರೆ.

ಹೈದರಾಬಾದ್‌ನ 32 ವರ್ಷದ ಗುರುಸಾಯಿದತ್ತ ಅವರಿಗೆ 2014ರಲ್ಲಿ ಗ್ಲಾಸ್ಗೊದಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಅವರಿಗೆ ಕಂಚು ಒಲಿದಿತ್ತು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)

ಮರು–ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ವಿಚಾರಣೆ ಸಂಖ್ಯೆ: ಬೆವಿಕಂ/ಪ್ರ.ವ್ಯ (ಆ&ಮಾ.ಸಂ)/ಬಿಸಿ–50/2505/02/2022–23ರಂತೆ ಪ್ರತಿಷ್ಠಿತ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಒಂದು ವರ್ಷದ ಅವಧಿಗೆ **ಮಾನವ ಸಂಪನ್ಮೂಲ ಸೇವೆಯನ್ನು ಪೂರೈಸಲು** ಬೆವಿಕಂ ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿದೆ. ಬಿಡ್ ದಾಸ್ತಾವೇಜು ನೀಡುವಿಕೆ: **07.06.2022**ರಂದು **ಸಂಜೆ 4:00 ಗಂಟೆಯಿಂದ**. ಬಿಡ್ ದಾಸ್ತಾವೇಜು ಸ್ವೀಕೃತಿ: **15.06.2022**ರಂದು **ಸಂಜೆ 4:00 ಗಂಟೆವರೆಗೆ**. ಬಿಡ್ ತೆರೆಯುವಿಕೆ: **17.06.2022**ರಂದು **ಬೆಳಗ್ಗೆ 11:00 ಗಂಟೆಗೆ**. ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರಗಳನ್ನು ವೆಬ್‌ಸೈಟ್: **https://eproc.karnataka.gov.in**ನಲ್ಲಿ ಪ್ರಕಟಿಸಲಾಗಿದೆ. ಇ–ಪಾವತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಗೆ ಸಂಪರ್ಕಿಸುವುದು. ಟೆಂಡರ್ ಸಂಬಂಧಿತ ವಿಷಯಗಳಿಗೆ ಕರೆ ದೂರವಾಣಿ ಸಂಖ್ಯೆ: **080 22258788.**

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
“ಬೆಸ್ಕಾಂ ಮಿತ್ರ” Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/–
ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)
ನಿಗಮ ಕಾರ್ಯಾಲಯ, ಕೆ.ಆರ್. ವೃತ್ತ, ಬೆಂಗಳೂರು

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಕೃ.ಭಾ.ಜ.ನಿ.ನಿ., ಅಣೆಕಟ್ಟು ವಿಭಾಗ, ನಾರಾಯಣಪೂರ
ತಾ: ಹುಣಸಗಿ, ಜಿಲ್ಲೆ: ಯಾದಗಿರಿ, ರಾಜ್ಯ: ಕರ್ನಾಟಕ
Office of the Executive Engineer, KBJNL Dam Divn. Narayanpur-585219

KBJNL/ DDN/PB/AWP-2021-22/2022-23/332 Date:-04.06.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಆಲಮಟ್ಟಿ/ಬೆಂಗಳೂರು ಇವರ ಪರವಾಗಿ ಕೃಭಾಜನಿನಿ, ಅಣೆಕಟ್ಟು ವಿಭಾಗ ನಾರಾಯಣಪೂರ ಅಡಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗಾಗಿ Single Cover System QCBS (Quality Cost Based Selection) ಟೆಂಡರ್ ಆಹ್ವಾನಿಸಲಾಗಿದ್ದು Qualification Criteria ನಲ್ಲಿ ನಮೂದಿಸಿರುವಂತೆ ಎಲ್ಲಾ ದಾಖಲಾತಿಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ಹೊಂದಿರುವ ಅರ್ಹ ಸಮಾಲೋಚಕರು (Consultants) ಭಾಗವಹಿಸತಕ್ಕದ್ದು. ಸದರಿ ಕಾಮಗಾರಿಗಳಿಗಾಗಿ ಈ ಕಛೇರಿ ಟೆಂಡರ್ ಪ್ರಕಟಣೆ ಸಂ 330 ದಿನಾಂಕ 04–06–2022 ಅಡಿಯಲ್ಲಿ ಮೊಹರಾದ ಶೇಕಡಾವಾರು ಟೆಂಡರ್‌ಗಾಗಿ ಇ–ಪೋರ್ಟಲ್ http://eproc.karnataka.gov.in/e-portal/index.seam ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಟೆಂಡರ್ ಪ್ರಕ್ರಿಯೆಯು ಈ ಕೆಳಗಿನಂತೆ ಇರುತ್ತದೆ

ಕ್ರ.ಸಂ.	ವಿವರ	ಟೆಂಡರ್ ಪ್ರಕ್ರಿಯೆಯ ದಿನಾಂಕ
1.	ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಲು ಹಾಗೂ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿ : 07.06.2022 ರಿಂದ 16.06.2022 ಸಂಜೆ 5.00 ಗಂಟೆಯವರೆಗೆ
2.	ಸಮಾಲೋಚಕರು (Consultants) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ	ದಿ : 16.06.2022 ಸಂಜೆ 5.00 ಗಂಟೆಯವರೆಗೆ
3.	ಟೆಂಡರ್ ತೆರೆಯುವ ದಿನಾಂಕ (ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ವಿಭಾಗ ನಾರಾಯಣಪೂರ ಇವರ ಕಚೇರಿಯಲ್ಲಿ)	ದಿ : 18.06.2022 ಮುಂಜಾನೆ 11.00 ಗಂಟೆಗೆ

ಆಸಕ್ತಿ ಹೊಂದಿದ ನೋಂದಾಯಿತ ಅರ್ಹ ಸಮಾಲೋಚಕರು ಅರ್ಜಿಗಳನ್ನು ಸಲ್ಲಿಸಬಹುದು ಹಾಗೂ ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in/e-portal/index.seam ನಲ್ಲಿ ವೀಕ್ಷಿಸಬಹುದಾಗಿದ್ದು ಹಾಗೂ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ, ಅಣೆಕಟ್ಟು ವಿಭಾಗ, ನಾರಾಯಣಪೂರ ಇವರಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರರು, ಕೃ.ಭಾ.ಜ.ನಿ.ನಿ, ಅಣೆಕಟ್ಟು ವಿಭಾಗ, ನಾರಾಯಣಪೂರ.

ರಣಜಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನಾಲ್ಕು ವಿಕೆಟ್ ಗಳಿಸಿದ ಉತ್ತರಪ್ರದೇಶದ ಸ್ಪಿನ್ನರ್ ಸೌರಭ್ ಕುಮಾರ್ ಬೌಲಿಂಗ್ ವೈಖರಿ (ಎಡಚಿತ್ರ) ಅರ್ಧಶತಕ ಗಳಿಸಿ ಕರ್ನಾಟಕ ತಂಡಕ್ಕೆ ಆಸರೆಯಾದ ಆರ್.ಸಮರ್ಥ್ –ಪ್ರಜಾವಾಣಿ ಚಿತ್ರಗಳು/ಬಿ.ಎಚ್. ಶಿವಕುಮಾರ್

ರಣಜಿ: ಶಿವಂ, ಸೌರಭ್ ಪರಿಣಾಮಕಾರಿ ದಾಳಿ; ಸಮರ್ಥ್ ಅರ್ಧಶತಕ

ಪಾಂಡೆ ಬಳಗದ ಪರದಾಟ

• ಗಿರೀಶ ದೊಡ್ಡಮನಿ

ಬೆಂಗಳೂರು: ಕರ್ನಾಟಕದ ಬ್ಯಾಟಿಂಗ್ ಪಡೆ ತವರಿನಂಗಳದಲ್ಲಿಯೇ ತಡಬಡಾಯಿಸಿತು. ಇದರ ಲಾಭ ಪಡೆದ ಉತ್ತರಪ್ರದೇಶದ ಬೌಲರ್‌ಗಳಾದ ಸೌರಭ್ ಕುಮಾರ್ ಮತ್ತು ಶಿವಂ ಮಾವಿ ಮಿಂಚಿದರು.

ಆಲೂರಿನ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಸೋಮವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ದಿನದಾಟದಲ್ಲಿ ಸೌರಭ್ (67ಕ್ಕೆ4) ಮತ್ತು ಶಿವಂ (40ಕ್ಕೆ3) ದಾಳಿಯ ಎದುರು ಕರ್ನಾಟಕವು 72 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 213 ರನ್ ಗಳಿಸಿತು. ಆರ್. ಸಮರ್ಥ್ (57; 81ಎ, 4X10) ಅರ್ಧಶತಕ ಗಳಿಸಿ ತಂಡಕ್ಕೆ ಆಸರೆಯಾದರು.

ಉತ್ತರಪ್ರದೇಶ ತಂಡಕ್ಕೆ ಹೋಲಿಸಿದರೆ ಕರ್ನಾಟಕದ ಬ್ಯಾಟಿಂಗ್ ಪಡೆ ಬಲಿಷ್ಠವಾಗಿದೆ. ಆದರೆ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಉತ್ತರಪ್ರದೇಶ ತಂಡದ ನಾಯಕ ಕರಣ್ ಶರ್ಮಾ ಅವರ ಯೋಜನೆ ಫಲಿಸಿತು. ಅವರ ಬೌಲಿಂಗ್ ಪ್ರಯೋಗಗಳು ಫಲ ನೀಡಿದವು. ಆತಿಥೇಯ ಬ್ಯಾಟರ್‌ಗಳು ಉತ್ತಮ ಆರಂಭ ಕಂಡರೂ ದೊಡ್ಡ ಜೊತೆಯಾಟಗಳನ್ನು ದಾಖಲಿಸದಂತೆ ಬೌಲರ್‌ಗಳು ನೋಡಿಕೊಂಡರು.

ಶನಿವಾರ ಮಧ್ಯರಾತ್ರಿ ಮಳೆ ಸುರಿದ ಕಾರಣ ಹೊರಾಂಗಣ ಒದ್ದೆಯಾಗಿತ್ತು. ಆದ್ದರಿಂದ ಪಂದ್ಯವು 9.30ರ ಬದಲಿಗೆ 11.20ಕ್ಕೆ ಆರಂಭವಾಯಿತು. ಊಟದ ವಿರಾಮದವರೆಗಿನ 40 ನಿಮಿಷಗಳ ಆಟದಲ್ಲಿ ವಿಕೆಟ್ ಪತನವಾಗದಂತೆ ಆರಂಭಿಕ ಜೋಡಿ ಮಯಂಕ್ ಅಗರವಾಲ್ ಮತ್ತು ಆರ್. ಸಮರ್ಥ್ ನೋಡಿಕೊಂಡರು. ಅಗರವಾಲ್ ಕಣಕ್ಕಿಳಿದ ಕಾರಣಕ್ಕೆ ಎಡಗೈ ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರಿಗೆ ವಿಶ್ರಾಂತಿ ನೀಡಲಾಯಿತು. ಮಾವಿಯ ಬೌಲಿಂಗ್‌ನಲ್ಲಿ ಒಂದು ಬಾರಿ ತಮ್ಮ ಪಕ್ಕೆಲುಬಿಗೆ ಪೆಟ್ಟು ತಿಂದ ಮಯಂಕ್, ಪ್ರಥಮ ಚಿಕಿತ್ಸೆ ಪಡೆದು ಬ್ಯಾಟಿಂಗ್ ಮುಂದುವರಿಸಿದರು.

ಚಹಾ ವಿರಾಮದ ವೇಳೆಗೆ ಮಧ್ಯಮವೇಗಿ ಶಿವಂ ಮತ್ತು ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ ಸೇರಿ ಮೂರು ವಿಕೆಟ್ ಕಬಳಿಸಿದರು. ಅದರಲ್ಲಿ ಶಿವಂ ಬೌಲಿಂಗ್‌ನಲ್ಲಿ ಅಂಪೈರ್ ನೀಡಿದ ಅನುಮಾನಾಸ್ಪದ ತೀರ್ಪಿಗೆ ಮಯಂಕ್ ಅಗರವಾಲ್ ಔಟಾದರು. ಅವರು ಬೇಸರದಿಂದಲೇ ಪೆವಿಲಿಯನ್‌ನತ್ತ ಹೆಜ್ಜೆಹಾಕಿದರು. ಅರ್ಧಶತಕ ಗಳಿಸಿದ ಸಮರ್ಥ್ 30ನೇ ಓವರ್‌ನಲ್ಲಿ ಸೌರಭ್ ಕುಮಾರ್‌ಗೆ ವಿಕೆಟ್ ಒಪ್ಪಿಸಿದರು. ಕರುಣ್ ನಾಯರ್ (29; 74ಎ) ಆಟಕ್ಕೆ ಕುದುರಿಕೊಂಡಂತೆ ಕಂಡ ಹೊತ್ತಿನಲ್ಲಿಯೇ ಶಿವಂ ಸ್ವಿಂಗ್ ಎಸೆತಕ್ಕೆ ಕ್ಲೀನ್‌ಬೌಲ್ಡ್ ಆದರು. ಆಗ ತಂಡದ ಮೊತ್ತ ನೂರು ಕೂಡ ದಾಟಿರಲಿಲ್ಲ. ಚಹಾ ನಂತರ ಸೌರಭ್ ಸ್ಪಿನ್ ಮೋಡಿ ರಂಗೇರಿತು. ಪಿಚ್‌ನಲ್ಲಿದ್ದ ಸತ್ವವನ್ನು ಬಳಸಿಕೊಂಡ ಅವರು ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರು.

ಅನುಭವಿ ಮನೀಷ್ ಪಾಂಡೆ, ಶ್ರೀನಿವಾಸ್ ಶರತ್ ಮತ್ತು ಗೌತಮ್ ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಇದರಿಂದಾಗಿ ರನ್ ಗಳಿಕೆಯ ವೇಗಕ್ಕೆ ಕಡಿವಾಣ ಬಿತ್ತು. ಕೊನೆಯ ಹಂತದಲ್ಲಿ ಆತ್ಮವಿಶ್ವಾಸ ತೋರಿದ ಶ್ರೇಯಸ್ ಗೋಪಾಲ್ ಮತ್ತು ವೈಶಾಖ ವಿಜಯಕುಮಾರ್ ಕ್ರೀಸ್‌ನಲ್ಲಿದ್ದಾರೆ.

ಸ್ಕೋರ್ ಕಾರ್ಡ್

ಕರ್ನಾಟಕ ಮೊದಲ ಇನಿಂಗ್ಸ್ 7ಕ್ಕೆ213 (72 ಓವರ್‌ಗಳಲ್ಲಿ)
ಸಮರ್ಥ್ ಸಿ ಪ್ರಿನ್ಸ್ ಬಿ ಸೌರಭ್ 57 (81ಎ, 4X10), ಮಯಂಕ್ ಸಿ ಜುರೇಲ್ ಬಿ ಮಾವಿ 10 (41ಎ, 4X1), ಕರುಣ್ ಬಿ ಮಾವಿ 29 (74ಎ, 4X5), ಸಿದ್ಧಾರ್ಥ್ ಬಿ ಮಾವಿ 37 (84ಎ, 4X4), ಮನೀಷ್ ಸಿ ಧ್ರುವ ಬಿ ಸೌರಭ್ 27 (70ಎ, 4X2, 6X1), ಶರತ್ ಸಿ ಆರ್ಯನ್ ಬಿ ಸೌರಭ್ 0 (1ಎ), ಶ್ರೇಯಸ್ ಬ್ಯಾಟಿಂಗ್ 26 (47ಎ,4X3, 6X1), ಗೌತಮ್ ಸಿ ಸಿಂಗ್ ಬಿ ಸೌರಭ್ 12 (13ಎ, 6X1), ವೈಶಾಖ್ ಬ್ಯಾಟಿಂಗ್ 12 (22ಎ, 4X2)
ಇತರೆ 3 (ನೋಬಾಲ್ 1, ಲೆಗ್‌ಬೈ1, ವೈಡ್ 1)
ವಿಕೆಟ್ ಪತನ: 1–57 (ಮಯಂಕ್ ಅಗರವಾಲ್; 12.6), 2–95 (ಸಮರ್ಥ್;29.6), 3–97 (34.2; ಕರುಣ್ ನಾಯರ್), 4–160 (ಮನೀಷ್ ಪಾಂಡೆ; 55.3), 5–160 (ಶರತ್ ಶ್ರೀನಿವಾಸ್; 55.4) 6–182 (ಸಿದ್ಧಾರ್ಥ್; 62.3), 7–199 (ಗೌತಮ್ ಕೃಷ್ಣಪ್ಪ; 65.5)
ಬೌಲಿಂಗ್: ಯಶ್ ದಯಾಳ್ 12–2–37–0, ಅಂಕಿತ್ ರಜಪೂತ್ 11–2–34–0, ಶಿವಂ ಮಾವಿ 11–4–40–3, ಸೌರಭ್ ಕುಮಾರ್ 29–6–67–4, ಪ್ರಿನ್ಸ್ ಯಾದವ್ 4–015–0, ಕರಣ್ ಶರ್ಮಾ 5–0–19–0

ಕಾರ್ಲ್‌ಸನ್ ಮಣಿಸಿ ಅಗ್ರಸ್ಥಾನಕ್ಕೇರಿದ ಆನಂದ್

ಸ್ಟಾವೆಂಜರ್, ನಾರ್ವೆ (ಪಿಟಿಐ): ವಿಶ್ವನಾಥನ್ ಆನಂದ್ ಅವರು ನಾರ್ವೆ ಚೆಸ್ ಟೂರ್ನಿಯ ಐದನೇ ಸುತ್ತಿನಲ್ಲಿ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಮಣಿಸಿ ಅಗ್ರಸ್ಥಾನಕ್ಕೇರಿದರು.

ಭಾನುವಾರ ನಡೆದ ಪಂದ್ಯದಲ್ಲಿ ಚಾಣಾಕ್ಷ ನಡೆಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದ ಭಾರತದ ಗ್ರ್ಯಾಂಡ್‌ಮಾಸ್ಟರ್, ಕ್ಲಾಸಿಕಲ್ ಪಂದ್ಯದಲ್ಲಿ 40 ನಡೆಗಳ ಬಳಿಕ ಡ್ರಾ ಸಾಧಿಸಿದರು. ಫಲಿತಾಂಶ ನಿರ್ಣಯಿಸಲು ನಡೆದ ಆರ್ಮಗೆಡನ್ (ಸಡನ್ ಡೆತ್) ಗೇಮ್‌ನಲ್ಲಿ 50 ನಡೆಗಳಲ್ಲಿ ಜಯ ಸಾಧಿಸಿದರು.

ಟೂರ್ನಿಯಲ್ಲಿ ಇನ್ನು ನಾಲ್ಕು ಸುತ್ತುಗಳು ಬಾಕಿಯಿದ್ದು, ಆನಂದ್ 10 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ. 9.5 ಪಾಯಿಂಟ್ಸ್ ಹೊಂದಿರುವ ಕಾರ್ಲ್‌ಸನ್ ಎರಡನೇ ಸ್ಥಾನದಲ್ಲಿದ್ದಾರೆ.

ಅಮೆರಿಕದ ವೆಸ್ಲಿ ಸೊ ಮತ್ತು ಶಕ್ರಿಯಾರ್ ಮಮೆದ್ಯರೋವ್ ತಲಾ 8.5 ಪಾಯಿಂಟ್ಸ್‌ಗಳೊಂದಿಗೆ 3ನೇ ಸ್ಥಾನ ಹಂಚಿಕೊಂಡಿದ್ದಾರೆ. ಐದನೇ ಸುತ್ತಿನ ಪಂದ್ಯದಲ್ಲಿ ಸೊ ಅವರು ಮಮೆದ್ಯರೋವ್ ಎದುರು ಪರಾಭವಗೊಂಡರು.

ನೆದರ್ಲೆಂಡ್ಸ್‌ನ ಅನೀಶ್ ಗಿರಿ ಮತ್ತು ನಾರ್ವೆಯ ಆರ್ಯನ್ ತರಿ ಕ್ರಮವಾಗಿ ಅಜರ್‌ಬೈಜಾನ್‌ನ ತೈಮೂರ್ ರಜಬೋವ್ ಹಾಗೂ ಚೀನಾದ ಹವೊ ವಾಂಗ್ ಎದುರು ಜಯ ಸಾಧಿಸಿದರು.

ಬಲ್ಗೇರಿಯದ ವ್ಯಾಸೆಲಿನ್ ಟೊಪಾಲೋವ್ ಅವರನ್ನು ಮಣಿಸಿದ ಫ್ರಾನ್ಸ್‌ನ ಮ್ಯಾಕ್ಸಿಮ್ ವಾಶಿರ್ ಲಗ್ರಾವ್ ತಮ್ಮ ಪಾಯಿಂಟ್‌ಗಳನ್ನು ಏಳಕ್ಕೆ ಹೆಚ್ಚಿಸಿಕೊಂಡರು.

ಪ್ಯಾರಿಸ್‌ನ ಅಲೆಕ್ಸಾಂಡರ್ ಸೇತುವೆ ಬಳಿ ಫ್ರೆಂಚ್ ಓಪನ್ ಟ್ರೋಫಿಯೊಂದಿಗೆ ಸಂಭ್ರಮಿಸಿದ ರಫೆಲ್ ನಡಾಲ್– ಎಪಿ ಚಿತ್ರ

ರ‍್ಯಾಂಕಿಂಗ್: ನಾಲ್ಕಕ್ಕೆ ನಡಾಲ್; ಆರಕ್ಕೆ ರೂಡ್

ಪ್ಯಾರಿಸ್ (ಎಎಫ್‌ಪಿ): ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ದಾಖಲೆಯ 14ನೇ ಕಿರೀಟ ಧರಿಸಿರುವ ರಫೆಲ್ ನಡಾಲ್ ಎಟಿಪಿ ರ‍್ಯಾಂಕಿಂಗ್‌ನಲ್ಲಿ ನಾಲ್ಕನೇ ಸ್ಥಾನಕ್ಕೇರಿದ್ದಾರೆ.

ಸೋಮವಾರ ಪ್ರಕಟವಾದ ರ‍್ಯಾಂಕಿಂಗ್ ಪಟ್ಟಿಯಲ್ಲಿ ಸ್ಪೇನ್ ಆಟಗಾರ ಒಂದು ಸ್ಥಾನ ಬಡ್ತಿ ಪಡೆದಿದ್ದಾರೆ. ಟೂರ್ನಿಯಲ್ಲಿ ರನ್ನರ್‌ಅಪ್ ಆದ ನಾರ್ವೆಯ ಕಾಸ್ಪರ್ ರೂಡ್ ಕೂಡ ಎರಡು ಸ್ಥಾನಗಳ ಜಿಗಿತ ಕಂಡಿದ್ದು, ಆರನೇ ಸ್ಥಾನದಲ್ಲಿದ್ದಾರೆ.

ಟೂರ್ನಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ನಡಾಲ್ ಎದುರು ಎಡವಿದ್ದ ಸರ್ಬಿಯಾದ ನೊವಾಕ್ ಜೊಕೊವಿಚ್ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಅಗ್ರಸ್ಥಾನದಲ್ಲಿ ಸ್ವಿಟೆಕ್ ಗಟ್ಟಿ: ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ವಿಜೇತೆ ಪೋಲೆಂಡ್ ಆಟಗಾರ್ತಿ ಇಗಾ ಸ್ವಿಟೆಕ್ ಡಬ್ಲ್ಯುಟಿಎ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಟೂರ್ನಿಯ ರನ್ನರ್‌ಅಪ್ ಅಮೆರಿಕದ ಕೊಕೊ ಗಫ್ 10 ಸ್ಥಾನಗಳ ಏರಿಕೆ ದಾಖಲಿಸಿ 13ನೇ ಸ್ಥಾನ ತಲುಪಿದ್ದಾರೆ.

ಇಂಜೆಕ್ಷನ್ ತೆಗೆದುಕೊಂಡಿದ್ದ ರಫೆಲ್ ನಡಾಲ್: ಎಡಗಾಲಿನ ನೋವಿನಿಂದ ಬಳಲುತ್ತಿದ್ದ ರಫೆಲ್ ನಡಾಲ್ ಅವರು ನೋವು ನಿವಾರಕ ಚುಚ್ಚುಮದ್ದು ತೆಗೆದುಕೊಂಡು ಫೈನಲ್ ಪಂದ್ಯದಲ್ಲಿ ಕಣಕ್ಕಿಳಿದಿದ್ದರು.

ಡಬ್ಲ್ಯುಟಿಎ ಕ್ರಮಾಂಕ	ಆಟಗಾರ್ತಿ	ದೇಶ
1	ಇಗಾ ಸ್ವಿಟೆಕ್	ಪೋಲೆಂಡ್
2	ಅನೆಟ್ ಕೊಂಟಾವೇಟ್	ಈಸ್ಟೋನಿಯಾ
3	ಪೌಲಾ ಬಡೋಸಾ	ಸ್ಪೇನ್
4	ಆನ್ಸ್ ಜಬೆವುರ್	ಟ್ಯುನಿಷಿಯಾ
5	ಮರಿಯಾ ಸಕ್ಕರಿ	ಗ್ರೀಸ್

ಎಟಿಪಿ ಕ್ರಮಾಂಕ	ಆಟಗಾರ	ದೇಶ
1	ನೊವಾಕ್ ಜೊಕೊವಿಚ್	ಸರ್ಬಿಯಾ
2	ಡೇನಿಯಲ್ ಮೆಡ್ವೆಡೆವ್	ರಷ್ಯಾ
3	ಅಲೆಕ್ಸಾಂಡರ್ ಜ್ವೆರೆವ್	ಜರ್ಮನಿ
4	ರಫೆಲ್ ನಡಾಲ್	ಸ್ಪೇನ್
5	ಸ್ಟೆಫನೊಸ್ ಸಿಟ್ಸಿಪಾಸ್	ಗ್ರೀಸ್

ಸುವೇದ್ ಶತಕ; ಮುಂಬೈಗೆ ಉತ್ತಮ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದಾರ್ಪಣೆ ಪಂದ್ಯದಲ್ಲಿಯೇ ಶತಕ ದಾಖಲಿಸಿದ ಸುವೇದ್ ಪಾರ್ಕರ್ (ಔಟಾಗದೆ 104) ಬ್ಯಾಟಿಂಗ್‌ನಿಂದಾಗಿ ಮುಂಬೈ ತಂಡವು ಉತ್ತರಾಖಂಡ ಎದುರಿನ ರಣಜಿ ಕ್ವಾರ್ಟರ್‌ಫೈನಲ್‌ನ ಮೊದಲ ದಿನವೇ ದೊಡ್ಡ ಮೊತ್ತ ಪೇರಿಸಿದೆ.

ಸೋಮವಾರ ದಿನದಾಟದ ಕೊನೆಗೆ ಮುಂಬೈ ತಂಡವು 86 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 304 ರನ್ ಗಳಿಸಿದೆ.

ಇನ್ನೊಂದು ಪಂದ್ಯದಲ್ಲಿ; ಪಂಜಾಬ್ ತಂಡವು ಮಧ್ಯಪ್ರದೇಶ ಎದುರು ಮೊದಲ ಇನಿಂಗ್ಸ್‌ನಲ್ಲಿ 219 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಜಸ್ಟ್ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಬಂಗಾಳ 89 ಓವರ್‌ಗಳಲ್ಲಿ 1 ವಿಕೆಟ್‌ಗೆ 310 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಆಲೂರುಕ್ರೀಡಾಂಗಣ: ಮೊದಲ ಇನಿಂಗ್ಸ್– ಮುಂಬೈ: 86 ಓವರ್‌ಗಳಲ್ಲಿ 3ಕ್ಕೆ304 (ಪೃಥ್ವಿ ಶಾ 21, ಯಶಸ್ವಿ ಜೈಸ್ವಾಲ್ 35, ಅರ್ಮಾನ್ ಜಾಫರ್ 60, ಸುವೇದ್ ಪಾರ್ಕರ್ ಬ್ಯಾಟಿಂಗ್ 104, ಸರ್ಫರಾಜ್ ಖಾನ್ ಬ್ಯಾಟಿಂಗ್ 69, ದೀಪಕ್ ದಪೊಲಾ 53ಕ್ಕೆ3) ವಿರುದ್ಧ ಉತ್ತರಾಖಂಡ.

ಪಂಜಾಬ್: 71.3 ಓವರ್‌ಗಳಲ್ಲಿ 219 (ಅಭಿಷೇಕ್ ಶರ್ಮಾ 47, ಅನ್ಮೋಲ್‌ಪ್ರೀತ್ ಸಿಂಗ್ 47, ಸನ್ವೀರ್ ಸಿಂಗ್ 41, ಪುನೀತ್ ದಾತೆ 48ಕ್ಕೆ3, ಅನುಭವ್ ಅಗರವಾಲ್ 40ಕ್ಕೆ3) ವಿರುದ್ಧ ಮಧ್ಯಪ್ರದೇಶ.

ಜಸ್ಟ್ ಕ್ರಿಕೆಟ್ ಮೈದಾನ: ಬಂಗಾಳ: 89 ಓವರ್‌ಗಳಲ್ಲಿ 1 ವಿಕೆಟ್‌ಗೆ 310 (ಅಭಿಮನ್ಯು ಈಶ್ವರನ್ 65, ಸುದೀಪ್ ಕುಮಾರ್ ಗರಮಿ ಬ್ಯಾಟಿಂಗ್ 106, ಅನುಸ್ಟುಪ್ ಮಜುಂದಾರ್ ಬ್ಯಾಟಿಂಗ್ 85) ವಿರುದ್ಧ ಜಾರ್ಖಂಡ್.